₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಗುರುವಾರ 13.06.2024 ಸಂಪುಟ: 09 ಸಂಚಿಕೆ: 171 ಪುಟಗಳು: 14 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ರೋಹಿತ್ ಪಡೆಗೆ ಸವಾಲಾಗದ ಅಮೆರಿಕ

ಅರ್ಶ್‌ದೀಪ್ ಕಮಾಲ್, ಭಾರತ ಎಂಟರ ಘಟ್ಟಕ್ಕೆ

ವರದಿ ಪುಟ → 4

ಪುಟ ತೆರೆದಂತೆ...

ಮತಾಂತರ ರೀತಿಯಲ್ಲಿಯೇ ಇಂಗ್ಲಿಷಿನ ಪದಾಂತರ!
ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
ಸಂ.ಪುಟ | 6

ಸ್ಥಿರ ಸರಕಾರ, ಬಲಿಷ್ಠ ವಿರೋಧ ಪಕ್ಷದ ಸಮತೋಲನ!
ಸಂಗತ
ಡಾ.ವಿಜಯ್ ದರಡಾ
ಸಂ.ಗಮ | 7

ಮಾತಂದ್ರೆ ಮಾತು

ನಮ್ಮ ನೆರೆಹೊರೆಯವರೊಂದಿಗೆ ಈಗಲೂ ಸಮಸ್ಯೆ ಮುಂದುವರಿದಿದೆ. ಸೇನಾ ಕಾರ್ಯಾಚರಣೆಯಿಂದ ಈ ಸಮಸ್ಯೆ ಪರಿಹರಿಸಲು ಸಾಧ್ಯವಿಲ್ಲ. ಪಾಕಿಸ್ತಾನ ಸರಕಾರವೂ ಶಾಂತಿಯುತ ವಾತಾವರಣ ಬಯಸುತ್ತಿದೆ. ಮಾತುಕತೆಗೆ ಇದು ಸಕಾಲ.

– ಫಾರೂಕ್ ಅಬ್ದುಲ್ಲಾ
ನ್ಯಾಷನಲ್ ಕಾನ್ಫರೆನ್ಸ್ ಮುಖ್ಯಸ್ಥ

ದಾರಿದೀಪೋಕ್ತಿ

ಯಾವತ್ತೂ ನಿಮ್ಮನ್ನು ಬೇರೆಯವರಿಗೆ ಹೋಲಿಸಿಕೊಳ್ಳಬಾರದು. ನೀವು ಎಂದಿಗೂ ಬೇರೆಯವರಾಗಲು ಸಾಧ್ಯವಿಲ್ಲ. ನೀವು ಸದಾ ಸುಧಾರಿತ ನಿಮ್ಮದೇ ಪ್ರತಿರೂಪ ಆಗಬಹುದು. ಏನೇ ಆದರೂ ನಿಮ್ಮತನವನ್ನು ಬಿಟ್ಟುಕೊಡಬಾರದು.

ವಕ್ರತುಂಡೋಕ್ತಿ

ಸಿಟ್ಟು ಬರುವುದು ಪುರುಷನ ಲಕ್ಷಣ. ಬಂದ ಸಿಟ್ಟನ್ನು ನುಂಗಿಕೊಂಡು ಸುಮ್ಮನಾಗುವುದು ವಿವಾಹಿತ ಪುರುಷನ ಲಕ್ಷಣ

ಲಿಂಗತ್ವ ಸಮಾನತೆ: 129ನೇ ಸ್ಥಾನದಲ್ಲಿ ಭಾರತ

ದೆಹಲಿ: ಜಾಗತಿಕ ಲಿಂಗತ್ವ ಸಮಾನತೆಗೆ ಸಂಬಂಧಿಸಿದ ಸೂಚ್ಯಂಕದಲ್ಲಿ ಭಾರತವು ಎರಡು ಸ್ಥಾನ ಕುಸಿತ ಕಂಡಿದ್ದು, 129ನೇ ಸ್ಥಾನ ಪಡೆದುಕೊಂಡಿದೆ. ಕಳೆದ ವರ್ಷ ಅದು 127ನೇ ಸ್ಥಾನದಲ್ಲಿತ್ತು. ಐಸ್‌ಲ್ಯಾಂಡ್ ತನ್ನ ಅಗ್ರ ಸ್ಥಾನವನ್ನು ಉಳಿಸಿಕೊಂಡಿದೆ. ವಿವರಪುಟ → 10

ಫನ್‌ತರಂಗ

- ರಘುಪತಿ ಶೃಂಗೇರಿ -

ಮರ್ಡರ್ ಪ್ರಕರಣ



ಪಾತಕಿಗಳ ಸಮ್ಮುಖ ಸ್ಥಳ ಮಹಜರು | ಮುಂದುವರಿದ ವಿಚಾರಣೆ

ದರ್ಶನ್‌ಗೆ ಡ್ರಿಲ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಿತ್ರದುರ್ಗ ಮೂಲದ ಅಭಿಮಾನಿಯೊಬ್ಬನ ಬರ್ಬರ ಕೊಲೆ ಆರೋಪದಡಿ ಬಂಧಿತ ನಟ ದರ್ಶನ್ ಮತ್ತು ಇತರ 13 ಮಂದಿ ಆರೋಪಿಗಳ ವಿಚಾರಣೆ ಮುಂದುವರಿದಿದ್ದು, ಬುಧವಾರ ಹಂತಕರನ್ನು ಕೊಲೆ ನಡೆದ ಸ್ಥಳ ಮತ್ತು ಶವವನ್ನು ಎಸೆದ ಸ್ಥಳಕ್ಕೆ ಕರೆದೊಯ್ದು ಮಹಜರು ನಡೆಸಲಾಯಿತು.

ಮಂಗಳವಾರ ಬೆಳಗ್ಗೆಯೇ ದರ್ಶನ್ ಹಾಗೂ ಅವನ ಗ್ಯಾಂಗ್ ಅನ್ನು ಬಂಧಿಸಿದ್ದರೂ ವಿಚಾರಣೆ ನಡೆಸಲು ಸಾಧ್ಯವಾಗಿರಲಿಲ್ಲ. ಆದರೆ ಬುಧವಾರ ಬೆಳಗ್ಗೆಯಿಂದಲೇ ದರ್ಶನ್, ಪವಿತ್ರಾ ಗೌಡ ಸೇರಿದಂತೆ ಇನ್ನುಳಿದ ಆರೋಪಿಗಳ ವಿಚಾರಣೆ ನಡೆಸಿದ ಪೊಲೀಸರು, ಮಧ್ಯಾಹ್ನದ ವೇಳೆಗೆ ಪಟ್ಟಣಗೆರೆ ಶೆಡ್, ಮೃತ ರೇಣುಕಾಸ್ವಾಮಿ ಶವ ಎಸೆದಿದ್ದ ಸ್ಥಳಗಳಲ್ಲಿ ಸ್ಥಳ ಮಹಜರು ಮಾಡಿದ್ದಾರೆ. ಈ ನಡುವೆ ಚಿತ್ರದುರ್ಗದಲ್ಲಿ ರೇಣುಕಾಸ್ವಾಮಿ ಕೊಲೆ ಖಂಡಿಸಿ ಪ್ರತಿಭಟನೆ ಜೋರಾಗಿದ್ದು, ದರ್ಶನ್ ವಿರುದ್ಧ ಆಕ್ರೋಶ ಮುಗಿಲು ಮುಟ್ಟಿದೆ. ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿರುವ ದರ್ಶನ್, ರೇಣುಕಾಸ್ವಾಮಿಯ ಶವವನ್ನು ಎಸೆದು, ಕೊಲೆ ಆರೋಪವನ್ನು ಹೊತ್ತು ಕೊಳ್ಳಲು ಮೂವರಿಗೆ 30 ಲಕ್ಷ ರು. ನೀಡಿದ್ದಾರೆ ಎನ್ನುವುದು ತನಿಖೆಯಲ್ಲಿ ದೃಢಪಟ್ಟಿದೆ.

ರೇಣುಕಾ ಸ್ವಾಮಿಯನ್ನು ಚಿತ್ರದುರ್ಗದಿಂದ ಅಪಹರಿಸಿ ಕರೆದುಕೊಂಡು ಬಂದು ಮಾರಣಾಂತಿಕ ಹಲ್ಲೆ ಮಾಡಿದ್ದ ದರ್ಶನ್ ಮತ್ತು ಗ್ಯಾಂಗ್ ಹಲ್ಲೆಯಿಂದ ರೇಣುಕಾಸ್ವಾಮಿ ಸಾವನ್ನಪ್ಪಿದ ಬಳಿಕ ಆತಂಕಗೊಂಡು, ಶವವನ್ನು ಸಾಗಿಸುವ ದಾರಿ ಹುಡುಕಿದೆ. ಅದರಂತೆ ಬೇರೆ ಗ್ಯಾಂಗ್ ಕರೆಸಿ ಅವರಿಗೆ ಶವ ಒಪ್ಪಿಸಿ, ಅದನ್ನು ವಿಲೇವಾರಿ ಮಾಡುವಂತೆ ಹೇಳಿ ಅವರಿಗೆ 30 ಲಕ್ಷ ದರ್ಶನ್ ನೀಡಿದ್ದಾರೆ. ಹಣ ಪಡೆದ ಮತ್ತೊಂದು ಗ್ಯಾಂಗ್ ರೇಣುಕಾಸ್ವಾಮಿಯ ಶವವನ್ನು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯ ಸುಮನಹಳ್ಳಿ ಮೋರಿಗೆ ಎಸೆದು ಹೋಗಿದೆ, ಶವ ದೊರೆತ ಬಳಿಕ ತಾವೇ ಕೊಲೆ ಮಾಡಿರುವುದಾಗಿ ಹೇಳಿ ಠಾಣೆಗೆ ಬಂದು ಒಪ್ಪಿಕೊಂಡಿದ್ದಾರೆ. ಕೊಲೆ ಮಾಡಲು ಹಣಕಾಸಿನ ವಿಚಾರವೇ ಕಾರಣ ಎಂದು ಹೇಳಿದ್ದಾರೆ. ಆದರೆ ಒಬ್ಬೊಬ್ಬರನ್ನೂ ಪ್ರತ್ಯೇಕವಾಗಿ ವಿಚಾರಣೆ ಮಾಡಿದಾಗ ಹೇಳಿಕೆಯಲ್ಲಿ ವ್ಯತ್ಯಾಸ ಕಂಡುಬಂದಿದೆ. ಬಳಿಕ ಪೊಲೀಸರು ತಮ್ಮದೇ ಶೈಲಿಯಲ್ಲಿ ವಿಚಾರಣೆ ಮಾಡಿದಾಗ ನಿಜಾಂಶ ಬಯಲಾಗಿದೆ. ಪೊಲೀಸರು ತನಿಖೆ ಚುರುಕುಗೊಳಿಸಿದಂತೆ ಹಣ ಪಡೆದಿದ್ದ ಗ್ಯಾಂಗ್‌ನವರು ರಾತ್ರಿಯಿಡೀ ದರ್ಶನ್ ಗ್ಯಾಂಗ್ ಜತೆ ಮೊಬೈಲ್ ಮೂಲಕ ಸಂಭಾಷಣೆ ಮಾಡಿರುವ ವಿಚಾರವೂ ಬಹಿರಂಗಗೊಂಡಿದೆ.

ಅನ್‌ಫಾಲೋ ಮಾಡಿದ ವಿಜಯಲಕ್ಷ್ಮಿ

ಪತಿ ದರ್ಶನ್ ಪದೇ ಪದೆ ವಿವಾದಗಳನ್ನು ಮೈಮೇಲೆ ಎಳೆದುಕೊಂಡಿರುವುದಕ್ಕೆ ಬೇಸರಗೊಂಡು, ಪತ್ನಿ ವಿಜಯಲಕ್ಷ್ಮೀ ಇದೀಗ ಮತ್ತೊಮ್ಮೆ ದೂರಾಗಲು ತೀರ್ಮಾನಿಸಿದ್ದಾರೆ ಎನ್ನಲಾಗುತ್ತಿದೆ. ಅದಕ್ಕೆ ಪೂರಕವಾಗಿ ವಿಜಯಲಕ್ಷ್ಮಿ ತಮ್ಮ ಸಾಮಾಜಿಕ ಜಾಲತಾಣದ ಖಾತೆಯಲ್ಲಿನ ಡಿಪಿಯನ್ನು ಬದಲಿಸಿದ್ದಾರೆ. ದರ್ಶನ್ ಸೇರಿದಂತೆ ಎಲ್ಲರನ್ನೂ ಅನ್‌ಫಾಲೋ ಮಾಡಿದ್ದಾರೆ.

ಕಾನೂನು ಎಲ್ಲರಿಗೂ ಒಂದೇ: ಪರಂ

ದರ್ಶನ್‌ಗೂ ಕಾನೂನು ಒಂದೇ, ಪರಮೇಶ್ವರವರಿಗೂ ಒಂದೇ ಕಾನೂನು. ಅದನ್ನು ಯಾರೂ ಕೈಗೆತ್ತಿಕೊಳ್ಳಬಾರದು. ರೇಣುಕಾಸ್ವಾಮಿ ತಪ್ಪು ಮಾಡಿದ್ದರೆ ಅವರ ವಿರುದ್ಧ ಪೊಲೀಸರಿಗೆ ದೂರು ನೀಡಬಹುದಿತ್ತು. ಪೊಲೀಸರು ತನಿಖೆ ಮಾಡುತ್ತಿದ್ದರು. ಆದರೆ ಅದನ್ನು ಮಾಡದೇ ಪ್ರಾಣ ತೆಗೆಯುವುದು ಕಾನೂನು ಪ್ರಕಾರ ತಪ್ಪು. ಇದೀಗ ಪೊಲೀಸರು ತನಿಖೆ ಮುಂದುವರಿಸಿದ್ದು, ಕಾನೂನು ಪ್ರಕಾರ ಕ್ರಮವಹಿಸಲಿದ್ದಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ತಿಳಿಸಿದ್ದಾರೆ.

ಪ್ರಮುಖಾಂಶ

- ಶವ ಸಾಗಿಸಲು ಹಾಗೂ ತಪ್ಪೊಪ್ಪಿಕೊಳ್ಳಲು 30 ಲಕ್ಷ ಕೊಟ್ಟಿದ್ದ ದರ್ಶನ್
- ರಾಜ್ಯಾದ್ಯಂತ ದರ್ಶನ್ ವಿರುದ್ಧ ಪ್ರತಿಭಟನೆ; ಕಠಿಣ ಕ್ರಮಕ್ಕೆ ಆಗ್ರಹ
- ಈವರೆಗೂ ಯಾವುದೇ ಪ್ರತಿಕ್ರಿಯೆ ನೀಡದ ದರ್ಶನ್ ಕುಟುಂಬ
- ಪೊಲೀಸ್ ವಿಚಾರಣೆಯ ಮಾಹಿತಿ ಪಡೆದ ಆಯುಕ್ತ ದಯಾನಂದ
- ಮಹಜರು ವೇಳೆ ದರ್ಶನ್ ಅಭಿಮಾನಿಗಳ ಮೇಲೆ ಲಘು ಲಾಠಿ ಪ್ರಹಾರ

ಬುಧವಾರ ಏನೇನಾಯಿತು?

- ದರ್ಶನ್, ಪವಿತ್ರಾ ಗೌಡ ಕರೆತಂದು ಪಟ್ಟಣಗೆರೆ ಶೆಡ್‌ನಲ್ಲಿ ಸ್ಥಳ ಮಹಜರು
- ಪೊಲೀಸ್ ವಶದಲ್ಲಿದ್ದರೂ ಸಿಗರೇಟ್‌ಗೆ ಬೇಡಿಕೆಯಿಟ್ಟ ದರ್ಶನ್
- ಚಿತ್ರರಂಗದಿಂದ ಬ್ಯಾನ್ ಮಾಡುವ ಬಗ್ಗೆ ಫಿಲ್ಮ್ ಚೇಂಬರ್ ತೀರ್ಮಾನ

ಪ್ರತಿಭಟನೆ

ದರ್ಶನ್ ವಿರುದ್ಧ ಕಠಿಣ ಕಾನೂನು ಕ್ರಮವಹಿಸಬೇಕು ಎಂದು ಆಗ್ರಹಿಸಿ ರಾಜ್ಯಾದ್ಯಂತ ಪ್ರತಿಭಟನೆ ನಡೆದಿವೆ. ಸಮಾಜಕ್ಕೆ ಮಾದರಿಯಾಗಬೇಕಿರುವ ಇಂತಹ ಸೆಲೆಬ್ರೆಟಿಗಳನ್ನು ಜನ ಆರಾಧಿಸುತ್ತಾರೆ. ಆದರೆ ಈ ರೀತಿಯ ಹೇಯ ಕೃತ್ಯದಲ್ಲಿ ಭಾಗವಹಿಸಿರುವುದು ಖಂಡನೀಯ ಎಂಬ ಮಾತು ಕೇಳಿಬಂದಿದೆ.

ಭಾರತದವರೂ ಸೇರಿ 49 ಮಂದಿ ಸಜೀವ ದಹನ
6 ಮಹಡಿ ಕಟ್ಟಡದಲ್ಲಿ 195 ಕಾರ್ಮಿಕರ ವಾಸ

ಕುವೈತ್ ಬೆಂಕಿ ಅವಘಡ 41 ಭಾರತೀಯರ ಸಾವು

ಕುವೈತ್: ಮಂಗಫ್ ನಗರದ 6 ಮಹಡಿಯ ಕಾರ್ಮಿಕರ ಕಟ್ಟಡದಲ್ಲಿ ಬುಧವಾರ ನಸುಕಿನಲ್ಲಿ ಭಾರಿ ಅಗ್ನಿ ಅವಘಡ ಸಂಭವಿಸಿ, 41 ಭಾರತೀಯರು ಸೇರಿ ಒಟ್ಟು 49 ಕಾರ್ಮಿಕರು ಸಜೀವ ದಹನವಾಗಿದ್ದಾರೆ. ಗಾಯಗೊಂಡಿರುವ 50ಕ್ಕೂ ಅಧಿಕ ಜನರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೇರಳ ಮೂಲದ ಎನ್‌ಬಿಟಿಸಿ ಗ್ರೂಪ್ ಮಾಲೀಕ ಕೆ.ಜಿ.ಅಬ್ರಾಹಂ ಎಂಬುವವರ ಒಡೆತನದ ಕಟ್ಟಡದಲ್ಲಿ ಬೆಂಕಿ ಅವಘಡ ಸಂಭವಿಸಿದೆ. 6 ಮಹಡಿಗಳ ಬೃಹತ್ ಕಟ್ಟಡದಲ್ಲಿ ತ.ನಾಡು, ಕೇರಳ ಸೇರಿ ದಂತೆ ಭಾರತದ 195ಕ್ಕೂ ಅಧಿಕ ಕಟ್ಟಡ ಕಾರ್ಮಿಕರು ನೆಲೆಸಿದ್ದರು. ಹೆಚ್ಚಿನವರು ಕೇರಳದವರೇ ಆಗಿದ್ದಾರೆ.

ದಟ್ಟ ಬೆಂಕಿಯ ಕಾರಣ ವಿಪರೀತ ಹೊಗೆ ಆವರಿಸಿದ್ದರಿಂದ ಕಾರ್ಮಿಕರಿಗೆ ಕಟ್ಟಡದಿಂದ ತಕ್ಷಣ ಹೊರ ಬರಲಾಗಿಲ್ಲ. ಉಸಿರುಗಟ್ಟಿ 49 ಮಂದಿ ಪ್ರಜ್ಞೆ ಕಳೆದುಕೊಂಡು ಬೆಂಕಿಗೆ ಸಿಲುಕಿ ಸಜೀವ ದಹನವಾಗಿದ್ದಾರೆ. 50ಕ್ಕೂ ಅಧಿಕ ಜನರಿಗೆ ಸುಟ್ಟಗಾಯಗಳಾಗಿವೆ. ಬಹಳಷ್ಟು ಮಂದಿ ಹೊಗೆಯನ್ನೇ ಉಸಿರಾಡಿದ್ದರಿಂದ ಶ್ವಾಸಕೋಶ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಗಾಯಾಳುಗಳನ್ನು ಸಮೀಪದ ನಗರದ ವಿವಿಧ ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಎಐ ಅದಾನ್ ಆಸ್ಪತ್ರೆಯಲ್ಲಿ 30 ಜನರನ್ನು ದಾಖಲಿಸಲಾಗಿದೆ. ಕುವೈತ್ ಜನಸಂಖ್ಯೆಯ ಶೇ.21 ಹಾಗೂ ಅಲ್ಲಿನ ಕಾರ್ಮಿಕರ ಸಂಖ್ಯೆಯ ಶೇ.30 ಜನರು ಭಾರತೀಯರೇ ಆಗಿದ್ದಾರೆ ಎಂಬು ದು ಉಲ್ಲೇಖಾರ್ಹ. ಕುವೈತ್‌ನಲ್ಲಿನ ಭಾರತೀಯ ರಾಯಭಾರಿ ಆದರ್ಶ್ ಸ್ವೈಕಾ ಆಸ್ಪತ್ರೆಗಳಿಗೆ ಭೇಟಿ ನೀಡಿ ಸಂತ್ರಸ್ತರನ್ನು ಮಾತನಾಡಿಸಿ ಮಾಹಿತಿ ಪಡೆದುಕೊಂಡಿದ್ದಾರೆ.

ಪ್ರಧಾನಿ ಮೋದಿ, ಜೈಶಂಕರ್ ಸಂತಾಪ: ಕುವೈತ್‌ನಲ್ಲಿ ನಡೆದ ಅಗ್ನಿ ಅವಘಡದಲ್ಲಿ 49 ಮಂದಿ ಸಾವಿಗೀಡಾಗಿರುವುದು ತೀವ್ರ ನೋವುಂಟು ಮಾಡಿದೆ. → 4

ಬೆಳಗ್ಗೆ 6ಕ್ಕೆ ಹೊತ್ತಿದ ಬೆಂಕಿ

ಕಟ್ಟಡದ ಅಡುಗೆ ಕೋಣೆಯಲ್ಲಿ ಬೆಳಗ್ಗೆ 6 ವೇಳೆ ಹೊತ್ತಿಕೊಂಡ ಬೆಂಕಿ ಕೆಲವೇ ನಿಮಿಷಗಳಲ್ಲಿ ಇಡೀ ಕಟ್ಟಡ ಆವರಿಸಿದೆ ಎಂದು ಕುವೈತ್‌ನ ಮೇಜರ್ ಜನರಲ್ ಈದ್ ರಶೀದ್ ಹಮದ್ ಹೇಳಿದ್ದಾರೆ. ಸದ್ಯ ಕಟ್ಟಡಕ್ಕೆ ಹೊತ್ತಿದ್ದ ಬೆಂಕಿ ನಂದಿಸಲಾಗಿದೆ. ಘಟನೆ ಕುರಿತು ಪೊಲೀಸ್ ತನಿಖೆಗೆ ಸೂಚಿಸಲಾಗಿದೆ. ಕಟ್ಟಡ ಮಾಲೀಕನ ವಿರುದ್ಧ ಕಠಿಣ ಕ್ರಮಕ್ಕೆ ಕುವೈತ್ ಆಡಳಿತ ಮುಂದಾಗಿದೆ ಎಂದು ಹಮದ್ ವಿವರಿಸಿದ್ದಾರೆ.

ಮಾಲೀಕನ ನಿರ್ಲಕ್ಷ್ಯ: ಉಪ ಪ್ರಧಾನಿ ಕಿಡಿ

ಇದೊಂದು ಘೋರ ದುರಂತ ಎಂದಿರುವ ಕುವೈತ್ ಉಪ ಪ್ರಧಾನಿ ಶೇಕ್ ಫಹಾದ್ ಅಲ್ ಯೂಸುಫ್, ಅವಘಡಕ್ಕೆ ಕಟ್ಟಡದ ಮಾಲೀಕರ ನಿರ್ಲಕ್ಷವೇ ಕಾರಣ ಎಂದು ಕಿಡಿಕಾರಿದ್ದಾರೆ. ಅಗ್ನಿ ಅವಘಡದ ಸುದ್ದಿ ತಿಳಿಯುತ್ತಲೇ ಸ್ಥಳಕ್ಕೆ ಧಾವಿಸಿದ ಅವರು, ಕಟ್ಟಡದಿಂದ ಸುಲಭಕ್ಕೆ ಹೊರ ಬರಲಾಗದಂತಹ ಸ್ಥಿತಿ ಇದ್ದುದನ್ನು ಕಂಡು ಕಟ್ಟಡದ ಮಾಲೀಕರ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರು. ಮಾಲೀಕನ ದುರಾಸೆಯೇ ಇದಕ್ಕೆ ಕಾರಣ ಎಂದು ಕಿಡಿಕಾರಿದರು.

ಸಹಾಯವಾಣಿ

ಅಗ್ನಿ ಅವಘಡ ಸಂಬಂಧ ಸಂತ್ರಸ್ತರ ನೆರವಿಗಾಗ ಭಾರತ ಸರಕಾರ ಸಹಾಯವಾಣಿ ಆರಂಭಿಸಿದೆ. +965-65505246 ಕರೆ ಮಾಡಲು ಕೋರಿದೆ.

ಅಪ್ರಾಪ್ತೆಗೆ ಲೈಂಗಿಕ ಕಿರುಕುಳದ ಆರೋಪ

ಬಿಎಸ್‌ವೈಗೆ ನೋಟಿಸ್

ಬೆಂಗಳೂರು: ಅಪ್ರಾಪ್ತೆಗೆ ಲೈಂಗಿಕ ಕಿರುಕುಳ ಆರೋಪದಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಸಂಕಷ್ಟ ಎದುರಾಗಿದ್ದು, ಪ್ರಕರಣದ ವಿಚಾರಣೆಗೆ ಹಾಜರಾಗಲು ಸಿಐಡಿ ನೋಟಿಸ್ ಜಾರಿಗೊಳಿಸಿದೆ.

ಸಿಐಡಿಯಿಂದ ನೋಟಿಸ್ ನೀಡಿದ ಬೆನ್ನಲ್ಲೇ, ಈ ಪ್ರಕರಣವನ್ನು ರದ್ದುಗೊಳಿಸುವಂತೆ ಕೋರಿ ಯಡಿಯೂರಪ್ಪ ಅವರು ಹೈಕೋರ್ಟ್ ಮೆಟ್ಟಿಲೇರಿದ್ದಾರೆ. ಈ ನಡುವೆ ಪೂರ್ವ ನಿಯೋಜಿತ ಕಾರ್ಯಕ್ರಮದಲ್ಲಿ ಭಾಗಿಯಾಗಿರಬೇಕಿರುವುದರಿಂದ ದೆಹಲಿಗೆ ತೆರಳುತ್ತಿದ್ದು, ಜೂ.15ರಂದು ವಿಚಾರಣೆಗೆ ಹಾಜರಾಗುತ್ತೇನೆ. ಆದ್ದರಿಂದ ವಿನಾಯಿತಿ ನೀಡಬೇಕೆಂದು ಯಡಿಯೂರಪ್ಪ ಅವರು ಸಿಐಡಿಗೆ ಮನವಿ ಮಾಡಿದ್ದಾರೆ. ಅಪ್ತಾಪ್ರೆಗೆ ಲೈಂಗಿಕ ದೌರ್ಜನ್ಯ ನೀಡಿದ್ದಾರೆ ಎನ್ನಲಾದ ಪೋಕ್ಸೊ ಕಾಯಿದೆಯಲ್ಲಿ ಬಿಎಸ್‌ವೈ ವಿರುದ್ಧ ಸದಾಶಿವ ನಗರದಲ್ಲಿ ಮಾ.14ರಂದು ದೂರು ನೀಡಲಾಗಿತ್ತು. ಬಳಿಕ ಸರಕಾರ ಸಿಐಡಿಗೆ ಹಸ್ತಾಂತರಿಸಿತ್ತು. ತನಿಖೆ ನಡೆಸುತ್ತಿರುವ ಸಿಐಡಿ ತನಿಖಾಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ.

ಎಚ್‌ಎಸ್‌ಆರ್‌ಪಿ ಕಡ್ಡಾಯ; ವಿಸ್ತರಣೆ

ಬೆಂಗಳೂರು: ರಾಜ್ಯದಲ್ಲಿ ಎಲ್ಲ ಮಾದರಿಯ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಕಡ್ಡಾಯವಾಗಿ ಅಳವಡಿಸದ ವಾಹನ ಮಾಲೀಕರ ವಿರುದ್ಧ ಯಾವುದೇ ಕಠಿಣ ಕ್ರಮ ಕೈಗೊಳ್ಳದಂತೆ ಮೇ 21ರಂದು ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಜುಲೈ 4ರವರೆಗೂ ವಿಸ್ತರಿಸಿದೆ. ಅಲ್ಲದೆ, ಕಠಿಣ ಕ್ರಮ ಕೈಗೊಳ್ಳುವ ಕುರಿತ ಅವಧಿ ವಿಸ್ತರಿಸುವುದಕ್ಕೆ ರಾಜ್ಯ ಸರಕಾರ ಸ್ವತಂತ್ರವಾಗಿರುತ್ತದೆ ಎಂದು ತಿಳಿಸಿದೆ. ರಾಜ್ಯದಲ್ಲಿ 2019ರ ಏ.1ಕ್ಕಿಂತ ಮುಂಚೆ ನೋಂದಣಿಯಾದ ವಾಹನಗಳಿಗೆ ಮೂಲ ಉಪಕರಣ ತಯಾರಕ ಅಧಿಕೃತ ಡೀಲರ್‌ಗಳ ಮೂಲಕ ಎಚ್‌ಎಸ್ ಆರ್‌ಪಿ ಅಳವಡಿಸಲು ಅಳವಡಿಸಿಕೊಳ್ಳಲು ರಾಜ್ಯ ಸರಕಾರ 2023ರ ಆ.17ರಂದು ಅಧಿಸೂಚನೆ ಹೊರಡಿಸಿತ್ತು.

ಪ್ರಧಾನಿ ನರೇಂದ್ರ ಮೋದಿ ಜಿ2 ಶೃಂಗಸಭೆಗಾಗಿ ಇಟಲಿ ಪ್ರವಾಸಕ್ಕೆ ಕೆಲವೇ ದಿನಗಳಿರುವಾಗ ಖಲಿಸ್ತಾನಿ ಉಗ್ರ ಸಂಘಟನೆಗಳು ಇಟಲಿಯಲ್ಲಿ ಪ್ರಧಾನಿ ಅನಾವರಣಗೊಳಿಸಬೇಕಿದ್ದ ಮಹಾತ್ಮಾ ಗಾಂಧಿ ಪ್ರತಿಮೆಗೆ ಹಾನಿಯೆಸಗಿ ವಿಕೃತಿ ಮೆರೆದಿವೆ.

18ರವರೆಗೆ ಪ್ರಜ್ವಲ್ ಎಸ್‌ಐಟಿ ವಶಕ್ಕೆ

ಬೆಂಗಳೂರು: ಮಹಿಳೆಯರ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಆರೋಪದ ಮೇಲೆ ಬಂಧನಕ್ಕೊಳಗಾಗಿರುವ ಪ್ರಜ್ವಲ್ ರೇವಣ್ಣ ಅವರನ್ನು ಜೂನ್ 18ರವರೆಗೆ ಮತ್ತೆ ವಿಶೇಷ ತನಿಖಾ ತಂಡದ ವಶಕ್ಕೆ ಒಪ್ಪಿಸಿ ನ್ಯಾಯಾಲಯ ಆದೇಶಿಸಿದೆ.

ನ್ಯಾಯಾಲಯವು ಜೂನ್ 10ರಂದು ಪ್ರಜ್ವಲ್ ರೇವಣ್ಣ ಅವರನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು. ಆದರೆ ಸೈಬರ್ ಕ್ರೈಮ್ ಪ್ರಕರಣಕ್ಕೆ ಸಂಬಂಧಿಸಿದಂತೆ ಎಸ್‌ಐಟಿ ಬುಧವಾರ ಪ್ರಜ್ವಲ್ ವಿರುದ್ಧ ಬಾಡಿ ವಾರೆಂಟ್ ಕೋರಿ ಅರ್ಜಿ ಸಲ್ಲಿಸಿತ್ತು.

ವಿಚಾರಣೆ ನಡೆಸಿದ ನ್ಯಾಯಾಲಯ, ಎಸ್‌ಐಟಿ ಮನವಿ ಪುರಸ್ಕರಿಸಿದ್ದಾರೆ. ಮಂಗಳವಾರದವರೆಗೆ ಪ್ರಜ್ವಲ್ ಅವರನ್ನು ಎಸ್‌ಐಟಿ ಮತ್ತೆ ತನ್ನ ವಶಕ್ಕೆ ಪಡೆದಿದೆ.

ತೆರವಾದ ಸ್ಥಾನಗಳಿಗೆ ಶೀಘ್ರದಲ್ಲೇ ಚುನಾವಣೆ

ಲೋಕಸಭೆ ಸದಸ್ಯರಾಗಿ ಆಯ್ಕೆ ರಾಜ್ಯಸಭೆಯ 10 ಸ್ಥಾನ ತೆರವು

ದೆಹಲಿ: ರಾಜ್ಯಸಭೆಯ ಕೆಲ ಸದಸ್ಯರು ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದ ಕಾರಣ ರಾಜ್ಯಸಭೆಯಲ್ಲಿ 10 ಸ್ಥಾನಗಳು ತೆರವುಗೊಂಡಿವೆ ಎಂದು ರಾಜ್ಯಸಭಾ ಕಾರ್ಯಾಲಯವು ತಿಳಿಸಿದೆ.

ಅಸ್ಸಾಂ, ಬಿಹಾರ ಮತ್ತು ಮಹಾರಾಷ್ಟ್ರದಲ್ಲಿ ತಲಾ ಎರಡು ಸ್ಥಾನಗಳು, ಹರಿಯಾಣ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ತ್ರಿಪುರಾದಲ್ಲಿ ತಲಾ ಒಂದು ಸ್ಥಾನ ಸದ್ಯ ಖಾಲಿಯಾಗಿವೆ ಎಂದು ತಿಳಿಸಿದೆ.

ಕಾಮಕ್ಯ ಪ್ರಸಾದ್ ತಾಸಾ, ಸರ್ಬಾನಂದ ಸೋನಾವಾಲ್ (ಅಸ್ಸಾಂ), ಮೀಸಾ ಭಾರತಿ, ವಿವೇಕ್ ಠಾಕೂರ್ (ಬಿಹಾರ), ದೀಪೆಂದರ್ ಸಿಂಗ್ ಹೂಡಾ (ಹರಿಯಾಣ), ಜ್ಯೋತಿರಾದಿತ್ಯ ಸಿಂದಿಯಾ (ಮಧ್ಯಪ್ರದೇಶ), ಉದಯನ್‌ರಾಜೆ ಭೋಸ್ಲೆ , ಪೀಯೂಷ್ ಗೋಯಲ್ (ಮಹಾರಾಷ್ಟ್ರ), ಕೆ.ಸಿ. ವೇಣುಗೋಪಾಲ್ (ರಾಜಸ್ಥಾನ) ಮತ್ತು ವಿಪ್ಲಬ್ ಕುಮಾರ್ ದೇವ್ (ತ್ರಿಪುರಾ) ಅವರು ಲೋಕಸಭೆ ಸದಸ್ಯರಾಗಿ ಆಯ್ಕೆ ಆಗಿದ್ದಾರೆ. ಹೀಗಾಗಿ ಅವರ ರಾಜ್ಯಸಭೆ ಸದಸ್ಯತ್ವವನ್ನು ಅಂತ್ಯಗೊಳಿಸಲಾಗಿದೆ. ತೆರವುಗೊಂಡಿರುವ ಸ್ಥಾನಗಳಿಗೆ ಚುನಾವಣಾ ಆಯೋಗವು ಶೀಘ್ರದಲ್ಲೇ ಚುನಾವಣೆ ಘೋಷಿಸಲಿದೆ ಎನ್ನಲಾಗಿದೆ.

- ಅಸ್ಸಾಂ, ಬಿಹಾರ ಮತ್ತು ಮಹಾರಾಷ್ಟ್ರದಲ್ಲಿ ತಲಾ ಎರಡು ಸ್ಥಾನಗಳು ತೆರವು
- ಹರಿಯಾಣ, ಮಧ್ಯಪ್ರದೇಶ, ರಾಜಸ್ಥಾನ, ತ್ರಿಪುರಾದಲ್ಲಿ ತಲಾ ಒಂದು ಸ್ಥಾನ ಖಾಲಿ

ಒಡಿಶಾ ಸಿಎಂ ಆಗಿ ಮಾಝಿ ಪ್ರಮಾಣ ಸ್ವೀಕಾರ

ಭುವನೇಶ್ವರ: ಒಡಿಶಾದ ಸಿಎಂ ಆಗಿ ಮೋಹನ್ ಚರಣ್ ಮಾಝಿ ಅವರು ಬುಧವಾರ ಮಾಣ ವಚನ ಸ್ವೀಕರಿಸಿದರು. ಇದೇ ವೇಳೆ ಡಿಸಿಎಂಗಳಾಗಿ ಕೆ.ವಿ.ಸಿಂಗ್ ದೇವ್ ಮತ್ತು ಪ್ರವತಿ ಪರಿದಾ ಪ್ರಮಾಣವಚನ ಸ್ವೀಕರಿಸಿದರು. ಮೋಹನ್ ಚರಣ್ ಮಾಝಿ ಅವರು ಒಡಿಶಾದಲ್ಲಿ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬಂದಿರುವ ಬಿಜೆಪಿಯ ಪ್ರಥಮ ಸಿಎಂ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಆಂಧ್ರ ಸಿಎಂ ಆಗಿ ನಾಲ್ಕನೇ ಬಾರಿ ನಾಯ್ಡು ಪ್ರಮಾಣ



ವಿಜಯವಾಡ: ಟಿಡಿಪಿ ಮುಖ್ಯಸ್ಥ, ಎನ್‌ಡಿಎ ಶಾಸಕಾಂಗ ಪಕ್ಷದ ನಾಯಕ ಎನ್. ಚಂದ್ರಬಾಬು ನಾಯ್ಡು ಅವರು ಆಂಧ್ರಪ್ರದೇಶದ ಸಿಎಂ ಆಗಿ ಖಬುಧವಾರ ಪ್ರಮಾಣವಚನ ಸ್ವೀಕರಿಸಿದರು. ಸಚಿವರಾಗಿ ಜನಸೇನಾದ ಪವನ್ ಕಲ್ಯಾಣ್, ನಾರಾ ಲೋಕೇಶ್ ಸಹ ಪ್ರಮಾಣವಚನ ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಪ್ರಧಾನಿ ಸೇರಿ ಎನ್‌ಡಿಎ ಮೈತ್ರಿಕೂಟದ ನಾಯಕರು ಪಾಲ್ಗೊಂಡಿದ್ದರು.

ಉಪೇಂದ್ರ ದ್ವಿವೇದಿ ಸೇನೆಯ ನೂತನ ಮುಖ್ಯಸ್ಥ

ದೆಹಲಿ: ಸೇನೆಯ ಉಪ ಮುಖ್ಯಸ್ಥರಾಗಿದ್ದ ಲೆ.ಜ. ಉಪೇಂದ್ರ ದ್ವಿವೇದಿ ಅವರು ಸೇನೆಯ ನೂತನ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ. ಹಾಲಿ ಮುಖ್ಯಸ್ಥ ಜನರಲ್ ಪಾಂಡೆ ಅವರು ಜೂ.30ರಂದು ನಿವೃತ್ತರಾಗಲಿದ್ದು, ಅವರ ಸ್ಥಾನಕ್ಕೆ ದ್ವಿವೇದಿ ಅಧಿಕಾರ ಸ್ವೀಕರಿಸುವರು. ಪಾಂಡೆ ಅವರು ಮೇ 31ರಂದೇ ನಿವೃತ್ತರಾಗಬೇಕಿತ್ತು. ಸರಕಾರ ಅವರ ಸೇವೆಯನ್ನು ಒಂದು ತಿಂಗಳು ವಿಸ್ತರಿಸಿತ್ತು.

ಪಾಕ್ ಉಗ್ರನಿಗೆ ಕ್ಷಮೆ ನೀಡಲು ಮುರ್ಮು ನಕಾರ

ದೆಹಲಿ: ಕೆಂಪುಕೋಟೆ ಮೇಲೆ 24 ವರ್ಷಗಳ ಹಿಂದೆ ದಾಳಿ ನಡೆಸಿದ್ದ ಪಾಕಿಸ್ತಾನದ ಉಗ್ರ ಮೊಹಮ್ಮದ್ ಆರಿಫ್ ಅಲಿಯಾಸ್ ಅಶ್ಫಕ್ ಕ್ಷಮಾಪಣಾ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ತಿರಸ್ಕರಿಸಿದ್ದಾರೆ. 2000, ಡಿ.22ರಂದು ಕೆಂಪುಕೋಟೆ ಮೇಲೆ ದಾಳಿ ನಡೆದಿತ್ತು. ಈ ವೇಳೆ 7 ರಜಪೂತ್ ರೈಫಲ್ಸ್‌ನ ಯೋಧರ ಮೇಲೆ ಆರೀಫ್ ನಡೆಸಿದ್ದ ಗುಂಡಿನ ದಾಳಿಯಲ್ಲಿ, ಮೂವರು ಹುತಾತ್ಮರಾಗಿದ್ದರ್ರು.

ನಿಗಮದ ಹಣ ವರ್ಗಾವಣೆಯ ಹಿಂದೆ ಖಾಸಗಿ ಜಾಲ ಸಕ್ರಿಯ

ವಾಲ್ಮೀಕಿ ನಿಗಮ ಹಗರಣ ಕಮಿಷನ್ ದಂಧೆ ಕೈವಾಡ

ಬೆಂಗಳೂರು: ರಾಜ್ಯದಲ್ಲಿ ಭಾರಿ ವಿವಾದಕ್ಕೆ ಕಾರಣವಾಗಿರುವ ವಾಲ್ಮೀಕಿ ಅಭಿವೃದ್ಧಿ ನಿಗಮ ಮಂಡಳಿಯ ಹಣ ವರ್ಗಾವಣೆಯ ಹಿಂದೆ ಕಮಿಷನ್ ದಂಧೆಯ ಕೈವಾಡವಿದೆ ಎನ್ನುವ ಮಾಹಿತಿ ಬಹಿರಂಗವಾಗಿದೆ.

ಎಸ್‌ಐಟಿ ವತಿಯಿಂದ ನಡೆಯುತ್ತಿರುವ ಈ ಹಗರಣದಲ್ಲಿ ಹೈದರಾಬಾದ್ ನಂಟಿರುವುದು ಬಹಿರಂಗವಾಗಿದೆ. ಆದರೆ ಈ ಪ್ರಮಾಣದಲ್ಲಿ ಹಣ ವರ್ಗಾಯಿಸಲು ಕಾರಣವೇನು? ಎನ್ನುವ ಪ್ರಶ್ನೆ ಅನೇಕರಲ್ಲಿತ್ತು. ಈ ಪ್ರಶ್ನೆಗೆ ಇದೀಗ ಸ್ಪಷ್ಟನೆ ಸಿಕ್ಕಿದ್ದು, ಕಮಿಷನ್ ಆಸೆಗೆ ಬಿದ್ದು ಈ ಪ್ರಮಾಣದಲ್ಲಿ ಹಣ ವರ್ಗಾಯಿಸಲಾಗಿದೆ ಎನ್ನಲಾಗುತ್ತಿದೆ.

ನಿಗಮದ ಹಣ ವರ್ಗಾವಣೆಯ ಹಿಂದೆ ಖಾಸಗಿ ಜಾಲವೊಂದು ಸಕ್ರಿಯವಾಗಿದ್ದು, ನಿಗಮದಲ್ಲಿದ್ದ ಹಣವನ್ನು ಒಂದು ತಿಂಗಳ ಮಟ್ಟಿಗೆ ಪಡೆದುಕೊಂಡು ಅದನ್ನು ಬೇರೆ ಕಡೆ ಹೂಡಿಕೆ ಮಾಡಿ ಲಾಭ ಗಳಿಸಿ ತಿಂಗಳ ಬಳಿಕ ಕಮಿಷನ್‌ನೊಂದಿಗೆ ಅಸಲನ್ನು ವಾಪಸ್ ಸಂದಾಯ ಮಾಡಲಾಗುತ್ತಿತ್ತು ಎನ್ನಲಾಗಿದೆ.

- ಹಣದ ವಹಿವಾಟು ಮೂಲಕ ಸಿಬಿಲ್ ಸ್ಕೋರ್ ಹೆಚ್ಚಿಸಿಕೊಂಡು, ಷೇರು ಮಾರುಕಟ್ಟೆಯಲ್ಲಿ ಹಣ ಹೂಡುವ ಲೆಕ್ಕಾಚಾರ
- 97 ಕೋಟಿ ರುಪಾಯಿ ಹಣ ವರ್ಗಾವಣೆಗೆ ಐದು ಕೋಟಿ ರುಪಾಯಿ ಕಮಿಷನ್ ನೀಡುವ ಭರವಸೆ ನೀಡಿ 4 ಕೋಟಿ ಪಾವತಿ

16 ಕೆಜಿ ಚಿನ್ನ, 10 ಕೋಟಿ ಜಪ್ತಿ

ನಕಲಿ ಖಾತೆ ತೆರೆದ ಆರೋಪದಲ್ಲಿ ಸತ್ಯನಾರಾಯಣ ವರ್ಮ ಎಂಬಾತನನ್ನು ಹೈದರಾಬಾದ್‌ನಲ್ಲಿ ಬಂಧಿಸಲಾಗಿದೆ. ಈತ ವಿವಿಧ ಕಂಪನಿಗಳ ಹೆಸರಿನಲ್ಲಿ 18 ಬ್ಯಾಂಕ್ ಖಾತೆ ತೆರೆದಿದ್ದ. ಎಲ್ಲ ಬ್ಯಾಂಕ್ ಖಾತೆಗಳಿಗೂ ವಾಲ್ಮೀಕಿ ನಿಗಮದಿಂದ ಹಣ ವರ್ಗಾವಣೆ ಆಗಿತ್ತು. ಬಂಧಿತ ಸತ್ಯನಾರಾಯಣನಿಂದ 16 ಕೆಜಿ ಚಿನ್ನ, 10 ಕೋಟಿ ನಗದು ಜಪ್ತಿ ಮಾಡಲಾಗಿದೆ.

ಈ ರೀತಿ ತಾತ್ಕಾಲಿಕವಾಗಿ ಹಣ ವರ್ಗಾಯಿಸುವುದು, ಹಲವು ಬಾರಿ ಹಣದ ವಹಿವಾಟು ನಡೆದಿದೆ. ಆದರೆ ಈ ಬಾರಿ ಇದು ಬಹಿರಂಗವಾಗಿದೆ ಎಂದು ತಿಳಿದುಬಂದಿದೆ. → 4

ಸಾಲು ಸಾಲು ವಿವಾದಗಳಿಂದ ಬೇಸತ್ತಿರುವ ಸ್ಯಾಂಡಲ್‌ವುಡ್ | ಸಮರ್ಥನೆ ಮಾಡಿಕೊಳ್ಳಲಾಗದ ಸ್ಥಿತಿಯಲ್ಲಿ ಚಿತ್ರರಂಗ

ದರ್ಶನ್ ಅಂದರ್; ಚಂದನವನ ಮೌನ

ಪ್ರಶಾಂತ್ ಟಿ.ಆರ್ ಬೆಂಗಳೂರು

ಚಾಲೆಂಜಿಂಗ್ ಸ್ಟಾರ್ ದರ್ಶನ್‌ಗೂ ವಿವಾದಗಳಿಗೂ ನಂಟು ಹೊಸತಲ್ಲ. ಈ ಹಿಂದೆ ಹಲವು ವಿವಾದಗಳು ಎದುರಾದ ಸಮಯದಲ್ಲಿ ದರ್ಶನ್ ಕೈಹಿಡಿದಿದ್ದ ಚಿತ್ರರಂಗ ಈ ಬಾರಿ 'ಮೌನ'ಕ್ಕೆ ಶರಣಾಗಿದೆ.

ಪತಿ–ಪತ್ನಿ ಗಲಾಟೆ ಎದುರಾದ ಸಮಯದಲ್ಲಿ ಚಿತ್ರರಂಗದ ಹಿರಿಯರೆಲ್ಲ ಸೇರಿ ಸಮಾಧಾನಪಡಿಸಿ, ಸಂಧಾನ ಮಾಡಿದ್ದರು. ಬಳಿಕ ಸಾಲು ಸಾಲು ವಿವಾದಗಳನ್ನು ಮೈಮೇಲೆ ಎಳೆದುಕೊಂಡಾಗಲೂ ಡ್ಯಾಮೇಜ್ ಕಂಟ್ರೋಲ್‌ಗೆ ಅನೇಕ ಕಲಾವಿದರು ಶ್ರಮಿಸಿದ್ದರು. ಆದರೀಗ ಕೇಳಿಬಂದಿರುವ ಕೊಲೆ ಆರೋಪದಲ್ಲಿ ಮಾತ್ರ ಬಹುತೇಕರು ದರ್ಶನ್ ಅವರಿಂದ ಅಂತರ ಕಾಯ್ದುಕೊಂಡಿದ್ದಾರೆ.

ಇತರೆ ಪ್ರಕರಣಗಳಲ್ಲಿ ದರ್ಶನ್ ಪರ ನಿಲ್ಲುತ್ತಿದ್ದವರಿಗೆ ಈ ಪ್ರಕರಣದಲ್ಲಿ ಸಮರ್ಥನೆ

ಮಾಡಿಕೊಳ್ಳಲು ಆಗದ ರೀತಿಯಲ್ಲಿ ಸಾಕ್ಷ್ಯಗಳು ಕಾಣಿಸುತ್ತಿವೆ. ಇದರೊಂದಿಗೆ ಈ ಹಿಂದಿನ ಹಲವು ವಿವಾದಗಳಿಂದ 'ಹೊಡೆತ' ತಿಂದರೂ ಈ ರೀತಿಯ ಕ್ರೌರ್ಯ ಮೆರೆದಿರುವುದಕ್ಕೆ ಬಹುತೇಕರಿಗೆ ದರ್ಶನ್ ವಿರುದ್ಧ ಅಸಮಾಧಾನವಿದೆ. ಆದರೆ ಈ ಬಗ್ಗೆ ಬಹಿರಂಗವಾಗಿ ಹೇಳಿಕೆ ಕೊಟ್ಟರೆ ಮುಂದೆ ಸಮಸ್ಯೆಯಾಗುತ್ತದೆ ಎನ್ನುವ ಕಾರಣಕ್ಕೆ ಇಡೀ ಪ್ರಕರಣದ ಬಗ್ಗೆ ಮಾತನಾಡದಿರಲು ಬಹುತೇಕರು ತೀರ್ಮಾನಿಸಿದ್ದಾರೆ ಎನ್ನಲಾಗಿದೆ. → 4

ಬ್ಯಾನ್‌ಗೆ ಬಿಗಿಪಟ್ಟು?

ದರ್ಶನ್ ಪುಂಡಾಟ ಇದೇ ಮೊದಲೇನಲ್ಲ, ಈ ಹಿಂದೆಯೂ ಹಲವು ಬಾರಿ ದರ್ಶನ್ ನಿರ್ಮಾಪಕರು, ಸಹಕಲಾವಿದರ ಜತೆಗೆ ಅತಿರೇಕದಿಂದ ವರ್ತಿಸಿದ್ದಾರೆ. ಹಾಗಾಗಿಯೇ ಬಹುತೇಕರು ಅವರೊಂದಿಗೆ ಅಂತರ ಕಾಯ್ದುಕೊಂಡಿದ್ದಾರೆ. ಈಗ ದರ್ಶನ್ ಅವರ ಮೇಲೆ ಬಂದಿರುವ ಆರೋಪ ಸಾಬೀತಾದರೆ ಅವರನ್ನು ಚಿತ್ರರಂಗದಿಂದಲೇ ಬ್ಯಾನ್ ಮಾಡಬೇಕು ಎಂಬ ಕೂಗು ಕೇಳಿ ಬರುತ್ತಿದೆ. ಆದರೆ ಈ ಬಗ್ಗೆ ವಾಣಿಜ್ಯ ಮಂಡಳಿಯಾಗಲಿ, ಕಲಾವಿದರ ಸಂಘವಾಗಲಿ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ. ಬದಲಾಗಿ ತಪ್ಪಿತಸ್ಥರಿಗೆ ಕಾನೂನು ರೀತಿ ಶಿಕ್ಷೆಯಾಗಲಿ ಎಂಬುದಷ್ಟೇ ಅವರ ನಿಲುವಾಗಿದೆ.

ಡೆವಿಲ್ ವಿಳಂಬ

ನಟ ದರ್ಶನ್ ಕೊಲೆ ಆರೋಪದಲ್ಲಿ ಸಂಕಷ್ಟಕ್ಕೆ ಸಿಲುಕಿದ್ದು, ಜೈಲು ಸೇರಿದ್ದಾರೆ. ಇದು ಅವರು ನಟಿಸುತ್ತಿದ್ದ ಸಿನಿಮಾಗಳ ಮೇಲೆ ಪರಿಣಾಮ ಬೀರಲಿದೆ. ಸದ್ಯ ದರ್ಶನ್ ಡೆವಿಲ್ ಚಿತ್ರದ ಚಿತ್ರೀಕರಣದಲ್ಲಿ ಬ್ಯುಸಿಯಾಗಿದ್ದರು, ಅಕ್ಟೋಬರ್‌ನಲ್ಲಿ ಡೆವಿಲ್ ಚಿತ್ರವನ್ನು ತೆರೆಗೆ ತರಬೇಕು ಎಂದು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಅದಕ್ಕಾಗಿ ಭರದಿಂದ ಶೂಟಿಂಗ್ ಕೂಡ ನಡೆಸಲಾಗುತ್ತಿತ್ತು. ಮಂಗಳವಾರ ಕೂಡ ಡೆವಿಲ್ ಚಿತ್ರದ ಶೂಟಿಂಗ್ ಶೆಡ್ಯೂಲ್ ಇತ್ತು. ಮುಂಜಾನೆ ಜಿಮ್‌ಗೆ ಹೋಗಿ ಬಂದ ದರ್ಶನ್ ಅವರನ್ನು ಕೊಲೆ ಪ್ರಕರಣದ ಸಂಬಂಧ ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಹಾಗಾಗಿ ಡೆವಿಲ್ ಚಿತ್ರೀಕರಣ ತಡವಾಗುವುದು ಖಚಿತವಾಗಿದೆ.

ಬ್ರ್ಯಾಂಡ್ ಬೆಂಗಳೂರಿಗೆ ಕೇಂದ್ರದ ನೆರವು ಅಗತ್ಯ

ಬೆಂಗಳೂರು: ಜಾಗತಿಕ ಮಟ್ಟದಲ್ಲಿ ಬ್ರ್ಯಾಂಡ್ ಬೆಂಗಳೂರು ಹೆಸರಿಗೆ ತಕ್ಕಂತೆ ಮೂಲಸೌಕರ್ಯ ಒದಗಿಸಲು ಕೇಂದ್ರ ಸರಕಾರದ ನೆರವೂ ಅಗತ್ಯ ಎಂದು ಬಿಬಿಎಂಪಿ ಆಡಳಿತಾಧಿಕಾರಿ ಎಸ್.ಆರ್. ಉಮಾಶಂಕರ್ ಹೇಳಿದರು. ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾದ ಅಧಿಕಾರ ವಹಿಸಿಕೊಂಡ ಬಳಿಕ ಮಾತನಾಡಿ, ಬ್ರ್ಯಾಂಡ್ ಬೆಂಗಳೂರು ಹೆಸರಿಗೆ ತಕ್ಕಂತೆ ಮೂಲಸೌಕರ್ಯ ಇಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಈ ನಿಟ್ಟಿನಲ್ಲಿ ಜನರ ಸಮಸ್ಯೆಗಳನ್ನು ಪರಿಹರಿಸುವುದು ಸರಕಾರದ ಉದ್ದೇಶ. ನಗರದಿಂದ ಸಾಕಷ್ಟು ಕಾರ್ಪೊರೇಟ್ ತೆರಿಗೆ ಸಂಗ್ರಹವಾಗುತ್ತಿದೆ. ಹೀಗಾಗಿ, ನಗರದ ಅಭಿವೃದ್ಧಿಗೆ ಕೇಂದ್ರ ಸರಕಾರದ ನೆರವೂ ಅಗತ್ಯ ಎಂದರು. ನಗರದ ವ್ಯಾಪ್ತಿಯಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಗುಣಮಟ್ಟದ ಕಾಮಗಾರಿಗೆ ಒತ್ತು ನೀಡಬೇಕು. ಮಳೆಗಾಲದಲ್ಲಿ ತಗ್ಗು ಪ್ರದೇಶಗಳಿಗೆ ನೀರು ನುಗ್ಗುವುದನ್ನು ತಡೆಯಬೇಕು. ಇದಕ್ಕಾಗಿ ಮುಂಜಾಗ್ರತಾ ಕ್ರಮ ಕೈಗೊಳ್ಳುವ ಬಗ್ಗೆ ತೀರ್ಮಾನಗಳೂ ಆಗಿವೆ. ಬೃಹತ್ ಮಳೆ ನೀರುಗಾಲುವೆ ಕೆಲಸ ನಗರದಲ್ಲಿ ಪೂರ್ಣಗೊಂಡಿಲ್ಲ. 330 ಕಿ.ಮೀ.ನಷ್ಟು ರಾಜಕಾಲುವೆ ನಿರ್ಮಾಣವಾದರೆ ಶಾಶ್ವತ ಪರಿಹಾರ ಸಿಗಬಹುದು ಎಂದರು.

ಅನಧಿಕೃತ ಫ್ಲೆಕ್ಸ್; 12 ಎಫ್‌ಐಆರ್ ದಾಖಲು

ಬೆಂಗಳೂರು: ನಗರದಲ್ಲಿ ಅನಧಿಕೃತವಾಗಿ ಫ್ಲೆಕ್ಸ್, ಬ್ಯಾನರ್ ಹಾಕಿದವರ ವಿರುದ್ಧ ಬಿಬಿಎಂಪಿ ಸಮರವನ್ನೇ ಸಾರಿದೆ. ಇದೀಗ ಅನಧಿಕೃತವಾಗಿ ಫ್ಲೆಕ್ಸ್, ಬ್ಯಾನರ್ ಹಾಕಿದ್ದಕ್ಕೆ 12 ಎಫ್‌ಐಆರ್ ದಾಖಲಾಗಿದೆ.

ನಗರದಾದ್ಯಂತ ಅನಧಿಕೃತವಾಗಿ ಅಳವಡಿಸಿರುವ ಫ್ಲೆಕ್ಸ್, ಬ್ಯಾನರ್‌ಗಳ ತೆರವು ಕಾರ್ಯಾಚರಣೆಯನ್ನು ನಡೆಸಲಾಗುತ್ತಿದ್ದು, ಈ ಸಂಬಂಧ ನಗರಾಭಿವೃದ್ಧಿ ಸಚಿವ ಡಿ.ಕೆ ಶಿವಕುಮಾರ್ ನಗರದಲ್ಲಿ ಯಾವುದೇ ಅನಧಿಕೃತ ಜಾಹೀರಾತುಗಳು ಅಳವಡಿಸಿದಂತೆ ಸೂಕ್ತ ಕ್ರಮ ವಹಿಸಲು ಸೂಚನೆ ನೀಡಿದ್ದಾರೆ. ಅದರಂತೆ, ಜೂ.1ರಿಂದ ಇದುವರೆಗೆ 1259 ಫ್ಲೆಕ್ಸ್ ,ಬ್ಯಾನರ್, ಎಲ್.ಇ.ಡಿ ಹಾಗೂ ಹೋರ್ಡಿಂಗ್ಸ್ ಗಳನ್ನು ತೆರವುಗೊಳಿಸಲಾಗಿದೆ. ಪೊಲೀಸ್ ಠಾಣೆಯಲ್ಲಿ 27 ದೂರು ದಾಖಲಿಸಿದ್ದು, ಅದರಲ್ಲಿ 12 ಎಫ್.ಐ.ಆರ್ ದಾಖಲಿಸಲಾಗಿದೆ.

ಅನಧಿಕೃತ ಜಾಹೀರಾತುಗಳ ಮಾಹಿತಿ ನೀಡಿ

ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ಬಿಬಿಎಂಪಿಯ ಹೊರಾಂಗಣ ಜಾಹೀರಾತು ಫಲಕ ಮತ್ತು ಸಾರ್ವಜನಿಕ ಸಂದೇಶದ ಉಪವಿಧಿಗಳು-20183 ರಲ್ಲಿ ಅಂಗಡಿ ಮುಂಗಟ್ಟು ಜಾಹೀರಾತುಗಳು, ವಾಹನ ಸ್ವ-ಜಾಹೀರಾತು ಇನ್ನಿತರೆ ಸಣ್ಣಪುಟ್ಟ ಜಾಹೀರಾತುಗಳನ್ನು ಸೀಮಿತ ಅವಧಿಗೆ ಮತ್ತು ಸೀಮಿತ ಅಳತೆಗೆ ಅನುಮತಿಸಲು ಮಾತ್ರ ಅವಕಾಶವಿರುತ್ತದೆ. ಇವುಗಳನ್ನು ಹೊರತುಪಡಿಸಿ ಇತರೆ ಯಾವುದೇ ವಸತಿ ಪ್ರದೇಶಗಳಲ್ಲಿ, ಖಾಸಗಿ ಸ್ವತ್ತುಗಳಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಿ ವಾಣಿಜ್ಯ ಜಾಹೀರಾತುಗಳನ್ನು ಪ್ರದರ್ಶಿಸುವುದನ್ನು, ಎಲ್.ಇ.ಡಿ ಜಾಹೀರಾತುಗಳನ್ನು ಪ್ರದರ್ಶಿಸುವುದನ್ನು ಹಾಗೂ ಸಾರ್ವಜನಿಕ ಮತ್ತು ವೈಯಕ್ತಿಕ ಜಾಹೀರಾತುಗಳು, ಶುಭಾಶಯಗಳು, ಸಭೆ -ಸಮಾರಂಭಗಳು ಕುರಿತ ಜಾಹೀಡಡರಾತು, ಪ್ರಕಟಣೆಗಳ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್, ಭಿತ್ತಿಪತ್ರ, ಬಾವುಟಗಳು ಇತ್ಯಾದಿ ಅಳವಡಿಸುವುದನ್ನು ನಿಷೇದಿಸಲಾಗಿದ್ದರೂ ಸಹ ಮತ್ತೆ ಮತ್ತೆ ಅಳವಡಿಸುತ್ತಿರುವುದರಿಂದ ಸಾರ್ವಜನಿಕ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿರುವುದು ಅಲ್ಲದೇ ನಗರದ ಸೌಂದರ್ಯ ಹಾಳಾಗುತ್ತಿದೆ ಮತ್ತು ಪರಿಸರಕ್ಕೆ ಮಾರಕವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತುಗಳ ಕುರಿತು ನಾಗರೀಕರು ಪಾಲಿಕೆ ಸಹಾಯವಾಣಿ ಸಂಖ್ಯೆಯಾದ 1533 ಅಥವಾ ಜಾಹೀರಾತು ವಿಭಾಗದ ವಾಟ್ಸ್ ಅಪ್ ಸಂಖ್ಯೆ 9480683939 ಗೆ ಛಾಯಾಚಿತ್ರ ಅಥವಾ ವಿಡಿಯೊ ಮಾಡಿ ವಿಳಾಸ ಸಹಿತ ಕಳುಹಿಸಿದಲ್ಲಿ ಪಾಲಿಕೆ ವತಿಯಿಂದ ಕ್ರಮಗಳನ್ನು ಕೈಗೊಳ್ಳಲಾಗುವುದು.

ನೈಸರ್ಗಿಕ ಸಂಪನ್ಮೂಲದ ಬಗ್ಗೆ ಮಕ್ಕಳಲ್ಲಿ ಜಾಗೃತಿ

ಬೆಂಗಳೂರು : ಬೆಂಗಳೂರು ಬ್ಲೇಜ್ ಹೆಣ್ಣುಮಕ್ಕಳ ಪ್ರೌಢಶಾಲೆಯಲ್ಲಿ ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಕುರಿತು ಅರಿವು ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕರ್ನಾಟಕ ಪರಿಸರ ಪ್ರಶಸ್ತಿ ಪುರಸ್ಕೃತ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನ ಕೇಂದ್ರದ ಸಂಶೋಧಕ ಡಾ. ಟಿ.ವಿ. ರಾಮಚಂದ್ರ, ಬೆಂಗಳೂರು ಬ್ಲೇಜ್ ಹೆಣ್ಣು ಮಕ್ಕಳ ಪ್ರೌಢಶಾಲೆಯಲ್ಲಿ ಸಮಗ್ರ ಶಕ್ತಿ ಯೋಜನೆ, ಭೂ ಮತ್ತು ಜಲಚರ ಪರಿಸರ ವ್ಯವಸ್ಥೆಗಳ ಸಂರಕ್ಷಣೆ, ಪರಿಸರ ಮಾದರಿ ರಚನೆ, ಮಣ್ಣು ಮತ್ತು ಜಲಮಾಲಿನ್ಯ, ಘನತ್ಯಾಜ್ಯ ನಿರ್ವಹಣೆ ಕುರಿತು ಮಾಹಿತಿ ನೀಡಿ, ಪರಿಸರ ಶಿಕ್ಷಣದಲ್ಲಿ ಮರದ ಮಹತ್ವ, ತರಕಾರಿ ಆಹಾರದ ಜತೆಗೆ ನೀರಿನ ಮಹತ್ವ ಹಾಗೂ ಜಲಚಕ್ರ ಹೇಗೆ ಬಳಕೆಯಾಗುತ್ತದೆ. ಮರಗಳನ್ನು ಬೆಳೆಸುವುದರಿಂದಾಗುವ ಉಪಯೋಗಗಳ ಮಾಹಿತಿ ಜತೆಗೆ ಪ್ರಾಣಿಗಳೂ ಸಹ ಪರಿಸರ ಸಂರಕ್ಷಣೆಯಲ್ಲಿ ಹೇಗೆ ಪಾತ್ರ ವಹಿಸುತ್ತವೆ ಎಂಬುದನ್ನು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಟ್ಟರು. ಏಪ್‌ಇಆರ್‌ಎನ್‌ಎಸ್‌ಎಸ್ ಸ್ಥಾಪಕ ಮತ್ತು ಸಂಶೋಧಕರಾದ ಫ್ರಿಜುಲಾಲ್ ಎಂ.ವಿ., ಪಕ್ಷಿಗಳನ್ನು ಗುರುತಿಸುವುದು ಹೇಗೆ? ಕಾಪಾಡುವುದು ಹೇಗೆ ಮತ್ತು ಅವುಗಳಿಂದ ಜಲ ಮತ್ತು ಪರಿಸರ ಸಂರಕ್ಷಣೆ ಮಾಡುವುದು ಹೇಗೆ ಎಂಬ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಸಮಾಚಾರ ಸಣ್ಣದಲ್ಲ

ದರ್ಶನ್ ತಾಯಿಯನ್ನು ಸಂತೈಸಿದ ಮೊಮ್ಮಗ

ಮೈಸೂರು: ಕೊಲೆ ಪ್ರಕರಣದಲ್ಲಿ ಬಂಧನಕ್ಕೊಳಗಾದ ನಟ ದರ್ಶನ್ ತಾಯಿ ಮೀನಾ ತೂಗುದೀಪ ಆಘಾತಕ್ಕೊಳಗಾಗಿದ್ದು, ಆಕೆಯನ್ನು ಸಂತೈಸಲು ಮೊಮ್ಮಗ ಮೈಸೂರಿಗೆ ಆಗಮಿಸಿದ್ದಾನೆ. ಬೆಂಗಳೂರಿನಿಂದ ಮೈಸೂರಿನ ದರ್ಶನ್ ನಿವಾಸಕ್ಕೆ ಆಗಮಿಸಿದ ಅಕ್ಕನ ಮಗ ಚಂದನ್, ಅಜ್ಜಿಗೆ ಸಮಾಧಾನ ಮಾಡುತ್ತಿದ್ದಾನೆ. ದರ್ಶನ್ ಬಂಧನಕ್ಕೊಳಗಾಗಿರುವ ಹಿನ್ನಲೆಯಲ್ಲಿ ಅಂತರ ಕಾಯ್ದುಕೊಂಡಿರುವ ಕುಟುಂಬದವರು, ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದೆ. ಮೈಸೂರಿನ ಸಿದ್ಧಾರ್ಥನಗರದಲ್ಲಿ ವಾಸಿಸುತ್ತಿರುವ ಮೀನಾ ತೂಗುದೀಪ್ ಶ್ರೀನಿವಾಸ್, ಮಗ ದರ್ಶನ್ ಬಗ್ಗೆ ಮಾತನಾಡಲು ಒಪ್ಪಲಿಲ್ಲ. ತಾಯಿ ಜೊತೆಗೂ ದರ್ಶನ್ ಜಗಳ ಮಾಡಿಕೊಂಡಿದ್ದಾರೆ ಎಂದು ಹೇಳಲಾಗಿದ್ದು, ಮತ್ತೊಬ್ಬ ಪುತ್ರ ದಿನಕರ್ ಜೊತೆ ಇದ್ದಾರೆ ಎಂದು ಗೊತ್ತಾಗಿದೆ. ಮನೆಯ ಗೇಟ್‌ಗೆ ಒಳಭಾಗದಿಂದ ಬೀಗ ಹಾಕಿರುವ ಕುಟುಂಬ ಸದಸ್ಯರು, ಒಳಗಡೆ ಉಳಿದುಕೊಂಡಿದ್ದಾರೆ. ಮೀನಾ ತೂಗುದೀಪರಿಗೆ ಹಣ್ಣು ಹಂಪಲು, ಊಟ ತಿಂಡಿಯನ್ನು ಚಂದನ್ ತಂದುಕೊಟ್ಟು ಅಜ್ಜಿಯ ಆರೈಕೆಯಲ್ಲಿ ತೊಡಗಿದ್ದಾರೆ.

ನೀಟ್: ತಪ್ಪಿತಸ್ಥರಿಗೆ ಶಿಕ್ಷೆ ನೀಡುವಂತೆ ಆಗ್ರಹ

ಬೆಂಗಳೂರು: ನೀಟ್ ಪ್ರವೇಶ ಪರೀಕ್ಷೆಯಲ್ಲಿ ನಡೆದಿರುವ ಭ್ರಷ್ಟಾಚಾರದ ಕುರಿತಾಗಿ ಕಾನೂನಾತ್ಮಕವಾಗಿ ನಿಷ್ಪಕ್ಷಪಾತ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆ ನೀಡುವಂತೆ ಆಗ್ರಹಿಸಿ ಆಲ್



ಇಂಡಿಯಾ ಡೆಮೊಕ್ರಟಿಕ್ ಸ್ಟುಡೆಂಟ್ಸ್ ಆರ್ಗನೈಸೇಷನ್ ನಗರದಲ್ಲಿ ಪ್ರತಿಭಟನೆ ನಡೆಸಿತು. ಪ್ರತಿಭಟನೆಯನ್ನು ಉದ್ದೇಶಿಸಿ ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಮಾತನಾಡಿ, ಯುಜಿ ನೀಟ್ ಪರೀಕ್ಷೆಯಲ್ಲಿ ನಡೆದಿರುವ ಹಗರಣದ ಕುರಿತಾಗಿ ನ್ಯಾಯಾಂಗದ ನಿಷ್ಪಕ್ಷಪಾತ ತನಿಖೆ ನಡೆಯಬೇಕು. ಹಾಗೆಯೇ, ಕೋಚಿಂಗ್ ಮಾಫಿಯಾ ಇಂದು ಶಿಕ್ಷಣದ ಮೂಲಭೂತ ಆಶಯಕ್ಕೆ ಪೆಟ್ಟು ನೀಡುತ್ತಿದೆ. ಬಡವರ್ಗದ ವಿದ್ಯಾರ್ಥಿಗಳು ಇಂದು ಶಿಕ್ಷಣವನ್ನು ಪಡೆದುಕೊಳ್ಳುವುದಕ್ಕೆ ಹರಸಾಹಸ ಪಡುವಪರಿಸ್ಥಿತಿಯನ್ನು ಕೋಚಿಂಗ್ ಸಂಸ್ಥೆಗಳು ನಿರ್ಮಾಣ ಮಾಡುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಖಿ ಸಂಸ್ಥೆ ಶಾಖೆ ವಿಸ್ತರಣೆ

ಬೆಂಗಳೂರು: ಮಹಿಳಾ ಸಬಲೀಕರಣ, ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಬಂದಿರುವ ಸಖಿ ಸಂಸ್ಥೆಯನ್ನು ಭಾರತದಾದ್ಯಂತ ವಿಸ್ತರಿಸಲಾಗುತ್ತದೆ ಎಂದು ಸಖಿ ಟ್ರಸ್ಟ್‌ನ ಅಧ್ಯಕ್ಷೆ ಪೃಥಾ ಘೋಷ್ ಪ್ರಮಾಣಿಕ್ ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಉಪಾಧ್ಯಕ್ಷೆ ಪಲ್ಲವಿ ಮಾತನಾಡಿ, ಪ್ರಸ್ತುತ ಭಾರತದಾದ್ಯಂತ ಕಾರ್ಯನಿರ್ವಸುತ್ತಿರುವ ಸದಸ್ಯರ ತಂಡವಾಗಿದ್ದು, ಅದರಲ್ಲಿ ಸದಸ್ಯರು ಬೆಂಗಳೂರು, ಮೈಸೂರು, ಮುಂಬೈ ಮತ್ತು ಪುಣೆ, ಕೋಲ್ಕತ್ತಾ, ಉತ್ತರ ಪ್ರದೇಶ, ಒಡಿಶಾ, ದೆಹಲಿ, ಜಬಲ್ಪುರ, ಚಂಡೀಗಢ ಮತ್ತು ತ್ರಿಪುರಾದಲ್ಲಿದ್ದಾರೆ. ನಾವು ಬೆಂಗಳೂರಿನಿಂದ ಕಾರ್ಯನಿರ್ವಸುತ್ತಿರುವ 4 ಕೋರ್ ಆಪರೇಷನಲ್ ಸದಸ್ಯರನ್ನು ಹೊಂದಿದ್ದೇವೆ. ಈ ತಂಡವು ಪ್ರತಿದಿನವೂ ಬೆಳೆಯುತ್ತಿದೆ-ಮತ್ತು ಮುಂದಿನ ದಿನಗಳಲ್ಲಿ ಪ್ಯಾನ್-ಇಂಡಿಯಾವನ್ನು ಸ್ಥಳಾಂತರಿಸುವ ಗುರಿಯನ್ನು ಹೊಂದಿದೆ ಎಂದರು.

2.95 ಲಕ್ಷ ಮೌಲ್ಯದ ವಾಹನ ಜಪ್ತಿ

ಬೆಂಗಳೂರು: ನಗರದಲ್ಲಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡಿ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪುಲಕೇಶಿ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಆರೋಪಿಯಿಂದ 2.95 ಲಕ್ಷ ಮೌಲ್ಯದ ಮೂರು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ಎಚ್‌ಬಿಆರ್ ಲೇಔಟ್‌ನ ನಿವಾಸಿ ಎಸ್.ಎಂ. ಜಸೀಂ (27) ಬಂಧಿತ ಆರೋಪಿ. ಜಸೀಂ, ರ್‍ಯಾಪಿಡೊ, ಸ್ವಿಗ್ಗಿ ಡೆಲಿವರಿ ಬಾಯ್ ಆಗಿ ಕೆಲಸ ಮಾಡುತ್ತಿದ್ದ. ತಾನು ಮಾಡುವ ಕೆಲಸದಿಂದ ಬರುತ್ತಿದ್ದ ಹಣ ಸಾಕಾಗದೇ, ಐಷಾರಾಮಿ ಜೀವನ ನಡೆಸಲು ಆರೋಪಿ ಕಳ್ಳತನ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿಯು ಕಳ್ಳತನ ಮಾಡಿದ್ದ ವಾಹನಗಳ ಮಾರಾಟಕ್ಕೆ ಯತ್ನಿಸುತ್ತಿದ್ದ. ಆದರೆ, ವಾಹನಗಳ ದಾಖಲೆಗಳಿಲ್ಲದ ಕಾರಣ ಮಾರಾಟ ಮಾಡಲು ಸಾಧ್ಯವಾಗದೇ ತನ್ನ ಬಳಿಯೇ ಇಟ್ಟುಕೊಂಡಿದ್ದ. ವಾಹನಗಳ ಸಮೇತ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ವೈದ್ಯಕೀಯ ತ್ಯಾಜ್ಯ ನಿರ್ವಹಣೆಗೆ ಹೊಸ ನೀತಿ: ಸಚಿವ ಈಶ್ವರ ಖಂಡ್ರೆ

ಪ್ರಗತಿ ಪರಿಶೀಲನಾ ಸಭೆ | ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಹೊಸನೀತಿ ತರುವ ಅಗತ್ಯವಿದೆ

ಬೆಂಗಳೂರು: ಅಪಾಯಕಾರಿ ವೈದ್ಯಕೀಯ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಾಗಾಟ ಹಾಗೂ ವಿಲೇವಾರಿ ಮಾಡುವ ಕುರಿತು ತಜ್ಞರೊಂದಿಗೆ ಸಮಾಲೋಚಿಸಿ ನೂತನ ಕರಡುನೀತಿ ಸಿದ್ಧಪಡಿಸುವಂತೆ ಪರಿಸರ ಸಚಿವ ಈಶ್ವರ್ ಖಂಡ್ರೆ ಸೂಚಿಸಿದ್ದಾರೆ.

ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಆಸ್ಪತ್ರೆಗಳಲ್ಲಿ ಉತ್ಪತ್ತಿಯಾಗುವ ವೈದ್ಯಕೀಯ ತ್ಯಾಜ್ಯದ ವಿಲೇವಾರಿಯೂ ಸಮರ್ಪಕವಾಗಿ ಆಗುತ್ತಿಲ್ಲ ಅಲ್ಲದೇ ಮನೆಗಳಲ್ಲಿಯೇ ಬಳಸುವ ಸಿರಿಂಜ್, ಬ್ಯಾಂಡೇಜ್ ಇತ್ಯಾದಿ ವೈದ್ಯಕೀಯ ತ್ಯಾಜ್ಯವನ್ನು ಒಣ ತ್ಯಾಜ್ಯದೊಂದಿಗೆ ವಿಲೇವಾರಿ ಮಾಡುತ್ತಿರುವ ಬಗ್ಗೆ ದೂರು ಬಂದಿದ್ದು, ವೈಜ್ಞಾನಿಕವಾಗಿ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಹೊಸನೀತಿ ತರುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕೆರೆ, ಕಟ್ಟೆ, ಸರೋವರಗಳಿಗೆ ಸಂಸ್ಕರಣೆಯಾಗದ ತ್ಯಾಜ್ಯಜಲ ಸೇರಿ ಜಲಮಾಲಿನ್ಯ ಆಗುತ್ತಿದ್ದು, ಜಲಚರಗಳ ಸಾವಿಗೂ ಕಾರಣವಾಗುತ್ತಿದೆ. ಈ ಹಿನ್ನೆಲೆಯಲ್ಲಿ ತ್ಯಾಜ್ಯ ಸಂಸ್ಕರಣಾ ಘಟಕ ಸಮರ್ಪಕ ಕಾರ್ಯ ನಿರ್ವಹಿಸುವಂತೆ ಸೂಚನೆ ನೀಡಿದರು.

ಸ್ಥಳೀಯ ಸಂಸ್ಥೆಗಳಿಗೆ ನೋಟಿಸ್: ಜಲಮೂಲಗಳಿಗೆ

ಸಂಪರ್ಕ ಇರುವ ಮಳೆ ನೀರು ಕಾಲುವೆ, ಚರಂಡಿಗಳಲ್ಲಿ ಸಂಗ್ರಹವಾಗುವ ತ್ಯಾಜ್ಯವನ್ನು ಮಳೆಗಾಲಕ್ಕೆ ಮುನ್ನ ಮತ್ತು ನಿಯಮಿತವಾಗಿ ತೆರವು ಮಾಡಿ ನೀರಿನ ಗುಣಮಟ್ಟ ಕಾಪಾಡುವಂತೆ ಸ್ಥಳೀಯ ಸಂಸ್ಥೆಗಳಿಗೆ ನೋಟಿಸ್ ನೀಡುವಂತೆ ನಿರ್ದೇಶಿಸಿದರು. ಬೆಂಗಳೂರಿನ ಬೆಳ್ಳಂದೂರು ಕೆರೆಯ ಸುತ್ತಮುತ್ತ ಮುಗಿಲೆತ್ತರದ ಕಟ್ಟಡ ಕಟ್ಟಿರುವ ಹಲವು ಸಂಸ್ಥೆಗಳಿಂದ ಪರಿಸರ ಪರಿಹಾರ ಧನ ಸಂಗ್ರಹಿಸುವಂತೆ ರಾಷ್ಟ್ರೀಯ ಹಸಿರು ನ್ಯಾಯಾಧಿಕರಣ ಸೂಚನೆ ನೀಡಿದ್ದು, ಹಣ ಸಂಗ್ರಹಕ್ಕೆ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದರು.

ಸೇವಾ ಶುಲ್ಕ: ಬಿಬಿಎಂಪಿ ಚಿಂತನೆ

ಬೆಂಗಳೂರು: ನಗರದಲ್ಲಿ ಪಾಲಿಕೆ ಪ್ರತಿ ತಿಂಗಳು 100 ರುಪಾಯಿ ಘನತ್ಯಾಜ್ಯ ಸೇವಾ ಶುಲ್ಕ ವಿಧಿಸಲು ಚಿಂತನೆ ನಡೆಸಿದ್ದು, ನಗರವಾಸಿಗಳು ಶೀಘ್ರದಲ್ಲೇ ತಮ್ಮ ಬಿಲ್‌ಗಳಲ್ಲಿ ಹೆಚ್ಚುವರಿ ಶುಲ್ಕವನ್ನು ನೀಡಬೇಕಾಗುತ್ತದೆ ಎಂದು ಮೂಲಗಳು ತಿಳಿಸಿದೆ.

ಈಗಾಗಲೇ ನಗರದಲ್ಲಿ ಕಸ ತೆಗೆದುಕೊಂಡು ಹೋಗುವ ಪೌರಕಾರ್ಮಿಕರಿಗೆ ಹಲವರು ಹಣ ನೀಡುತ್ತಿದ್ದು, ಇನ್ನು ಮುಂದೆ ಸೇವಾ ಶುಲ್ಕವಾಗಿ ಕಟ್ಟಬೇಕಾಗುತ್ತದೆ. ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿಯು ಸರಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯಲ್ಲಿ ನಗರದಲ್ಲಿ ಕಸ ವಿಲೇವಾರಿ ಸಮಸ್ಯೆ ಹೆಚ್ಚಳವಾಗುತ್ತಿರುವ ಬೆನ್ನಲ್ಲೇ ಶುಲ್ಕವನ್ನು ಜಾರಿ ಮಾಡಲು ಸಿದ್ಧತೆ ನಡೆಸಿದೆ. ದೇಶದಾದ್ಯಂತ ಇತರ ಪ್ರಮುಖ ನಗರಗಳಲ್ಲಿ ಸೇವಾ ಶುಲ್ಕ ವ್ಯವಸ್ಥೆಯನ್ನು ಅಳವಡಿಸಲಾಗಿರುವ ಇದೇ ರೀತಿಯ ವ್ಯವಸ್ಥೆಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ಜಾರಿಗೆ ತರಲಾಗುತ್ತಿದೆ. ಈ ಸೇವಾಶುಲ್ಕದಿಂದ ಬೆಂಗಳೂರಿನಲ್ಲಿ ತ್ಯಾಜ್ಯ ನಿರ್ವಹಣೆಯನ್ನು ಸುಗಮಗೊಳಿಸಬಹುದು ಎಂಬುದು ಬಿಬಿಎಂಪಿ ಲೆಕ್ಕಾಚಾರ. ಆರಂಭದಲ್ಲಿ ಘನತ್ಯಾಜ್ಯ ಸೇವಾಶುಲ್ಕವನ್ನು ವಿದ್ಯುತ್ ಬಿಲ್‌ನಲ್ಲಿ ಸೇರಿಸುವ ಕುರಿತು ಚರ್ಚೆಗಳು ನಡೆದಿದ್ದವು. ಆದರೆ, ಇದಕ್ಕೆ ಹಲವು ಅಡೆತಡೆಗಳು ಇದ್ದವು. ಅದರಲ್ಲೂ ವಿಶೇಷವಾಗಿ ಅನೇಕ ನಿವಾಸಿಗಳು ಗೃಹಜ್ಯೋತಿ ಯೋಜನೆಗಳಿಂದ ಪ್ರಯೋಜನ ಪಡೆಯುತ್ತಿದ್ದಾರೆ. ಪರಿಣಾಮವಾಗಿ, ಆಸ್ತಿ ತೆರಿಗೆ ಸಂಗ್ರಹದೊಂದಿಗೆ ಸೇವಾಶುಲ್ಕವನ್ನು ಸೇರಿಸಲು ನಿರ್ಧರಿಸಲಾಗಿದೆ.

ಸಮಾನತೆ ಬೆಳೆಸಲು ಮುಂದಾಗಬೇಕು

ಬೆಂಗಳೂರು :ಬಸವಣ್ಣನವರ ಕಾಯಕ ತತ್ವದಂತೆ ಎಲ್ಲರಿಗೂ ಶುದ್ಧ ಕುಡಿಯುವ ನೀರನ್ನು ಒದಗಿಸುವ ಕಾಯಕದಲ್ಲಿ ನಿರತರವಾಗಿ ಶ್ರಮಿಸುತ್ತಿರುವ ಜಲಮಂಡಳಿ ನೌಕರರ ಸೇವೆಯಲ್ಲಿ ಬಸವಣ್ಣನವರ ಕಾಯಕ ತತ್ವವನ್ನು ಕಾಣಬಹುದಾಗಿದೆ ಎಂದು ಜಲಮಂಡಳಿ ಅಧ್ಯಕ್ಷ ಡಾ ವಿ ರಾಮ್ ಪ್ರಸಾತ್ ಮನೋಹರ್ ಹೇಳಿದರು.

ಜಲಮಂಡಳಿಯ ಕೇಂದ್ರ ಕಚೇರಿ ಕಾವೇರಿ ಭವನದಲ್ಲಿ ಆಯೋಜಿಸಲಾಗಿದ್ದ 890ನೇ ಶ್ರೀಜಗಜ್ಯೋತಿ ಬಸವೇಶ್ವರ ಜಯಂತಿಯಲ್ಲಿ ಭಾಗವಹಿಸಿ ಮಾತನಾಡಿ, ಕಾಯಕವೇ ಕೈಲಾಸ ಎಂದು ಬಸವಣ್ಣನವರು ಪ್ರತಿಪಾದಿಸಿದ್ದರು. ಮಾಡುವ ಯಾವುದೇ ಕಾರ್ಯದಲ್ಲಿ ಶ್ರದ್ದೆಯನ್ನು ಬೆಳೆಸಿಕೊಂಡಲ್ಲಿ ಅಂದುಕೊಂಡ ಗುರಿ ತಲುಪಲು ಸಾಧ್ಯ. ಜಲಮಂಡಳಿ ಇದೇ ತತ್ವದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿದ್ದು, ನೀರಿನ ಬವಣೆಯನ್ನು

ಸಮರ್ಪಕವಾಗಿ ನಿಭಾಯಿಸಿದೆ ಎಂದರು.

ಸಮಾಜದಲ್ಲಿ ಸಮಾನತೆಯನ್ನು ಬೆಳೆಸುವ ನಿಟ್ಟಿನಲ್ಲಿ ಎಲ್ಲರೂ ಮುಂದಾಗಬೇಕು. ಬಸವಣ್ಣನವರ ಕಾಯಕ ತತ್ವದಂತೆ ಎಲ್ಲರಿಗೂ ಶುದ್ದ ಕುಡಿಯುವ ನೀರನ್ನು ಒದಗಿಸುವ ಕಾಯಕದಲ್ಲಿ ನಿರತರವಾಗಿ ಶ್ರಮಿಸುತ್ತಿರುವ ಜಲಮಂಡಳಿ ನೌಕರರ ಸೇವೆಯಲ್ಲಿ ಬಸವಣ್ಣನವರ ಕಾಯಕ ತತ್ವವನ್ನು ಕಾಣಬಹುದಾಗಿದೆ. ಜಲಮಂಡಳಿಯ ಸಿಬ್ಬಂದಿ ಹಾಗೂ ಅಧಿಕಾರಿಗಳು ತಮ್ಮ ಕಾರ್ಯದಲ್ಲಿ ಇನ್ನಷ್ಟು ಹೆಚ್ಚಿನ ಶ್ರದ್ದೆಯನ್ನು ಅಳವಡಿಸಿಕೊಂಡು ಜನರ ಸೇವೆಯಲ್ಲಿ ತೊಡಗಿಕೊಳ್ಳಬೇಕು ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬೆಂಗಳೂರಿನ ಬಸವ ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ ಮಾತನಾಡಿ, ಹೆಮ್ಮೆಯ ಕನ್ನಡಿಗನಾಗಿರುವ ಬಸವಣ್ಣನವರ ವಿಚಾರಧಾರೆಗಳನ್ನು ಒಂದು ನಾಡು -ನುಡಿಗೆ ಸೀಮಿತವಾಗಿರಿಸದೇ ವಿಶ್ವಾದಾದ್ಯಂತ ಪ್ರಸಾರ ಮಾಡುವ ಕಾರ್ಯಕ್ರಮವಾಗಬೇಕು ಎಂದು ತಿಳಿಸಿದರು.

ಜಲಮಂಡಳಿ ನೌಕರರ ಸಂಘದ ಅಧ್ಯಕ್ಷ ಮರಿಯಪ್ಪ, ಪರಿಶಿಷ್ಟ ಜಾತಿ, ಪಂಗಡಗಳ ಸಂಘದ ಅಧ್ಯಕ್ಷ ಸದಾಶಿವ ಕಾಂಬಳೆ, ಸ್ಯಾನಿಟರಿ ವರ್ಕರ್ಸ್ ಯೂನಿಯನ್ ಅಧ್ಯಕ್ಷ ಸಿದ್ದಪ್ಪ, ಮುಖ್ಯ ಆರ್ಥಿಕ ಸಲಹೆಗಾರ ಸುಬ್ಬರಾಮಯ್ಯ, ಸಿಬ್ಬಂದಿ ಹಾಗೂ ನೌಕರರು ಇದ್ದರು.

ಚಾಲಕರಹಿತ ಮೆಟ್ರೋ ಸಂಚಾರ ಶೀಘ್ರ ಆರಂಭ

ಬೆಂಗಳೂರು: ನಮ್ಮ ಮೆಟ್ರೋದ ಚಾಲಕರಹಿತ ರೈಲು ಸಂಚಾರಕ್ಕೆ ಸಿದ್ಧತೆಗಳು ಆರಂಭವಾಗಿದ್ದು, ಶೀಘ್ರದಲ್ಲೇ ಸಿಗ್ನಲಿಂಗ್ ಪರೀಕ್ಷೆ ಆರಂಭವಾಗಲಿದೆ ಎಂದು ನಮ್ಮ ಮೆಟ್ರೋ ಅಧಿಕಾರಿಗಳು ತಿಳಿಸಿದರು.

ನಮ್ಮ ಮೆಟ್ರೋದ ಮೊದಲ ಚಾಲಕರಹಿತ ರೈಲು ಇದಾಗಿದ್ದು, ಹಳದಿ ಮಾರ್ಗದಲ್ಲಿ ಸಿಗ್ನಲಿಂಗ್ ವ್ಯವಸ್ಥೆ ಮತ್ತು ಇಂಟಿಗ್ರೇಷನ್ ಟೆಸ್ಟಿಂಗ್ ಶೀಘ್ರದಲ್ಲೇ ಆರಂಭವಾಗಲಿದೆ. ಚಾಲಕ ರಹಿತ ರೈಲಿನ ಆರು ಬೋಗಿಗಳ ಮೊದಲ ಸೆಟ್ ಫೆಬ್ರವರಿ 20ರಂದು ಚೀನಾದಿಂದ ಹೆಬ್ಬಗೋಡಿ ಮೆಟ್ರೋ ಡಿಪೋ ತಲುಪಿತ್ತು. ಪ್ರಸ್ತುತ ಸಿಗ್ನಲಿಂಗ್ ಟೆಸ್ಟ್ ಚಾಲಕ ರಹಿತ ರೈಲುಗಳ ಮುಖ್ಯ ಪರೀಕ್ಷೆಯ ಭಾಗವಾಗಿದೆ. ಕೋಚ್‌ಗಳು ಸ್ಟ್ಯಾಟಿಕ್ ಮತ್ತು ಎಲೆಕ್ಟ್ರಿಕಲ್ ಸರ್ಕ್ಯೂಟ್ ಪರೀಕ್ಷೆಗೆ ಒಳಗಾಗುತ್ತಿವೆ. ಶೀಘ್ರದಲ್ಲೇ, ಅವುಗಳನ್ನು ಮುಖ್ಯ ಪರೀಕ್ಷೆಗೆ ಒಳಪಡಿಸಲಾಗುವುದು ಎಂದು ನಮ್ಮ ಮೆಟ್ರೊದ ಹಿರಿಯ ಅಧಿಕಾರಿ ತಿಳಿಸಿದರು.

ಆರ್. ವಿ. ರಸ್ತೆ-ಬೊಮ್ಮಸಂದ್ರ ಮಾರ್ಗ 18.82 ಕಿ. ಮೀ. ಉದ್ದವಿದೆ. 16 ನಿಲ್ದಾಣಗಳನ್ನು ಹೊಂದಿರುವ ಇದು ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಸೇರಿದೆ. ಈ ಮಾರ್ಗ ಆರ್. ವಿ. ರಸ್ತೆ ನಿಲ್ದಾಣದಲ್ಲಿ ಹಸಿರು ಮಾರ್ಗಕ್ಕೆ, ಜಯದೇವ ನಿಲ್ದಾಣದಲ್ಲಿ ಗುಲಾಬಿ ಮಾರ್ಗಕ್ಕೆ ಸಂಪರ್ಕ ಕಲ್ಪಿಸುತ್ತದೆ. ಜೂನ್ 7ರಂದು ಆರ್. ವಿ. ರಸ್ತೆ-ಬೊಮ್ಮಸಂದ್ರ ಮಾರ್ಗದಲ್ಲಿ ಪ್ರಾಯೋಗಿಕ ಸಂಚಾರ ಆರಂಭಿಸಲು ನಮ್ಮ ಮೆಟ್ರೋ ಮುಂದಾಗಿತ್ತು. ಆದರೆ ಹೊಸ ತಂತ್ರಾಂಶ ಅಪ್‌ಲೋಡ್ ಮಾಡುವುದು ತಡವಾದ ಕಾರಣ ಅದು ಸಾಧ್ಯವಾಗಲಿಲ್ಲ. ಹೀಗಾಗಿ ಇಂದಿನಿಂದ (ಜೂ.13)ರಂದು ಆರ್. ವಿ. ರಸ್ತೆ-ಬೊಮ್ಮಸಂದ್ರ ಸಂಪೂರ್ಣ ಮಾರ್ಗದಲ್ಲಿ ಪ್ರಾಯೋಗಿಕ ಸಂಚಾರ ಆರಂಭವಾಗಲಿದೆ ಎಂದರು.

ಹಳದಿಮಾರ್ಗದ ರೈಲನ್ನು 37 ಪರಿಶೀಲನಾ ಪರೀಕ್ಷೆಗೆ ಒಳಪಡಿಸಲಾಗುತ್ತಿದ್ದು, ಮುಂಬರುವ ಟೆಸ್ಟಿಂಗ್‌ಗಳು ಸಿಗ್ನಲಿಂಗ್, ಟೆಲಿಕಮ್ಯುನಿಕೇಷನ್ ಮತ್ತು ವಿದ್ಯುತ್ ಪೂರೈಕೆಯೊಂದಿಗೆ ಸಂಪೂರ್ಣ ವ್ಯವಸ್ಥೆಯನ್ನು ವಿಲೀನಗೊಳಿಸುವ ಗುರಿ ಹೊಂದಿದ್ದು, ರಿಸರ್ಚ್ ಆ್ಯಂಡ್ ಸ್ಟ್ಯಾಂಡರ್ಡ್ಸ್ ಆರ್ಗನೈಸೇಷನ್ ಮತ್ತು ಕಮೀಷನರ್ ಆಫ್ ಮೆಟ್ರೋ ರೈಲ್ ಸೇಫ್ಟಿಯಿಂದ ಸುರಕ್ಷತಾ ತಪಾಸಣೆಗಳು ನಡೆಯಬೇಕಿದೆ. ಸಂಚಾರ ಆರಂಭಿಸುವ ಮುನ್ನ ಆರ್‌ಡಿಎಸ್‌ಒ ಮತ್ತು ಸಿಎಮ್‌ಆರ್‌ಎಸ್‌ನಿಂದ ಸಲಹೆಗಳನ್ನು ಪಡೆಯುವ ಮತ್ತು ರೈಲ್ವೆ ಮಂಡಳಿಯಿಂದ ಅನುಮೋದನೆ ಪಡೆಯುವ ಪ್ರಕ್ರಿಯೆಗಳನ್ನು ಪೂರ್ಣಗೊಳಿಸುವ ಅಗತ್ಯವಿದೆ ಎಂದು ತಿಳಿಸಿದರು.

ಸುಮಾರು 18.82 ಕಿ.ಮೀ ಉದ್ದ ಹಳದಿಲೈನ್ ಈ ವರ್ಷದ ಅಂತ್ಯದ ವೇಳೆಗೆ ಸಂಪೂರ್ಣವಾಗಿ ಕಾರ್ಯನಿರ್ವಹಿಸಲು ಸಿದ್ಧವಾಗಲಿದೆ. ಆರ್‌ವಿ ರಸ್ತೆಯಿಂದ ಬೊಮ್ಮಸಂದ್ರಕ್ಕೆ ಸಂಪರ್ಕವನ್ನು ಕಲ್ಪಿಸುವ ಈ ಮಾರ್ಗದಲ್ಲಿ 16 ನಿಲ್ದಾಣಗಳು ಇವೆ. ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಲ್ಲಿ ಭಾರೀ ಸಂಚಾರ ದಟ್ಟಣೆಯನ್ನು ನಿವಾರಿಸಲು ರಾಗಿಗುಡ್ಡದಿಂದ ಸೆಂಟ್ರಲ್ ಸಿಲ್ಕ್ ಬೋರ್ಡ್ ವರೆಗೆ 3.13 ಕಿ.ಮೀ ಉದ್ದದ ಸಂಯೋಜಿತ ಮೆಟ್ರೋ ಮತ್ತು ರಸ್ತೆ ಮೇಲ್ಸೇತುವೆ ಇದೆ.

ಬೆಂಗಳೂರು ವಿಭಜನೆ: ನಿರ್ಧಾರಕ್ಕೆ ವಿರೋಧ

ಬೆಂಗಳೂರು: ಬೆಂಗಳೂರನ್ನು ಐದು ಭಾಗಗಳನ್ನಾಗಿ ವಿಭಜಿಸಲು ಮುಂದಾಗಿರುವ ರಾಜ್ಯ ಸರಕಾರದ ನಿರ್ಧಾರಕ್ಕೆ ಕನ್ನಡ ಪರ ಹೋರಾಟಗಾರರಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗಿದ್ದು, ಸರಕಾರವು ಈ ನಿರ್ಧಾರವನ್ನು ಕೂಡಲೇ ವಾಪಾಸ್ ಪಡೆಯದಿದ್ದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ಕರವೇ ಅಧ್ಯಕ್ಷ ನಾರಾಯಣಗೌಡ, ವಾಟಾಳ್ ನಾಗರಾಜ್ ಹಾಗೂ ಪದ್ಮನಾಭನಗರ ನಾಡಪ್ರಭು ಕೆಂಪೇಗೌಡ ನಾಗರೀಕ ಹಿತ ರಕ್ಷಣಾ ವೇದಿಕೆ ಅಧ್ಯಕ್ಷ ಎ.ಎಚ್.ಬಸವರಾಜ್ ಮತ್ತಿತರರು ಯಾವುದೇ ಕಾರಣಕ್ಕೂ ಬಿಬಿಎಂಪಿ ವಿಭಜನೆ ಮಾಡಲು ಅವಕಾಶ ನೀಡುವುದಿಲ್ಲ. ನಾಡಪ್ರಭು ಕೆಂಪೇಗೌಡರು ಕಟ್ಟಿರುವ ವ್ಯವಸ್ಥಿತ ನಗರ ಬೆಂಗಳೂರನ್ನು ವಿಭಜನೆ ಮಾಡಲು ಮುಂದಾದರೆ ಉಗ್ರ ಹೋರಾಟ ನಡೆಸಲಾಗುವುದು ಎಂದು ನಾರಾಯಣಗೌಡ ಹಾಗೂ ವಾಟಾಳ್ ನಾಗರಾಜ್ ಎಚ್ಚರಿಕೆ ನೀಡಿದ್ದಾರೆ.

ವಿಜಯನಗರ ಸಾಮ್ರಾಜ್ಯದ ಅರಸರಾದ ಅಚ್ಯುತರಾಯರಿಂದ ಹನ್ನೆರಡು ಹೋಬಳಿ (ಉತ್ತರಹಳ್ಳಿ, ವರ್ತೂರು, ಯಲಹಂಕ, ಬೇಗೂರು, ಹಲಸೂರು, ಕೆಂಗೇರಿ, ತಲಘಟ್ಟಪುರ, ಜಿಗಣಿ, ಕುಂಬಳಗೋಡು, ಕಾಗ್ಳಿ, ಬಾಣಾವಾರ ಮತ್ತು ಹೆಸರುಘಟ್ಟ) ಗಳನ್ನು ಜಹಗೀರಾಗಿ ಪಡೆದ ಕೆಂಪೇಗೌಡರು 1537ರಲ್ಲಿ ಬೆಂಗಳೂರು ನಿರ್ಮಿಸಿದ್ದಾರೆ. ಅಂತಹ ಮಹಾನುಭಾವರು ಕಟ್ಟಿರುವ ಬೆಂಗಳೂರನ್ನು ವಿಭಜಿಸುವುದು ಸೂಕ್ತವಲ್ಲ ಎಂದು ಸಲಹೆ ನೀಡಲಾಗಿದೆ.

ಬಿಬಿಎಂಪಿ ವಿಭಜನೆ ಕುರಿತಂತೆ ಪ್ರತಿಕ್ರಿಯಿಸಿರುವ ಪದನಾಭನಗರ ನಾಡಪ್ರಭು ಕೆಂಪೇಗೌಡ ನಾಗರೀಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ಎ.ಎಚ್.ಬಸವರಾಜ್ ಕೆಂಪೇಗೌಡರು ಕಟ್ಟಿದ ಬೆಂಗಳೂರನ್ನು ಒಡೆಯಲು ಮುಂದಾದರೆ ಬೀದಿಗಿಳಿದು ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದ್ದಾರೆ.

ಬಿಬಿಎಂಪಿಗೆ ಚುನಾವಣೆ ನಡೆದು ನಾಲ್ಕು ವರ್ಷಗಳಾಗಿವೆ .ಇಂತಹ ಸಂದರ್ಭದಲ್ಲಿ ಪಾಲಿಕೆಗೆ ಚುನಾವಣೆ ನಡೆಸುವುದನ್ನು ಬಿಟ್ಟು ವಿಭಜನೆ ಮಾಡುತ್ತೇವೆ ಎಂಬ ಹೇಳಿಕೆ ನೀಡುತ್ತಿರುವುದು ಬಿಬಿಎಂಪಿ ಚುನಾವಣೆಯನ್ನು ಮತ್ತೆ ನಾಲ್ಕು ವರ್ಷಗಳವರೆಗೆ ಮುಂದೂಡುವ ಪ್ರಯತ್ನ ಎನ್ನುವುದು ಸಾಮಾನ್ಯ ನಾಗರಿಕರಿಗೂ ಅರ್ಥವಾಗುತ್ತದೆ. ಇಂತಹ ವಿಫಲ ಯತ್ನ ಮಾಡುವುದನ್ನು ಬಿಟ್ಟು ಈ ಕೂಡಲೇ ಚುನಾವಣೆ ನಡೆಸಿ ಎಂದು ಅವರು ಆಗ್ರಹಿಸಿದ್ದಾರೆ.

ಐದು ಪಾಲಿಕೆ ನಿರ್ಮಾಣ ಮಾಡಿದರೆ ಇಲ್ಲಿನ ಮೂಲನಿವಾಸಿಗಳಾದ ಕನ್ನಡಿಗರಿಗೆ ಅನ್ಯಾಯವಾಗುತ್ತದೆ .ಇದರ ಜತೆಗೆ ಅನ್ಯಭಾಷಿಕರಿಗೆ ಮಣೆ ಹಾಕಿದಂತಾಗುತ್ತದೆ ಹೀಗಾಗಿ ಅಂತಹ ಪ್ರಯತ್ನ ಮಾಡುವುದನ್ನು ನಮ್ಮ ವೇದಿಕೆ ವಿರೋಧಿಸುತ್ತದೆ ಎಂದು ತಿಳಿಸಿದ್ದಾರೆ.ಇದರ ಜತೆಗೆ ಕಾಂಗ್ರೆಸ್ ಪಕ್ಷದ ಕೆಲ ಮಾಜಿ ಬಿಬಿಎಂಪಿ ಸದಸ್ಯರು ಕೂಡ ಸರ್ಕಾರದ ಈ ನಿರ್ಧಾರಕ್ಕೆ ಅಪಸ್ವರ ಎತ್ತಿದ್ದಾರೆ.

ಏನಿದು ಯೋಜನೆ?: ಈಗಿರುವ 225 ವಾರ್ಡ್‌ಗಳನ್ನು 400 ವಾರ್ಡ್‌ಗಳನ್ನಾಗಿ ವಿಭಜಿಸಿ 80 ವಾರ್ಡ್‌ಗಳನ್ನು ಒಳಗೊಂಡ ಒಂದು ಪಾಲಿಕೆ ರಚನೆ ಮಾಡುವುದು ಸರಕಾರದ ಉದ್ದೇಶವಾಗಿದೆ.

ಹಾವು ರಕ್ಷಕರಿಗೆ ತರಬೇತಿ ಶಿಬಿರ

ಬೆಂಗಳೂರು: ಬೆಂಗಳೂರು ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಹಾವು ರಕ್ಷಣಾ ಕಾರ್ಯಕರ್ತರ ಕೌಶಲ್ಯಗಳನ್ನು ಹೆಚ್ಚಿಸಲು ಕರ್ನಾಟಕ ಅರಣ್ಯ ಇಲಾಖೆಯು ಜೂನ್ 19 ಮತ್ತು 20 ರಂದು ಬನ್ನೇರುಘಟ್ಟ ಪ್ರಾಕೃತಿಕ ಶಿಬಿರ - ಬನ್ನೇರುಘಟ್ಟ ಜೈವಿಕ ಉದ್ಯಾನವನದಲ್ಲಿ ಹಾವು ರಕ್ಷಕರಿಗೆ ಎರಡು ದಿನಗಳ ತರಬೇತಿ ಆಯೋಜಿಸಿದೆ.

ತರಬೇತಿಯಲ್ಲಿ ಹಾವುಗಳ ರಕ್ಷಣೆ, ಸುರಕ್ಷತೆಗೆ ನಿರ್ವಹಣಾ ವಿಧಾನ, ಕಾರ್ಯತಂತ್ರ, ಉರಗಶಾಸ್ತ್ರ, ಹಾವು ಕಚ್ಚಿದಾಗ ಪ್ರಥಮ ಚಿಕಿತ್ಸೆ, ದಾಖಲಾತಿಗಳ ನಿರ್ವಹಣೆ ಮತ್ತು ಅರಣ್ಯ ಇಲಾಖೆಯೊಂದಿಗೆ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ತಜ್ಞರು, ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ನೀಡಲಾಗುವುದು. ಆಸಕ್ತರು https:/bit.ly/kfdswblr and https://forms.gle/mT8gNW2oK7usEhx58 ಮೂಲಕ ನೋಂದಣಿ ಮಾಡಿಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ರಾಜೀವ್ ವಸತಿ ನಿಗಮದ ಯೋಜನೆಗೆ ವೇಗ

ಬೆಂಗಳೂರು: ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಕೈಗೊಂಡಿರುವ ಯೋಜನೆಗಳು ತ್ವರಿತ ಗತಿಯಲ್ಲಿ ಪೂರ್ಣಗೊಳಿಸುವಂತೆ ವಸತಿ ಸಚಿವ ಜಮೀರ್ ಅಹ್ಮದ್ ಸೂಚಿಸಿದ್ದಾರೆ.

ನಿಗಮದ ಪ್ರಗತಿ ಪರಿಶೀಲನೆ ಸಭೆ ನಡೆಸಿ ಮಾತನಾಡಿದ

ಅವರು, ಪ್ರಧಾನಮಂತ್ರಿ ನಗರ ಅವಾಸ್ ಯೋಜನೆಯಲ್ಲಿ ಬಡ ಕುಟುಂಬಗಳಿಗೆ ಮನೆ ನಿರ್ಮಾಣ ಮಾಡಿ ಕೊಡುವ ಕಾಮಗಾರಿಗೆ ವೇಗ ನೀಡಬೇಕು. ರಾಜ್ಯದಲ್ಲಿ ಈ ಯೋಜನೆಯಲ್ಲಿ ಚಾಲ್ತಿಯಲ್ಲಿರುವ 52 ಸಾವಿರ ಮನೆಗಳ ಪೈಕಿ 11400 ಮನೆ ಆದಷ್ಟು ಶೀಘ್ರ ಹಂಚಿಕೆ ಮಾಡಬೇಕಿದ್ದು, ವಸತಿ ಸಮುಚ್ಚಯ ಹಾಗೂ ಮೂಲ ಸೌಕರ್ಯ ಕಾಮಗಾರಿ ಕಾಲ ಮಿತಿಯಲ್ಲಿ ಪೂರ್ಣ ಗೊಳಿಸುವಂತೆ ಸೂಚಿಸಿದರು. ಬೆಂಗಳೂರು ನಗರದಲ್ಲಿ ರೂಪಿಸಿರುವ ಮುಖ್ಯಮಂತ್ರಿಗಳ ಒಂದು ಲಕ್ಷ ಮನೆ ಕಾಮಗಾರಿ ಆದಷ್ಟು ಶೀಘ್ರ ಪೂರ್ಣಗೊಳಿಸಿ ಫಲಾನುಭವಿಗಳಿಗೆ ಶೀಘ್ರ ಹಂಚಿಕೆಗೆ ಕ್ರಮವಹಿಸಲಾಗುವುದು. ಬಸವ, ಅಂಬೇಡ್ಕರ್, ದೇವರಾಜ ಅರಸು, ವಾಜಪೇಯಿ ನಗರ ಹಾಗೂ ಪ್ರಧಾನ ಮಂತ್ರಿ ಆವಾಸ್ ಗ್ರಾಮೀಣ ಮನೆಗಳ ವಿಚಾರದಲ್ಲಿ ಫಲಾನುಭವಿಗಳ ಆಯ್ಕೆ ವಿಳಂಬದ ಬಗ್ಗೆ , ಶಾಸಕರ ಜತೆ ಪತ್ರ ವ್ಯವಹಾರ ನಡೆಸಿ ಸಬ್ಸಿಡಿ ತಲುಪುವಂತೆ ಕ್ರಮ ಕೈಗೊಳಲು ಸೂಚಿಸಿದ್ದಾರೆ.

ಹಣ ಪೋಲಾಗದಂತೆ ಎಚ್ಚರವಹಿಸಿ

ಬೆಂಗಳೂರು: ಕೆಎಸ್‌ಆರ್‌ಟಿಸಿಯ ವತಿಯಿಂದ ಅಪಘಾತದಲ್ಲಿ ಮೃತಪಟ್ಟ ನಾಲ್ವರು ಅವಲಂಬಿತರಿಗೆ ತಲಾ ಒಂದು ಕೋಟಿ ಪರಿಹಾರ ಧನವನ್ನು ಹಾಗೂ ಕುಟುಂಬ ಕಲ್ಯಾಣ ಯೋಜನೆಯಡಿ ಸೇವೆಯಲ್ಲಿದ್ದು ಮೃತಪಟ್ಟ 23 ಮಂದಿ ನೌಕರರ ಅವಲಂಬಿತರಿಗೆ 10 ಲಕ್ಷ ಪರಿಹಾರ ಧನವನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವಿತರಿಸಿದರು.

ವಿಮಾ ಪರಿಹಾರ ವಿತರಣೆ ಬಳಿಕ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ನಿಗಮದ ವತಿಯಿಂದ ಕಾರ್ಮಿಕರ ಕಲ್ಯಾಣಕ್ಕಾಗಿ ಹಾಗೂ ಪ್ರಯಾಣಿಕರಿಗಾಗಿ ಹಲವಾರು ಕಾರ್ಯಕ್ರಮಗಳನ್ನು ರೂಪಿಸಿ ಅನುಷ್ಠಾನಗೊಳಿಸಿದೆ. ಮೃತಪಟ್ಟವರ ಜೀವ ಅಮೂಲ್ಯವಾದದ್ದು, ಅದನ್ನು ಮರಳಿ ತರಲಾಗುವುದಿಲ್ಲ. ಆದರೆ ಅವರ ಕುಟುಂಬದ ಆರ್ಥಿಕ ಸ್ವಾವಲಂಬನೆಗಾಗಿ ನಿಗಮವು ರೂಪಿಸಿರುವ ಯೋಜನೆ ದೂರದೃಷ್ಟಿಯನ್ನು ಹೊಂದಿರುವುದಾಗಿ ತಿಳಿಸಿದರು. ಈ ಮೊತ್ತವನ್ನು ಸದುಪಯೋಗ ಪಡಿಸಿಕೊಂಡು ಮಕ್ಕಳ ವಿದ್ಯಾಭ್ಯಾಸ ಹಾಗೂ ಮನೆ ಕಟ್ಟಿಕೊಳ್ಳಲು ಉಪಯೋಗಿಸಿಕೊಳ್ಳಿ , ಬೇರೆ ಇತರೆ ಎಲ್ಲೂ ಹಣ ಪೋಲು ಮಾಡದಂತೆ ಎಚ್ಚರವಹಿಸಲು ತಿಳಿಸಿದರು.

ನಿಗಮವು ಯಶಸ್ವಿಯಾಗಿ ಶಕ್ತಿ ಯೋಜನೆ ಅನುಷ್ಠಾನಗೊಳಿಸಲು ಮುಖ್ಯ ಪಾತ್ರ ವಹಿಸಿರುವ ನಿಗಮದ ಚಾಲಕರು,ನಿರ್ವಾಹಕರು, ಸಿಬ್ಬಂದಿ, ಅಧಿಕಾರಿಗಳು ಹಾಗೂ ಕಾರ್ಮಿಕ ಮುಖಂಡರುಗಳ ಪಾತ್ರ ಅಭಿನಂದನೀಯ. ನಿಗಮದ ವಿದ್ಯಾ ಚೇತನ ವಿದಾರ್ಥಿ ವೇತನ ಯೋಜನೆಯ

ಮೊತ್ತವನ್ನು ಹೆಚ್ಚಿಸುವ ಕುರಿತು ಪರಿಶೀಲಿಸುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ತಿಳಿಸಿದರು.

ಕೆಎಸ್‌ಆರ್‌ಟಿಸಿ ಅಧ್ಯಕ್ಷ ಶ್ರೀನಿವಾಸ್ ಗುಬ್ಬಿ ಮಾತನಾಡಿ,ನಿಗಮದಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿ ಶ್ರಮ ಜೀವಿಗಳಾಗಿದ್ದು ಅವರಿಗೆ ಸಲ್ಲಬೇಕಾದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿ ಕೊಡಬೇಕಾಗಿರುತ್ತದೆ. ಇಂದು ವಿತರಿಸಲಾಗಿರುವ ಪರಿಹಾರ ಮೊತ್ತವನ್ನು ಕುಟುಂಬ ವರ್ಗದವರು ಸಮರ್ಪಕವಾಗಿ ಬಳಸಿಕೊಂಡು ಕುಟುಂಬದ ಆರ್ಥಿಕ ಸ್ವಾವಲಂಬನೆ ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದರು.

ಹಳೇ ಬಿಎಂಟಿಸಿ ಬಸ್ ಹಳ್ಳಿಗಳ ಪಾಲು?

ಬೆಂಗಳೂರು: ರಾಜ್ಯದ ನಾಲ್ಕು ಸಾರಿಗೆ ನಿಗಮಗಳು ಈಗಷ್ಟೇ ಚೇತರಿಸಿಕೊಳ್ಳುತ್ತಿದ್ದು, ಹಲವು ವರ್ಷಗಳ ಕಾಲ ಸಂಚರಿಸಿ ಹಳೆಯದಾದ ನೂರಾರು ಬಸ್‌ಗಳನ್ನು ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕೆಎಸ್‌ಆರ್‌ಟಿಸಿಗೆ ನೀಡಲಾಗಿದೆ ಎನ್ನುವ ಮಾತುಗಳು ಕೇಳಿ ಬಂದಿದೆ.

ಬಿಎಂಟಿಸಿಗೆ ಕಳೆದ ಮೂರು ವರ್ಷಗಳಲ್ಲಿ 823 ಡೀಸೆಲ್ ಸಹಿತ ಹಾಗೂ 657 ವಿದ್ಯುತ್‌ಚಾಲಿತ ಬಸ್‌ಗಳು ಹೊಸದಾಗಿ ಸೇರ್ಪಡೆಯಾಗಿವೆ. ಆದರೆ, ಇದೇ ಸಮಯದಲ್ಲಿ ಎನ್‌ಡಬ್ಲ್ಯುಕೆಆರ್‌ಟಿಸಿ ಮತ್ತು ಕೆಎಸ್‌ಆರ್‌ಟಿಸಿಗೆ ಅಷ್ಟು ಪ್ರಮಾಣದ ಹೊಸ ಬಸ್‌ಗಳು ಸೇರ್ಪಡೆಯಾಗಿಲ್ಲ. ಹೀಗಾಗಿ, ಎನ್‌ಡಬ್ಲ್ಯೂಕೆಆರ್‌ಟಿಸಿ ಮತ್ತು ಕೆಎಸ್‌ಆರ್‌ಟಿಸಿಗೆ ಹಳೇ ಬಸ್‌ಗಳನ್ನು ಒದಗಿಸಲಾಗುತ್ತಿದೆ. ಕಳೆದ ಎರಡು ವರ್ಷಗಳಲ್ಲಿ ಬಿಎಂಟಿಸಿಯು 250 ಹಳೆಯ ಬಸ್‌ಗಳನ್ನು ಎನ್‌ಡಬ್ಲ್ಯೂಕೆಆರ್‌ಟಿಸಿ ಮತ್ತು ಕೆಎಸ್‌ಆರ್‌ಟಿಸಿಗೆ ಒದಗಿಸಿದ್ದು, ನಷ್ಟದಲ್ಲಿರುವ ಕಾರಣಕ್ಕೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯು ಹೊಸ ಬಸ್‌ಗಳನ್ನು ಖರೀದಿಸಿಲ್ಲ. ಬೇರೆ ಸಂಸ್ಥೆಗಳು ಬಳಸಿ ಬಿಟ್ಟ ಬಸ್‌ಗಳನ್ನೇ ಅವಲಂಬಿಸಿದೆ. ಆದ್ದರಿಂದ ಸಂಸ್ಥೆಯಲ್ಲಿ ಅವಧಿ ಮೀರಿದ ಬಸ್‌ಗಳ ಸಂಖ್ಯೆಯೂ ಹೆಚ್ಚುತ್ತಿದೆ. ಪರಿಣಾಮ ರಸ್ತೆಯಲ್ಲಿ ಪದೇ ಪದೇ ಕೆಟ್ಟು ನಿಲ್ಲುವುದು, ದಟ್ಟ ಹೊಗೆ ಹೊರಹೊರಸೂಸುವುದು, ಬ್ರೇಕ್ ಫೇಲ್‌ನಂತಹ ಸಮಸ್ಯೆ ಎದುರಿಸುತ್ತಿದ್ದು, ಅಪಘಾತಗಳ ಹೆಚ್ಚಳಕ್ಕೆ ಕಾರಣವಾಗಿವೆ.

ಬರಹಗಾರರ ಮತ್ತು ಪ್ರಕಾಶಕರ ಪ್ರಶಸ್ತಿ ಪ್ರಕಟ

ಬೆಂಗಳೂರು: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ಆಶ್ರಯದ ವತಿಯಿಂದ ಪ್ರತಿ ವರ್ಷದಂತೆ 2023ನೇ ಸಾಲಿನ ಬರಹಗಾರರು, ಪ್ರಕಾಶಕರು ಹಾಗೂ ಮುದ್ರಕರ ಪ್ರಶಸ್ತಿಗಳಿಗೆ ಆಯ್ಕೆ ಮಾಡಲಾಗಿದೆ.



ಸಾಹಿತ್ಯರತ್ನ ಪ್ರಶಸ್ತಿಗೆ ಬಹುತ್ವದ ಭಾರತ ಕೃತಿಗೆ ಲೇಖಕ ಡಾ.ಎನ್.ಜಗದೀಶ ಕೊಪ್ಪ, ಯುವಸಾಹಿತ್ಯ ರತ್ನ ಪ್ರಶಸ್ತಿಗೆ ಸ್ವೈಪ್ ರೈಟ್ ಕೃತಿಗೆ ಕುಮಾರಿ ರಂಜಿನಿ ರಾಘವನ್, ಪುಸ್ತಕರತ್ನ ಪ್ರಶಸ್ತಿಯನ್ನು ಅಭಿರುಚಿ ಪ್ರಕಾಶನದ ಅಭಿರುಚಿ ಗಣೇಶ್ ಹಾಗೂ ಮುದ್ರಣರತ್ನ ಪ್ರಶಸ್ತಿಯನ್ನು ಗೌರಿ ಲ್ಯಾಮಿನೇಟರ್ಸ್ ಸಂಸ್ಥೆಯ ಟಂಕಸಾಲಿ.ಎಸ್.ನಾಗರಾಜ್ ಆಯ್ಕೆಯಾಗಿದ್ದಾರೆ.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು ಹಲವು ವರ್ಷಗಳಿಂದ ಪುಸ್ತಕ ಸಂಸ್ಕೃತಿಗೆ ಪೂರಕವಾಗಿ ಬರಹಗಾರರು, ಪ್ರಕಾಶಕರು ಹಾಗು ಮುದ್ರಕರಿಗೆ ಪ್ರೋತ್ಸಾಹ ನೀಡುವ ಸದುದ್ದೇಶದಿಂದ ರಾಜ್ಯಮಟ್ಟದ ವಾರ್ಷಿಕ ಪ್ರಶಸ್ತಿಗಳನ್ನು ನೀಡುತ್ತಾ ಬಂದಿದೆ. ಪ್ರಶಸ್ತಿಯು 10,000 ರೂಪಾಯಿ ನಗದು, ಸ್ಮರಣಿಕೆ ಹಾಗೂ ಪ್ರಶಸ್ತಿ ಪತ್ರ ಒಳಗೊಂಡಿದೆ ಎಂದು ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ ತಿಳಿಸಿದೆ.

ಲಾಲ್‌ಬಾಗ್‌ನಲ್ಲಿ ನಡೆದ ಮಾವು ಮತ್ತು ಹಲಸು ಮೇಳಕ್ಕೆ ಜನರ ಭಾರಿ ಸ್ಪಂದನೆ

ಮಾವಿನ ಮೇಳದಲ್ಲಿ 500 ಟನ್ ಮಾರಾಟ

ಬೆಂಗಳೂರು: ನಗರದ ಲಾಲ್‌ಬಾಗ್‌ನಲ್ಲಿ ಮೇ.23 ರಿಂದ ಜೂ.9ರವರೆಗೆ 17 ದಿನಗಳ ಕಾಲ ನಡೆದ ಮಾವು ಮತ್ತು ಹಲಸು ಮೇಳಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಬರೋಬ್ಬರಿ 500 ಟನ್ ಮಾವುಗಳ ಮಾರಾಟವಾಗಿದೆ ಎಂದು ಮೇಳದ ಆಯೋಜಕರು ಮಾಹಿತಿ ನೀಡಿದರು.

ರಾಜ್ಯದ 100ಕ್ಕೂ ಹೆಚ್ಚು ರೈತರು 50ಕ್ಕೂ ಹೆಚ್ಚು ಮಳಿಗೆಗಳನ್ನು ಹಾಕಲಾಗಿದ್ದು, ಕಳೆದ ವರ್ಷಕ್ಕಿಂತ ಈ ಬಾರಿ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ವಾರಾಂತ್ಯದಲ್ಲಿ ಹೆಚ್ಚು ಮಾರಾಟವಾಗಿದೆ. ಈ ಬಾರಿ 13 ರಿಂದ 14 ತಳಿಯ ಮಾವು ಮಾರಾಟವಾಗಿದ್ದು, ಕರಿ ಇಶಾದ್ ಮಾವಿನ ತಳಿ ಕೂಡ ಈ ವರ್ಷ ಮೇಳದಲ್ಲಿ ಲಭ್ಯವಿತ್ತು. ಕರಿ ಇಶಾದ್ ಮಾವಿಗೆ ಬೇಡಿಕೆ ಹೆಚ್ಚಾಗಿದ್ದು, ಕರಿ ಇಶಾದ್ ತಳಿ ಹೆಚ್ಚು ಮಾರಾಟವಾಗಿದೆ. ಈ ಹಿಂದೆ ಈ ತಳಿಗೆ ಹೆಚ್ಚಿನ ಬೇಡಿಕೆ ಇರಲಿಲ್ಲ.

ಆದರೆ ಈ ಬಾರಿ ಕರಿ ಇಶಾದ್ ತಳಿಗೆ ಹೆಚ್ಚು ಬೇಡಿಕೆ ಬಂದಿದೆ. ಮೇಳದ ವೇಳೆ ರೈತರು ಮೂರು ಮೂರು ಬಾರಿ ತಮ್ಮ ದಾಸ್ತಾನು ತರಿಸಲಾಗಿದೆ ಎಂದು ವ್ಯಾಪಾರಿಗಳು ಹೇಳಿದರು.

ಆನ್‌ಲೈನ್ ಮಾರಾಟ ವೇದಿಕೆ ಕರ್ಸಿರಿಯಲ್ಲೂ ಅಧಿಕ ಪ್ರಮಾಣದಲ್ಲಿ ಮಾವು ಮಾರಾಟವಾಗಿದ್ದು, ಕರ್ಸಿರೊ ಮೂಲಕ ಗ್ರಾಹಕರು ಉತ್ತಮ ಗುಣಮಟ್ಟದ ಮಾವುಗಳನ್ನು ಖರೀದಿಸಿದರು. ಇಂಡಿಯನ್ ಪೋಸ್ಟ್ ಮೂಲಕ ಮಾವುಗಳನ್ನು ರೈತರಿಂದ ನೇರವಾಗಿ ಗ್ರಾಹಕರ ಖರೀದಿಸಿದ್ದು, ಕನಿಷ್ಠ 27 ರೈತರು ಕರಿ ಇಶಾದ್ ಸೇರಿದಂತೆ 13 ತಳಿಯ ಮಾವಿನ ಹಣ್ಣುಗಳನ್ನು ಮಾರಾಟ ಮಾಡಿದ್ದಾರೆ ಎಂದರು.

ಆನ್‌ಲೈನ್ ಪೋರ್ಟಲ್‌ನಲ್ಲಿ 4,514 ಬಾಕ್ಸ್‌ಗಳ (13.5 ಟನ್) ಮಾವಿನಹಣ್ಣುಗಳನ್ನು ಮಾರಾಟ ಮಾಡಲಾಗಿದ್ದು, ಕರಿ ಇಶಾದ್‌ಗೆ 60 – 70 ಆರ್ಡರ್‌ಗಳನ್ನು ಸ್ವೀಕರಿಸಲಾಗಿದೆ. ರೈತರು ವಿವಿಧ 14 ಪೋರ್ಟಲ್‌ಗಳ ಮೂಲಕವೂ ಮಾವು ಮಾರಾಟ ಮಾಡಿದ್ದಾರೆ. ಈ ಪೋರ್ಟಲ್‌ಗಳ ಮೂಲಕ ರೈತರು ನೇರವಾಗಿ ಇಂಡಿಯನ್ ಪೋಸ್ಟ್ ಮೂಲಕ ಗ್ರಾಹಕರಿಗೆ ಮಾವಿನಹಣ್ಣುಗಳನ್ನು ಮಾರಾಟ ಮಾಡಲಾಗಿದೆ.

ವಿಷನ್ ಅಕಾಡೆಮಿಯ ಅಭೂತಪೂರ್ವ ಫಲಿತಾಂಶ

ಬೆಂಗಳೂರು: 2011 ರಲ್ಲಿ ಕೇವಲ ಒಬ್ಬ ವಿದ್ಯಾರ್ಥಿಯಿಂದ ಪ್ರಾರಂಭಿಸಿದ ವಿಷನ್ ಮೆಡಿಕಲ್ ಕೋಚಿಂಗ್ ಸಂಸ್ಥೆ ಕರ್ನಾಟಕದಲ್ಲಿ ವೈದ್ಯಕೀಯ ಕೋಚಿಂಗ್ ಸಂಸ್ಥೆ ಪ್ರಾರಂಭಿಸಿದ ಮೊದಲ ಕೋಚಿಂಗ್ ಸಂಸ್ಥೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಳೆದ 13 ವರ್ಷಗಳಿಂದ ಅದೇ ಯಶಸ್ಸನ್ನು ಮುಂದುವರೆಸಿಕೊಂಡು ಬಂದಿದ್ದು, ಪ್ರತಿ ವರ್ಷವೂ 350 ರಿಂದ 400 ವಿದ್ಯಾರ್ಥಿಗಳು ಈ ಸಂಸ್ಥೆಯಿಂದ ನೀಟ್ ಕೋಚಿಂಗ್ ಪಡೆದು ಉತ್ತಮ ರ್‍ಯಾಂಕ್‌ನೊಂದಿಗೆ ಉಚಿತ ವೈದ್ಯಕೀಯ ಸೀಟು ಕೊಡಿಸುವಲ್ಲಿ ಯಶಸ್ವಿಯಾಗಿದೆ.

ಪ್ರಸಕ್ತ ಸಾಲಿನಲ್ಲಿ 300ಕ್ಕೂ ಅಧಿಕ ವಿದ್ಯಾರ್ಥಿಗಳು ಉಚಿತ ಮೆಡಿಕಲ್ ಸೀಟ್ ಪಡೆಯಲಿದ್ದಾರೆ ಎಂಬ ವಿಶ್ವಾಸದಲ್ಲಿ ಸಂಸ್ಥೆಯಿದೆ. ಅಕಾಡೆಮಿಯಲ್ಲಿ ಅನುಭವಿ ಅಧ್ಯಾಪಕರಿಂದ 10 ತಿಂಗಳ ಕಾಲ ಕಠಿಣ ತರಬೇತಿ ಕೊಡಲಾಗುತ್ತದೆ, ವಿದ್ಯಾರ್ಥಿಸ್ನೇಹಿ ಪಠ್ಯಕ್ರಮವಿದೆ. ಬಾಲಕರಿಗೆ ಮತ್ತು ಬಾಲಕಿಯರಿಗಾಗಿ ಪ್ರತ್ಯೇಕ ಕೋಚಿಂಗ್ ಕ್ಯಾಂಪಸ್ ಮತ್ತು ಹಾಸ್ಟಲ್ ವ್ಯವಸ್ಥೆಯಿದೆ. ವಿಷನ್ ನೀಟ್ ಅಕಾಡೆಮಿಯೂ ಬೆಂಗಳೂರಿನ ಕಲ್ಯಾಣನಗರದ ಹತ್ತಿರ ಬಾಣಸವಾಡಿಯಲ್ಲಿದ್ದು ಹೆಚ್ಚಿನ ವಿವರಗಳಿಗಾಗಿ www.neet.visionedu.in ಭೇಟಿ ನೀಡಿ.

ಸಮಾಚಾರ ಸಣ್ಣದಲ್ಲ

10 ದಿನಗಳ ಕೃಷಿ ತರಬೇತಿ ಕಾರ್ಯಾಗಾರ

ಬೆಂಗಳೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ದಿ ರೋಲ್ ಆಫ್ ಐಸಿಟಿ ಇನ್ ಅಗ್ರಿಕಲ್ಚರಲ್ ಅಲ್ಲೀಡ್ ಸೆಕ್ಟರ್ಸ್ ಕುರಿತು ಜೂನ್ 25 ರಿಂದ ಜುಲೈ 4 ರವರೆಗೆ ಹತ್ತು ದಿನಗಳ ಕಾರ್ಯಾಗಾರವನ್ನು ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಲಾಗಿದೆ. ಕಾರ್ಯಾಗಾರದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ವಿಜ್ಞಾನಿಗಳು ವಿಷಯಾಧಾರಿತ ಉಪನ್ಯಾಸಗಳನ್ನು ನೀಡಲಿದ್ದಾರೆ. ಈ ತರಬೇತಿ ಕಾರ್ಯಾಗಾರದಲ್ಲಿ ರಾಜ್ಯದ ವಿವಿಧ ಕೃಷಿ, ತೋಟಗಾರಿಕೆ, ಪಶುವೈದ್ಯಕೀಯ ಹಾಗೂ ಮೀನುಗಾರಿಕಾ ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳು, ಪ್ರಾಧ್ಯಾಪಕರು ಮತ್ತು ಇಲಾಖೆಯ ಅಧಿಕಾರಿಗಳು ಭಾಗವಹಿಸಬಹುದು. ಆಸಕ್ತರು ಜೂನ್ 21 ರೊಳಗೆ ಲಿಂಕ್ ಮೂಲಕ https://forms.gle/ZtqW511b33Rg7nLQ6 ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ 9620767819, 9686449019 ಸಂಪರ್ಕಿಸಿ.

ನಾಳೆ ವಾಕಥಾನ್

ಬೆಂಗಳೂರು: ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಾಜ್ಯ ರಕ್ತ ಪರಿಚಲನಾ ಪರಿಷತ್, ಕರ್ನಾಟಕ ರಾಜ್ಯ ರಕ್ತ ಚಾಲನಾ ಪರಿಷತ್ ಹಾಗೂ ಲಯನ್ಸ್ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ಸ್ವಾಮಿ ವಿವೇಕಾನಂದ ರಕ್ತಕೇಂದ್ರ ಮತ್ತು ಬೆಳಗಾವಿ ರಕ್ತಕೇಂದ್ರಗಳ ಸಹಯೋಗದೊಂದಿಗೆ ಜೂನ್ 14 ರಂದು ವಿಶ್ವ ರಕ್ತದಾನಿಗಳ ದಿನಾಚರಣೆ ಅಂಗವಾಗಿ ಕಬ್ಬನ್ ಉದ್ಯಾನವನದಿಂದ ಕಂಠೀರವ ಕ್ರೀಡಾಂಗಣದವರೆಗೆ ವಾಕಥಾನ್ ಆಯೋಜಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ವಹಿಸಲಿದ್ದು, ವಾಕಥಾನ್ ಮುಖಾಂತರ ರಕ್ತದಾನಿಗಳಿಗೆ ಗೌರವವನ್ನು ಸಲ್ಲಿಸುವ ' ಮೂಲಕ ರಕ್ತದಾನದ ಬಗ್ಗೆ ಜಾಗೃತಿ ಮೂಡಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ನಾಳೆ ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿಯ ವತಿಯಿಂದ ಜೂ.14ರಂದು ಬೆಳಗ್ಗೆ 9.30 ರಿಂದ 10.30 ಗಂಟೆಯವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ. ನೇರ ಫೋನ್ ಇನ್ -ಕಾರ್ಯಕ್ರಮದಲ್ಲಿ ಅಧ್ಯಕ್ಷರು ಭಾಗವಹಿಸಲಿದ್ದು, ಸಾರ್ವಜನಿಕರು ತಮ್ಮ ವಲಯ / ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳ ಚರಂಡಿ, ಕೊಳವೆ, ಇಳಿಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ ಜಲ ಮಾಪನ ಹಾಗೂ ನೀರಿನ ಬಿಲ್ಲಿನಲ್ಲಿ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು – ಕೊರತೆಗಳನ್ನು ಬಗೆಹರಿಸಿಕೊಳ್ಳಲು ಈ ಫೋನ್ -ಇನ್ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಳ್ಳುವುದು. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡುವುದು. ಸಾರ್ವಜನಿಕರು ದೂರವಾಣಿ ಸಂಖ್ಯೆ 080-22945119 ಮತ್ತು 080-22229639 ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಗ್ರಾಹಕ ಸಂವಾದ ಸಭೆ

ಬೆಂಗಳೂರು: ಬೆಸ್ಕಾಂನ ಎಲ್ಲಾ ಕಾರ್ಯ ಮತ್ತು ಪಾಲನಾ ಉಪವಿಭಾಗಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರದಂದು ಮಧ್ಯಾಹ್ನ 3 ಗಂಟೆಯಿಂದ ಸಂಜೆ 5.30ರವರೆಗೆ ನಡೆಯುವ ಗ್ರಾಹಕ ಸಂವಾದ ಸಭೆಗಳಲ್ಲಿ, ಗ್ರಾಹಕರು ಪಾಲ್ಗೊಂಡು ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬೆಸ್ಕಾಂನ ಅಧಿಕಾರಿಗಳೊಂದಿಗೆ ಮುಖಾಮುಖಿ ಚರ್ಚಿಸಿ ಪರಿಹರಿಸಿಕೊಳ್ಳಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸಂಸ್ಕೃತ ವಿಶ್ವವಿದ್ಯಾಲಯ ಘಟಿಕೋತ್ಸವ ನಾಳೆ

ಬೆಂಗಳೂರು: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಹತ್ತು ಮತ್ತು ಹನ್ನೊಂದನೆಯ ಘಟಿಕೋತ್ಸವವು ಜೂ.14 ಶುಕ್ರವಾರ ಬೆಳಗ್ಗೆ 11.30 ಗಂಟೆಗೆ ಟೌನ್‌ಹಾಲ್‌ನಲ್ಲಿ ನಡೆಯಲಿದೆ ಎಂದು ಕುಲಸಚಿವ ಪ್ರೊ. ಗಿರೀಶ್‌ಚಂದ್ರ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಘಟಿಕೋತ್ಸವವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಉದ್ಘಾಟಿಸಲಿದ್ದಾರೆ. ವಿಶ್ವವಿದ್ಯಾಲಯದ ಅಡಿಯಲ್ಲಿ 27 ಸಂಶೋಧನಾ ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಘಟಿಕೋತ್ಸವದಲ್ಲಿ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಡಾ. ಗೌರಿ ಮಾಹುಲೀಕರ್, ಶ್ರುತಿಸಾಗರ ಘನಪಾಠಿ ಶಂಕರನಾರಾಯಣ ಭಟ್ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ದಯಾನಂದ್ ಅವರಿಂದ ಖುದ್ದು ನಿರ್ವಹಣೆ | ಕಾಮಾಕ್ಷಿಪಾಳ್ಯ ಠಾಣೆಯಿಂದ ಮಾಹಿತಿ ಪಡೆದ ಆಯುಕ್ತರು

ದರ್ಶನ್ ಪ್ರಕರಣ; ಕಠಿಣ ಕ್ರಮಕ್ಕೆ ಹೆಚ್ಚಿನ ಒತ್ತಡ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕೊಲೆ ಪ್ರಕರಣದಲ್ಲಿ ನಟ ದರ್ಶನ್ ವಿರುದ್ಧ ಸಾಕ್ಷ್ಯಗಳು ಬಲವಾಗುತ್ತಿರುವ ಬೆನ್ನಲ್ಲೇ, ಇತ್ತ ದರ್ಶನ್ ವಿರುದ್ಧ ಸಾರ್ವಜನಿಕವಾಗಿ ಆಕ್ರೋಶ ಹೆಚ್ಚಾಗುತ್ತಿದ್ದು, ಇಡೀ ತಂಡದ ವಿರುದ್ಧ ಕಠಿಣ ಕ್ರಮವಹಿಸಬೇಕು ಎನ್ನುವ ಒತ್ತಡ ಹೆಚ್ಚಾಗುತ್ತಿದೆ.

ದರ್ಶನ್ ಬಂಧನದ ಬೆನ್ನಲ್ಲೇ ಕಠಿಣ ಕ್ರಮವಹಿಸಬೇಕು ಎನ್ನುವ ಒತ್ತಡ ಕೇಳಿಬಂದಿತ್ತು. ಬುಧವಾರ ಈ ಕೂಗು ಇನ್ನಷ್ಟು ಹೆಚ್ಚಾಗಿದ್ದು, ರಾಜ್ಯದ ವಿವಿಧ ಭಾಗದಲ್ಲಿ ದರ್ಶನ್ ವಿರುದ್ಧ ಪ್ರತಿಭಟನೆ ಆರಂಭವಾಗಿದೆ. ರೇಣುಕಾಸ್ವಾಮಿ ತವರು ಚಿತ್ರದುರ್ಗದಲ್ಲಿ ಬೃಹತ್ ರ್‍ಯಾಲಿ ನಡೆಸಿ, ದರ್ಶನ್ ವಿರುದ್ಧ ಕಠಿಣ ಕ್ರಮಕ್ಕೆ ಪ್ರತಿಭಟನಾಕಾರರು ಆಗ್ರಹಿಸಿದರು.

ಈ ನಡುವೆ ನಟರ ವಿರುದ್ಧ ಆರೋಪಗಳು ಕೇಳಿಬಂದಾಗೆಲ್ಲ ಅವರ ಪರ ನಿಲ್ಲುವ ಚಿತ್ರೋದ್ಯಮ ಈ ಬಾರಿ ಪ್ರಕರಣದ ಸೂಕ್ಷ್ಮತೆಯನ್ನು ಅರಿತು ಮೌನಕ್ಕೆ ಶರಣಾಗಿದೆ. ತಾನೇನು ತಪ್ಪು ಮಾಡಿಲ್ಲ ಎನ್ನುವ ಮಾತನ್ನು ದರ್ಶನ್ ಹೇಳುತ್ತಿದ್ದರೂ, ಅವರ ವಿರುದ್ಧ 'ಪ್ರಬಲ' ಸಾಕ್ಷ್ಯಗಳಿರುವುದರಿಂದ ಇನ್ನಷ್ಟು ಸಂಕಷ್ಟ ಎದುರಾಗುವುದು ಖಚಿತ ಎನ್ನುವ ಮಾತುಗಳನ್ನು ಪೊಲೀಸರು ಹೇಳುತ್ತಿದ್ದಾರೆ.

ಪ್ರಕರಣದ ಸ್ವರೂಪ ತೀರಾ ಗಂಭೀರವಾಗಿರುವುದರಿಂದ ಪ್ರಕರಣದ ಪ್ರತಿಹಂತದ ಮಾಹಿತಿ ಪಡೆಯುತ್ತಿರುವ ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್, ಶೀಘ್ರ ಪ್ರಕರಣದಲ್ಲಿ ಇನ್ನಷ್ಟು ಸಾಕ್ಷ್ಯ ಸಂಗ್ರಹಿಸಲು ಸೂಚನೆ ನೀಡಿದ್ದಾರೆ. ಬುಧವಾರ ಬೆಳಗ್ಗೆ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಗೆ ಆಗಮಿಸಿದ್ದ ಅವರು, ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡರು. ಈ ಪ್ರಕರಣದ ತನಿಖೆ ಯಾವ ರೀತಿ ನಡೆಯುತ್ತಿದೆ? ಏನೆಲ್ಲಾ ಮಾಹಿತಿಗಳನ್ನು ಆರೋಪಿಗಳಿಂದ ಪಡೆದುಕೊಳ್ಳಲಾಗಿದೆ, ಕೊಲೆಗೆ ಮೂಲ ಕಾರಣವೇನು ಎನ್ನುವ ಬಗ್ಗೆ ಮಾಹಿತಿ ಕಲೆ ಹಾಕಲು ಸೂಚಿಸಿದ್ದಾರೆ. ಇನ್ನು ಈ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೇಕಾದ ಸಾಕ್ಷ್ಯಾಧಾರಗಳನ್ನು ಬೇಗ ಸಂಗ್ರಹಿಸುವಂತೆ ಆಯುಕ್ತರು ತಿಳಿಸಿದ್ದಾರೆ. ಇದೊಂದು ಗಂಭೀರ ಪ್ರಕರಣ. ಜಾಗರೂಕತೆಯಿಂದ ಬಹಳ ಎಚ್ಚರಿಕೆಯಲ್ಲಿ ತನಿಖೆ ನಡೆಸಬೇಕೆಂದು ತನಿಖಾಧಿಕಾರಿಗಳಿಗೆ ಸೂಚಿಸಿ ಕೆಲವೊಂದು ಮಾರ್ಗದರ್ಶನ ನೀಡಿದರು ಎಂದು ತಿಳಿದುಬಂದಿದೆ.

ನಿದ್ದೆಯಿಲ್ಲದೆ ರಾತ್ರಿ ಕಳೆದ ದರ್ಶನ್: ರೇಣುಕಾಸ್ವಾಮಿಯನ್ನು ಕೊಲೆ ಪ್ರಕರಣದ ಎರಡನೇ ಆರೋಪಿ ನಟ ದರ್ಶನ್ ಕಾಮಾಕ್ಷಿಪಾಳ್ಯ ಪೊಲೀಸ್ ಠಾಣೆಯಲ್ಲಿ ಮಂಗಳವಾರ ರಾತ್ರಿ ಜ್ಯೂಸ್, ಇಡ್ಲಿ ಸೇವಿಸಿ ನಿದ್ದೆಯಿಲ್ಲದೇ ಕಾಲಕಳೆದಿದ್ದಾರೆ.

ಕೋರ್ಟ್‌ನಿಂದ ಆರು ದಿನಗಳ ಕಾಲ ಕಸ್ಟಡಿಗೆ ಪಡೆದು ಠಾಣೆಗೆ ಕರೆತಂದು ಲಾಕಪ್‌ನಲ್ಲಿ ಬೇರೆ ಬೇರೆ ಕಡೆಗಳಲ್ಲಿ ಮಲಗಲು ದರ್ಶನ್ ಸೇರಿ 13 ಮಂದಿ ಆರೋಪಿಗಳಿಗೆ ವ್ಯವಸ್ಥೆ ಮಾಡಿದ್ದರು.

ದರ್ಶನ್‌ಗೆ ಕಾರ್ಪೆಟ್ ,ದಿಂಬು ಕೊಟ್ಟು ಮಲಗಲು ವ್ಯವಸ್ಥೆ ಮಾಡಿದ್ದರೂ, ಸೊಳ್ಳೆಗಳು ಇನ್ನಿಲ್ಲದಂತೆ ಕಾಟಕೊಟ್ಟಿದ್ದು, ಅಲ್ಲದೇ ಇಡೀ ದಿನ ಪೊಲೀಸರ ಹಿಡಿತದಲ್ಲಿ ನೊಂದಿದ್ದ ದರ್ಶನ್ ನಿದ್ದೆಯಿಲ್ಲದ ರಾತ್ರಿ ಕಳೆದರು. ದರ್ಶನ್, ರಾಘವೇಂದ್ರ ಮತ್ತು ವಿನಯ್‌ಗೆ ಒಂದು ಲಾಕ್‌ಅಪ್‌ನಲ್ಲಿ ಮಲಗಲು ವ್ಯವಸ್ಥೆ ಮಾಡಿದ್ದರೆ, ಇತರ ಆರೋಪಿಗಳಿಗೆ ಮತ್ತೊಂದು ಲಾಕ್‌ಅಪ್‌ನಲ್ಲಿ ಮಲಗಲು ಹೇಳಿದ್ದರು. ರಾತ್ರಿ ಆರೋಪಿಗಳಿಗೆ ಖಾಸಗಿ ಹೋಟೆಲ್‌ನಿಂದ ದೊನ್ನೆ ಬಿರಿಯಾನಿ ವ್ಯವಸ್ಥೆ ಮಾಡಲಾಗಿತ್ತು.

ಭಾರೀ ಭದ್ರತೆ

ದರ್ಶನ್ ಹಾಗೂ ಆತನ ಗ್ಯಾಂಗ್‌ನ ಸದಸ್ಯರು ಇದ್ದ ಪೊಲೀಸ್ ಠಾಣೆಗೆ ಭದ್ರತೆಯನ್ನು ಹೆಚ್ಚಿಸಲಾಗಿದೆ, ವಿಐಪಿ ಆರೋಪಿಗಳ ಮೇಲೆ ದಾಳಿಯಾಗುವ ಅಥವಾ ಇನ್ನ್ಯಾವುದೇ ಅನಾಹುತಗಳನ್ನು ತಪ್ಪಿಸುವ ಉದ್ದೇಶದಿಂದ ಠಾಣೆಯ ಹೊರಗಡೆ ಕೆಎಸ್‌ಆರ್‌ಪಿ ಪೊಲೀಸ್ ತಂಡವೊಂದನ್ನು ನಿಯೋಜಿಸಲಾಗಿತ್ತು. ಆರು ದಿನಗಳ ಕಾಲ ದರ್ಶನ್ ಗ್ಯಾಂಗ್‌ಗೆ ಪೊಲೀಸ್ ವಿಚಾರಣೆ ನಡೆಯಲಿದೆ. ಕೊಲೆ ಕೇಸ್ ಸಂಬಂಧ ಪೊಲೀಸರು ಸಾಕ್ಷ್ಯಗಳನ್ನು ಒಟ್ಟು ಮಾಡಲಿದ್ದಾರೆ. ಆರಂಭದಲ್ಲಿ ಆರೋಪಿಗಳ ಎಲೆಕ್ಟ್ರಾನಿಕ್ ಉಪಕರಣಗಳ ತಲಾಶ್ ನಡೆಯಲಿದೆ. ಜತೆಗೆ ಅಪಹರಿಸಿಕೊಂಡು ಬಂದು ಕೂಡಿ ಹಾಕಿದ ಜಾಗ, ಕೊಲೆಮಾಡಿ ಎಸೆದ ಜಾಗವನ್ನು ಮಹಜರು ಮಾಡಲಾಗಿದೆ.

ನಟ ದರ್ಶನ್ ವಿಷಯದಲ್ಲಿ ದುರಂತಗಳ ಸರಮಾಲೆ ನಡೆಯುತ್ತಿರುವುದು ಬೇಸರ ತಂದಿದೆ. ಇದು ಕನ್ನಡ ಚಿತ್ರರಂಗ ತಲೆತಗ್ಗಿಸುವ ವಿಷಯ. ಯಾರೇ ಆಗಲಿ ಯಾರದ್ದೇ ಪ್ರಾಣ ತೆಗೆಯಲು ಯಾರಿಗೂ ಅಧಿಕಾರವಿಲ್ಲ. ನಟರಾದವರು ಸಮಾಜಕ್ಕೆ ಒಳ್ಳೆಯ ಸಂದೇಶ ಕೊಡಬೇಕು.

-ಸುರೇಶ್, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ

ಡಾ.ರಾಜಕುಮಾರ್, ವಿಷ್ಣುವರ್ಧನ್, ಅಂಬರೀಶ್ ಅವರಂತಹ ಮಹನೀಯರನ್ನು ನೋಡಿ ಇವರೆಲ್ಲಾ (ದರ್ಶನ್) ಬುದ್ಧಿ ಕಲಿಯಬೇಕು. ರೇಣುಕಾಸ್ವಾಮಿ ತಪ್ಪುಮಾಡಿದ್ದರೆ ಕರೆದು ಬುದ್ಧಿ ಹೇಳಬೇಕಿತ್ತು. ಸ್ವಾಮಿ ಅವರ ತಂದೆ, ತಾಯಿ, ಪತ್ನಿಗೆ ನಾನು ಧೈರ್ಯ ಹೇಳುತ್ತೇನೆ. ಮಗನನ್ನು ಕಳೆದುಕೊಂಡ ಹಿರಿಯ ಜೀವಗಳಿಗೆ ದುಃಖ ಭರಿಸುವ ಶಕ್ತಿಯನ್ನು ಆ ದೇವರು ನೀಡಲಿ.

- ಸಾ.ರಾ. ಗೋವಿಂದು, ಚಲನಚಿತ್ರ ವಾಣಿಜ್ಯ ಮಂಡಳಿ ಮಾಜಿ ಅಧ್ಯಕ್ಷ

ಪ್ರಕರಣದಲ್ಲಿ ಪ್ರಭಾವಿ ರಾಜಕಾರಣಿಗಳಿಲ್ಲ : ಪರಮೇಶ್ವರ್

ನಟ ದರ್ಶನ್ ಪ್ರಕರಣದಲ್ಲಿ ಪ್ರಭಾವಿ ರಾಜಕಾರಣಿಗಳು ಭಾಗಿಯಾಗಿದ್ದಾರೆ ಎಂದು ನಮಗೆ ಕಂಡುಬರುತ್ತಿಲ್ಲ. ನಮ ಬಳಿ ಯಾರೂ ಪ್ರಕರಣದಲ್ಲಿ ಪ್ರಭಾವ ಬೀರಿಲ್ಲ ಎಂದು ಗೃಹಸಚಿವ ಡಾ.ಜಿ. ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾನೂನು ಪ್ರಕಾರ ಸಾಧ್ಯವಿರುವ ಎಲ್ಲಾ ಕ್ರಮಗಳನ್ನೂ ಪೊಲೀಸರು ತೆಗೆದುಕೊಳ್ಳುತ್ತಾರೆ. ಸರ್ಕಾರದ ವತಿಯಿಂದ ಯಾರೂ ಮಧ್ಯಪ್ರವೇಶ ಮಾಡುವುದಿಲ್ಲ. ಪೊಲೀಸರಿಗೆ ಮುಕ್ತ ಸ್ವಾತಂತ್ರ್ಯ ನೀಡಲಾಗಿದೆ. ಕೊಲೆಯಲ್ಲಿ ಭಾಗಿಯಾಗಿದ್ದಾರೆ ಎಂದು ದರ್ಶನ್‌ನನ್ನು ವಿಚಾರಣೆ ನಡೆಸಲಾಗುತ್ತಿದೆ. ದರ್ಶನ್‌ಗಾಗಲಿ, ಪರಮೇಶ್ವರ್‌ಗಾಗಲಿ ಕಾನೂನು ಒಂದೇ. ಯಾರೂ ಕಾನೂನು ಕೈಗೆತ್ತಿಕೊಳ್ಳಬಾರದು ಎಂದರು.

ಪೊಲೀಸ್ ಕಸ್ಟಡಿಯಲ್ಲಿರುವ ದರ್ಶನ್‌ಗೆ ಬಿರಿಯಾನಿ ಅಥವಾ ಚಿಕನ್ ತಂದುಕೊಟ್ಟಿರುವ ಬಗ್ಗೆ ಗೊತ್ತಿಲ್ಲ. ಊಟ ಕೊಡದೇ ಉಪವಾಸದಿಂದ ಸಾಯಿಸಲಿಕ್ಕಂತೂ ಆಗುವುದಿಲ್ಲ. ಪಠಾಣೆಯಲ್ಲಿ ಊಟ ತರಿಸಿಕೊಡುವುದು ಸಾಮಾನ್ಯ. ರೇಣುಕಾಸ್ವಾಮಿ ಕುಟುಂಬಕ್ಕೆ ನೆರವು ನೀಡುವ ಸಂಬಂಧ ಮುಖ್ಯಮಂತ್ರಿಯವರ ಜೊತೆ ಚರ್ಚೆ ನಡೆಸಲಾಗುವುದು. ಕುಟುಂಬದ ಸದಸ್ಯರು ಪ್ರಕರಣದಲ್ಲಿ ಉನ್ನತ ಮಟ್ಟದ ತನಿಖೆಗೆ ಆಗ್ರಹಿಸಿದ್ದಾರೆ. ಎಲ್ಲವನ್ನೂ ಸಿಬಿಐಗೆ ಕೊಡುವ ಅಗತ್ಯವಿಲ್ಲ. ಈಗಾಗಲೇ ಕೃತ್ಯದಲ್ಲಿ ಭಾಗಿಯಾಗಿದ್ದಾರೆ ಎಂದು ಹೇಳಲಾದ 13 ಜನರನ್ನು ಬಂಧಿಸಲಾಗಿದೆ. ಯಾರು ಮಾಡಿದ್ದಾರೆ, ಯಾಕೆ ಮಾಡಿದ್ದಾರೆ ಎಂಬುದು ಹೆಚ್ಚೂ ಕಡಿಮೆ ಗೊತ್ತಾಗಿದೆ. ಹೀಗಾಗಿ ಬೇರೆ ಸಂಸ್ಥೆಯ ತನಿಖೆಗೆ ನೀಡುವ ಅಗತ್ಯವಿಲ್ಲ ಎಂದರು. ದರ್ಶನ್ ಈ ಹಿಂದೆ ಹಲವು ಕೃತ್ಯಗಳಲ್ಲಿ ಇದೇ ರೀತಿ ಭಾಗಿಯಾಗಿದ್ದರು ಎಂದು ಮಾಧ್ಯಮಗಳಲ್ಲಿ ನೋಡಿದ್ದೇನೆ. ಅವರ ವಿರುದ್ಧ ರೌಡಿಶೀಟ್ ತೆರೆಯಬೇಕೇ, ಬೇಡವೇ ಎಂಬ ಬಗ್ಗೆ ಪೊಲೀಸರು ತನಿಖೆ ನಡೆಸಿ ಯಾವ ರೀತಿ ಶಿಫಾರಸು ಮಾಡುತ್ತಾರೆ ಎಂಬುದನ್ನು ಕಾದು ನೋಡುತ್ತೇವೆ. ಅಂತಹ ಕ್ರಮ ಕೈಗೊಳ್ಳಲು ಪೊಲೀಸರಿಗೆ ಮುಕ್ತ ಸ್ವಾತಂತ್ರ್ಯವಿದೆ ಎಂದರು.

ದರ್ಶನ್ ಸೇರಿ ಎಲ್ಲರಿಗೂ ಕಠಿಣ ಶಿಕ್ಷೆಯಾಗಲಿ

ನನ್ನ ಪತಿಯನ್ನು ಮೋಸದಿಂದ ಅಪಹರಿಸಿ ಚಿತ್ರಹಿಂಸೆ ನೀಡಿ ವಿಕೃತವಾಗಿ ಕೊಲೆ ಮಾಡಿರುವ ನಟ ದರ್ಶನ್, ಪವಿತ್ರಾ ಗೌಡ ಸೇರಿ ಎಲ್ಲರಿಗೂ ಕಠಿಣ ಶಿಕ್ಷೆಯಾಗಬೇಕು ಎಂದು ರೇಣುಕಾಸ್ವಾಮಿ ಅವರ ಪತ್ನಿ ಸಹನಾ ಆಗ್ರಹಿಸಿದ್ದಾರೆ. ನಾನು ಐದು ತಿಂಗಳ ಗರ್ಭಿಣಿ, ಮಗು ಹುಟ್ಟಿದ ಮೇಲೆ ತಂದೆ ಯಾರೆಂದು ಹೇಳಬೇಕು ಎಂದು ಅಳಲು ತೋಡಿಕೊಂಡಿದ್ದಾರೆ. ಶನಿವಾರ ಫೋನ್ ಮಾಡಿ ಊಟಕ್ಕೆ ಬರುವುದಾಗಿ ಹೇಳಿದ್ದರು. ಆದರೆ ಸಂಜೆಯಾದರೂ ಬಾರದಿದ್ದಾಗ ಫೋನ್ ಮಾಡಿದೆ. ಆದರೆ 7.30ರಲ್ಲಿ ಸ್ವಿಚ್ ಆಫ್ ಆಗಿತ್ತು. ನನ್ನ ಪತಿಯನ್ನು ಅಪಹರಿಸಿ ಬೆಂಗಳೂರಿಗೆ ಕರೆದೊಯ್ದು ವಿಕೃತವಾಗಿ ಕೊಲೆ ಮಾಡಿದ್ದಾರೆ. ನನ್ನ ಪತ್ನಿ ಗರ್ಭಿಣಿ ಎಂದು ಹೇಳಿದರೂ ಅವರಿಗೆ ಕನಿಕರ ಬಂದಿಲ್ಲ. ಹೀನಾಯವಾಗಿ ಹೊಡೆದು ಸಾಯಿಸಿದ್ದಾರೆ. ನನ್ನ ಮುಂದಿನ ಬದುಕು ಹೇಗೆ ಎಂಬುದೇ ಚಿಂತೆಯಾಗಿದೆ? ನನ್ನ ಗಂಡ ತಪ್ಪು ಮಾಡಿದ್ದರೆ ಬುದ್ಧಿಹೇಳಿ ಬಿಟ್ಟುಬಿಡಬಹುದಿತ್ತು. ಕೊಲೆಮಾಡುವ ಮಟ್ಟಕ್ಕೆ ಹೋಗಬಾರದಿತ್ತು. ನನ್ನ ಪತಿಯನ್ನು ಕೊಲೆ ಮಾಡಿರುವ ಆರೋಪಿಗಳು ಯಾವುದೇ ಕಾರಣಕ್ಕೂ ಶಿಕ್ಷೆಯಿಂದ ತಪ್ಪಿಸಿಕೊಳ್ಳಬಾರದು. ಎಲ್ಲರಿಗೂ ಕಠಿಣ ಶಿಕ್ಷೆ ನೀಡಬೇಕೆಂದು ಹೇಳಿದ್ದಾರೆ. ಯಾವುದೇ ಕಾರಣಕ್ಕೂ ಆರೋಪಿಗಳನ್ನು ಬಿಡಬಾರದು. ಎಲ್ಲರಿಗೂ ಶಿಕ್ಷೆಯಾಗಬೇಕು ಎಂದು ಪತಿಯ ಮೃತದೇಹದ ಮುಂದೆ ನೋವು ಹೇಳಿಕೊಂಡಿದ್ದಾರೆ.

ಸೊಸೆಗೆ ಉದ್ಯೋಗ ಕೊಡಿ

ನನ್ನ ಮಗನನ್ನು ಬೆಂಗಳೂರಿಗೆ ಕರೆದೊಯ್ದು ಕೊಲೆ ಮಾಡಿರುವ ಎಲ್ಲರಿಗೂ ತಕ್ಕ ಶಿಕ್ಷೆಯಾಗಬೇಕು ಎಂದು ರೇಣುಕಾಸ್ವಾಮಿ ಅವರ ತಾಯಿ ರತ್ನಪ್ರಭಾ ಕಣ್ಣೀರು ಹಾಕುತ್ತಾ, ನನ್ನ ಸೊಸೆಗೆ ಪರಿಹಾರ ನೀಡಬೇಕು. ಸರಕಾರಿ ಉದ್ಯೋಗ ಕೊಡಿ ಎಂದು ಅಂಗಲಾಚಿದ್ದಾರೆ. ವಯಸ್ಸಾದ ನಮ್ಮ ಕುಟುಂಬಕ್ಕೆ ಮಗನೇ ಆಧಾರವಾಗಿದ್ದ. ಈಗ ನಾವು, ನಮ್ಮ ಸೊಸೆ ಕಷ್ಟಪಡುವಂತಾಗಿದೆ.ಆಕೆಗೆ ನ್ಯಾಯ ಒದಗಿಸಬೇಕು, ಕೊಲೆಗಾರರಿಗೆ ಕಠಿಣ ಶಿಕ್ಷೆಯಾಗಬೇಕೆಂದರು.

ಪ್ರಜ್ವಲ್ ಪ್ರಕರಣ: ಸ್ವತಂತ್ರ ತನಿಖೆ- ಹೈ ಸೂಚನೆ

ಬೆಂಗಳೂರು: ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣವನ್ನು ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸುವುದು ಮತ್ತು ಈ ಸಂಬಂಧ ದಾಖಲಿಸಿದ್ದ ಮತ್ತೊಂದು ದೂರನ್ನು ಪರಿಗಣಿಸುವಂತೆ ಕೋರಿದ್ದ ಅರ್ಜಿಯನ್ನು ಹೈಕೋರ್ಟ್ ಇತ್ಯರ್ಥಪಡಿಸಿತು. ಈಗಾಗಲೇ ಪ್ರಕರಣದ ತನಿಖೆಗೆ ಸರ್ಕಾರ ವಿಶೇಷ ತನಿಖಾ ತಂಡ ರಚಿಸಿದೆ. ತಮ್ಮ ಮನವಿ ಏನೇ ಇದ್ದರೂ ಎಸ್‌ಐಟಿ ಮುಂದೆ ಸಲ್ಲಿಸಿ ಪರಿಹಾರ ಪಡೆದುಕೊಳ್ಳಬಹುದು ಎಂದು ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ನ್ಯಾಯಪೀಠ ಅರ್ಜಿದಾರರಿಗೆ ಸೂಚಿಸಿದೆ.

ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಉಪಾಧ್ಯಕ್ಷ ಎಸ್.ಎಚ್.ಲಿಂಗೇಗೌಡ ಈ ಅರ್ಜಿ ಸಲ್ಲಿಸಿದ್ದರು. ಪ್ರಜ್ವಲ್ ರೇವಣ್ಣ ವಿರುದ್ಧ ಹೊಳೆನರಸೀಪುರ ಠಾಣೆಯಲ್ಲಿ ದೂರು ನೀಡಲು ಪ್ರಯತ್ನಿಸಲಾಗಿತ್ತು. ಈ ವೇಳೆ ಪೊಲೀಸರು, ಪ್ರಕರಣ ಸಂಬಂಧ ಈಗಾಗಲೇ ದೂರು ದಾಖಲಾಗಿದೆ. ಮತ್ತೊಂದು ದೂರು ದಾಖಲಿಸಿಕೊಳ್ಳುವುದಿಲ್ಲ ಎಂದು ಹಿಂಬರಹ ಬರೆದುಕೊಟ್ಟಿದ್ದರು. ಆ ಹಿಂಬರಹ ರದ್ದುಪಡಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲು ಪೊಲೀಸರಿಗೆ ನಿರ್ದೇಶನ ನೀಡಬೇಕು. ವಿಡಿಯೊ ಮಾಡಿರುವವರು ಮತ್ತು ಅದನ್ನು ಇತರರಿಗೆ ಹಂಚಿಕೆ ಮಾಡಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಪೂರ್ಣ ಪ್ರಕರಣದ ನ್ಯಾಯಾಂಗ ತನಿಖೆ ಸೇರಿದಂತೆ ಸ್ವತಂತ್ರ ತನಿಖಾ ಸಂಸ್ಥೆಗಳಿಗೆ ವಹಿಸಬೇಕು ಎಂದು ಹೈಕೋರ್ಟ್‌ಗೆ ಕೋರಿದ್ದಾರೆ.

ಪೆನ್‌ಡ್ರೈವ್ ಹಂಚಿಕೆ ಅಪಾಯಕಾರಿ, ಪಾಪದ ಕೆಲಸ: ಹೈಕೋರ್ಟ್

ಬೆಂಗಳೂರು: ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ ಒಳಗೊಂಡ ದೃಶ್ಯಗಳನ್ನು ಪೆನ್‌ಡ್ರೈವ್‌ನಲ್ಲಿ ನಕಲಿಸಿ ಅವುಗಳನ್ನು ಇತರರಿಗೆ ಹಂಚಿಕೆ ಮಾಡಿರುವುದು ಅತ್ಯಂತ ಅಪಾಯಕಾರಿ ಮತ್ತು ಪಾಪದ ಕೆಲಸ ಎಂದು ಹೈಕೋರ್ಟ್ ಮೌಖಿಕವಾಗಿ ಅಭಿಪ್ರಾಯ ಪಟ್ಟಿತು.

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಲೈಂಗಿಕ ದೌರ್ಜನ್ಯ ಆರೋಪ ಪ್ರಕರಣದಲ್ಲಿ ಪೆನ್‌ಡ್ರೈವ್ ವಿತರಣೆ ಸಂಬಂಧ ಪ್ರಮುಖ ಆರೋಪಿ ಎನ್ನಲಾದ ಶರತ್ ತಮ್ಮ ವಿರುದ್ಧದ ಪ್ರಕರಣ ತಡೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ನಡೆಸಿತು. ಇಂತಹ ವಿಚಾರಗಳಲ್ಲಿ ಪುರುಷ ಏನೂ ಕಳೆದುಕೊಳ್ಳುವುದಿಲ್ಲ, ಆದರೆ ಮಹಿಳೆಯನ್ನು ಮಂದ ಬೆಳಕಿನಲ್ಲಿ ಕೆಟ್ಟದಾಗಿ ಚಿತ್ರಿಸುವುದರಿಂದ ಆಕೆ ಅಪಮಾನಕ್ಕೆ ಒಳಗಾಗುತ್ತಾಳೆ. ಪ್ರಕರಣದಲ್ಲಿ ಸದ್ಯಕ್ಕೆ ನ್ಯಾಯಾಲಯ ಹಸ್ತಕ್ಷೇಪ ಮಾಡು ವುದಿಲ್ಲ. ಆರೋಪಿ ತನಿಖಾಧಿಕಾರಿಗಳ ಮುಂದೆ ಹಾಜರಾಗಲಿ ಎಂದು ಪೀಠ ಹೇಳಿತು.

ಇದಕ್ಕೆ ಆರೋಪಿ ಪರ ವಕೀಲರು, ಹಾಗಿದ್ದರೆ ಬಂಧಿಸದಂತೆ ಆದೇಶ ನೀಡುವಂತೆ ಮನವಿ ಮಾಡಿದರು. ಇದಕ್ಕೆ ನ್ಯಾಯಪೀಠ, ಈ ನ್ಯಾಯಾಲಯವನ್ನು ಜಾಮೀನು ಕೋರ್ಟಾಗಿ ಪರಿವರ್ತಿಸಬೇಡಿ. ಮೊದಲು ನಿರೀಕ್ಷಣಾ ಅಥವಾ ಸಾಮಾನ್ಯ ಜಾಮೀನು ಪಡೆದುಕೊಳ್ಳಿ, ಇಲ್ಲವೇ ತನಿಖಾಧಿಕಾರಿ ಮುಂದೆ ಹಾಜರಾಗಿ. ಅಲ್ಲಿಯವರೆಗೆ ನಾವು ಈ ಅರ್ಜಿ ವಿಚಾರಣೆ ನಡೆಸುವುದಿಲ್ಲ ಎಂದು ಹೇಳಿ ವಿಚಾರಣೆ ಮುಂದೂಡಿತು.

ವಿಚಾರಣೆ ವೇಳೆ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ತನಿಖಾ ವರದಿಯ ವಿವರಗಳನ್ನು ನ್ಯಾಯಾಲಯದ ಮುಂದೆ ಸಲ್ಲಿಸಿ, ಶರತ್ ಪಾತ್ರವನ್ನು ವಿವರಿಸಿದರು. ಶರತ್‌ಗೆ ಸೇರಿದ ಜಾಗದಲ್ಲಿ ಎಸ್‌ಐಟಿ ತಂಡ ವಶಪಡಿಸಿಕೊಂಡಿರುವ ಡಿವಿಆರ್ ಜತೆ ಟ್ಯಾಬ್ಲೆಟ್ ಮತ್ತು ಹಲವು ಸಿಡಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವ ಅಗತ್ಯವಿದೆ ಎಂದರು. ಅರ್ಜಿದಾರರ ಪರ ವಾದ ಮಂಡಿಸಿದ ವಕೀಲರು, ಶರತ್ ಕುರಿತು ಕೇವಲ ಮಾಹಿತಿ ಇದೆ ಎಂದು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗದು. ಆರೋಪಿ ವಿರುದ್ಧ ಕಳೆದ 30 ದಿನಗಳಿಂದ ಪೊಲೀಸರು ಕ್ರಮ ಕೈಗೊಂಡಿರಲಿಲ್ಲ. ಅವರು ತಮ್ಮ ವಿರುದ್ಧದ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ಮೊರೆ ಹೋದ ನಂತರ ತನಿಖೆ ತೀವ್ರಗೊಳಿಸಿದ್ದಾರೆ ಎಂದು ತಿಳಿಸಿದರು.

ನ್ಯಾಯಾಧೀಶರು ಮೊಘಲರಂತೆ ವರ್ತಿಸುವಂತಿಲ್ಲ: ಎಚ್ಚರಿಕೆ

ಬೆಂಗಳೂರು: ನ್ಯಾಯಾಧೀಶರು ಹಿಂದಿನ ಕಾಲದ ಮೊಘಲರಂತೆ ವರ್ತಿಸುವಂತಿಲ್ಲ ಎಂದಿರುವ ಹೈಕೋರ್ಟ್, ಕಾನೂನಿನಡಿಯಲ್ಲಿ 12 ವರ್ಷ ಮಾತ್ರ ಅಂಗಡಿ ಗುತ್ತಿಗೆ ನವೀಕರಿಸಲು ಅವಕಾಶವಿದ್ದರೂ 20 ವರ್ಷ ವಿಸ್ತರಿಸಲು ನಿರ್ಧರಿಸಿರುವುದು ಕಾನೂನುಬಾಹಿರ ಎಂದು ಅಭಿಪ್ರಾಯಪಟ್ಟು ಏಕಸದಸ್ಯ ಪೀಠದ ಆದೇಶ ರದ್ದುಪಡಿಸಿದೆ.

ದಿವ್ಯಾಂಗರೊಬ್ಬರಿಗೆ 12 ವರ್ಷ ಅವಧಿಗೆ ನೀಡಿದ್ದ ಗುತ್ತಿಗೆಯನ್ನು 20 ವರ್ಷಕ್ಕೆ ವಿಸ್ತರಿಸಲು ಸೂಚಿಸಿದ್ದ ಏಕಸದಸ್ಯ ಪೀಠದ ಆದೇಶ ಪ್ರಶ್ನಿಸಿ ಚನ್ನಪಟ್ಟಣದ ನಗರ ಪುರಸಭೆ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹಾಗೂ ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ್ ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ದಾಖಲೆಗಳನ್ನು ಪರಿಶೀಲಿಸಿದ ನ್ಯಾಯಪೀಠ, ಗುತ್ತಿಗೆಯನ್ನು ಸಿದ್ದರಾಮು ಎಂಬವರಿಗೆ ವಿಶೇಷ ಚೇತನರ ಕಾಯ್ದೆಯಡಿ ಅಸಾಮರ್ಥ್ಯದ ನಿರ್ದಿಷ್ಟ ಆಧಾರದ ಮೇಲೆ ನೀಡಲಾಗಿದೆ. ಅಲ್ಲದೆ, ಈ ಕುರಿತಾಗಿ 2009ರ ಅ.26ರಂದು ಸರಕಾರ ಹೊರಡಿಸಿರುವ ಸುತ್ತೋಲೆಯಲ್ಲಿ ಗುತ್ತಿಗೆಯನ್ನು ಗರಿಷ್ಠ ಅವಧಿ 12 ವರ್ಷಗಳ ಮಾತ್ರ ನವೀಕರಿಸಲು ಅವಕಾಶವಿದೆ. ಈ ರೀತಿಯ ಹಂಚಿಕೆಯನ್ನು ಆನುವಂಶೀಯವಾಗಿ ಪರಿಗಣಿಸಲಾಗುವುದಿಲ್ಲ. ಹಂಚಿಕೆದಾರನ ಮರಣದ ನಂತರ ಗುತ್ತಿಗೆ ಕೊನೆ ಗೊಳ್ಳುತ್ತದೆ. ಹಾಗಾಗಿ ಪತ್ನಿ ಹಾಗೂ ಮಕ್ಕಳು ಯಾವುದೇ ರೀತಿಯಲ್ಲಿ ಆನುವಂಶೀ ಯವಾಗಿ ಏನನ್ನೂ ಪಡೆಯುವುದಿಲ್ಲ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

ನಕಲಿ ವೈದ್ಯರ ಹಾವಳಿಗೆ ಸರಕಾರದ ಕಟ್ಟುನಿಟ್ಟಿನ ಕ್ರಮ

ಬೆಂಗಳೂರು: ರಾಜ್ಯದಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ಸಮಸ್ಯೆಯಾಗುವ ಸಾಧ್ಯತೆಯಿದೆ. ಆದ್ದರಿಂದ ನಕಲಿ ವೈದ್ಯರ ಹಾವಳಿ ತಡೆಗಟ್ಟಲು ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳಲಾಗು ವುದು ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಎಚ್ಚರಿಕೆ ನೀಡಿದ್ದಾರೆ.

ವಿಶ್ವ ಹೋಮಿಯೋಪತಿ ದಿನಾಚರಣೆ ಮತ್ತು ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ನಕಲಿ ವೈದ್ಯರ ಹಾವಳಿ ವ್ಯಾಪಕವಾಗಿದ್ದು, ಯಾವುದೇ ವೈದ್ಯಕೀಯ ಕೋರ್ಸ್ ಮುಗಿಸದೆ ಎಲ್ಲೆಂದರಲ್ಲಿ ಕ್ಲಿನಿಕ್ ತೆರೆದು ಚಿಕಿತ್ಸೆ ನೀಡುತ್ತಾರೆ ಎಂಬ ದೂರುಗಳು ಸಾಕಷ್ಟು ಬಂದಿವೆ. ಇದು ಅನೇಕ ಸಮಸ್ಯೆಗೆ ಕಾರಣವಾ ಗುವ ಸಾಧ್ಯತೆಯಿದೆ. ಆದ್ದರಿಂದ ನಕಲಿ ವೈದ್ಯರನ್ನು ಮಟ್ಟಹಾಕಬೇಕಿದೆ ಎಂದು ಹೇಳಿದರು.

ಇತ್ತೀಚಿನ ದಿನದಲ್ಲಿ ಹೆಚ್ಚಾಗುತ್ತಿರುವ ದಂಧೆ ತಡೆಗಟ್ಟಲು ಹೋಮಿಯೋಪತಿ ವೈದ್ಯರು ಕೈಜೋಡಿಸಬೇಕು. ಗ್ರಾಮೀಣ ಭಾಗದ ಜನರ ಅಮಾಯಕತೆಯನ್ನು ನಕಲಿ ಚಿಕಿತ್ಸೆ ನೀಡಿ ದುರುಪಯೋಗಪಡಿಸಿಕೊಳ್ಳುತ್ತಿದ್ದು, ಕೇವಲ ಸರಕಾರದಿಂದ ಮಾತ್ರ ನಕಲಿ ವೈದ್ಯರ ಹಾವಳಿ ತಡೆಗಟ್ಟಲು ಸಾಧ್ಯವಿಲ್ಲ. ಹೋಮಿಯೋಪತಿ ವೈದ್ಯರು ಸಹಕರಿಸಿದರೆ ಈ ದಂಧೆ ತಡೆಗಟ್ಟಬಹುದು ಎಂದು ಸಚಿವ ಶರಣಪ್ರಕಾಶ್ ಪಾಟೀಲ್ ನುಡಿದರು.

ಬ್ರಿಜ್‌ಕೋರ್ಸ್ ಕೇಂದ್ರದ ತೀರ್ಮಾಣ: ಹೋಮಿಯೋಪತಿ ಹಾಗೂ ಅಲೋಪತಿ ಬ್ರಿಜ್ ಕೋರ್ಸ್‌ಗೆ ಸಂಬಂಧಿಸಿದಂತೆ ಗೆ ಹೋಮಿಯೋಪತಿ ವೈದ್ಯರ ಸಂಘ ಮನವಿ ಮಾಡಿತ್ತು. ಇದರಕ್ಕೆ ಸ್ಪಂದಿಸಿದ ಸಚಿವರು, ಬ್ರಿಜ್‌ಕೋರ್ಸ್ ನಿರ್ಧಾರ ಕೇಂದ್ರದ ಕೈಯಲ್ಲಿದ್ದು, ರಾಷ್ಟ್ರೀಯ ವೈದ್ಯಕೀಯ ಆಯೋಗ ಹಾಗೂ ಕೇಂದ್ರ ಸರಕಾರಕ್ಕೆ ಮನವಿ ನೀಡುವಂತೆ ಸಚಿವರು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಹೋಮಿಯೋಪತಿಕ್ ವೈದ್ಯಕೀಯ ಮಹಾವಿದ್ಯಾಲಯಗಳ ಪ್ರಮುಖ ವಿನೋದ್ ದೊಡ್ಡಣ್ಣನವರ್ ಮತ್ತಿತರರು ಉಪಸ್ಥಿತರಿದ್ದರು.

ರೇವ್ ಪಾರ್ಟಿ: ನಟಿಗೆ ಜಾಮೀನು

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿ ಬಳಿ ನಡೆದ ರೇವ್ ಪಾರ್ಟಿ ಪ್ರಕರಣದಲ್ಲಿ ತೆಲುಗು ನಟಿ ಹೇಮಾಗೆ ಬೆಂಗಳೂರು ಗ್ರಾಮಾಂತರ ಎನ್‌ಡಿಪಿಎಸ್ ವಿಶೇಷ ಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ. ನಟಿ ಹೇಮಾಳಿಂದ ಯಾವುದೇ ಮಾದಕವಸ್ತು ವಶಕ್ಕೆ ಪಡೆಯಲಾಗಿಲ್ಲ. ಹಲವು ದಿನಗಳ ನಂತರ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ ಎಂದು ಹೇಮಾ ಅಲಿಯಾಸ್ ಕೊಲ್ಲ ಹೇಮಾ ಪರ ವಕೀಲ ಮಹೇಶ್ ಕಿರಣ್ ಶೆಟ್ಟಿ ವಾದ ಮಂಡಿಸಿದ್ದರು. ಹೀಗಾಗಿ ನಟಿಗೆ ಷರತ್ತುಬದ್ಧ ಜಾಮೀನು ನೀಡಲಾಗಿದೆ. ಜಾಮೀನು ಸಿಕ್ಕಿದರೂ ಬುಧವಾರ ಬಿಡುಗಡೆ ಭಾಗ್ಯವಿಲ್ಲ ಎನ್ನಲಾಗಿದೆ. ಜಾಮೀನು ಪ್ರಕ್ರಿಯೆ ಪೂರ್ಣಗೊಳ್ಳದ ಹಿನ್ನೆಲೆಯಲ್ಲಿ ಗುರುವಾರ ಅವರು ಜೈಲಿನಿಂದ ಬಿಡುಗಡೆಯಾಗಲಿದ್ದಾರೆ.

ಪ್ರಕರಣದ ಹಿನ್ನೆಲೆ: ಮೇ 19ರಂದು ಎಲೆಕ್ಟ್ರಾನಿಕ್ ಸಿಟಿಯ ಫಾರ್ಮ್ ಹೌಸ್‌ನಲ್ಲಿ ನಡೆದ ರೇವ್ ಪಾರ್ಟಿಯಲ್ಲಿ ಭಾಗಿಯಾಗಿದ್ದ 103 ಮಂದಿ ವಿರುದ್ಧ ಹೆಬ್ಬಗೋಡಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ವೈದ್ಯಕೀಯ ತಪಾಸಣೆಯಲ್ಲಿ ನಟಿ ಹೇಮಾ ಸೇರಿ 86 ಮಂದಿ ಮಾದಕ ವಸ್ತು ಸೇವನೆ ಮಾಡಿರುವುದು ದೃಢಪಟ್ಟಿತ್ತು.

ಅಕ್ರಮ ಪಕ್ಷಿ ಸಾಕಣೆ: ದರ್ಶನ್ ವಿರುದ್ಧ ಕ್ರಮ ಇಲ್ಲ

ಮೈಸೂರು: ನಟ ದರ್ಶನ್ ಅಕ್ರಮವಾಗಿ ಪಕ್ಷಿಗಳನ್ನು ಸಂಗ್ರಹಿಸಿದ್ದ ಪ್ರಕರಣದಲ್ಲಿ ಅರಣ್ಯ ಇಲಾಖೆ ಜಾಣ ಮೌನ ವಹಿಸಿದೆ.

ದರ್ಶನ್ ಮೈಸೂರಿನ ತಮ್ಮ ತೋಟದಲ್ಲಿ ವಿದೇಶಿ ಮೂಲದ ಬಾರ್‌ಹೆಡೆಡ್ ಗೂಸ್ ಪಕ್ಷಿಗಳನ್ನು ಸಂಗ್ರಹಿಸಿದ್ದರು.

ಈ ಮಾಹಿತಿ ಪಡೆದ ಅರಣ್ಯ ಇಲಾಖೆ ದಾಳಿಮಾಡಿ ಪಕ್ಷಿಗಳನ್ನು ವಶಕ್ಕೆ ಪಡೆದಿತ್ತು.

ಅರಣ್ಯ ಇಲಾಖೆಯ ರಾಯಭಾರಿಯಾಗಿದ್ದರೂ ವನ್ಯಜೀವಿ ಕಾನೂನು ಪಾಲಿಸದ ದರ್ಶನ್ ಮೇಲೆ ಕಠಿಣ ಕ್ರಮಕ್ಕೆ ಮುಂದಾಗದೆ ಕುಳಿತಿದೆ ಎನ್ನಲಾಗಿದೆ. ಕಾಟಾಚಾರಕ್ಕೆಂಬಂತೆ ಅರಣ್ಯ ಇಲಾಖೆ ಎರಡು ನೋಟೀಸ್ ಕೊಟ್ಟಿದ್ದರೂ, ದರ್ಶನ್ ಉತ್ತರ ನೀಡಿಲ್ಲ. ಉತ್ತರ ನೀಡದಿದ್ದರೂ ಅರಣ್ಯ ಇಲಾಖೆ ಮೌನವಾಗಿ ಕುಳಿತಿದೆ. ಘಟನೆಯಾಗಿ ವರ್ಷ ಕಳೆದರೂ ಒತ್ತಡಕ್ಕೆ ಮಣಿದು ದರ್ಶನ್‌ರನ್ನು ಅರಣ್ಯ ಇಲಾಖೆ ರಕ್ಷಿಸುತ್ತಿದೆಯೇ ಎಂಬ ಶಂಕೆ ಶುರುವಾಗಿದೆ. ಶೆಡ್ಯೂಲ್ 1ರಲ್ಲಿ ಬರುವ ಪಕ್ಷಿ. ಅದರಲ್ಲೂ ವಿದೇಶದಿಂದ ವಲಸೆ ಬರುವ ಪಕ್ಷಿಯನ್ನು ದರ್ಶನ್ ಅಕ್ರಮವಾಗಿ ಸಾಕಿದ್ದರು. ಈ ಬಗ್ಗೆ ಅರಣ್ಯಾಧಿಕಾರಿಗಳು ವಿವರಣೆ ಕೇಳಿದ್ದರು. ದರ್ಶನ್ ಪತ್ನಿ ವಿಜಯಲಕ್ಷ್ಮಿ, ನಾಗರಾಜ್‌ಗೂ ಅಧಿಕಾರಿಗಳು ನೋಟಿಸ್ ನೀಡಿದ್ದರು.

ರೇಣುಕಾ ಸ್ವಾಮಿ ಕೊಲೆ ಖಂಡಿಸಿ ಚಿತ್ರದುರ್ಗದಲ್ಲಿ ಪ್ರತಿಭಟನೆ

ಚಿತ್ರದುರ್ಗ: ಇಲ್ಲಿನ ವಿಆರ್‌ಎಸ್ ಬಡಾವಣೆ ನಿವಾಸಿ ರೇಣುಕಾಸ್ವಾಮಿ ಕೊಲೆ ಖಂಡಿಸಿ ವಿವಿಧ ಸಂಘಟನೆಗಳ ಸದಸ್ಯರು ಜಿಲ್ಲಾಧಿಕಾರಿ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ವೀರಶೈವ -ಲಿಂಗಾಯತ, ಜಂಗಮ ಸಮುದಾಯ ಮೊದಲಾದ ಸಮುದಾಯಗಳ ಸದಸ್ಯರು ನಟ ದರ್ಶನ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಅವರಿಗೆ ಗಲ್ಲು ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು. ರಾಜ್ಯದಾದ್ಯಂತ ದರ್ಶನ್ ಸಿನಿಮಾ ಬಿಡುಗಡೆಯಾಗಬಾರದು. ಸಾರ್ವಜನಿಕರು ಕೂಡ ಅವರ ಚಿತ್ರ ಬಹಿಷ್ಕರಿಸಬೇಕು ಎಂದರು.

ಪೊಲೀಸರು ಆರೋಪಿಗಳನ್ನು ಬಂಧಿಸಿ ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ, ಮುಂದೆ ಆರೋಪಿಗಳನ್ನು ರಕ್ಷಿಸುವ ಕೆಲಸ ಮಾಡಿದರೆ ನಾವು ಸುಮ್ಮನೆ ಕೂರುವುದಿಲ್ಲ. ಮುಖ್ಯಮಂತ್ರಿ, ಗೃಹಸಚಿವರು ಈ ನಿಟ್ಟಿನಲ್ಲಿ ಪೊಲೀಸರಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ವಿಧಾನ ಪರಿಷತ್ ಸದಸ್ಯ ಕೆ. ಎಸ್. ನವೀನ್, ಬಿಜೆಪಿ ಮುಖಂಡರಾದ ಜಿ.ಎಸ್.ತಿಪ್ಪಾರೆಡ್ಡಿ, ಎಸ್ ಕೆ ಬಸವರಾಜನ್, ವಿವಿಧ ಸಮಾಜದ ಮುಖಂಡ ಮಲ್ಲಿಕಾರ್ಜುನ ಸ್ವಾಮಿ, ಷಡಾಕ್ಷರಯ್ಯ, ಬಸವನಾಗುದೇವ ಸ್ವಾಮೀಜಿ, ನಾಗರಾಜ ಸಂಗಂ ಇದ್ದರು.

ರೇಣುಕಾಸ್ವಾಮಿಯನ್ನು ಚಿತ್ರಹಿಂಸೆ ನೀಡಿ ಕೊಲೆ ಮಾಡಲಾಗಿದೆ. ತಪ್ಪು ಮಾಡಿದ್ದರೆ ಪೊಲೀಸರಿಗೆ ದೂರು ನೀಡಲು ಅವಕಾಶವಿತ್ತು. ಆದರೆ ಕಾನೂನು ಕೈಗೆತ್ತಿಕೊಂಡಿರುವ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು.

ವಸಂತ ನರಸಾಪುರದ ಬಳಿ ಇಂಟಿಗ್ರೇಟೆಡ್ ಟೌನ್‌ಶಿಪ್

ಬೆಂಗಳೂರು: ತುಮಕೂರಿನ ವಸಂತನರಸಾಪುರದ ಕೈಗಾರಿಕಾ ಪ್ರದೇಶದ ಬಳಿ ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳುವಂತೆ ನಗರಾಭಿವೃದ್ಧಿ ಸಚಿವ ಬಿ.ಎಸ್ ಸುರೇಶ ಸೂಚಿಸಿದ್ದಾರೆ.

ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಈಗಾಗಲೇ ಬಜೆಟ್‌ನಲ್ಲಿ ವಸಂತನರಸಾಪುರದ ಬಳಿ ಸುಮಾರು 500 ಎಕರೆ ಪ್ರದೇಶದಲ್ಲಿ ಇಂಟಿಗ್ರೇಟೆಡ್ ಟೌನ್‌ಶಿಪ್ ನಿರ್ಮಾಣ ಮಾಡುವುದಾಗಿ ಘೋಷಿಸಿದ್ದು, ನೀತಿಸಂಹಿತೆ ಕಾರಣ ಕಾಮಗಾರಿಗೆ ತೊಡಕಾಗಿದ್ದು, ಈಗ ಕಾಮಗಾರಿ ಬಗ್ಗೆ ಗಮನ ಹರಿಸುವಂತೆ ಸೂಚಿಸಿದರು. ಹಾಸನ, ಚಿಕ್ಕಮಗಳೂರು, ಬೆಳಗಾವಿ ಮತ್ತು ಕೋಲಾರ ನಗರದಲ್ಲಿ ಡಾಂಬರೀಕರಣ, ರಸ್ತೆ ನಿರ್ಮಾಣ ಹಾಗೂ ರಿಂಗ್ ರಸ್ತೆ ನಿರ್ಮಾಣಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಮೈಸೂರು ರಿಂಗ್ ರಸ್ತೆ ನಿರ್ಮಾಣದಲ್ಲಿ ಉಂಟಾಗಿರುವ ಅಡೆತಡೆ ನಿವಾರಿಸಲು ಮತ್ತೆ ಕಿರುಗುತ್ತಿಗೆ ಕರೆಯುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಶಾಲೆ: ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಶಾಲೆಗಳಂತೆ ಇತರೆ ಮಹಾನಗರ ಪಾಲಿಕೆಗಳಲ್ಲಿಯೂ ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಶಾಲೆಗಳನ್ನು ತೆರೆಯುವ ಕುರಿತು ಪರಿಶೀಲಿಸುವಂತೆ ಸೂಚಿಸಿದರು. ಮಹಾನಗರ ಪಾಲಿಕೆಗಳಲ್ಲಿ ಅಗತ್ಯಕ್ಕಿಂತ ಹೆಚ್ಚು ಸಿಬ್ಬಂದಿ ಕಂಡು ಬಂದರೆ ಅಗತ್ಯವಿರುವ ಕಡೆ ನಿಯೋಜಿಸಿ ಹಾಗೂ ಸಹಾಯಕ ಅಭಿಯಂತರರು ಸೇರಿದಂತೆ ತಾಂತ್ರಿಕ ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಸೂಚಿಸಿದರು.

ಸಮಾಚಾರ ಸಣ್ಣದಲ್ಲ

ಪೊಲೀಸ್ ಪೇದೆ ಆತ್ಮಹತ್ಯೆ

ಬೈಲಹೊಂಗಲ: ಪಟ್ಟಣದ ತಹಶೀಲ್ದಾರ ಕಚೇರಿಯ ಸಭಾಭವನದ ಆವರಣದಲ್ಲಿರುವ ಮರಕ್ಕೆ ಕುಡಿದ ಅಮಲಿನಲ್ಲಿ ಪೊಲೀಸ್ ಪೇದೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ನಡೆದಿದೆ. ಮುರಕಿಬಾವಿ ಗ್ರಾಮದ ಬಸನ ಗೌಡ ಈರಪ್ಪ ಗೌಡರ್ (40) ಆತ್ಮಹತ್ಯೆ ಮಾಡಿಕೊಂಡ ಪೇದೆ. ದೊಡವಾಡ ಪೊಲೀಸ್ ಠಾಣೆ ಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.ಚುನಾವಣೆ ಕರ್ತವ್ಯ ಮುಗಿದ ಮೇಲೆ ರಜೆ ಪಡೆದಿದ್ದ ಪೇದೆ ಜೀವನದಲ್ಲಿ ಜಿಗುಪ್ಸೆ ಹೊಂದಿ ಕುಡಿದ ಮತ್ತಿನಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಕುವೈತ್ ಬೆಂಕಿ ಅವಘಡ 41 ಭಾರತೀಯರ ಸಾವು

← ಮೊದಲಪುಟದಿಂದ

ಮೃತರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ಸಿಗಲಿ, ಗಾಯಗೊಂಡವರು ಬೇಗ ಗುಣಮುಖರಾಗಲಿ, ರಾಯಭಾರಿ ಕಚೇರಿ ಎಲ್ಲ ರೀತಿಯ ಸಹಾಯಕ್ಕೆ ಸಿದ್ಧವಿದೆ ಎಂದು ಪ್ರಧಾನಿ ಮೋದಿ, ವಿದೇಶಾಂಗ ವ್ಯವಹಾರಗಳ ಸಚಿವ ಜೈ ಶಂಕರ್ ತಿಳಿಸಿದ್ದಾರೆ. ಭಾರತೀಯ ರಾಯಭಾರಿ ಕಚೇರಿ ಅಲ್ಲಿನ ಅಧಿಕಾರಿಗಳ ಜತೆ ನಿರಂತರ ಸಂಪರ್ಕದಲ್ಲಿದೆ. ಸಂತ್ರಸ್ತರಿಗೆ ಎಲ್ಲ ರೀತಿಯ ನೆರವು ನೀಡಲಾಗುವುದು ಎಂದು ಪ್ರಧಾನಿ ಭರವಸೆ ನೀಡಿದ್ದಾರೆ.

5ನೇ ಮಹಡಿ ಕಿಟಕಿಯಿಂದಲೇ ಜಿಗಿದರು!

ಇಡೀ ಕಟ್ಟಡಕ್ಕೆ ಬೆಂಕಿ ವ್ಯಾಪಿಸಿದಾಗ ತಪ್ಪಿಸಿಕೊಳ್ಳಲು ದಾರಿ ಕಾಣದಂತಾಯಿತು. 5ನೇ ಮಹಡಿಯಲ್ಲಿದ್ದ ಕೆಲವರು ಕಿಟಕಿಗಳಿಂದಲೇ ಕೆಳಕ್ಕೆ ಜಿಗಿದು ಪ್ರಾಣ ಉಳಿಸಿಕೊಳ್ಳಲು ಯತ್ನಿಸಿ ಗಂಭೀರವಾಗಿ ಗಾಯಗೊಂಡರು. ಕೆಲವರು ಪ್ರಾಣ ಕಳೆದುಕೊಂಡರು ಎಂದು ಪ್ರತ್ಯಕ್ಷದರ್ಶಿಯೊಬ್ಬರು ಮಾಧ್ಯಮದವರಿಗೆ ತಿಳಿಸಿದ್ದಾರೆ.

ಭದ್ರಾವತಿ ಕಾರ್ಖಾನೆ ಉಳಿಸಿಕೊಳ್ಳುವುದಾಗಿ ಮೈಸೂರಿನ ಸಂಸದ ಯದುವೀರ ಭರವಸೆ, ಕಾರ್ಮಿಕರಲ್ಲಿ ಆಶಾಭಾವನೆ

ಎಚ್‌ಡಿಕೆಗೆ ಉಕ್ಕು ಖಾತೆ: ವಿಐಎಸ್‌ಎಲ್ ನೌಕರರಲ್ಲಿ ಚಿಗುರೊಡೆದ ಹೊಸ ನಿರೀಕ್ಷೆ

ಆರ್. ವಿ. ಕೃಷ್ಣ ಭದ್ರಾವತಿ ಶಿವಮೊಗ್ಗ

ನರೇಂದ್ರ ಮೋದಿ ಸಂಪುಟದಲ್ಲಿ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಲಭಿಸಿದೆ. ಇದು ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯ (ವಿಐಎಸ್‌ಎಲ್) ನೌಕರರಲ್ಲಿ ಸಂತಸ ಮೂಡಿಸಿದೆ. ಕಾರ್ಖಾನೆ ಪುನಶ್ಚೇತನದ ನಿರೀಕ್ಷೆ ಗರಿಗೆದರಿದೆ.

ವಿಐಎಸ್‌ಎಲ್ ಕಾರ್ಖಾನೆಯನ್ನು ನಿರ್ವಹಿಸುತ್ತಿರುವ ಭಾರತೀಯ ಉಕ್ಕು ಪ್ರಾಧಿಕಾರ ಉಕ್ಕು ಸಚಿವಾಲಯದ ಅಡಿ ಕಾರ್ಯನಿರ್ವಹಿಸುತ್ತದೆ. ಈಗ ಎಚ್.ಡಿ. ಕುಮಾರಸ್ವಾಮಿ ಇದೇ ಖಾತೆಯ ಸಚಿವರಾಗಿದ್ದಾರೆ.

ಇದರ ನಡುವೆ ಬಿಜೆಪಿಯ ಬಿ.ವೈ ರಾಘವೇಂದ್ರ, ಭಾರಿ ಮತಗಳ ಅಂತರದಿಂದ 4 ನೇ ಬಾರಿಗೆ ಹಾಗೂ ಮೈಸೂರು ಮಹಾರಾಜ ಯದುವೀರ ಕೃಷ್ಣರಾಜದತ್ತ ಒಡೆಯರ್ ಮೊದಲ ಬಾರಿಗೆ ಗೆಲುವು ಸಾಧಿಸಿರುವುದು ಕ್ಷೇತ್ರದ ಮತದಾರರಲ್ಲಿ ಸಂತಸವನ್ನುಂಟು ಮಾಡಿದೆ. ಇದರಿಂದ ವಿಐಎಸ್‌ಎಲ್ ಕಾರ್ಖಾನೆ ಕಾರ್ಮಿಕ ವರ್ಗದವರು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

ಚುನಾವಣೆ ಆರಂಭಕ್ಕೂ ಮೊದಲು ವಿಐಎಸ್‌ಎಲ್ ಕಾರ್ಖಾನೆ ಶತಮಾನೋತ್ಸವ ಸಂಭ್ರಮಾಚರಣೆಯಲ್ಲಿ ಪಾಲ್ಗೊಂಡಿದ್ದ ಯದುವೀರ ಕೃಷ್ಣರಾಜದತ್ತ ಒಡೆಯರ್, ತಮ್ಮ ತಾತ ಕಟ್ಟಿ ಬೆಳೆಸಿದ ಕಾರ್ಖಾನೆ ಉಳಿಸಿಕೊಳ್ಳಲು ಕೈಜೋಡಿಸುವುದಾಗಿ ಭರವಸೆ ನೀಡಿದ್ದರು. ಆ ನಂತರ ಕಾರ್ಖಾನೆಗೆ ಭೇಟಿ ನೀಡಿ ವಾಸ್ತವಾಂಶ ಪರಿಶೀಲಿಸಿದ್ದರು. ಕಾರ್ಖಾನೆ ಎದುರು 18 ತಿಂಗಳಿನಿಂದ ನಿರಂತರವಾಗಿ ಹೋರಾಟ ನಡೆಸುತ್ತಿರುವ ಗುತ್ತಿಗೆ ಕಾರ್ಮಿಕರಿಗೆ ಕಾರ್ಖಾನೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದು ಒತ್ತಾಯಿಸುವುದಾಗಿ ಭರವಸೆ ನೀಡಿದ್ದರು.

ಇದೀಗ ಯದುವೀರ್ ಅವರೇ ಮೈಸೂರು-ಕೊಡಗು ಕ್ಷೇತ್ರದಿಂದ ಲೋಕಸಭೆಗೆ ಆಯ್ಕೆಯಾಗಿರುವುದು ಅವರಿಗೆ ಹೆಚ್ಚಿನ ಬಲ ಬಂದಂತಾಗಿದ್ದು, ಕೇಂದ್ರದಲ್ಲಿ ನೂತನ ಸರಕಾರ ಅಸ್ತಿತ್ವಕ್ಕೆ ಬಂದ ನಂತರ ಕಾರ್ಖಾನೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅವರ ಪ್ರಯತ್ನ ಕಾದು ನೋಡಬೇಕಾಗಿದೆ.

ಇನ್ನೂ ಮಂಡ್ಯ ಕ್ಷೇತ್ರದಲ್ಲಿ ಗೆಲುವು ಸಾಧಿಸಿದ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿಯವರಿಗೆ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಲಭಿಸಿದೆ. ಭದ್ರಾವತಿ ಕಾರ್ಖಾನೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ನಿರಂತರವಾಗಿ ಹೋರಾಟ ನಡೆಸುತ್ತಿರುವ ಗುತ್ತಿಗೆ ಕಾರ್ಮಿಕರಲ್ಲಿ ಆಶಾ ಭಾವನೆ ಮೂಡಿಸಿದೆ.

ಈ ಹಿಂದೆ ಇವರ ತಂದೆ ಮಾಜಿ ಪ್ರಧಾನಿ ಎಚ್. ಡಿ ದೇವೇಗೌಡರವರು ವಿಐಎಸ್‌ಎಲ್ ಕಾರ್ಖಾನೆಯನ್ನು ಕೇಂದ್ರ ಸರಕಾರದ ಉಕ್ಕು ಪ್ರಾಧಿಕಾರದ ಅಧೀನಕ್ಕೆ ವಹಿಸಿಕೊಡುವ ಮೂಲಕ ಅಭಿವೃದ್ಧಿಗೆ ಮುಂದಾಗಿದ್ದರು. ಇದೀಗ ಕಾರ್ಖಾನೆಯನ್ನು ಕೇಂದ್ರ ಸರಕಾರ ಸ್ವಾಮ್ಯದಲ್ಲಿಯೇ ಮುಂದುವರೆಸಿ,ಅಗತ್ಯವಿರುವ ಬಂಡವಾಳ ತೊಡಗಿಸಿ ಅಭಿವೃದ್ಧಿಪಡಿಸುವ ಮೂಲಕ ಕಾರ್ಮಿಕರ ಹಿತರಕ್ಷಿಸುವ ನಿಟ್ಟಿನಲ್ಲಿ ನೂತನ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿಯವರು ಗಮನ ಹರಿಸಬೇಕಾಗಿದೆ.

ವಿಐಎಸ್‌ಎಲ್‌ನಲ್ಲಿ ಸದ್ಯ ಸಣ್ಣ ಪ್ರಮಾಣದ ಉತ್ಪಾದನೆಯಾಗುತ್ತಿದೆ. ಒಂದೂವರೆ ಸಾವಿರದಷ್ಟು ಗುತ್ತಿಗೆ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ತಿಂಗಳಲ್ಲಿ 13 ರಿಂದ 18 ದಿನ ಕೆಲಸ ಸಿಗುತ್ತಿದೆ. ಕೆಲವೊಮ್ಮೆ ತಿಂಗಳಿಗೆ ಸರಿಯಾಗಿ ಸಂಬಳ ಬರುತ್ತಿಲ್ಲ ಎಂಬ ದೂರೂ ಇದೆ.

ಕಾರ್ಖಾನೆಗೆ ಹೊಸ ಯಂತ್ರೋಪಕರಣ ಅಳವಡಿಸಬೇಕಿದೆ. ಬ್ಲಾಸ್ಟ್ ಫರ್ನೇಸ್ (ಬಿ.ಎಫ್), ಸ್ಟೀಲ್ ಮೇಕಿಂಗ್ ಶಾಫ್ಟ್ (ಎಸ್‌ಎಂಎಸ್), ಬಾರ್‌ಮಿಲ್, ನ್ಯೂ ರೋಲಿಂಗ್ ವಿಭಾಗದಲ್ಲಿ ಕೆಲಸ ಆರಂಭವಾಗಬೇಕಿದೆ. ಕಚ್ಚಾವಸ್ತುಗಳು ಹೊರಗಿನಿಂದ ಬರುತ್ತಿದ್ದು ಹೊರೆಯಾಗುತ್ತಿದೆ. ಉತ್ಪನ್ನಗಳಿಗೆ ಆರ್ಡರ್ ಬರಬೇಕಿದೆ. ಉಕ್ಕು ಖಾತೆ ವಹಿಸಿಕೊಂಡಿರುವ ಎಚ್.ಡಿ.ಕುಮಾರಸ್ವಾಮಿ ಅವರು ಮನಸು ಮಾಡಿದರೆ ಕಾರ್ಖಾನೆ ಪುನಶ್ಚೇತನಗೊಳ್ಳಲಿದೆ

ರಾಘವೇಂದ್ರರಿಂದ ಕಾರ್ಖಾನೆ ಉಳಿವಿಗೆ ನಿರಂತರ ಪ್ರಯತ್ನ

ನಾಲ್ಕನೇಯ ಬಾರಿಗೆ ಸಂಸದರಾಗಿ ಆಯ್ಕೆಯಾಗಿರುವ ಬಿ.ವೈ.ರಾಘವೇಂದ್ರ ಕಾರ್ಖಾನೆ ಉಳಿಸಿಕೊಳ್ಳಲು ನಿರಂತರವಾಗಿ ಪ್ರಯತ್ನಿಸುತ್ತಿದ್ದಾರೆ. ಆದರೆ ಅವರ ಪ್ರಯತ್ನ ಇದುವರೆಗೂ ಸಫಲವಾಗಿಲ್ಲ. ಈ ಬಾರಿಯಾದರೂ ಸಫಲವಾಗುವುದೇ ಎಂಬುದನ್ನು ಕಾದು ನೋಡಬೇಕಾಗಿದೆ.

ಎಚ್‌ಡಿಕೆ ಭರವಸೆ

ವಿಧಾನಸಭೆ ಚುನಾವಣೆ ವೇಳೆ ಭದ್ರಾವತಿಗೆ ಆಗಮಿಸಿದ್ದ ಎಚ್.ಡಿ ಕುಮಾರಸ್ವಾಮಿ, ಕಾರ್ಖಾನೆ ಮುಂಭಾಗ ಬಹಿರಂಗ ಸಭೆಯಲ್ಲಿ ವಿಐಎಸ್‌ಎಲ್ ಕಾರ್ಖಾನೆ ಯಾವುದೇ ಕಾರಣಕ್ಕೂ ಮುಚ್ಚಲು ಬಿಡುವುದಿಲ್ಲ. ಕಾರ್ಖಾನೆ ಉಳಿಸಿಕೊಳ್ಳುವುದಾಗಿ ಭರವಸೆ ನೀಡಿದ್ದರು. ಇದೀಗ ಕೇಂದ್ರದಲ್ಲಿ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಲಭಿಸಿದೆ. ಕಾರ್ಖಾನೆ ವಿಚಾರದಲ್ಲಿ ಅವರ ಮುಂದಿನ ಪ್ರಯತ್ನ ಕಾರ್ಮಿಕರಲ್ಲಿ ಕುತೂಹಲ ಹೆಚ್ಚಿಸಿದೆ.

ಯೋಜನೆಯ ನ್ಯೂನತೆ ಸರಿಪಡಿಸಲು ಒತ್ತಾಯಿಸಿದ್ದೇನೆ

ಗ್ಯಾರಂಟಿ ನಿಲ್ಲಿಸಲು ಹೇಳಿಲ್ಲ

ಮೈಸೂರು: ಸರ್ಕಾರ ಗ್ಯಾರಂಟಿ ಸ್ಕೀಮ್‌ಗಳನ್ನು ನಿಲ್ಲಿಸಬೇಕೆಂದು ನಾನೆಂದೂ ಹೇಳಿಲ್ಲ. ಈ ಗ್ಯಾರಂಟಿ ಸ್ಕೀಮ್‌ಗಳಲ್ಲಿರುವ ಕೆಲವು ನ್ಯೂನತೆಗಳನ್ನು ಸರಿಪಡಿಸಿ ಎಂದು ಹೇಳಿದ್ದೇನೆ. ನನ್ನ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಲಾಗಿದೆ ಕೆಪಿಸಿಸಿ ಮಾಧ್ಯಮ ವಕ್ತಾರ ಎಂ.ಲಕ್ಷ್ಮಣ್ ತಿಳಿಸಿದ್ದಾರೆ.

ಇಂದು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನಾನು ಮತದಾರರನ್ನು ಸ್ಯಾಡಿಸ್ಟ್ ಎಂದು ಕರೆದಿಲ್ಲ. ಸ್ಯಾಡಿಸ್ಟ್ ನೇಚರ್ ಆರಂಭವಾಗಿದೆ ಎಂದಷ್ಟೇ ಹೇಳಿದ್ದೇನೆ ಎಂದು ಸ್ಪಷ್ಟಪಡಿಸಿದರು.

ಕೇಂದ್ರದಲ್ಲಿ ಮೋದಿ ನೇತೃತ್ವದ 3.0 ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಕರ್ನಾಟಕದ ಐವರಿಗೆ ಸಚಿವ ಸ್ಥಾನ ಕೊಟ್ಟಿದ್ದಾರೆ. ಆದರೆ 17 ಜನ ಬಿಜೆಪಿ, ಇಬ್ಬರು ಜೆಡಿಎಸ್ ಸಂಸದರು ಗೆದ್ದಿದ್ದರೂ, ಕೇವಲ ಮೂರು ಸಮುದಾಯಕ್ಕೆ ಮಾತ್ರ ಮಂತ್ರಿಸ್ಥಾನ ನೀಡಲಾಗಿದೆ. ಉಳಿದ ಹಿಂದುಳಿದ ವರ್ಗಗಳನ್ನು ನಿರ್ಲಕ್ಷ್ಯ ಮಾಡಲಾಗಿದ್ದು, ಇಡೀ ದೇಶದಲ್ಲಿ ಬಿಜೆಪಿ ಇದೇ ರೀತಿ ತಾರತಮ್ಯ ಮಾಡುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರು ಹೋದ ಕಡೆಯಲ್ಲೆಲ್ಲಾ ರಾಹುಲ್ ಗಾಂಧಿ ಅವರದ್ದು ಕುಟುಂಬ ರಾಜಕಾರಣವೆಂದು ಟೀಕೆ ಮಾಡುತ್ತಾರೆ. ಆದರೆ ಬಿಜೆಪಿ ಸರ್ಕಾರದಲ್ಲಿ 11 ಜನ ಸಂಸದರು ಕುಟುಂಬ ರಾಜಕಾರಣದಿಂದಲೇ ಬಂದಿದ್ದಾರೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಬಿಜೆಪಿಯವರು ಆರೋಪ ಮಾಡುತ್ತಿರುವುದು ಸರಿಯಲ್ಲ ಎಂದು ಲಕ್ಷ್ಮಣ್ ತಿರಗೇಟು ನೀಡಿದರು.

ಕುಮಾರಸ್ವಾಮಿ ರಾಜ್ಯಕ್ಕಾಗಿರುವ ಅನ್ಯಾಯ ಸರಿಪಡಿಸುತ್ತಾರಾ?

ಹೆಚ್.ಡಿ.ಕುಮಾರಸ್ವಾಮಿ ಕೇಂದ್ರದಲ್ಲಿ ಉಕ್ಕು ಮತ್ತು ಬೃಹತ್ ಕೈಗಾರಿಕೆ ಖಾತೆಯ ಸಚಿವರಾಗಿದ್ದಾರೆ. ಇವರು ರಾಜ್ಯಕ್ಕೆ ಕಾವೇರಿ ನೀರಿನ ವಿಚಾರವಾಗಿ ಆಗಿರುವ ಅನ್ಯಾಯ ಸರಿಪಡಿಸುತ್ತಾರಾ? ಸಕ್ಕರೆ ಕಾರ್ಖಾನೆ ಸಮಸ್ಯೆ ಬಗೆಹರಿಸುತ್ತಾರಾ ಎಂದು ಪ್ರಶ್ನಿಸಿದ ಅವರು, ಮೇಕೆದಾಟು, ಮಹದಾಯಿ ಯೋಜನೆಗಳ ಸಮಸ್ಯೆಯನ್ನು ಬಗೆಹರಿಸಲಿ ಎಂದು ಒತ್ತಾಯಿಸಿದರು.

ನಗರಸಭಾ ಕಾರ್ಯಾಲಯ, ಗೌರಿಬಿದನೂರು,
ಚಿಕ್ಕಬಳ್ಳಾಪುರ ಜಿಲ್ಲೆ

ಸಂಖ್ಯೆ: ನಸಗೌ/ತಾ.ಶಾ/ಸಿ.ಆರ್/33/2024-25 ದಿನಾಂಕ:10.06.2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಗೌರಿಬಿದನೂರು ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2023-24ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿ ಅನುದಾನದಲ್ಲಿ ಐಟಂವಾರು ಟೆಂಡರ್‌ಗಳನ್ನು ಟೆಂಡರ್ standard bidding documents KW-1 ದಸ್ತಾವೇಜಿನಲ್ಲಿ

DMA/2024-25/RD/WORK INDENT_18297
DMA/2024-25/RD/WORK INDENT_18354
DMA/2024-25/RD/WORK INDENT_18362
DMA/2024-25/RD/WORK INDENT_18364
DMA/2024-25/RD/WORK INDENT_18380

ಇ-ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. (1) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 21.06.2024 ರ ಸಂಜೆ: 5.00 ಘಂಟೆ.** (2) ಟೆಂಡರ್ ತೆರೆಯುವ **ದಿನಾಂಕ: 24.06.2024 ರ ಬೆಳಿಗ್ಗೆ: 11.00 ಘಂಟೆ.** (3) ಹೆಚ್ಚಿನ ಮಾಹಿತಿಗಾಗಿ ವಿವರಗಳನ್ನು **www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಛೇರಿಯ ಸಮಯದಲ್ಲಿ ನಗರಸಭೆಯ ಪೌರಾಯುಕ್ತರು/ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಪೌರಾಯುಕ್ತರು,
ನಗರಸಭೆ, ಗೌರಿಬಿದನೂರು

ಸಹಿ/-
ಆಡಳಿತಾಧಿಕಾರಿಗಳು
ನಗರಸಭೆ, ಗೌರಿಬಿದನೂರು ಹಾಗೂ
ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:20/ಕೆಎಸ್‌ಎಂಸಿಎ/2024-25

ಹುಬ್ಬಳ್ಳಿ - ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ನವನಗರ ಹುಬ್ಬಳ್ಳಿ - 580025
Phone : 0836 - 2224098, 2224195, 2224301, 2222616, 2224274, 2222505.

ಸಂಖ್ಯೆ: ಹು.ಧಾ.ನ.ಪ್ರಾ/ಯೋವಿ/ಭೂ.ಬ/01/ಪತ್ರಿಕಾಪ್ರಕಟಣೆ/2022-23/842 ದಿನಾಂಕ: 11-06-2024

ಪತ್ರಿಕಾ ಪ್ರಕಟಣೆ

ಹುಬ್ಬಳ್ಳಿ-ಧಾರವಾಡ ಸ್ಥಳಿಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ-II ರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನುಗಳ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಮನವಿಯನ್ನು ಸಲ್ಲಿಸಿದ್ದು, ಜಮೀನಿನ ವಿವರಣೆ ಈ ಕೆಳಗಿನಂತೆ ಇರುತ್ತದೆ.

ಕ್ರ. ಸಂ.	ಅರ್ಜಿದಾರರ ಹೆಸರು	ಗ್ರಾಮ/ ಬ್ಲಾಕ್ ನಂ.	ಕ್ಷೇತ್ರ	ಮ.ಯೋ. ಪ-II ರಂತೆ ಹಾಲಿ ಉಪಯೋಗ	ಭೂ ಬದಲಾವಣೆಗೆ ಕೋರಿರುವ ಉದ್ದೇಶ	ಸಾರ್ವಜನಿಕ ಹಿತಾಸಕ್ತಿ
1	ಮ್ಯಾನೇಜಿಂಗ್ ಡೈರೆಕ್ಟರ್ ಕಿರ್ಲೋಸ್ಕರ್ ಎಲೆಕ್ಟ್ರಿಕಲ್ ಕಂಪನಿ ಲಿ.	ರಾಯನಾಳ 88ಬ, 88/ಪಿ/1 & 89	89ಎಕರೆ-23ಗುಂಟೆ ಪೈಕಿ ಮಧ್ಯಭಾಗದ 31ಎಕರೆ-24ಗುಂಟೆ	ಕೈಗಾರಿಕೆ	ವಸತಿ / ವಾಣಿಜ್ಯ	ವಸತಿ/ ವಾಣಿಜ್ಯ ಉದ್ದೇಶದ ನಿವೇಶನಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಾಟ ಮಾಡುವುದು ಎಂದು ತಿಳಿಸಿರುತ್ತಾರೆ.

ಪ್ರಸ್ತಾಪಿತ ಜಮೀನು ಮೆ॥ ಕಿರ್ಲೋಸ್ಕರ್ ಎಲೆಕ್ಟ್ರಿಕಲ್ ಕಂಪನಿ ಲಿ. ಇವರಿಗೆ ಮಾನ್ಯ ಸರ್ಕಾರದಿಂದ ಕೈಗಾರಿಕೆಗಾಗಿ ಮಂಜೂರಾಗಿರುತ್ತದೆ. ಸದರಿ ಭೂ ಬದಲಾವಣೆ ಮಾಡುವ ಪ್ರಕ್ರಿಯೆ ಕುರಿತು ಮಾನ್ಯ ಉಚ್ಚನ್ಯಾಯಾಲಯ ಧಾರವಾಡ ಪೀಠವು W.P.No.103465/2023 ಪ್ರಕಾರ ದಿನಾಂಕ: 30-01-2024 ರಂದು ಆದೇಶ ಹೊರಡಿಸಿರುತ್ತದೆ. ಸದರಿ ಜಮೀನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961ರ ಕಲಂ 14(ಎ) ರನ್ವಯ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕ ಆಕ್ಷೇಪಣೆ ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗಾಗಿ ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ - 580025 ಇವರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ಆಯುಕ್ತರು
ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ.

ವಾಸಾಸಂಇ/ಧಾರವಾಡ/38/ಅಡ್ವರ್ಟೋ/2024-25

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560020.

ಸಂಖ್ಯೆ: ಬೆಂಅಪ್ರಾ/ನಯೋಸ/CLU-23/538/2024-25 ದಿನಾಂಕ: 12-06-2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-ಎ ರ ಅಡಿಯಲ್ಲಿ ಈ ಕೆಳಕಂಡ ಜಮೀನುಗಳನ್ನು ಅರ್ಜಿದಾರರು **ಕೈಗಾರಿಕೆ (ಹೈಟೆಕ್)** ವಲಯದಿಂದ ವಸತಿ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾಯೋಜನೆ 2015 ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ. ವಿಶ್ವಾಸ್, ಅಜಯ್ ಹರಿಶಂಕರ್ ವರ್ಷ್ನೆ ಮತ್ತು ಇತರರು	ಪೂರ್ವ	ವರ್ತೂರು	ಸಿದ್ದಾಪುರ	83	3-36	ಕೈಗಾರಿಕೆ (ಹೈಟೆಕ್)	ವಸತಿ
2					84	3-37		
3					85	3-37		

ಷರಾ: ಈ ಜಮೀನುಗಳಲ್ಲಿ ವಸತಿ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ. ವಸತಿ ಕಟ್ಟಡ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಸತಿ ಕಟ್ಟಡ ಅಭಿವೃದ್ಧಿಯಿಂದ ಸುತ್ತ ಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು **'ಕೈಗಾರಿಕೆ (ಹೈಟೆಕ್) ವಲಯ'** ದಿಂದ **'ವಸತಿ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/- ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು

ನೆಲಮಂಗಲ ಯೋಜನಾ ಪ್ರಾಧಿಕಾರ
2ನೇ ಮುಖ್ಯರಸ್ತೆ, ಸದಾಶಿವನಗರ, ನೆಲಮಂಗಲ - 562123.
ದೂರವಾಣಿ: 9663046622 ಇ-ಮೇಲ್: nelamangala.pa@gmail.com

ಸಂಖ್ಯೆ: ನೆಯೋಪ್ರಾ/CLU/34/2023-24 ದಿನಾಂಕ: 13-03-2024

ಸಾರ್ವಜನಿಕ ಪ್ರಕಟಣೆ

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 134 ಬೆಂರುಪ್ರಾ 2006 ದಿನಾಂಕ: 13-02-2007 ರನ್ವಯ **ಬೆಂಗಳೂರು ಉತ್ತರ ತಾಲ್ಲೂಕು, ದಾಸನಪುರ ಹೋಬಳಿ, ಅವೇರಹಳ್ಳಿ** ಗ್ರಾಮವು **"ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶದ"** ವ್ಯಾಪ್ತಿಗೆ ಒಳಪಟ್ಟಿದ್ದು, ನೆಲಮಂಗಲ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ: ನಅಇ 150 ಬಿಎಂಆರ್ 2013, ದಿನಾಂಕ: 01-06-2015 ರಲ್ಲಿ ಅನುಮೋದನೆಗೊಂಡಿರುವ ಮಹಾಯೋಜನೆಯಲ್ಲಿ ಈ ಕೆಳಕಂಡ ಜಮೀನನ್ನು **"ವ್ಯವಸಾಯ"** ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ **ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ "ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಕೋರಿರುವಂತೆ **'ವ್ಯವಸಾಯ ವಲಯದಿಂದ ವಸತಿ'** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕಂದಾಯ ದಾಖಲಾತಿಗಳಂತೆ ಮಾಲೀಕರ ಹೆಸರು ಶ್ರೀ / ಶ್ರೀಮತಿ	ತಾಲ್ಲೂಕು / ಹೋಬಳಿ / ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗುಂ)	ಅನುಮೋದಿತ ಮಹಾಯೋಜನೆಯ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಸಿ. ಕೃಷ್ಣಪ್ಪ ಬಿನ್ ಚಿಕ್ಕಣ್ಣ	ಬೆಂಗಳೂರು ಉತ್ತರ/ ದಾಸನಪುರ/ ಅವೇರಹಳ್ಳಿ	86	07-34	ವ್ಯವಸಾಯ	ವಸತಿ
		ಒಟ್ಟು	07-34		

ಷರಾ:- ಪ್ರಶ್ನಿತ ಸರ್ವೆ ನಂಬರ್ ಜಮೀನಿನ ಪರಿಸರದಲ್ಲಿ ವಸತಿ ಬೆಳವಣಿಗೆಗಳು ಬಂದಿದ್ದು, ಪ್ರಶ್ನಿತ ಜಮೀನಿನಲ್ಲಿ ವಸತಿ ವಿನ್ಯಾಸ ನಕ್ಷೆ ಅನುಮೋದನೆ ಪಡೆದು ಅಭಿವೃದ್ಧಿ ಪಡಿಸುವುದರಿಂದ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸಿಗುತ್ತದೆ. ಹಾಗೂ ಯೋಜನಾ ಬದ್ಧ ಬೆಳವಣಿಗೆಯಾಗುವುದು ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ"** ವಲಯದಿಂದ **"ವಸತಿ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/- ಜಂಟಿ ನಿರ್ದೇಶಕರು
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ-ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ.

ವಾಸಾಸಂಇ/ವಾ.ಪ್ರ/288/ಅಡ್ವರ್ಟೋ/2024-25

ದರ್ಶನ್ ಅಂದರ್

← ಮೊದಲಪುಟದಿಂದ

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಟಿ ರಮ್ಯಾ, ಜಗ್ಗೇಶ್ ಸೇರಿದಂತೆ ಕೆಲವೇ ಕೆಲವು ಬೆರಳೆಣಿಗೆ ಮಂದಿ ಮೌನಮುರಿದರೆ ಬಹುತೇಕರು ಮೌನವಾಗಿದ್ದಾರೆ. ಬಂಧನವಾಗುತ್ತಿದ್ದಂತೆ ರಮ್ಯಾ ಅವರು 'ಐಪಿಸಿ ಸೆಕ್ಷನ್ ಪ್ರಕಾರ, ಇವೆಲ್ಲವೂ ದೊಡ್ಡ ಅಪರಾಧವಾಗಿದ್ದು, ಐಪಿಸಿ ಸೆಕ್ಷನ್ 302ರ ಅಡಿಯಲ್ಲಿ ದರ್ಶನ್‌ಗೆ ಜೀವಾವಧಿ ಶಿಕ್ಷೆ ಆಗುವ ಸಾಧ್ಯತೆಯಿದೆ. ಈ ಶಿಕ್ಷೆಯಲ್ಲಿ ಸುಮಾರು ಏಳು ವರ್ಷಗಳಿಂದ ಹದಿನಾಲ್ಕು ವರ್ಷಗಳವರೆಗೆ ಶಿಕ್ಷೆಯಾಗ ಬಹುದು' ಎಂದಿದ್ದ ಟ್ವೀಟ್‌ಗೆ ರೀ ಟ್ವೀಟ್ ಮಾಡಿದ್ದರು.

ಇದೀಗ ನಟ ಜಗ್ಗೇಶ್ ಕೂಡ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪರೋಕ್ಷವಾಗಿ ರಿಯಾಕ್ಟ್ ಮಾಡಿದ್ದಾರೆ. 'ಸರ್ವ ಆತ್ಮಾನೇನ ಬ್ರಹ್ಮ' ಸರ್ವ ಜೀವಿಯಲ್ಲಿ ದೇವರಿದ್ದಾನೆ. ಯಾರನ್ನೂ ಕೊಲ್ಲುವ ಹಕ್ಕು ಇಲ್ಲ. ಕರ್ಮ ಜೀವನನ ಹಿಂದೆ ಹಿಂಬಾಲಿಸುತ್ತದೆ. ಅವನ ಪಾಪಕರ್ಮ ಅವನ ಸುಡುತ್ತದೆ. ಕಲಿಯುಗದಲ್ಲಿ ದೇವರು ಕಲ್ಲಲ್ಲ, ಎಲ್ಲ ಕರ್ಮಕ್ಕೂ ತಕ್ಷಣ ಫಲಿತಾಂಶ ಉಂಟು. ರಾಮನಾಗು, ರಾಮಣನಾದರೆ ಅಂತ್ಯ ಎಂದಿದೆ ಸನಾತನ ಕೃತಿ, ಮದಕ್ಕೆ ಕಾರುಣ್ಯದ ಅರಿವಿಲ್ಲ' ಎಂದು ಜಗ್ಗೇಶ್ ಕರ್ಮದ ಫಲದ ಕುರಿತಂತೆ ಮಾರ್ಮಿಕವಾಗಿ ಟ್ವೀಟ್ ಮಾಡಿದ್ದಾರೆ.

ದರ್ಶನ್ ಬಗ್ಗೆ ಜಗ್ಗೇಶ್‌ಗೆ ಮುನಿಸು: ಜಗ್ಗೇಶ್ ಕೂಡ ತಮಗೆದುರಾದ ಕೆಲವು ಸನ್ನಿವೇಶಗಳಿಂದ ಬೇಸತ್ತಿದ್ದರು. ನಂಜನಗೂಡಿನಲ್ಲಿ ತೋತಾಪುರಿ ಚಿತ್ರೀಕರಣದಲ್ಲಿ ಜಗ್ಗೇಶ್ ಪಾಲ್ಗೊಂಡಿದ್ದಾರೆ ಎಂದು ತಿಳಿದ ದರ್ಶನ್ ಅಭಿಮಾನಿಗಳು ಸ್ಥಳಕ್ಕೆ ಧಾವಿಸಿ ಜಗ್ಗೇಶ್‌ಗೆ ಮುತ್ತಿಗೆ ಹಾಕಿ ತಮ್ಮ ನೆಚ್ಚಿನ ನಟನ ವಿರುದ್ಧ ಮಾತನಾಡಿದ್ದಕ್ಕೆ ಕ್ಷಮೆ ಕೇಳುವಂತೆ ಒತ್ತಾಯಿಸಿದ್ದರು. ಇದರಿಂದ ಜಗ್ಗೇಶ್ ಸಾಕಷ್ಟು ನೊಂದಿದ್ದರು. ಈ ಬಗ್ಗೆ ದರ್ಶನ್ ತಕ್ಷಣಕ್ಕೆ ಪ್ರತಿಕ್ರಿಯೆ ನೀಡಬಹುದಿತ್ತು ಅಥವಾ ತಮ್ಮ ಅಭಿಮಾನಿಗಳಿಗೆ ತಿಳಿ ಹೇಳಬಹುದಿತ್ತು. ಆದರೆ ಆ ಕ್ಷಣಕ್ಕೆ ಅದ್ಯಾವುದನ್ನೂ ದರ್ಶನ್ ಮಾಡಲಿಲ್ಲ. ಇದರಿಂದ ಜಗ್ಗೇಶ್ ಬೇಸರಗೊಂಡಿದ್ದರು, ಸೊಷಿಯಲ್ ಮೀಡಿಯಾದಲ್ಲಿ ನೊಂದು ನುಡಿದಿದ್ದರು.

ಕಮಿಷನ್ ದಂಧೆ ಕೈವಾಡ

← ಮೊದಲಪುಟದಿಂದ

ಹಣದ ವಹಿವಾಟು ನಡೆಸುವ ಮೂಲಕ ತಮ್ಮ ಸಿಬಿಲ್ ಸ್ಕೋರ್ ಹೆಚ್ಚಿಸಿಕೊಳ್ಳುವುದು ಹಾಗೂ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡುವುದು ಅನೇಕರ ಲೆಕ್ಕಾಚಾರವಾಗಿತ್ತು. ನಿಗಮದ 97 ಕೋಟಿ ನಕಲಿ ಬ್ಯಾಂಕುಗಳಿಗೆ ವರ್ಗಾವಣೆ ಮಾಡಿದ್ದ ಪ್ರಕರಣದಲ್ಲಿ ಸತ್ಯನಾರಾಯಣ ವರ್ಮ ಅವರನ್ನು ತನಿಖಾಧಿಕಾರಿಗಳು ಬಂಧಿಸಿದ್ದು, ವಿಚಾರಣೆ ನಡೆಸಿದ್ದಾರೆ. 97 ಕೋಟಿ ರು. ಹಣ ವರ್ಗಾವಣೆಗೆ ಐದು ಕೋಟಿ ರು. ಕಮಿಷನ್ ನೀಡುವ ಭರವಸೆ ನೀಡಿ ನಾಲ್ಕು ಕೋಟಿ ಪಾವತಿಸಲಾಗಿತ್ತು ಎಂದು ಮೂಲಗಳು ತಿಳಿಸಿವೆ.

ಆಡಳಿತ ವೈದ್ಯಾಧಿಕಾರಿಗಳ ಕಛೇರಿ,
ಶ್ರೀ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆ,
ಅರಸೀಕೆರೆ, ಹಾಸನ ಜಿಲ್ಲೆ-573103

ಸಂ/ಜಸಾಆ/ಅ/ಟೆಂಡರ್/04/2024-25 ದಿನಾಂಕ:10.06.2024

ಅಲ್ಪಾವಧಿ ಇ-ಪ್ರಕ್ಯೂರ್ ಮೆಂಟ್ ಟೆಂಡರ್ ಪ್ರಕಟಣೆ

2024-25,2025-26ನೇಸಾಲಿಗೆ ಔಷಧಿಗಳು, ಪ್ರಯೋಗಶಾಲಾ ರಸಾಯನಿಕಗಳು ಹಾಗೂ ಎಕ್ಸ್-ರೇ ಫಿಲಂಗಳನ್ನು ಸರಬರಾಜು ಮಾಡಲು ವಿವಿಧ ಸಂಸ್ಥೆಗಳಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. 01.ಟೆಂಡರ್ ಅನ್ನು ಸಲ್ಲಿಸುವ ದಿನಾಂಕ:10/06/2024 ರಿಂದ ದಿ:24/06/2024 ರ ವರೆಗೆ 02.ಟೆಂಡರ್ ಫಾರಂನ್ನು ಇ-ಪ್ರಕ್ಯೂರ್ ಮೆಂಟ್ ಮೂಲಕ ಆನ್ ಲೈನ್ ನಲ್ಲಿ https://kppp.karnataka.gov.in/ ಈ ವೆಬ್ಸೈಟ್ ಮುಖಾಂತರ ಅರ್ಜಿ ಸಲ್ಲಿಸುವುದು. 03.ಇ-ಪ್ರಕ್ಯೂರ್ ಮೆಂಟ್ ಟೆಂಡರ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:24/06/2024 ರಂದು ಸಂಜೆ 04:30 ಗಂಟೆಗೆ 04.ದಿನಾಂಕ:26/06/2024 ರಂದು ಬೆಳಗ್ಗೆ 11:30 ಗಂಟೆಗೆ ತಾಂತ್ರಿಕ ಲಕೋಟೆಯನ್ನು ತೆರೆಯಲಾಗುವುದು. 05.ದಿನಾಂಕ:28/06/2024 ರಂದು ಬೆಳಗ್ಗೆ 11:30 ಆರ್ಥಿಕ ಲಕೋಟೆಯನ್ನು ತೆರೆಯಲಾಗುವುದು. 06.ಹೆಚ್ಚಿನ ಮಾಹಿತಿಯನ್ನು ಕಚೇರಿ ವೇಳೆಯಲ್ಲಿ ಪಡೆಯಬಹುದು. ಮೋ.ನಂ.9845280007 ಕ್ರ.ಸಂ.1)ವಿವರ:ಔಷಧಿಗಳು, ಪ್ರಯೋಗಶಾಲಾ ರಸಾಯನಿಕಗಳು ಹಾಗೂ ಎಕ್ಸ್-ರೇ ಫಿಲಂಗಳು ಅಂದಾಜು ಮೊತ್ತ ರೂ. 20,00000/- ಇ.ಎಂ.ಡಿ ರೂ.50,000/-

ಸಹಿ/-ಆಡಳಿತ ವೈದ್ಯಾಧಿಕಾರಿಗಳು, ಶ್ರೀ ಜಯಚಾಮರಾಜೇಂದ್ರ ಸಾರ್ವಜನಿಕ ಆಸ್ಪತ್ರೆ, ಅರಸೀಕೆರೆ, ಹಾಸನ ಜಿಲ್ಲೆ

ವಾಸಾಸಂಇ/ಹಿಸನಿ/ಹಾಸನ/42/ಕೆಎಸ್‌ಎಂಸಿಎ/2024-25

ಅನ್ಯಕೋಮಿನ ಯುವಕರ ಜತೆ ಹಿಂದೂ ಯುವತಿ ಸುತ್ತಾಟ: ಸೆರೆ

ಮಂಗಳೂರು: ಇಬ್ಬರು ಮುಸ್ಲಿಂ ಯುವಕರ ಜೊತೆ ಹಿಂದೂ ಯುವತಿಯೊಬ್ಬಳು ಸಾರ್ವಜನಿಕರ ಕೈಗೆ ಸಿಕ್ಕಿಬಿದ್ದಿದ್ದು, ಅವರನ್ನು ಪೊಲೀಸರ ವಶಕ್ಕೆ ಒಪ್ಪಿಸಿದ ಘಟನೆ ಮುಕ್ಕದಲ್ಲಿ ನಡೆದಿದೆ.

- **ಸಾರ್ವಜನಿಕರಿಂದ ಪೊಲೀಸರಿಗೆ ಮಾಹಿತಿ**
- **ಪದೇ ಪದೇ ಇಂತಹ ಘಟನೆ: ಜನರ ಆಕ್ರೋಶ**

ಮುಕ್ಕ ಸಮೀಪ ಒಂದು ಕಾರಿನಲ್ಲಿ ಇಬ್ಬರು ಅನ್ಯಕೋಮಿನ ಯುವಕರ ಜೊತೆ ಹಿಂದೂ ಯುವತಿಯೊಬ್ಬಳು ಸ್ಕೂಲ್‌ಬಸ್ ಡ್ರೈವರ್ ಜೊತೆ ಜಗಳವಾಡುತ್ತಿದ್ದಾಗ, ಸಾರ್ವಜನಿಕರು ಆಕೆಯನ್ನು ಪ್ರಶ್ನಿಸುತ್ತಿದ್ದಂತೆ ತಕ್ಷಣ ಅಲ್ಲಿಂದ ಪರಾರಿಯಾಗಲು ಯತ್ನಿಸಿದರು. ಆದರೆ ಕಾರು ಕೈಕೊಟ್ಟಿದೆ. ಸ್ಥಳದಲ್ಲಿ ಜನ ಸೇರುತ್ತಿದ್ದಂತೆ ಇದು ಅನ್ಯಕೋಮಿನ ಜೋಡಿ ಎಂಬುದು ಬೆಳಕಿಗೆ ಬಂದಿದೆ.

ಬಿ.ಎಂ.ಡಬ್ಲ್ಯು ಕಾರಿಗೆ ಫುಲ್ ಟಿಂಟ್ ಅಳವಡಿಸಿದ್ದು, ಕಾರಿನ ಹಿಂದೆ ನಂಬರ್ ಪ್ಲೇಟ್ ಅಳವಡಿಸಲಾಗಿದೆ. ಈ ರೀತಿ ಅನ್ಯಕೋಮಿನ ಜೋಡಿ ಸುತ್ತಾಡುತ್ತಿರುವುದು ಕಂಡ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಪೊಲೀಸರು ಆಗಮಿಸಿ ವಿದ್ಯಾರ್ಥಿಗಳನ್ನು ವಶಕ್ಕೆ ಪಡೆದಿದ್ದಾರೆ. ಪದೇ ಪದೇ ಇಂತಹ ಘಟನೆ ನಡೆಯುತ್ತಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿ ಹೆಚ್ಚುತ್ತಿರುವ ಡೆಂಘೀ

ಚಿಕ್ಕಮಗಳೂರು: ನಗರದಲ್ಲಿ ದಿನದಿಂದ ದಿನಕ್ಕೆ ಡೆಂಘೀ ಪ್ರಕರಣಗಳು ಹೆಚ್ಚುತ್ತಿದ್ದು ಇಂದು ಜಿಲ್ಲಾಸ್ಪತ್ರೆಗೆ ಬಿಜೆಪಿ ಶಾಸಕ ಸಿ.ಟಿ.ರವಿ ಮತ್ತು ಬಿಜೆಪಿ ಸಂಸದ ಕೋಟಾ ಶ್ರೀನಿವಾಸ್ ಪೂಜಾರಿ ಭೇಟಿ ನೀಡಿ, ರೋಗಿಗಳ ಆರೋಗ್ಯ ವಿಚಾರಿಸಿದರು. ನಂತರ ಜಿಲ್ಲಾಸ್ಪತ್ರೆಯ ಸ್ವಚ್ಛತೆ ಹಾಗೂ ವೈದ್ಯರ ಕಾರ್ಯನಿರ್ವಹಣೆ ಬಗ್ಗೆ ಮಾಹಿತಿ ಪಡೆದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಸಿ.ಟಿ.ರವಿ, ಹಳ್ಳಿಗಳಲ್ಲಿ ಕಳೆದ 10-12 ದಿನಗಳಿಂದ ವ್ಯಾಪಕವಾಗಿ ಡೆಂಘೀಪ್ರಕರಣಗಳು ಹೆಚ್ಚಾಗುತ್ತಿವೆ. ಈ ಬಗ್ಗೆ ಅಧಿಕಾರಿಗಳೊಂದಿಗೆ ಮಾತನಾಡಿದ್ದೇನೆ. ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಲ್ಲಿ ಡೆಂಘೀ ರೋಗಿಗಳಿದ್ದಾರೆ. ಆರೋಗ್ಯ ಇಲಾಖೆ, ಜಿಲ್ಲಾಡಳಿತ ಯುದ್ದೋಪಾದಿಯಲ್ಲಿ ಕ್ರಮ ಜರುಗಿಸಬೇಕು. ಲಾರ್ವ ಪತ್ತೆ ಹಚ್ಚಿ ನಾಶಪಡಿಸುವ ಕೆಲಸ ಆಗಬೇಕು. ಮನೆ ಮನೆಗೆ ತೆರಳಿ ಲಾರ್ವ ಪರೀಕ್ಷೆ ಮಾಡಬೇಕು. ಜನರಿಗೆ ಸೂಕ್ತ ತಿಳುವಳಿಕೆ ನೀಡಬೇಕು ಎಂದರು.

ಚಿಕ್ಕಮಗಳೂರಿನಲ್ಲಿ ಡೆಂಘೀ ಪ್ರಕರಣ ಹೆಚ್ಚಿರುವ ಹಿನ್ನೆಲೆಯಲ್ಲಿ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಬಿಜೆಪಿ ನಾಯಕ ಸಿ.ಟಿ ರವಿ ಮೊದಲಾದವರು ಆಸ್ಪತ್ರೆಗೆ ಭೇಟಿ ನೀಡಿ ರೋಗಿಗಳ ಆರೋಗ್ಯ ವಿಚಾರಿಸಿದರು.

ನಕಲಿ ಗುಟ್ಕಾ: 9 ಅಂತಾರಾಜ್ಯ ಆರೋಪಿಗಳ ಬಂಧನ

ಮುಧೋಳ: ಗುಟ್ಕಾ ಹಾಗೂ ತಂಬಾಕು ಉತ್ಪನ್ನಗಳನ್ನು ನಕಲಿಯಾಗಿ ತಯಾರಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡುತ್ತಿದ್ದ ಜಾಲವನ್ನು ಪೊಲೀಸರು ಬಯಲಿಗೆಳೆದಿದ್ದಾರೆ. ಈ ಸಂಬಂಧ ಅಂತಾರಾಜ್ಯದ 9 ಆರೋಪಿಗಳನ್ನು ಬಂಧಿಸಿ, ಕೋಟ್ಯಂತರ ರು. ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತರನ್ನು ದೇವದುರ್ಗದ ಮಹಮ್ಮದ್ ವಶೀಂ, ಹೈದರಾಬಾದಿನ ಮುನೀರ್, ಹಿಮಾಯತ್, ದೆಹಲಿಯ ಮಹಮ್ಮದ್ ಅಲಿ, ನಿಪ್ಪಾಣಿಯ ವಿಕಾಸ ಚವ್ಹಾಣ್, ಸಂತೋಷ ಬಳ್ಳೊಳ್ಳಿ, ಬೆಳಗಾವಿಯ ಜಹೀರ ಅಬ್ಬಾಸ್, ನದೀಮ್ ಹಾಗೂ ಇಕ್ಬಾಲ್ ಎಂದು ಗುರುತಿಸಲಾಗಿದೆ.

ಆರೋಪಿಗಳು ಆರ್‌ಎಂಡಿ ತಂಬಾಕು ಉತ್ಪನ್ನವನ್ನು ನಕಲಿಯಾಗಿ ತಯಾರಿಸುತ್ತಿದ್ದರು. ನಕಲಿ ಗುಟ್ಕಾ ತಯಾರಿಕೆಗೆ ಬಳಕೆ ಮಾಡುತ್ತಿದ್ದ ಮೂರು ಯಂತ್ರಗಳು, ಖಾಲಿ ಪ್ಯಾಕೆಟ್ ಸೇರಿ ಕೋಟ್ಯಂತರ ರೂ.ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಸಿಪಿಐ ಆರ್.ಆರ್. ಪಾಟೀಲ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಪಿಎಸ್‌ಐಗಳಾದ ಅಜಿತಕುಮಾರ್ ಹೊಸಮನಿ, ರಮೇಶ್ ಪಾಟೀಲ, ರಾಕೇಶ್ ಬಗಲಿ ಪೊಲೀಸ್ ಸಿಬ್ಬಂದಿ ಆರ್.ಬಿ.ಕಟಗೇರಿ, ಬೀರಪ್ಪ ಕುರಿ, ಹನಮಂತ ಮಾದರ್, ಮಾರುತಿ ದಳವಾಯಿ, ದಾದಾಪೀರ್ ಅತ್ರಾವತ, ಎಚ್.ವೈ.ಕೋಳಿ, ಎನ್.ವೈ. ಐದಮನಿ ಅವರ ತಂಡ ಆರೋಪಿಗಳ ಬಂಧನ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿತ್ತು.

ಸಮಾಚಾರ ಸಣ್ಣದಲ್ಲ

ಬೀಟೆ, ಹರಳುಕಲ್ಲು ಸಾಗಣೆ: ಮೂವರ ಸೆರೆ

ಕುಶಾಲನಗರ: ಕುಶಾಲನಗರ ಕಡೆಯಿಂದ ಹುಣಸೂರು ಕಡೆಗೆ ವಾಹನದಲ್ಲಿ ಅಕ್ರಮವಾಗಿ ಹರಳುಕಲ್ಲು ಸಾಗಿಸುತ್ತಿದ್ದ ವಾಹನವನ್ನು ಸಿನಿಮೀಯ ರೀತಿಯಲ್ಲಿ ಬೆನ್ನಟ್ಟಿ ಅರಣ್ಯ ಇಲಾಖೆ ಅಧಿಕಾರಿಗಳು ಮೂವರನ್ನು ಬಂಧಿಸಿದ್ದಾರೆ. ವಲಯ ಅರಣ್ಯಾಧಿಕಾರಿ ರತನ್‌ಕುಮಾರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿದ ಸಿಬ್ಬಂದಿ 2,495 ಕೆಜಿ ಹರಳುಕಲ್ಲು ವಶ ಪಡಿಸಿಕೊಂಡಿದ್ದಾರೆ. ವಾಹನ ಚಾಲಕ ಅರಣ್ಯ ತಪಾಸಣಾ ಕೇಂದ್ರದ ಸಿಬ್ಬಂದಿ ನಿಲ್ಲಿಸುವಂತೆ ಸೂಚನೆ ನೀಡಿದರೂ ವೇಗವಾಗಿ ಚಾಲನೆ ಮಾಡಿಕೊಂಡ ಹೋದಾಗ ಆರ್.ಎಫ್.ಒ. ರತನ್ ಕುಮಾರ್ ಹಿಂಬಾಲಿಸಿ ವಾಹನವನ್ನು ತಡೆದು, ಮೂವರನ್ನು ಬಂಧಿಸಿದರು.

ಎಚ್‌ಎಸ್‌ಆರ್‌ಪಿ; ಅವಧಿ ವಿಸ್ತರಣೆ

ಬೆಂಗಳೂರು: ರಾಜ್ಯದಲ್ಲಿ ಎಲ್ಲ ಮಾದರಿಯ ವಾಹನಗಳಿಗೆ ಅತಿ ಸುರಕ್ಷಿತ ನೋಂದಣಿ ಫಲಕ (ಎಚ್‌ಎಸ್‌ಆರ್‌ಪಿ) ಕಡ್ಡಾಯವಾಗಿ ಅಳವಡಿಸದ ವಾಹನ ಮಾಲೀಕರ ವಿರುದ್ಧ ಕಠಿಣ ಕ್ರಮ ಕೈಗೊಳ್ಳದಂತೆ ಮೇ 21ರಂದು ಹೊರಡಿಸಿದ್ದ ಆದೇಶವನ್ನು ಹೈಕೋರ್ಟ್ ಜುಲೈ ನಾಲ್ಕರವರೆಗೂ ವಿಸ್ತರಿಸಿದೆ. ಅಲ್ಲದೆ, ಕಠಿಣ ಕ್ರಮ ಕೈಗೊಳ್ಳುವ ಕುರಿತ ಅವಧಿ ವಿಸ್ತರಿಸುವುದಕ್ಕೆ ರಾಜ್ಯ ಸರಕಾರ ಸ್ವತಂತ್ರವಾಗಿದೆ ಎಂದು ತಿಳಿಸಿದೆ. ಎಚ್‌ಎಸ್‌ಆರ್‌ಪಿ ಅಳವಡಿಕೆಗೆ ವಿಧಿಸಲಾಗಿರುವ ಗಡುವನ್ನು ಮೇ 31ರವರೆಗೆ ವಿಸ್ತರಿಸಲು ಸರಕಾರಕ್ಕೆ ನಿರ್ದೇಶಿಸುವಂತೆ ಕೋರಿ ಎಚ್‌ಎಸ್‌ಆರ್‌ಪಿ ತಯಾರಿಕಾ ಕಂಪನಿ ಬಿಎನ್‌ಡಿ ಎನರ್ಜಿ ಸಂಸ್ಥೆ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಮತ್ತು ನ್ಯಾಯಮೂರ್ತಿ ಕೆ.ವಿ. ಅರವಿಂದ್ ಅವರಿದ್ದ ವಿಭಾಗೀಯ ಪೀಠ ವಿಚಾರಣೆ ನಡೆಸಿತು. ವಿಚಾರಣೆಯಲ್ಲಿ ಅರ್ಜಿದಾರರ ಪರ ವಕೀಲರು, ಕಳೆದ ವಿಚಾರಣೆ ವೇಳೆ ನೀಡಿದ್ದ ಆದೇಶ ಬುಧವಾರಕ್ಕೆ ಅಂತ್ಯವಾಗಲಿದೆ. ಇದೀಗ ಅವಧಿ ವಿಸ್ತರಣೆ ಮಾಡಬೇಕು. ಅಲ್ಲದೆ, ಅವಧಿ ವಿಸ್ತರಣೆ ಮಾಡುವ ಕುರಿತ ನಿರ್ಧಾರವನ್ನು ನ್ಯಾಯಪೀಠದ ಮುಂದೆ ಪ್ರಸ್ತುತಪಡಿಸಬಹುದು ಎಂದರು. ಸರಕಾರದ ಪರ ಹಾಜರಾಗಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿಕ್ರಮ್ ಹುಯಿಲಗೋಳ, ಎಚ್‌ಎಸ್‌ಆರ್‌ಪಿ ನಂಬರ್ ಫಲಕಗಳ ಕಡ್ಡಾಯದ ಅವಧಿಯನ್ನು ವಿಸ್ತರಿಸಲು ರಾಜ್ಯ ಸರಕಾರ ಚಿಂತನೆ ನಡೆಸಿದೆ. ಈ ಸಂಬಂಧ ಒಂದು ವಾರದಲ್ಲಿ ಅಧಿಸೂಚನೆ ಹೊರಡಿಸುವುದಾಗಿ ತಿಳಿಸಿದೆ. ಹೈಕೋರ್ಟ್ ಅನುಮತಿ ನೀಡಿದಲ್ಲಿ ಸರಕಾರ ಅವಧಿ ವಿಸ್ತರಣೆ ಮಾಡಲಿದೆ ಎಂದರು.

ಹಲ್ಲೆ: ಡಿವೈಎಸ್ಪಿ ಸೇರಿ ನಾಲ್ವರ ವಿರುದ್ಧ ದೂರು

ತುಮಕೂರು: ತನಿಖೆ ನೆಪದಲ್ಲಿ ಠಾಣೆಗೆ ಕರೆತಂದು ಹಲ್ಲೆ ನಡೆಸಿದ ಆರೋಪದ ಮೇರೆಗೆ ನಾಲ್ವರು ಪೊಲೀಸರ ವಿರುದ್ಧ ವಿರುದ್ಧ ಕುಣಿಗಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕುಣಿಗಲ್ ಡಿವೈಎಸ್ಪಿ ಓಂಪ್ರಕಾಶ್, ಅಮೃತೂರು ಠಾಣೆ ಇನ್ಸ್ಪೆಕ್ಟರ್ ಮಾಧವ ನಾಯಕ್, ಸಬ್‌ಇನ್ಸ್‌ಪೆಕ್ಟರ್ ಶವಂತ್‌ಗೌಡ, ಹೆಡ್ ಕಾನ್‌ಸ್ಟೇಬಲ್ ದಯಾನಂದ್ ವಿರುದ್ಧ ಹೊನ್ನಮಾಚನಹಳ್ಳಿ ಗ್ರಾಮ ಪಂಚಾಯಿತಿ ವಾಟರ್‌ಮ್ಯಾನ್ ಪಿ.ಜಿ.ಗಂಗಾಧರ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಲಾಗಿದೆ.

ಪ್ರಕರಣದ ವಿವರ: ಮಾರ್ಚ್ 21ರಂದು ವಾಟರ್ ಮ್ಯಾನ್ ಕೆಲಸಕ್ಕೆ ಹೋಗುವಾಗ ರಾಘವನ ಹೊಸೂರು ಕ್ರಾಸ್ ಬಳಿ ಸಬ್‌ಇನ್ಸ್‌ಪೆಕ್ಟರ್ ಶವಂತ್ ಗೌಡ, ಹೆಡ್ ಕಾನ್‌ಸ್ಟೇಬಲ್ ದಯಾನಂದ್ ತಮ್ಮನ್ನು ತಡೆದು, ಪ್ರಕರಣವೊಂದರ ಸಂಬಂಧ ತನಿಖೆ ನಡೆಸಬೇಕಿದೆ ಎಂದು ಕುಣಿಗಲ್ ಠಾಣೆಗೆ ಕರೆದೊಯ್ದರು. ನಂತರ ಅಲ್ಲಿ ಎಲ್ಲರೂ ಸೇರಿ ಹೊಡೆದಿದ್ದಾರೆ. ಹಲ್ಲೆಯ ನಂತರ ಅಮೃತೂರು ಠಾಣೆಗೆ ಕರೆದುಕೊಂಡು ಬಂದು ಸಂಜೆ 5.30 ಗಂಟೆವರೆಗೆ ವಶದಲ್ಲಿ ಇಟ್ಟುಕೊಂಡಿದ್ದರು ಎಂದು ಗಂಗಾಧರ್ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಬಕ್ರೀದ್: ಜಾನುವಾರು ಅಕ್ರಮ ಸಾಗಣೆಗೆ ತಡೆ

ವಿಜಯಪುರ: ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಅಕ್ರಮವಾಗಿ ಜಾನುವಾರು ಸಾಗಿಸುವುದು ಹಾಗೂ ಅಕ್ರಮವಾಗಿ ಜಾನುವಾರು ಹತ್ಯೆ ಮಾಡುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತ ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ತಾಕೀತು ಮಾಡಿದೆ. ಡಿಸಿ ಅಧ್ಯಕ್ಷತೆಯಲ್ಲಿ ಜರುಗಿದ ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಅನಧಿಕೃತವಾಗಿ ಜಾನುವಾರುಗಳ ಸಾಗಾಟ ಹಾಗೂ ವಧೆ ತಡೆಗಟ್ಟುವ ಪೂರ್ವಸಿದ್ಧತಾ ಸಭೆಯಲ್ಲಿ ಈ ಸೂಚನೆ ನೀಡಿದ ಅವರು, ಅನಧಿಕೃತವಾಗಿ ಜಾನುವಾರಗಳ ಸಾಗಿಸುವ ವಾಹನಗಳ ನೋಂದಣಿ ರದ್ದುಪಡಿಸಬೇಕೆಂದು ಸಾರಿಗೆ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಲೋಕಸಭೆಯಲ್ಲಿ ಸೋತ ಶಾಸಕರಿಗೆ ಸಕಾಲದಲ್ಲಿ ಶಿಕ್ಷೆ

ಕಾಂಗ್ರೆಸ್‌ನಲ್ಲಿ ನಿಲ್ಲದ ಚರ್ಚೆ, ಒಕ್ಕಲಿಗ ಪ್ರತಿನಿಧಿಗಳ ಮೇಲೆ ಬೇಸರ

ಶಿವಕುಮಾರ್ ಬೆಳ್ಳಿತಟ್ಟೆ ಬೆಂಗಳೂರು

ಲೋಕಸಭಾ ಚುನಾವಣೆಯಲ್ಲಿ ಆಗಿರುವ ನಿರಾಶೆಯಿಂದ ಕಾಂಗ್ರೆಸ್ ಇನ್ನೂ ಪೂರ್ಣ ಪ್ರಮಾಣದಲ್ಲಿ ಹೊರಬಂದಂತೆ ಕಾಣುತ್ತಿಲ್ಲ. ಅದು ಅಷ್ಟು ಸುಲಭವೂ ಅಲ್ಲ. ಏಕೆಂದರೆ, 19 ಸ್ಥಾನಗಳನ್ನು ಗೆಲ್ಲುವ ಗುರಿ ಹೊಂದಿದ್ದ ಕಾಂಗ್ರೆಸ್‌ಗೆ 9ಕ್ಕೆ ಸುಸ್ತಾಗಿರುವ ನೋವು ಇನ್ನೂ ಕಾಡುತ್ತಿದೆ. ಪಕ್ಷದ ವರಿಷ್ಠರಾದ ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ವ್ಯಕ್ತಪಡಿಸಿದ ಅತೃಪ್ತಿಯಿಂದಾದ



ಬೇಸರದಿಂದ ರಾಜ್ಯ ನಾಯಕರು ಇನ್ನೂ ಹೊರಬಂದಿಲ್ಲ. ಹೀಗಾಗಿ ರಾಜ್ಯ ನಾಯಕರು ಪಕ್ಷದ ಸೋಲಿಗೆ ನೈಜ ಕಾರಣವೇನು, ಎಲ್ಲಿ ಯಾವ ಜಾತಿ, ಜನಾಂಗಗಳ ಮತಗಳು ಕೈ ತಪ್ಪಿವೆ, ಯಾವ ಕಾರಣಕ್ಕೆ ಕೈ ತಪ್ಪಿವೆ ಎನ್ನುವ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಚರ್ಚೆ ನಡೆಸುತ್ತಿದ್ದಾರೆ. ಏಕೆಂದರೆ, ಚುನಾವಣೆ ನಂತರದ ಅವಲೋಕನದಿಂದ ಜೆಡಿಎಸ್ ಮತಗಳು ಬಿಜೆಪಿ ಕಡೆ ವಾಲಿದ್ದರಿಂದ ಕಾಂಗ್ರೆಸ್‌ಗೆ ನಷ್ಟವಾಗಿದೆ ಎನ್ನುವುದು ಸ್ಪಷ್ಟವಾಗಿದೆ. ಅಂದರೆ ಮೇಲ್ನೋಟಕ್ಕೆ ಒಕ್ಕಲಿಗ ಸಮುದಾಯದ ಮತಗಳು ಕೈ ತಪ್ಪಿರುವಂತೆ ಕಾಣುತ್ತಿದೆ. ಹಾಗಾದರೆ ಎಲ್ಲಾ ಒಕ್ಕಲಿಗ ಸಮುದಾಯದ ಮತಗಳೂ ಜೆಡಿಎಸ್ ಜತೆಗೇ ಹೋಗಿವೆಯೇ ಕಾಂಗ್ರೆಸ್‌ನಲ್ಲಿರುವ ಒಕ್ಕಲಿಗ ಸಮುದಾಯದ ಮತಗಳು ಸಂಪೂರ್ಣವಾಗಿ ಕೈ ತಪ್ಪಿವೆಯೇ ಎನ್ನುವ ಗಂಭೀರ ಚರ್ಚೆ ಕಾಂಗ್ರೆಸ್ ನಾಯಕರ ಮಧ್ಯೆ ಶುರುವಾಗಿದೆ ಎಂದು ಮೂಲಗಳು ಶುರುವಾಗಿದೆ.

ವಿಶೇಷವಾಗಿ 6 ಕ್ಕೂ ಒಕ್ಕಲಿಗರ ಬಾಹುಳ್ಯ ಕ್ಷೇತ್ರಗಳಲ್ಲಿ ಒಕ್ಕಲಿಗ ಶಾಸಕರು, ವಿಧಾನಪರಿಷತ್ ಸದಸ್ಯರಿದ್ದಾಗೂ ಅದೇ ಸಮುದಾಯದ ಕಾಂಗ್ರೆಸ್ ಅಭ್ಯರ್ಥಿಗಳು ಹೇಗೆ ಸೋಲುತ್ತಾರೆ. ಈ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ಮಾತ್ರ ಸೋತಿದ್ದಾರೆಯೇ ಅಥವಾ ಆ ಭಾಗದಲ್ಲಿರುವ ಒಕ್ಕಲಿಗ ಸಮಾಜದ ಶಾಸಕರು, ಪರಿಷತ್ ಸದಸ್ಯರು, ಮುಖಂಡರು ಸೋತಿದ್ದಾರೆಯೇ ಎನ್ನುವ ಚರ್ಚೆ ಮುಖ್ಯಮಂತ್ರಿಪರ ಒಲವಿರುವ ಶಾಸಕರು, ಮುಖಂಡರ ಮಧ್ಯೆ ಚರ್ಚೆಯಾಗುತ್ತಿದೆ.

ಈ ವಿಚಾರ ಪಕ್ಷ ಹೈಕಮಾಂಡ್ ಮಟ್ಟಕ್ಕೂ ಮುಟ್ಟಿದ್ದು ಈ ಬಗ್ಗೆ ಪೂರ್ಣ ಮಾಹಿತಿ ಸಂಗ್ರಹಿಸುವಂತೆ ಸೂಚನೆ ಬಂದಿದೆ ಎನ್ನಲಾಗಿದೆ.

ಈ ಹಿನ್ನೆಲೆಯಲ್ಲಿ ಯಾವ ಶಾಸಕರು, ಎಷ್ಟೆಷ್ಟು ಲೀಡ್ ಕುಸಿತ ಕಂಡಿದ್ದಾರೆ ಎಂದು ಮಾಹಿತಿ ಪಡೆದು, ಕಡಿಮೆ ಸಾಧನೆ ಮಾಡಿರುವ ಶಾಸಕರಿಗೆ ಸರಕಾರ ಮತ್ತು ಪಕ್ಷದಲ್ಲಿ ಅವಕಾಶಗಳನ್ನು ನೀಡುವ ಸಂದರ್ಭದಲ್ಲಿ ಬಿಸಿ ಮುಟ್ಟಿಸುವ ಚಿಂತನೆ ಮಾಡಲಾಗಿದೆ ಎಂದು ಪಕ್ಷದ ಉನ್ನತ ಮೂಲಗಳು ತಿಳಿಸಿವೆ.

ಸಂಪುಟ ಸರ್ಜರಿ ಸದ್ಯಕ್ಕಿಲ್ಲ

ಸದ್ಯದ ಮಟ್ಟಿಗೆ ಪಕ್ಷದ ಸೋಲಿನ ಹೊಣೆ ಹೊರಿಸಿ ಯಾವುದೇ ಸಚಿವರು, ಶಾಸಕರನ್ನೂ ಪಕ್ಷದ ಸೋಲಿಗೆ ಹೊಣೆ ಮಾಡುವ ಪ್ರಸ್ತಾಪ ಪಕ್ಷದಲ್ಲಿಲ್ಲ ಎಂದು ತಿಳಿದುಬಂದಿದೆ. ಅಂಥ ದುಸ್ಸಾಹಸಕ್ಕೆ ಕೈಹಾಕಿದರೆ ಬಹುತೇಕ ಮಂದಿ ಸಚಿವರ ಮೇಲೆ ಪ್ರಹಾರ ಮಾಡಬೇಕಾಗುತ್ತದೆ. ಹೀಗಾಗಿ ಇನ್ನೂ ಒಂದು ವರ್ಷದ ವರೆಗೂ ಸಂಪುಟ ಪುನಾರಚನೆಯಾಗಲಿ, ಯಾವುದೇ ಮಂತ್ರಿಯ ಸ್ಥಾನಪಲ್ಲಟವಾಗಲಿ, ಉಸ್ತುವಾರಿ ಬದಲಾವಣೆಯಾಗಲಿ ನಡೆಸದಿರಲು ಪಕ್ಷದ ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ.

ಶಾಸಕರು ಸೋತಿದ್ದೆಲ್ಲಿ?

- ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ 7 ಕ್ಷೇತ್ರಗಳಲ್ಲಿ ಒಕ್ಕಲಿಗ ಬಾಹುಳ್ಯದ ಕ್ಷೇತ್ರಗಳಲ್ಲಿ ಶಾಸಕರು, ಪರಿಷತ್ ಸದಸ್ಯರಿದ್ದರೂ ಕಾಂಗ್ರೆಸ್ ಸೋತಿವೆ.
- ಮಂಡ್ಯ ಲೋಕಸಭಾ ಕ್ಷೇತ್ರ ವ್ಯಾಪ್ತಿಯ 8 ವಿಧಾನಸಭಾ ಕ್ಷೇತ್ರಗಳಲ್ಲಿ 5 ಮಂದಿ (ಚಲುವರಾಯ ಸ್ವಾಮಿ, ರಮೇಶ್ ಬಂಡಿಸಿದ್ದೇಗೌಡ, ಉದಯ್, ದರ್ಶನ್ ಪುಟ್ಟಣಯ್ಯ(ಬೆಂಬಲ), ರವಿಕುಮಾರ್) ಒಕ್ಕಲಿಗ ಸಮಾಜದ ಶಾಸಕರಿದ್ದಾರೆ. ಜತೆಗೆ ಇಬ್ಬರು ವಿಧಾನ ಪರಿಷತ್ ಸದಸ್ಯರೂ ಇದ್ದಾರೆ.
- ಮೈಸೂರು ಕ್ಷೇತ್ರ ವ್ಯಾಪ್ತಿಯಲ್ಲಿ ಮೂವರು (ಹರೀಶ್‌ಗೌಡ, ವೆಂಕಟೇಶ್, ಮಂಥರಗೌಡ) ಒಕ್ಕಲಿಗ ಶಾಸಕರಿದ್ದಾರೆ.
- ಹಾಗೆಯೇ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ 3 (ಸುಬ್ಬಾರೆಡ್ಡಿ, ಪುಟ್ಟಸ್ವಾಮಿಗೌಡ, ಶರತ್ ಬಚ್ಚೇಗೌಡ) ಶಾಸಕರಿದ್ದಾರೆ.
- ತುಮಕೂರು ಕ್ಷೇತ್ರದಲ್ಲಿ ಇಬ್ಬರು (ಶ್ರೀನಿವಾಸ್, ಟಿ.ಬಿ.ಜಯಚಂದ್ರ) ಶಾಸಕರಿದ್ದಾರೆ.
- ಬೆಂಗಳೂರು ಗ್ರಾಮಾಂತರದಲ್ಲಿ 3 (ಡಿ.ಕೆ.ಶಿವಕುಮಾರ್, ಬಾಲಕೃಷ್ಣ, ರಂಗನಾಥ್) ಶಾಸಕರಿದ್ದಾರೆ.
- ಬೆಂಗಳೂರು ಉತ್ತರದಲ್ಲಿ ಕೃಷ್ಣ ಬೈರೇಗೌಡ ಹಾಗೂ ಪರೋಕ್ಷ ಬೆಂಬಲಿತ ಎಸ್.ಟಿ. ಸೋಮಶೇಖರ್ ಶಾಸಕರಿದ್ದಾರೆ.
- ಕೋಲಾರ ಕ್ಷೇತ್ರದಲ್ಲಿ ಇಬ್ಬರು (ಎಂ.ಸಿ.ಸುಧಾಕರ್, ನಂಜೇಗೌಡ) ಶಾಸಕರಿದ್ದಾರೆ.

ಸರಕಾರಿ ಗೌರವದೊಂದಿಗೆ ಮೈಸೂರಿನಲ್ಲಿ ಅಂತ್ಯಸಂಸ್ಕಾರ
ಸಚಿವರು, ಸಾಹಿತಿಗಳು, ಅಭಿಮಾನಿಗಳಿಂದ ಅಂತಿಮ ನಮನ

ರಾಜೀವ್ ತಾರಾನಾಥ್ ಪಂಚಭೂತಗಳಲ್ಲಿ ಲೀನ

ಮೈಸೂರಿನಲ್ಲಿ ನಿಧನರಾದ ಸರೋದ್ ಮಾಂತ್ರಿಕ ರಾಜೀವ್ ತಾರಾನಾಥ್ ಅವರಿಗೆ ಸಚಿವ ಎಚ್.ಸಿ. ಮಹದೇವಪ್ಪ, ಹಿರಿಯ ಸಾಹಿತಿ ಡಾ. ಚಂದ್ರಶೇಖರ ಕಂಬಾರ ಬುಧವಾರ ಅಂತಿಮ ನಮನ ಸಲ್ಲಿಸಿದರು.

ಮೈಸೂರು: ಖ್ಯಾತ ಸರೋದ್ ವಾದಕ ಪಂಡಿತ್ ರಾಜೀವ್ ತಾರಾನಾಥ್ ಅವರ ಅಂತ್ಯಕ್ರಿಯೆ ಬುಧವಾರ ಸಕಲ ಸರಕಾರಿ ಗೌರವಗಳೊಂದಿಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ನೆರವೇರಿತು.

ಮಂಗಳವಾರ ಸಂಜೆ ನಿಧನರಾದ ರಾಜೀವ್ ತಾರಾನಾಥರ ಪಾರ್ಥಿವ ಶರೀರವನ್ನು ಕುವೆಂಪುನಗರದ ಅವರ ನಿವಾಸದಲ್ಲಿ ಸಾರ್ವಜನಿಕರ ಅಂತಿಮ ದರ್ಶನಕ್ಕೆ ಇಡಲಾಗಿತ್ತು.

ನಾಡಿನ ವಿವಿಧೆಡೆಯಿಂದ ಬಂದಿದ್ದ ಸಂಗೀತಗಾರರು, ಸ್ನೇಹಿತರು, ಲೇಖಕರು, ಹೋರಾಟಗಾರರು, ರಾಜಕಾರಣಿಗಳು ಅಂತಿಮ ದರ್ಶನ ಪಡೆದು ಸರೋದ್ ಮಾಂತ್ರಿಕನಿಗೆ ಗೌರವ ಸಲ್ಲಿಸಿದರು. ಮಧ್ಯಾಹ್ನ ಪಾರ್ಥಿವ ಶರೀರವನ್ನು ಚಿತಾಗಾರಕ್ಕೆ ಕೊಂಡೊಯ್ಯಲಾಯಿತು. ಪೊಲೀಸರು ಮೂರು ಸುತ್ತು ಕುಶಾಲತೋಪು ಸಿಡಿಸಿ ಗೌರವ ಸೂಚಿಸಿದರು. ಪೊಲೀಸ್ ಬ್ಯಾಂಡ್‌ನಿಂದ ರಾಷ್ಟ್ರಗೀತೆ ನುಡಿಸಲಾಯಿತು. ಯಾವುದೇ ಧಾರ್ಮಿಕ ಕ್ರಿಯೆಗಳಿಲ್ಲದೆ ಸರಳವಾಗಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಚಂದ್ರಶೇಖರ ಕಂಬಾರ, ಸಾಹಿತಿಗಳಾದ ದೇವನೂರ ಮಹಾದೇವ, ಡಾ. ರಹಮತ್ ತರೀಕೆರೆ, ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ, ಜಿಲ್ಲಾ ಪಂಚಾಯಿತಿ ಸಿಇಒ ಕೆ.ಎಂ.ಗಾಯಿತ್ರಿ ಅವರು ಅಂತಿಮ ದರ್ಶನ ಪಡೆದರು.

ರಾಜೀವ್ ತಾರಾನಾಥ್ ನನ್ನ ಗುರು: ಡಾ.ಕಂಬಾರ

ಮೈಸೂರು: ಪಂಡಿತ್ ರಾಜೀವ್ ತಾರಾನಾಥ್ ನನ್ನ ಗುರು ಎಂದು ನುಡಿದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಲೇಖಕ ಡಾ.ಚಂದ್ರಶೇಖರ ಕಂಬಾರ ಗದ್ಗದಿತರಾಗಿ ಕಣ್ಣೀರಿಟ್ಟರು. ತಾರಾನಾಥರ ನಿವಾಸದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನ ಗುರು ನಿಧನರಾದದ್ದು ಬಹಳ ದುಃಖಕರ ಎಂದರು. ರಾಜೀವ್ ತಾರಾನಾಥ್ ನಮ್ಮ ಕಾಲದ ಎಲ್ಲ ನವ್ಯರಿಗಿಂತ ಮುಂದೆಹೋಗಿ ಯೋಚನೆ ಮಾಡುತ್ತಿದ್ದರು. ನಮ್ಮನ್ನು ತಿದ್ದಿದ್ದರು. ಅವರ ವಿಚಾರಗಳನ್ನು ನಾವು ಒಪ್ಪಿಕೊಂಡೆವು. ರಾಜೀವ್ ಬಿತ್ತಿದ್ದು ನಿಜವಾದ ನವ್ಯತೆ. ಅದನ್ನು ಅನುಸರಿಸಿದ ನಾನು ಉಳಿದವರಿಗಿಂತ ಭಿನ್ನವಾಗಿ ಬೆಳೆದೆ ಎಂದು ನುಡಿದರು.

ಪಂಡಿತ್ ರಾಜೀವ್ ತಾರಾನಾಥ್ ಅವರು ಭಾರತದ ಬಹುತ್ವ ಸಂಸ್ಕೃತಿಯ ಸಂಕೇತವಾಗಿದ್ದರು. ದೇಶದ ಸೆಕ್ಯುಲರಿಸಂ ಪ್ರತಿಪಾದಕರಾಗಿದ್ದರು. ರಾಜೀವ್ ನಿಧನ ಬರೀ ವ್ಯಕ್ತಿಯ ನಿಧನ ಅಲ್ಲ. ಒಂದು ಜಾತ್ಯತೀತ ಪರಂಪರೆಯ ಕೊಂಡಿ ಕಳಚಿದೆ.
-ಡಾ. ರಹಮತ್ ತರೀಕೆರೆ ಸಾಹಿತಿ

12 ವರ್ಷಗಳಿಂದ ಗುರುಗಳ ಬಳಿ ಸಂಗೀತ ಅಭ್ಯಾಸ ಮಾಡುತ್ತಿದ್ದೇನೆ. ಅವರೇ ನನ್ನ ದೇವರು. ಅವರ ಬಳಿ ಸಂಗೀತ ಕಲಿಯುವುದಕ್ಕಿಂತ ಆಲೋಚನಾ ರೀತಿ, ವ್ಯಕ್ತಿತ್ವ ವಿಕಸನ... ಹೀಗೆ ಜೀವನದ ಪಾಠ ಕಲಿತಿದ್ದೇನೆ. ಸಂಗೀತದ ಜೊತೆಗೆ ಇಡೀ ಬದುಕನ್ನು ಕಲಿಸಿದ್ದಾರೆ.
-ಸಚಿನ್ ರಾಜೀವ್ ತಾರಾನಾಥರ ಶಿಷ್ಯ

ರಾಜೀವ್ ತಾರಾನಾಥ್ ಬಹುತ್ವ ಪರಂಪರೆಯ ಸಂಕೇತವಾಗಿ ನಮ್ಮೊಡನೆ ಬದುಕಿದ್ದರು. ಪಾಂಡಿತ್ಯ, ಓದು, ಅವರ ಒಡನಾಟಕ್ಕೆ ಹೋದವರಿಗಷ್ಟೇ ಗೊತ್ತು. ಯಾವುದೇ ಭೀತಿ ಇಲ್ಲದೇ ಯಾವುದೇ ವಿಚಾರ ಹೇಳುವ ಎದೆಗಾರಿಕೆ ಇತ್ತು. ಎಲ್ಲರನ್ನೂ ಕುಟುಂಬದವರಾಗಿ ಅಪ್ಪಿಕೊಳ್ಳುವ ಮನುಷ್ಯತ್ವದ ಗುಣ ಇತ್ತು. ದೀರ್ಘಕಾಲ ಬದುಕಿದ್ದರು.
-ಚುಕ್ಕಿ ನಂಜುಂಡಸ್ವಾಮಿ ರೈತಪರ ಹೋರಾಟಗಾರ್ತಿ

ರಾಜೀವ್ ಅವರು ಉದ್ಯೋಗ ತೊರೆದು ಸಂಗೀತಕ್ಕೆ ಇಡೀ ಜೀವನವನ್ನು ಸಮರ್ಪಿಸಿಕೊಂಡಿದ್ದರು. ಸಂಗೀತ ಕಛೇರಿಗಳ ಮೂಲಕ ಜಗತ್ತಿನಾದ್ಯಂತ ಪರಿಚಿತರಾಗಿದ್ದರು. ಶ್ರೇಷ್ಠ ಕಲಾವಿದರೂ, ಶ್ರೇಷ್ಠ ಮಾನವತಾವಾದಿಯೂ ಆಗಿದ್ದರು. ಸಾಹಿತ್ಯ ಮತ್ತು ಸಂಗೀತ ಇವೆರಡೂ ಅವರ ಆಸಕ್ತ ಕ್ಷೇತ್ರಗಳಾದರೂ ಸಂಗೀತ ಅವರ ಪಾಲಿನ ಉಸಿರಾಗಿತ್ತು.
- ಶೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮೈಸೂರು

ಮುಖ್ಯಮಂತ್ರಿಯಿಂದ ಪ್ರಗತಿ ಪರಿಶೀಲನಾ ಸಭೆ

ಕಲಬುರಗಿ: ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ವೇಗ ಹೆಚ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜೂ.14 ರಂದು ಬೆಳಿಗ್ಗೆ 11 ಕ್ಕೆ ಬೆಂಗಳೂರಿನ ಗೃಹ ಕಚೇರಿ ಕೃಷ್ಣಾ ದಲ್ಲಿ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ(ಕೆಕೆಆರ್‌ಡಿಬಿ) ಯ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು ಮಂಡಳಿ ಅಧ್ಯಕ್ಷ ಡಾ. ಅಜಯಸಿಂಗ್ ಹೇಳಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಡಳಿಯಿಂದ ಪ್ರಸಕ್ತ ಆಗಿರುವ ಹಾಗೂ ಆಗಬೇಕಿರುವ ಕಾಮಗಾರಿಗಳ ಜತೆಗೆ ಅನುದಾನ ಮಂಜೂರು ಬಗ್ಗೆ ಪರಿಶೀಲನೆ ನಡೆಸುವರು ಎಂದರು.

ಪ್ರಸಕ್ತ 2024-25ನೇ ಸಾಲಿಗೆ ಬಜೆಟ್‌ನಲ್ಲಿ 5,000 ಕೋಟಿ ರೂ. ಅನುದಾನ ನೀಡಿದ್ದು, ಇದರ ಸಂಪೂರ್ಣ ಬಿಡುಗಡೆ ಹಾಗೂ ಎಲ್ಲ ಕಾರ್ಯಗಳು ಅನುಷ್ಠಾನಕ್ಕೆ ತರಲು ಮತ್ತು ಜತೆಗೆ ಅನುದಾನವನ್ನು ಪ್ರಸಕ್ತ ವರ್ಷದಲ್ಲಿ ಖರ್ಚು ಮಾಡಲು ಯೋಜನಾ ಇಲಾಖೆಯ ಹಿರಿಯ ಅಧಿಕಾರಿಗಳು ಸೇರಿದಂತೆ ಕ.ಕ.ಭಾಗದ ಸಚಿವರನ್ನು ಸಭೆಗೆ ಆಹ್ವಾನಿಸಲಾಗಿದೆ ಎಂದು ಅಜಯ್ ಸಿಂಗ್ ವಿವರಿಸಿದರು.

ಸಿ.ಎಂ. ಸಭೆ ನಂತರ ಜೂನ್ 28ಕ್ಕೆ ಮಂಡಳಿ ಸಭೆ ಸಹ ನಡೆಸಲು ನಿರ್ಧರಿಸಿದ್ದು, 15 ದಿನದೊಳಗೆ ಪ್ರದೇಶದ ಶಾಸಕರಿಂದ ಕ್ರಿಯಾ ಯೋಜನೆ ಪಡೆದು ಪ್ರಸಕ್ತ ಸಾಲಿನ ಕೆಲಸ ಬೇಗನೇ ಆರಂಭಿಸಲಾಗುವುದು. ಕಳೆದ ವರ್ಷ ನಮ್ಮ ಸರ್ಕಾರ ಈ ಭಾಗಕ್ಕೆ 5 ಸಾವಿರ ಕೋಟಿ ರೂ. ಅನುದಾನ ಘೋಷಿಸಿ 3 ಸಾವಿರ ಕೋಟಿ ರೂ. ಅನುದಾನ ಹಂಚಿಕೆ ಮಾಡಿದ್ದು, ಅದರಂತೆ ಪ್ರದೇಶದಲ್ಲಿ ರಸ್ತೆ, ಚರಂಡಿ ನಿರ್ಮಾಣ, ಮೂಲಸೌಕರ್ಯ ಕೆಲಸ ಭರದಿಂದ ಸಾಗಿದೆ.

ಇದರೊಂದಿಗೆ ಪ್ರದೇಶದಲ್ಲಿ ವಿಶೇಷವಾಗಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಅಕ್ಷರ ಆವಿಷ್ಕಾರ, ಆರೋಗ್ಯ ಆವಿಷ್ಕಾರ ಯೋಜನೆ ಜಾರಿಗೆ ತರಲಾಗಿದೆ. ಪ್ರಸಕ್ತವಾಗಿ ಕೃಷಿ ಆವಿಷ್ಕಾರ ಯೋಜನೆ ರೂಪಿಸಲಾಗುತ್ತಿದೆ ಎಂದು ಡಾ. ಅಜಯಸಿಂಗ್ ತಿಳಿಸಿದರು.

ಸಚಿವ ಸ್ಥಾನದ ಆಕಾಂಕ್ಷಿ: 2018 ರಿಂದ ತಾವು ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದು, ಪಕ್ಷದ ಹೈಕಮಾಂಡ್ ನೀಡುವ ಯಾವುದೇ ಜವಾಬ್ದಾರಿಗೆ ಬದ್ಧನಾಗಿರುತ್ತೇನೆ ಎಂದರು. ಲೋಕಸಭಾ ಚುನಾವಣೆಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಎಲ್ಲ ಐದು ಸ್ಥಾನಗಳಲ್ಲಿ ಇದೇ ಮೊದಲ ಬಾರಿಗೆ ಕಾಂಗ್ರೆಸ್ ಗೆಲುವು ಸಾಧಿಸಿರುವುದು ಮಂಡಳಿಯ ಅಭಿವೃದ್ಧಿ ಕಾರ್ಯ, 371 ಜೆ ವಿಧಿ ಪರಿಣಾಮಕಾರಿ ಜಾರಿ, ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಂದ ಸಾಧ್ಯವಾಗಿದೆ ಅಜಯ್ ಸಿಂಗ್ ಹೇಳಿದರು.

ಲಕ್ಕುಂಡಿ: ಜಗದೇಕಮಲ್ಲನ ಶಾಸನ ಪತ್ತೆ

ತುಮಕೂರು: ಗದಗ ಜಿಲ್ಲೆ ಲಕ್ಕುಂಡಿಯ ಹಾಲುಗೊಂಡ ಬಸವೇಶ್ವರ ದೇವಾಲಯದಲ್ಲಿ ಕಲ್ಯಾಣ ಚಾಲುಕ್ಯರ ಜಗದೇಕಮಲ್ಲನಿಗೆ ಸೇರಿದ ಶಿಲಾ ಶಾಸನ ಪತ್ತೆಯಾಗಿದೆ.

ತುಮಕೂರು ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಎಂ. ಕೊಟ್ರೇಶ್, ದಾವಣಗೆರೆ ವಿ.ವಿ ಸಂಶೋಧನಾರ್ಥಿ ಜೆ.ಸುಧಾ ಶಾಸನ ಪತ್ತೆಮಾಡಿದ್ದಾರೆ.

ದೇವಾಲಯದ ಒಳಗೆ ನವರಂಗದ ಪೂರ್ವಭಾಗದ ತೊಲೆಯಲ್ಲಿ ಶಾಸನ ಕಂಡುಬಂದಿದೆ. ದೇವಾಲಯದ ಪಶ್ಚಿಮಾಭಿಮುಖವಾಗಿದ್ದ ಭಿತ್ತಿನಲ್ಲಿ ಕಪ್ಪನೆ ಮೇಣದಲ್ಲಿ ಈ ಶಾಸನವು ಮುಚ್ಚಿಹೋಗಿತ್ತು. ಕಪ್ಪುಮಿಶ್ರಿತ ನೀಲಿಛಾಯೆಯ ಬಳಪದ ಶಿಲೆಯಲ್ಲಿ ಈ ಶಾಸನ ಕೆತ್ತಲಾಗಿದೆ.

18 ಸಾಲುಗಳನ್ನು ಹೊಂದಿರುವ ಶಾಸನವು ಕ್ರಿ.ಶ 1137-1147ರಲ್ಲಿ ಆಳ್ವಿಕೆ ಮಾಡಿದ್ದ ಕಲ್ಯಾಣ ಚಾಲುಕ್ಯರ ಜಗದೇಕಮಲ್ಲನಿಗೆ ಸೇರಿದೆ. ಶಾಸನದಲ್ಲಿ ಇಂದಿನ ಹಾಲುಗೊಂಡ ಬಸವೇಶ್ವರ ದೇವಾಲಯದ ಮೂಲರೂಪ ಗುರುತಿಸಬಹುದು. ಶಾಸನದಲ್ಲಿ ಅದನ್ನು ಹಾಳುಗೆಡವದಂತೆ ಎಚ್ಚರಿಕೆ ನೀಡಲಾಗಿದೆ. ದಾನ -ದತ್ತಿಗಳ ವಿವರಣೆಗಳಿವೆ. ಕರ್ನಾಟಕದ ಶಾಸನಗಳ ಸಾಲಿಗೆ ಇದು ಒಂದು ಹೊಸ ಸೇರ್ಪಡೆ ಎಂದು ಪ್ರೊ.ಎಂ.ಕೊಟ್ರೇಶ್ ತಿಳಿಸಿದ್ದಾರೆ.



ಜಗದೇಕಮಲ್ಲನಲ್ಲಿ ಕಲ್ಪವೃಕ್ಷದ ಗುಣವಿತ್ತು..

ಲಕ್ಕುಂಡಿಯಲ್ಲಿ ದೊರೆತ ಜಗದೇಕಮಲ್ಲನ ಮೊದಲ ಶಾಸನವಾಗಿದೆ. ಪ್ರಸ್ತುತ ಇರುವ ಹಾಲಗೊಂಡ ದೇವಾಲಯವನ್ನು 1 ಸಾವಿರ ವರ್ಷಗಳ ಹಿಂದೆ ಗವರೇಶ್ವರ ಎಂದು ಕರೆಯಲಾಗುತ್ತಿತ್ತು ಎಂಬ ಮಾಹಿತಿ ಈ ಶಾಸನದಲ್ಲಿ ಉಲ್ಲೇಖಗೊಂಡಿದೆ. ಪರೋಪಕಾರ ಮಾಡುವ, ಬೇಡಿ ಬಂದವರಿಗೆ ಆಶ್ರಯ ನೀಡುವ ಕಲ್ಪವೃಕ್ಷದಂತಹ ಗುಣ ರಾಜನಲ್ಲಿತ್ತು ಎಂದು ಶಾಸನದಲ್ಲಿ ಉಲ್ಲೇಖಿಸಿದೆ ಎಂದು ಹೇಳಿದ್ದಾರೆ.

ಪಾಕಿಸ್ತಾನ ಪರ ಘೋಷಣೆ ಕೂಗಿದ ಕೈದಿ ಕೋರ್ಟ್‌ನಲ್ಲಿ ವಕೀಲರಿಂದ ಹಲ್ಲೆ

ಬೆಳಗಾವಿ: ಕೊಲೆ ಪ್ರಕರಣದ ಆರೋಪಿಯೊಬ್ಬ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಪಾಕ್ ಪರ ಘೋಷಣೆ ಕೂಗಿದ್ದಕ್ಕೆ ವಕೀಲರು ಥಳಿಸಿರುವ ಘಟನೆ ಬುಧವಾರ ಬೆಳಗಾವಿಯಲ್ಲಿ ನಡೆದಿದೆ.

ಕೊಲೆ ಪ್ರಕರಣದಲ್ಲಿ ಬೆಳಗಾವಿ ಹಿಂಡಲಗಾ ಜೈಲಿನಲ್ಲಿ ಶಿಕ್ಷೆ ಅನುಭವಿಸುತ್ತಿರುವ ಮಂಗಳೂರು ಮೂಲದ ಜಯೇಶ್ ಪೂಜಾರಿ ಎಂಬ ಅಪರಾಧಿ ಜಿಲ್ಲಾ ಕೋರ್ಟ್ ಆವರಣದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದ್ದಾನೆ. ತಕ್ಷಣ ಆತನಿಗೆ ಕೋರ್ಟ್‌ನಲ್ಲಿ ನೆರೆದಿದ್ದ ವಕೀಲರೇ ಥಳಿಸಿದ್ದಾರೆ. ನಂತರ ಆರೋಪಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

2018 ರಲ್ಲಿ ಅಂದಿನ ಎಡಿಜಿಪಿ ಅಲೋಕ್ ಕುಮಾರ್ ಅವರಿಗೆ ಬೆದರಿಕೆ ಹಾಕಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪರಾಧಿ ಜಯೇಶ್ ಪೂಜಾರಿ ಎಂಬಾತನ್ನು ಹಿಂಡಲಗಾ ಜೈಲಿನಿಂದ ನಗರದ ಜಿಲ್ಲಾ ನ್ಯಾಯಾಲಯಕ್ಕೆ ಕರೆತರಲಾಗಿತ್ತು. ಈ ಸಂದರ್ಭದಲ್ಲಿ ವಿಚಾರಣೆಗೆ ಸಮಯಾವಕಾಶ ನೀಡದ ಹಿನ್ನಲೆಯಲ್ಲಿ ಈತ ನನ್ನನ್ನು ಪಾಕಿಸ್ತಾನದವನಂತೆ ನೋಡುತ್ತಿದ್ದಾರೆ ಎಂದು ಆಕ್ರೋಶಗೊಂಡು ಪಾಕಿಸ್ತಾನ ಜಿಂದಾಬಾದ್ ಎಂದು ಘೋಷಣೆ ಕೂಗಿದ್ದಾನೆ. ಈ ಸಂದರ್ಭದಲ್ಲಿ ವಕೀಲರು ಆತನನ್ನು ಥಳಿಸಿದ್ದಾರೆ.

ಆರೋಪಿ ಹೆಸರು ಬದಲಾವಣೆ- ತನಿಖೆ: ಪ್ರಕರಣ ಕುರಿತು ಮಾಹಿತಿ ನೀಡಿದ ಕಾನೂನು ಸುವ್ಯವಸ್ಥೆ ಡಿಸಿಪಿ ರೋಹನ್ ಜಗದೀಶ್, ಜಾಕೀರ್ ಅಲಿಯಾಸ್ ಜಯೇಶ್ ಪೂಜಾರಿ ಮೂಲತಃ ಮಂಗಳೂರು ಮೂಲದ ಆರೋಪಿಯಾಗಿದ್ದಾನೆ. ಆರೋಪಿ ಹೆಸರು ಬದಲಾಯಿಸಿಕೊಂಡಿರುವ ಕುರಿತು ತನಿಖೆ ನಡೆಯುತ್ತಿದೆ. ಜಯೇಶ್ ಪೂಜಾರಿ ಎರಡು ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ ಎದುರಿಸುತ್ತಿದ್ದಾನೆ ಎಂದರು. ಹಿಂಡಲಗಾ ಕಾರಾಗೃಹದಲ್ಲಿ ಇರುವ ಈತನಿಗೆ ನ್ಯಾಯಾಲಯಕ್ಕೆ ವಿಚಾರಣೆಗೆ ಕರೆ ತರಲಾಗಿತ್ತು. ಆಗ ಅವನು ಪಾಕಿಸ್ತಾನ ಪರ ಘೋಷಣೆ ಕೂಗಿದ್ದು ನಿಜ ಎಂದರು. ಜಯೇಶ್ ಕೇರಳಕ್ಕೆ ಹೋಗಿ ಇಸ್ಲಾಂಗೆ ಮತಾಂತರವಾಗಿದ್ದಾನೆ ಎನ್ನುವ ಮಾಹಿತಿ ಇದೆ. ಅದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದರು.

ಸಂಪಾದಕೀಯ

ಸಚಿವರ ಮೇಲೆ ನಿರೀಕ್ಷೆಯ ಭಾರ

ಪ್ರಧಾನಿ ನರೇಂದ್ರ ಮೋದಿ ಅವರ ಸಚಿವ ಸಂಪುಟದಲ್ಲಿ ರಾಜ್ಯಕ್ಕೆ ಮೂರು ಸಂಪುಟ ದರ್ಜೆ ಮತ್ತು ಎರಡು ರಾಜ್ಯ ಖಾತೆಯ ಹುದ್ದೆಗಳು ಸೇರಿ ಐದು ಸಚಿವ ಸ್ಥಾನಗಳು ದೊರೆತಿವೆ. ಖಾತೆಯ ಮಹತ್ವದ ದೃಷ್ಟಿಯಿಂದ ಇವೆಲ್ಲವೂ ಉತ್ತಮವಾದ ಖಾತೆಗಳು. ಕುಮಾರಸ್ವಾಮಿ, ಪ್ರಹ್ಲಾದ ಜೋಶಿ ಮತ್ತು ಸೋಮಣ್ಣ ಅವರಿಗೆ ಒಂದಕ್ಕಿಂತ ಹೆಚ್ಚು ಖಾತೆಗಳ ಜವಾಬ್ದಾರಿಯನ್ನು ವಹಿಸಲಾಗಿದೆ. ರಾಜ್ಯದಿಂದ ರಾಜ್ಯಸಭೆಗೆ ಆಯ್ಕೆಯಾದ ನಿರ್ಮಲಾ ಸೀತಾರಾಮನ್ ಅವರಿಗೆ ನಿರೀಕ್ಷೆಯಂತೆ ಎರಡನೇ ಬಾರಿಗೆ ಹಣಕಾಸು ಖಾತೆ ದೊರೆತಿದೆ. ಹಿಂದಿನ ಸರಕಾರದಲ್ಲಿ ಸಂಸದೀಯ ಖಾತೆ ಸಚಿವರಾಗಿದ್ದ ಪ್ರಹ್ಲಾದ್ ಜೋಶಿ ಅವರಿಗೆ ಈ ಬಾರಿ ಗ್ರಾಹಕರ ವ್ಯವಹಾರ, ಆಹಾರ ಮತ್ತು ಸಾರ್ವಜನಿಕ ಪಡಿತರ, ಖಾತೆಗಳ ಜೊತೆಗೆ ನವೀಕರಿಸಬಹುದಾದ ಇಂಧನ ಖಾತೆಯ ಜವಾಬ್ದಾರಿಯನ್ನು ನೀಡಲಾಗಿದೆ. ಕೃಷಿ ಖಾತೆಯನ್ನು ಬಯಸಿದ್ದ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಇಷ್ಟೇ ಮಹತ್ವದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆಯ ಹೊಣೆ ವಹಿಸಲಾಗಿದೆ. ಕಳೆದ ಸಚಿವ ಸಂಪುಟದಲ್ಲಿ ಕೃಷಿ ಖಾತೆ ಸಹಾಯಕ ಸಚಿವೆಯಾಗಿದ್ದ ಶೋಭಾ ಕರಂದ್ಲಾಜೆ ಅವರಿಗೆ ಎಂಎಸ್ಎಂಇ ಖಾತೆಯನ್ನು ವಹಿಸಲಾಗಿದೆ. ಸೋಮಣ್ಣ ಅವರಿಗೆ ಮಹತ್ವದ ಜಲಶಕ್ತಿ ಮತ್ತು ರೈಲ್ವೆ ಖಾತೆಯ ಜವಾಬ್ದಾರಿ ದೊರೆತಿದೆ. ಈ ಎಲ್ಲ ಖಾತೆಗಳು ರಾಜ್ಯದ ಹಿತ ಕಾಯಲು ಪೂರಕವಾಗಿವೆ. ವಿಶೇಷವಾಗಿ ಹಣಕಾಸು, ಉಕ್ಕು, ಪಡಿತರ, ಜಲಶಕ್ತಿ, ರೈಲ್ವೆ, ಎಂಎಸ್ಎಂಇ ಸಚಿವಾಲಯಗಳ ಮೂಲಕ ರಾಜ್ಯದಲ್ಲಿ ದೀರ್ಘ ಕಾಲದಿಂದ ಬಾಕಿ ಉಳಿದಿರುವ ಯೋಜನೆಗಳಿಗೆ ಚಾಲನೆ ನೀಡಲು ಸಾಧ್ಯವಿದೆ. ಕೇಂದ್ರ ಸಚಿವರು ಇಡೀ ದೇಶಕ್ಕೆ ಸಚಿವರಾಗಿದ್ದು ರಾಷ್ಟ್ರದ ಸಮಗ್ರ ಅಭಿವೃದ್ಧಿಯತ್ತ ಅವರು ಗಮನಹರಿಸಬೇಕೆಂಬ ಮಾತುಗಳಿದ್ದರೂ, ಆಯಾ ರಾಜ್ಯದ ಸಚಿವರು ತಮ್ಮ ರಾಜ್ಯದ ಯೋಜನೆಗಳಿಗೆ ಆದ್ಯತೆ ನೀಡುತ್ತಾ ಬಂದಿರುವುದು ಸುಳ್ಳಲ್ಲ. ತಮಿಳುನಾಡು, ಆಂಧ್ರಪ್ರದೇಶ, ಕೇರಳ ಸೇರಿದಂತೆ ದಕ್ಷಿಣದ ರಾಜ್ಯಗಳಿಂದ ಸಚಿವ ಸ್ಥಾನಕ್ಕೇರಿದವರು ತಮ್ಮ ರಾಜ್ಯದ ಕೆಲಸ ಮಾಡಿಸಿಕೊಳ್ಳುವುದರಲ್ಲಿ ಸದಾ ಮುಂದಿರುತ್ತಾರೆ. ಆದರೆ ಕನ್ನಡಿಗ ಮಂತ್ರಿಗಳು ದಾಕ್ಷಿಣ್ಯಪರರು. ಪಟ್ಟು ಹಿಡಿದು ಕನ್ನಡ ನೆಲದ ಕೆಲಸಗಳಿಗೆ ಪ್ರಾಮುಖ್ಯತೆ ನೀಡಿದ್ದು ಕಡಿಮೆ. ನಿರ್ಮಲಾ ಸೀತಾರಾಮನ್ ರಾಜ್ಯದಿಂದ ಎರಡನೇ ಬಾರಿಗೆ ಆಯ್ಕೆಯಾದರೂ ರಾಜ್ಯದ ಹಿತರಕ್ಷಣೆಗಾಗಿ ಎಂದೂ ಕೈ ಜೋಡಿಸಿಲ್ಲ. ಉಳಿದ ಸಚಿವರಾದರೂ,ರಾಜ್ಯದ ಒಳಿತಿಗಾಗಿ ಟೊಂಕ ಕಟ್ಟಿ ಕೆಲಸ ಮಾಡಬೇಕು. ವಿಶೇಷವಾಗಿ ಕುಮಾರಸ್ವಾಮಿ ಅವರ ಮೇಲೆ ಬಹಳಷ್ಟು ನಿರೀಕ್ಷೆ ಇದೆ. ಸೋಮಣ್ಣ ಅವರು ರಾಜ್ಯದ ನೀರಾವರಿ ಯೋಜನೆಗಳಿಗೆ ಅನುಮತಿ ಕೊಡಿಸಲು ಸಫಲರಾಗಬೇಕಿದೆ. ಶೋಭಾ ಅವರು ಬೆಂಗಳೂರು ಮತ್ತು ಇತರ ನಗರಗಳಲ್ಲಿ ಸಣ್ಣ ಉದ್ಯಮಗಳ ಪುನಶ್ಚೇತನಕ್ಕೆ ಉತ್ತೇಜನ ನೀಡಬೇಕಿದೆ.

ಸೊಂಪಾದಕೀಯ

ಎಣ್ಣೆ ರೇಟು ಮತ್ತು ಏಟು

ಸರಕಾರಗಳ ತೆರಿಗೆ ಹಣ ಕಡಿಮೆ ಆದ ಕೂಡ್ಲೇ ಅವುಗಳ ಕಣ್ಣು ಬೀಳೋದು ಮದ್ಯದ ಬೆಲೆ ಮೇಲೆ. ಎಷ್ಟು ರೇಟ್ ಜಾಸ್ತಿ ಮಾಡಿದರೂ ಎಣ್ಣೆಗೆಂಪು ಕಣ್ಣಲ್ಲೇ, ಕಮಕ್ ಕಿಮಕ್ ಎನ್ನದೆ ಉದರಕ್ಕೆ ಎಣ್ಣೆ ಸೇರಿಸಿ ಕಿಕ್ ಏರಿಸಿಕೊಳ್ಳುವ ಮದ್ಯಪ್ರಿಯರ ಉದಾರ ನೀತಿ ಇದಕ್ಕೆ ಕಾರಣ. ಇದರ ಪರಿಣಾಮವಾಗಿ ಈಗ ಕರ್ನಾಟಕ ರಾಜ್ಯ, ದೇಶದಲ್ಲೇ ಮದ್ಯಕ್ಕೆ ಅತಿ ಹೆಚ್ಚು ಬೆಲೆ ಹೊಂದಿದ ರಾಜ್ಯ ಎಂಬ ಕುಖ್ಯಾತಿಗೆ ಒಳಗಾಗಿದೆ. ಕುಡಿಯಲಾರದೇ ಇರುವವರು ಮಾಡಿರುವ ಒಂದು ಸರ್ವೆ ಪ್ರಕಾರ ಗೋವಾದಲ್ಲಿ 100 ರುಪಾಯಿಗೆ ಸಿಗೋ ಮದ್ಯಕ್ಕೆ ಕರ್ನಾಟಕದಲ್ಲಿ 513 ರುಪಾಯಿ ಕೊಡಬೇಕು. ಹಾಗೆ ನೋಡಿದರೆ ಕರ್ನಾಟಕ ದುಬಾರಿ ಮದ್ಯದ ವಿಷಯದಲ್ಲಿ ಬರೀ ಮೊದಲನೇ ಸ್ಥಾನದಲ್ಲಿ ಇಲ್ಲ. ಎರಡನೇ ಸ್ಥಾನದಲ್ಲಿರುವ ತೆಲಂಗಾಣದಲ್ಲಿ ಮದ್ಯದ ಬೆಲೆ ಕರ್ನಾಟಕಕ್ಕಿಂತ ಶೇಕಡಾ 50 ರಷ್ಟು ಕಮ್ಮಿ ಇದೆ. ಹಾಗಾಗಿ ಕರ್ನಾಟಕ ಸರಕಾರ ಮದ್ಯಪ್ರಿಯರನ್ನು ಟೇಕನ್ ಫಾರ್ ಗ್ರಾಂಟೆಡ್ ಅಂತ ಮಾಡಿಕೊಂಡಿರುವುದು ಸ್ಪಷ್ಟವಾಗಿದೆ ಎನ್ನಬಹುದು. ಮದ್ಯದ ಬೆಲೆಯಲ್ಲಿ ನಂಬರ್ ಒನ್ ಸ್ಥಾನ ಅಲಂಕರಿಸಿರುವ ಬೆಳವಣಿಗೆಯ ಮಧ್ಯದಲ್ಲಿ ನಮ್ಮ ಅಬಕಾರಿ ಸಚಿವ ತಿಮ್ಮಾಪುರ ಅವರು ರಾಜ್ಯದ ಜನಸಂಖ್ಯೆಗೆ ತಕ್ಕಂತೆ ಮದ್ಯದ ಅಂಗಡಿಗಳು ಇಲ್ಲ ಎಂದಿದ್ದಾರೆ. ಗ್ರಾಮದ ಜನ ನಗರಕ್ಕೆ ಬಂದು ದುಬಾರಿ ಬೆಲೆಗೆ ಮದ್ಯ ಖರೀದಿ ಮಾಡೋದನ್ನು ತಪ್ಪಿಸಬೇಕಿದೆ ಅಂತಲೂ ಅಬಕಾರಿ ಸಚಿವರು ಹೇಳಿದ್ದಾರೆ. ಒಟ್ಟಿನಲ್ಲಿ ಮದ್ಯದ ವಿಷಯದಲ್ಲಿ ಆದರೂ ಕರ್ನಾಟಕ ನಂಬರ್ ಒನ್ ಆಗಿ ಮದ್ಯ ಕರ್ನಾಟಕ ಇಡೀ ಇಂಡಿಯಾದಲ್ಲೇ ಹೆಸರು ಮಾಡಿದೆ. ಆದರೆ, ದೊಡ್ಡ ಪಾರ್ಟಿ ಮಾಡುವ ಯೋಜನೆ ಇದ್ದವರು, ಸ್ವಲ್ಪ ಖರ್ಚು ಮಾಡಿ ಪಕ್ಕದಲ್ಲಿರುವ ಗೋವಾಕ್ಕಷ್ಟೇ ಅಲ್ಲ, ತೆಲಂಗಾಣಕ್ಕೆ ಹೋದ್ರೂ ಕಡಿಮೆ ಖರ್ಚಲ್ಲಿ ಕುಡಿದು ತೇಲುಗಣ್ಣಲ್ಲಿ ವಾಪಸ್ಸು ಬರಬಹುದು ಅಂತ ಯೋಚನೆ ಮಾಡೋ ಹಾಗೂ ಆಗಿದೆ. ವಿಶೇಷ ಅಂದ್ರೆ, ರಾಜ್ಯದಲ್ಲಿ ಮದ್ಯ ಇಷ್ಟೊಂದು ದುಬಾರಿ ಆಗಿ ಮದ್ಯಪ್ರಿಯರು 'ಎಣ್ಣೆಗಾಯಿ ನೀರುಗಾಯಿ' ಆಗಿದ್ದರೂ, ಹುಟ್ಟಿದರೇ ಕನ್ನಡ ನಾಡಲ್ ಮಾತ್ರ ಹುಟ್ಟಬಾರದು ಅಂತ ಕರ್ನಾಟಕದ ಮದ್ಯಪ್ರಿಯರು ಮಾತ್ರ ಇದರ ಬಗ್ಗೆ ಇನ್ನೂ ಅಪಸ್ವರ ಎತ್ತಿಲ್ಲ. ಬಹುಶಃ, ಎಣ್ಣೆ ರೇಟು ಜಾಸ್ತಿ ಆಗಿ ಕುಡುಕರ ಕುಡಿಯುವ 'ಸ್ಪಿರಿಟ್' ಮಾತ್ರ ಒಂದು ಪೆಗ್ಗಿನಷ್ಟು ಕಮ್ಮಿ ಆಗಿ ರೇಟಿನ ಜೊತೆ ಎಣ್ಣೆ ಏಟು ಕೂಡಾ ಕಮ್ಮಿ ಆಗಿರಬಹುದೇನೋ..

ಸಂಪಾದಕರ ಸದ್ಯಶೋಧನೆ

ನಿಬಂಧ ಹಾಗೂ ಪ್ರಬಂಧ

ಕೆಲ ದಿನಗಳ ಹಿಂದೆ, ಫೇಸ್ ಬುಕ್ 'ಪದಾರ್ಥ ಚಿಂತಾಮಣಿ' ಪೇಜಿನಲ್ಲಿ ಯಾರೋ ನಿಬಂಧ ಹಾಗೂ ಪ್ರಬಂಧ ಎರಡರ ವಿವರಣೆ ಹಾಗೂ ವ್ಯತ್ಯಾಸವನ್ನು ದಯವಿಟ್ಟು ತಿಳಿಸಿ ಎಂದು ಕೇಳಿದ್ದರು. ಅದಕ್ಕೆ ಅನೇಕರು ತಮ್ಮ ಧಾಟಿಯಲ್ಲಿ ಉತ್ತರಿಸಿದ್ದರು. ವಸಂತಕುಮಾರ ಪರ್ಲ ಅವರು, 'ಪ್ರಬಂಧ ಎಂಬುದು ಸಾಹಿತ್ಯದ ಒಂದು ಪ್ರಕಾರ ಮತ್ತು ಪ್ರಬಂಧದ ಗಾತ್ರ ರೂಪ ಸ್ವರೂಪ ಭಿನ್ನ. ವಸ್ತು ವಿಷಯಗಳ ಆಯ್ಕೆ, ನೋಟ, ನಡೆ, ಶೈಲಿ ಆಯಾ ಲೇಖಕನ ಮನೋಧರ್ಮಕ್ಕೆ ಬಿಟ್ಟದ್ದು. ನಿಬಂಧ ಎಂಬುದು ವಿಶ್ವವಿದ್ಯಾಲಯಕ್ಕೆ ಒಂದು ಪದವಿಗಾಗಿ ಸಲ್ಲಿಸಬೇಕಾಗಿರುವ ಒಂದು ನಿರ್ದಿಷ್ಟ ವಿಷಯ, ಚೌಕಟ್ಟು ಮತ್ತು ರೂಪ ಸ್ವರೂಪಗಳಲ್ಲಿರುವ, ವಸ್ತುವಿನ ಆಳ-ಅಗಲಗಳನ್ನು ಶೋಧಿಸುವ, ಸಂಶೋಧನಾ ಗುಣಮಟ್ಟದ ಪ್ರೌಢ ಬರವಣಿಗೆ. (ಪ್ರಬಂಧವೊಂದು ಎಂಟು ಪುಟದಿಂದ ಹದಿನೆಂಟು-ಇಪ್ಪತ್ತೆಂಟು ಪುಟದವರೆಗೆ ಇರಬಲ್ಲದು. ಆದರೆ ನಿಬಂಧವು ಸುಮಾರು ಇನ್ನೂರ ಐವತ್ತರಿಂದ ಮುನ್ನೂರು ಪುಟಗಳಷ್ಟು ಇರಬೇಕಾಗುತ್ತದೆ). (ನಿಬಂಧಕ್ಕೆ ಮಹಾಪ್ರಬಂಧ ಎಂಬ ಇನ್ನೊಂದು ಹೆಸರೂ ಉಂಟು) ಎಂದು ವಿವರಿಸಿದ್ದರು. ನಾರಾಯಣ ಕೂಡ್ಲಿಗಿ ಎಂಬುವವರು, 'ನಿಬಂಧ ಮತ್ತು ಪ್ರಬಂಧ ಪದಗಳ ಕುರಿತು ಸಂಸ್ಕೃತ ಮತ್ತು ಇತರ ಭಾಷೆಗಳಲ್ಲಿ ಹಲವಾರು ಅರ್ಥಗಳಿವೆ. ಕನ್ನಡದಲ್ಲಿ ನಿಬಂಧ ಅಂದರೆ essay. ಶಾಲಾ ಮಕ್ಕಳಿಗೆ ಸಾಮಾಜಿಕ ವಿಷಯಗಳ ಕುರಿತು ಚಿಂತನೆ ಮೂಡಿಸಲು ಒಂದು ವಿಷಯದ ಕುರಿತು ನಿಬಂಧ ರಚಿಸಲು ಹೇಳುತ್ತಾರೆ. ಅದೊಂದು ಚಿಕ್ಕ ವಿಚಾರಪೂರ್ಣ ಲೇಖನ. ಪ್ರಬಂಧ (Thesis) ಅಂದರೆ ವಿಶ್ವ ವಿದ್ಯಾಲಯಗಳಲ್ಲಿ ಸ್ನಾತಕೋತ್ತರ, ಸಂಶೋಧನಾರ್ಥಿ ವಿದ್ವಾಂಸ ವಿದ್ಯಾರ್ಥಿಗಳು ಅಥವಾ ಪಿಎಚ್.ಡಿ. ವಿದ್ಯಾರ್ಥಿಗಳು ಒಂದು ವಿಷಯದ ಕುರಿತು ಪ್ರಕಾಂಡ ವಿದ್ವಾಂಸರ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿ, ಸ್ವಂತದ ಸಂಶೋಧನೆ ಮಾಡಿ ನೀಳವಾದ ಪ್ರಬುದ್ಧ ಲೇಖನ ಪ್ರಸ್ತುತ ಪಡಿಸುವುದು. ಒಂದು ವಿಷಯದ ಕುರಿತು ಆಳವಾದ ಜ್ಞಾನ ಮತ್ತು ವಿಷಯದ ಕುರಿತು ಸ್ವಾಮ್ಯತೆ ಪಡೆಯಲು ಪ್ರಬಂಧ ರಚನೆ ಅವಶ್ಯಕ. ಪ್ರಬಂಧ ಇತರರೂ ರಚಿಸಬಹುದು' ಎಂದು ಪ್ರತಿಕ್ರಿಯಿಸಿದ್ದರು. ಕೂಡ್ಲಿಗಿ ಅವರ ಅಭಿಪ್ರಾಯಕ್ಕೆ ವಿಜಯ ಲೋಕೇಶ ಅವರು, 'ನಿಮ್ಮ ಅನಿಸಿಕೆ ಸರಿ ಇದೆ. ಆದರೆ ಕೆಲವು ಪ್ರಬಂಧ ಸಂಕಲನಗಳು ಬರೆಯುತ್ತಾರಲ್ಲ ಅವನ್ನು ಲಲಿತ ಪ್ರಬಂಧಗಳು ಎಂದೂ ಹೇಳುತ್ತಾರೆ. ಹಗುರವಾದ ವಿಷಯಗಳ ಅಥವಾ ಅಷ್ಟೊಂದು ಸಂಶೋಧನೆ ಮಾಡದ ವಿಷಯಗಳು ಲಲಿತ ಪ್ರಬಂಧಗಳು ಅನಿಸುತ್ತದೆ' ಎಂದು ಟಿಪ್ಪಣಿ ಬರೆದಿದ್ದರು. ಅದಕ್ಕೆ ಕೂಡ್ಲಿಗಿ ಅವರು, 'ಸಂದರ್ಭಗಳಿಗೆ ತಕ್ಕಂತೆ ಹಲವಾರು ಪದಗಳು ಹಲವಾರು ಭಾಷೆಗಳಲ್ಲಿ ಭಿನ್ನ ಅರ್ಥ ಕೊಡುತ್ತವೆ. ಉದಾಹರಣೆಗೆ ಇಂಗ್ಲಿಷ್ ನಲ್ಲಿ ಊಟ್ಟ ಅನ್ನುವ ಪದವನ್ನು ವಿವಿಧ ಸಂದರ್ಭಗಳಲ್ಲಿ ವಿವಿಧ ರೀತಿಯ ಅರ್ಥದಲ್ಲಿ ಬಳಸುತ್ತಾರೆ. ಅದೇ ರೀತಿ ತಮ್ಮ ವಾಕ್ಯದಲ್ಲಿ ಪದದ ಬಳಕೆಯ ಸಂದರ್ಭಕ್ಕೆ ಅನುಗುಣವಾಗಿ ತಮಗೆ ಹೆಚ್ಚು ಸೂಕ್ತ ಅನಿಸಿದ ಪದವನ್ನು ಬಳಸಬಹುದು' ಎಂದು ಹೇಳಿದ್ದರು. ವನಂ ಶಿವರಾಮು ಅವರು, 'ಸಾಹಿತ್ಯ, ವಿಜ್ಞಾನ, ವಿಚಾರ,ಪರಿಸರ ಮುಂತಾದ ನಿರ್ದಿಷ್ಟ ವಿಷಯಗಳನ್ನು ಕುರಿತು ಲೇಖನದ ಸ್ವರೂಪದಲ್ಲಿ ರಚಿಸಿದ್ದು ಪ್ರಬಂಧ ಎಂದೂ ಇಂಥವೇ ವಿಷಯಗಳನ್ನು ಕುರಿತು ಸಂಶೋಧನಾತ್ಮಕವಾಗಿ ವಿಶೇಷವಾಗಿ ವಿಶ್ವವಿದ್ಯಾಲಯಗಳಿಗೆ ಪದವಿಗಾಗಿ ಗ್ರಂಥದ ರೂಪದಲ್ಲಿ ರಚಿಸಿದ್ದು ನಿಬಂಧ/ಮಹಾಪ್ರಬಂಧ ಎಂದು ಬಳಕೆಯಲ್ಲಿದೆ' ಎಂದು ಅಭಿಪ್ರಾಯಪಟ್ಟಿದ್ದರು. 'ವಿಷಯದ ಬಂಧಕ್ಕೆ ಪ್ರಾಧಾನ್ಯ ಕೊಡದೆ ರಚಿಸುವ ಕೃತಿಗೆ ನಿಬಂಧ ಎಂದೂ, ವಿಷಯದೊಳಗೆ ಹರವಿಕೊಂಡ ರಚನೆಯನ್ನು ಪ್ರಬಂಧ ಎಂದೂ ಅನ್ನುತ್ತಾರೆ ಎಂದು ನನ್ನ ಅಭಿಪ್ರಾಯ' ಎಂದು ಕೇಶವ ಶೆಟ್ಟಿ ಬರೆದಿದ್ದರು. ಕೆ.ರಾಜಕುಮಾರ ಪ್ರಕಾರ, ನಿರ್ದಿಷ್ಟವಾದ ಬಂಧವುಳ್ಳದ್ದು ನಿಬಂಧ. ಪ್ರಧಾನವಾದ ಬಂಧವುಳ್ಳದ್ದು ಪ್ರಬಂಧ. ನಿ ಮತ್ತು ಪ್ರ ಇವೆರಡೂ ಉಪಸರ್ಗಗಳು. ಇವು ಪದದ ಹಿಂದೆ ಸೇರಿ ಅದರ ಅರ್ಥವನ್ನು ಖಚಿತಗೊಳಿಸುತ್ತವೆ, ವಿಸ್ತರಿಸುತ್ತವೆ ಅಥವಾ ಹೊಸ ಅರ್ಥವನ್ನು ಸ್ಫುರಿಸುತ್ತವೆ.

ಮತಾಂತರ ರೀತಿಯಲ್ಲಿಯೇ ಇಂಗ್ಲಿಷಿನ ಪದಾಂತರ!

ಇಂಗ್ಲಿಷಿಗೆ ಯಾವುದೂ ವರ್ಜ್ಯವಲ್ಲ ಎಂಬುದಕ್ಕೆ ಇದೇ ಸಾಕ್ಷಿ. ಭಾಷಾ ಪಂಡಿತರೇ ಹೊಸ ಪದವನ್ನು ಟಂಕಿಸಬೇಕೆಂದಿಲ್ಲ ಅಥವಾ ಅವರೇ ಠಸ್ಸೆ ಹೊಡೆಯಬೇಕು ಎಂದಿಲ್ಲ. ಹೊಸ ಪದ ಯಾವುದೇ ಮೂಲದಿಂದ ಬಂದರೂ ಇಂಗ್ಲಿಷ್ ಅದನ್ನು ತನ್ನತ್ತ ಸೆಳೆದುಕೊಂಡು ತನ್ನದನ್ನಾಗಿಸಿಕೊಳ್ಳುತ್ತದೆ. ಯಾವುದು ಚೆಂದ ಕಾಣುತ್ತೋ, ಅದನ್ನು ಹಿಡಿದು ತಂದು, ತನ್ನದು ಮಾಡಿಕೊಳ್ಳುವ ಕಸುಬುದಾರಿಕೆಯನ್ನೇ ಇಂಗ್ಲಿಷ್ ಕರಗತ ಮಾಡಿಕೊಂಡಿದೆ.

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್
vbhat@me.com

2050ರ ಹೊತ್ತಿಗೆ, ಆಕ್ಸ್ ಫರ್ಡ್ ಇಂಗ್ಲಿಷ್ ಪದಕೋಶ (ಡಿಕ್ಷನರಿ)ದಲ್ಲಿ ಎಂಟು ಸಾವಿರ ಹಿಂದಿ ಪದಗಳು ಮತ್ತು ಭಾರತದ ಇತರ ಭಾಷೆಗಳ ಮೂರು ಸಾವಿರ ಪದಗಳು ಸೇರಿಕೊಳ್ಳಲಿವೆಯಂತೆ! ಅಂದರೆ ಇನ್ನು ಮೂವತ್ತು ವರ್ಷಗಳಲ್ಲಿ ಭಾರತೀಯ ಭಾಷೆಗಳ ಹನ್ನೊಂದು ಸಾವಿರ ಪದಗಳು ಆಂಗ್ಲಮಯವಾಗಲಿವೆ. ಈ ಪದಗಳನ್ನು ಅವರು ತಮ್ಮ ಪದಗಳನ್ನಾಗಿ ಒಪ್ಪಿಕೊಳ್ಳಲಿದ್ದಾರೆ ಮತ್ತು ಬಳಕೆಗೆ ಯೋಗ್ಯವೆಂದು ಮಾನ್ಯ ಮಾಡಿಕೊಳ್ಳಲಿದ್ದಾರೆ. ಮೂಲತಃ ಅವು ಭಾರತೀಯ ಭಾಷೆಗಳ ಪದಗಳೇ ಆಗಿರಬಹುದು, ಆದರೆ ಆನಂತರ ಅವು ಇಂಗ್ಲಿಷ್ ಪದಗಳೆಂದೇ ಸರ್ವಮಾನ್ಯತೆ ಪಡೆಯಲಿವೆ. ಇದು ಒಂಥರಾ ಮತಾಂತರದಂತೆ, ಪದಾಂತರ !

ಇದು ಇಂಗ್ಲಿಷಿನ ತಾಕತ್ತು. ಆ ಭಾಷೆಯ ಒಂದು ಅದ್ಭುತ ಗುಣವೆಂದರೆ ಒಳಗೊಳ್ಳುವಿಕೆ. ಎಲ್ಲವನ್ನೂ ಹೀರಿಕೊಳ್ಳುವಿಕೆ. ಎಲ್ಲರೊಳಗೊಂದಾಗು ಮಂಕುತಿಮ್ಮ ಭಾವ. ಇಂಗ್ಲಿಷಿಗೆ ಮಡಿ, ಮೈಲಿಗೆ, ಅಸ್ಪೃಶ್ಯತೆ, ಮೇಲು – ಕೀಳು, ಬಡವ – ಶ್ರೀಮಂತ, ನಾನು – ನೀನು ಎಂಬ ಭೇದ – ಭಾವವೇ ಇಲ್ಲ. ಬಿತ್ತಿದಲ್ಲಿ ಬೆಳೆಯಬೇಕು, ಬೆಳೆದಲ್ಲಿ ತಲೆ ಎತ್ತಬೇಕು, ತಲೆ ಎತ್ತಿದಲ್ಲೆಲ್ಲ ತಲೆ ಮೇಲೆ ನಿಲ್ಲಬೇಕು ಎಂಬ ಶಿಖರಪ್ರಾಯ ಗುಣವೇ ಅದನ್ನು ಇಂದಿನ ಸರ್ವಮಾನ್ಯತೆಗೆ, ಸರ್ವತ್ರ ಹರಡುವಿಕೆಗೆ ಕಾರಣವಾಗಿದೆ. ಸಕಾರಾತ್ಮಕ ಕಾರಣಗಳಿಂದ, ಅದನ್ನು ಪಾರ್ಥೇನಿಯಮ್‌ಗೆ ಹೋಲಿಸಬಹುದು. ಗಾಳಿಯಲ್ಲಿ ಹಾರಿಬಂದು, ನೀರು, ಗೊಬ್ಬರ ಹಾಕದಿದ್ದರೂ ಅಲ್ಲಿಯೇ ಬೇರು ಬಿಡುವ ಪಾರ್ಥೇನಿಯಮ್ ಬೇರೆ ಅಲ್ಲ, ಇಂಗ್ಲಿಷ್ ಬೇರೆ ಅಲ್ಲ. 'ಶೆಟ್ಟಿ ಬಿಟ್ಟಲ್ಲೇ ಪಟ್ಟಣ' ಎಂಬಂತೆ, ಕುಂಡೆ ಊರಲು ಜಾಗ ಸಿಕ್ಕರೆ ಸಾಕು, ಇಂಗ್ಲಿಷ್ ಅಲ್ಲಿಯೇ ತನ್ನ ಸಂಸಾರ ಶುರು ಮಾಡಿ ಸಾಮ್ರಾಜ್ಯ ಸ್ಥಾಪನೆ ಮಾಡಿಬಿಡುತ್ತದೆ. ಅದಕ್ಕೆ ಯಾರ ಹಂಗೂ ಇಲ್ಲ, ಬಡಿವಾರವೂ ಇಲ್ಲ, ಅದಕ್ಕೆ ಯಾವ ಕೊಮ್ಮಣೆಯೂ ಇಲ್ಲ. ಅಂದೊಂಥರಾ ಬೇರಿಲ್ಲದ ಬಂದಳಿಕೆ! ಬೀಜ ಹಾಕಿದರೂ ಸಸಿಯಾಗುತ್ತದೆ. ಬೇರಿಗೆ ನೀರೆರೆದರೂ ಸಸಿಯಾಗುತ್ತದೆ. ಕಾಂಡವನ್ನು ನೆಟ್ಟರೂ ಸಸಿಯಾಗಿ ಅರಳುತ್ತದೆ. ಕೊನೆಗೆ ಹಸಿ ಎಲೆಯನ್ನು ನೆಟ್ಟರೂ ಗಿಡವಾಗುತ್ತದೆ.

ಫ್ರೆಂಚ್ ಭಾಷಿಕರಿಗೆ ಇಂಗ್ಲಿಷ್ ಕಂಡರೆ ಆಗೊಲ್ಲ. ಲಂಡನ್‌ನಿಂದ ಐವತ್ತೈದು ನಿಮಿಷ ವಿಮಾನದಲ್ಲಿ ಹಾರಿದರೆ ಪ್ಯಾರಿಸ್. ವೈಮಾನಿಕವಾಗಿ ಅಷ್ಟು ಹತ್ತಿರದಲ್ಲಿದೆ. ಪ್ಯಾರಿಸ್ ವಿಮಾನ ನಿಲ್ದಾಣದಲ್ಲಿ ಎಲ್ಲಿ ನೋಡಿದರೂ ಒಂದು ಇಂಗ್ಲಿಷ್ ಬೋರ್ಡ್ ಕಾಣಿಸುವುದಿಲ್ಲ. ಪ್ಯಾರಿಸ್‌ನಲ್ಲಿ ಯಾರೂ ಇಂಗ್ಲಿಷ್ ಮಾತಾಡಲು ಅಷ್ಟು ಇಷ್ಟಪಡುವುದಿಲ್ಲ. ಅಂಥ ಪ್ರಸಂಗ ಬಂದರೆ ಒಲ್ಲದ ಮನಸ್ಸಿನಿಂದಲೇ ಮಾತಿಗೆ ಮುಂದಾಗುತ್ತಾರೆ. ನೀವು ಇಂಗ್ಲಿಷಿನಲ್ಲಿ ಮಾತಾಡಿದರೂ, ಅವರು ಫ್ರೆಂಚ್‌ನಲ್ಲಿ ಉತ್ತರಿಸುತ್ತಾರೆ. ಅಂದರೆ ತನಗೆ ಇಂಗ್ಲಿಷ್ ಭಾಷೆ ಮಾತಾಡಲು ಮನಸ್ಸಿಲ್ಲ ಎಂದು ಸೂಚ್ಯವಾಗಿ ತಿಳಿಸುತ್ತಾರೆ. ಇನ್ನು ಕೆಲವರು ತಮಗೆ ಇಂಗ್ಲಿಷ್ ಬಂದರೂ, ಬರೊಲ್ಲ ಎಂದು ಖಡಾಖಡಿ ಹೇಳುತ್ತಾರೆ.

ಫ್ರಾನ್ಸ್‌ನಲ್ಲಿ ಎಲ್ಲಿಯೇ ಓಡಾಡಿದರೂ, ಅಲ್ಲೊಂದು, ಇಲ್ಲೊಂದು ಇಂಗ್ಲಿಷ್ ಬೋರ್ಡ್ ಕಾಣಿಸಬಹುದು. ಅಷ್ಟರ ಮಟ್ಟಿಗೆ ಫ್ರೆಂಚರು ಇಂಗ್ಲಿಷನ್ನು ಎಲ್ಲಿಡಬೇಕೋ ಅಲ್ಲಿ ಇಟ್ಟಿದ್ದಾರೆ. ಬ್ರಿಟನ್‌ನಿಂದ ಅಷ್ಟು ದೂರದಲ್ಲಿರುವ ಬೆಂಗಳೂರು ಇಂಗ್ಲಿಷ್ ಮಯವಾಗಿ ಇಲ್ಲಿ ಕನ್ನಡ ಮಾಯ ಆಗುತ್ತಿದ್ದರೂ, ಮಗ್ಗುಲ ದೇಶವಾಗಿರುವ ಫ್ರಾನ್ಸ್‌ನಲ್ಲಿ ಮಾತ್ರ, ಇಂಗ್ಲಿಷ್ ನಾಯಿಯನ್ನು ಮನೆಯೊಳಗೆ ಬಿಟ್ಟುಕೊಳ್ಳದೇ, ಹೊರಗೇ ಕಟ್ಟಿದ್ದಾರೆ. ಆದರೆ ನಮ್ಮ ಮನೆಯಲ್ಲಿ ಅದು ಜಗುಲಿ ದಾಟಿ ಗರ್ಭಗುಡಿ ಸೇರಿಬಿಟ್ಟಿದೆ. ಈ ಮಾತು ಬ್ರಿಟನ್‌ನ ಭಾಗವೇ ಆಗಿರುವ, ಮಲತಾಯಿ ಮಕ್ಕಳಂತಿರುವ ವೇಲ್ಸ್ ಮತ್ತು ಸ್ಕಾಟ್ಲೆಂಡ್‌ಗೂ ಅನ್ವಯ. ವೇಲ್ಸ್ ಮತ್ತು ಸ್ಕಾಟಿಷ್ ಮಂದಿಗೆ ಇಂಗ್ಲಿಷ್ ಕಂಡರೆ ಆಗುವುದಿಲ್ಲ.

ತಮಾಷೆ ಏನು ಗೊತ್ತಾ? ಅವರು ತನ್ನನ್ನು ತಿರಸ್ಕಾರ ಮಾಡಲಿ, ಕೆಟ್ಟದಾಗಿ ನೋಡಲಿ, ಇಂಗ್ಲಿಷ್‌ಗೆ ಡೋಂಟ್ ಕೇರ್! ಇಂಗ್ಲಿಷಿನ ಬಹುತೇಕ ಪದಗಳ ಮೂಲ ಫ್ರೆಂಚ್. ಫ್ರೆಂಚ್ ಅದೆಷ್ಟೇ ತನ್ನನ್ನು ತಿರಸ್ಕರಿಸಲಿ, ಇಂಗ್ಲಿಷ್ ಅದರಿಂದ ಬೇಸರ ಮಾಡಿಕೊಂಡಿಲ್ಲ, ಹಾಗಂತ ಫ್ರೆಂಚ್ ತನ್ನ ಮೈಲಿಗೆ ಬಿಟ್ಟಿಲ್ಲ. ತನ್ನ ಭಾಷೆಯಲ್ಲಿ ಇಂಗ್ಲಿಷ್ ನುಸುಳುವುದನ್ನು ಈಗಲೂ ಸಹಿಸುವುದಿಲ್ಲ. ತನ್ನ ಭಾಷೆಯ ಸೊಗಡು ಸ್ವಲ್ಪವೂ ಮುಕ್ಕಾಗುವುದನ್ನು ಇಷ್ಟಪಡುವುದಿಲ್ಲ. ಆದರೆ ಇಂಗ್ಲಿಷ್ ಮಾತ್ರ ತನ್ನನ್ನು ದ್ವೇಷಿಸುವವರನ್ನು ಪ್ರೀತಿಸುತ್ತದೆ. ಆ ಮತ್ತು ಸ್ಕಾಟಿಷ್ ಮಂದಿ ಎಷ್ಟರಮಟ್ಟಿಗೆ ಇಂಗ್ಲಿಷ್ ವಿರೋಧಿಗಳೆಂದರೆ, ಇಂಗ್ಲೆಂಡ್ ಮತ್ತು ಫ್ರಾನ್ಸ್ ಮಧ್ಯೆ ಫುಟ್ಬಾಲ್ ಪಂದ್ಯ ನಡೆಯುತ್ತಿದ್ದರೆ, ಫ್ರಾನ್ಸ್ ಪರ. ಭಾರತ ಮತ್ತು ಇಂಗ್ಲೆಂಡ್ ನಡುವೆ ಕ್ರಿಕೆಟ್ ಪಂದ್ಯ ನಡೆಯುವಾಗ ಭಾರತದ ಪರ.

ಆದರೆ ಇಂಗ್ಲಿಷರು ಇದಕ್ಕೆಲ್ಲ ತಲೆಕೆಡಿಸಿಕೊಂಡಿಲ್ಲ, ಇವರಿಗೆ ಸಾಥ್ ಕೊಡುವವರು ಪಕ್ಕದ ಐರಿಷ್ ಮಂದಿ. ಅವರಿಗೂ ಇಂಗ್ಲಿಷರನ್ನು ಕಂಡರೆ ಅಷ್ಟಕ್ಕಷ್ಟೇ. ಮತ್ತು ಸ್ಕಾಟಿಷ್ ಮಂದಿ ತನ್ನನ್ನು ಕ್ಯಾಕರಿಸಿ ನೋಡಿದರೂ ಇಂಗ್ಲಿಷ್ ಪಿತ್ತ ಕೆಣಕಿಲ್ಲ. ಅವರಿಬ್ಬರನ್ನೂ ಇಂಗ್ಲಿಷ್ ಇಂದು ಪ್ರೀತಿಯಿಂದಲೇ ಅಪೋಷಣೆ ಮಾಡಿದೆ. ಇಂಗ್ಲೀಷಿನಲ್ಲಿ ಮತ್ತು ಸ್ಕಾಟಿಷ್ ಮೂಲದ ಹತ್ತು ಸಾವಿರಕ್ಕೂ ಹೆಚ್ಚು ಪದಗಳಿವೆ. ಹಾಗೆಂದು ಆ ಎರಡು ಭಾಷೆಗಳು (ಮತ್ತು ಸ್ಕಾಟಿಷ್) ಇಂದಿಗೂ ತಮ್ಮ ಭಾಷೆಗಳಲ್ಲಿ ಇಂಗ್ಲಿಷ್ ಪದ ನುಸುಳಿ ಬರುವುದನ್ನು ಇಷ್ಟಪಡುವುದಿಲ್ಲ. ಇಂಗ್ಲಿಷ್ ಪದ ಕಂಡರೆ ಜಿರಳೆ ಅಥವಾ ಸೊಳ್ಳೆ ಕಂಡಂತೆ ಆಡುತ್ತಾರೆ. ಸಂಪ್ರದಾಯವಾದಿ, ಕಟ್ಟರ್ ಬ್ರಾಹ್ಮಣರ ಪೂಜೆ ಮಧ್ಯೆ ಮುಟ್ಟಾದ ಹೆಂಗಸರು ಬಂದಂತೆ ಬಡಬಡಿಸುತ್ತಾರೆ. ಆದರೆ ಇಂಗ್ಲಿಷ್ ಮಾತ್ರ ಕೂಲ್ ಕೂಲ್! ಅದರ ಈ ಗುಣವೇ ಅದನ್ನು ಅಂತಾರಾಷ್ಟ್ರೀಯ ಮಟ್ಟಕ್ಕೇರಿಸಿದೆ. ಜಗತ್ತಿನ ಸುಮಾರು ಎಪ್ಪತ್ತು ದೇಶಗಳಲ್ಲಿ ಇಂಗ್ಲಿಷ್ ಅಧಿಕೃತ ಭಾಷೆಯಾಗಿ ಗೌರವ ಪಡೆದಿದೆ.

ಒಂದು ಭಾಷೆಯಲ್ಲಿ ಇನ್ನೊಂದು ಭಾಷೆಯ ಪ್ರವೇಶವನ್ನು ಯಾರೂ ಸಹಿಸಿಕೊಳ್ಳುವುದಿಲ್ಲ. ಇಂದಿಗೂ ನಾವು ಮರಾಠಿ ಅಥವಾ ಉರ್ದು ಪದ ಬಳಸಿದರೆ, ಕೆಲವರ ಪಿತ್ತ ನೆತ್ತಿಗೇರುತ್ತದೆ. ಕನ್ನಡ ಪದ ಇರಲಿಲ್ಲವಾ, ಯಾಕೆ ಆ ಭಾಷೆಗಳ ಮೇಲೆ ಮೋಹ, ಕನ್ನಡ ಪದಗಳನ್ನೇ ಬಳಸಿ ಎಂದು ಸಣ್ಣ ಬೌದ್ಧಿಕ್ ಕೊಡುತ್ತಾರೆ. ಅಷ್ಟೇ ಅಲ್ಲ, ಕನ್ನಡ ಭಾಷೆಯಲ್ಲಿ ಸಂಸ್ಕೃತ ಹಾಸುಹೊಕ್ಕಾಗಿದೆ. ಯಾವುದು ಕನ್ನಡ, ಯಾವುದು ಸಂಸ್ಕೃತ ಎಂದು ಬೇರ್ಪಡಿಸಲು ಆಗದಷ್ಟು ಒಂದರೊಳಗೆ ಮತ್ತೊಂದು ಮಿಳಿತವಾಗಿದೆ. ಆದರೂ ಸಂಸ್ಕೃತ ಪದಗಳನ್ನು ಬಳಸಿದಾಗ ಸಂಸ್ಕೃತವೇಕೆ, ಕನ್ನಡ ಪದ ಇರಲಿಲ್ಲವಾ ಎಂದು ಕೆಂಗಣ್ಣು ಬೀರುತ್ತಾರೆ. ಮಾಸಾಂತ್ಯ ಎಂದು ಯಾಕೆ ಬರೆಯುತ್ತೀರಿ, 'ತಿಂಗಳ ಕೊನೆ' ಎಂದು ಹೇಳಬಹುದಲ್ಲ ಎಂದು ತಿದ್ದುತ್ತಾರೆ. ಸಂಸ್ಕೃತವೇ ಕನ್ನಡಕ್ಕೆ ಮೂಲಾಧಾರವಾಗಿದ್ದರೂ, ಸಂಸ್ಕೃತ ಬಳಕೆಯನ್ನು ಇಷ್ಟಪಡದ ಕನ್ನಡಿಗರಿದ್ದಾರೆ. ಅದಕ್ಕಿಂತ ಹೆಚ್ಚಾಗಿ, ಸಂಸ್ಕೃತವನ್ನು ದ್ವೇಷಿಸುವವರಿದ್ದಾರೆ. ಸಂಸ್ಕೃತ ಕಲಿಯದೇ, ಒಳ್ಳೆಯ ಕನ್ನಡವನ್ನು ಕಲಿಯುವುದು ಸಾಧ್ಯವಿಲ್ಲ ಎಂಬುದು ಗೊತ್ತಿದ್ದೂ ಸಂಸ್ಕೃತವನ್ನು ದ್ವೇಷಿಸುವವರಿದ್ದಾರೆ. ಅದು ಪುರೋಹಿತಶಾಹಿಗಳ ಭಾಷೆ, ಮೇಲ್ವರ್ಗದವರ ಭಾಷೆ, ದೇವಭಾಷೆ ಎಂದು ದೂರ ತಳ್ಳುತ್ತಾರೆ. ಮೃತಭಾಷೆ ಎಂದು ಗೇಲಿ ಮಾಡುತ್ತಾರೆ. ಆದರೆ ಇಂಗ್ಲಿಷ್‌ಗೆ ಸಂಸ್ಕೃತದ ಬಗ್ಗೆ ಈ ಬೇಸರವಿಲ್ಲ, ಅಲ್ಲಿ ಹೀರಿಕೊಳ್ಳಲು ಏನಾದರೂ ಸಿಕ್ಕರೆ ಅದನ್ನು ಹೀರದೇ ಬಿಡುವುದಿಲ್ಲ. ಸಿಕ್ಕಷ್ಟು ಬಾಚಿಕೊಳ್ಳದೇ ಬಿಡುವುದಿಲ್ಲ.

ಆದರೆ ಸಂಸ್ಕೃತ ಅಪ್ಪಿತಪ್ಪಿಯೂ ತನ್ನ ಸನಿಹ ಇಂಗ್ಲೀಷನ್ನು ಬಿಟ್ಟುಕೊಳ್ಳಲಿಕ್ಕಿಲ್ಲ. ಯಾಗ ಶಾಲೆಗೆ ಕಜ್ಜಿನಾಯಿ ಬಂದಂತೆ ಓಡಿಸುತ್ತದೆ. ಸಂಸ್ಕೃತ ಅಂದ್ರೆ ಸಂಸ್ಕೃತ ಮಾತ್ರ. ಬೇರೆ ಭಾಷೆಗಳ ಬೆರಕೆ ಮತ್ತು ಕಲಬೆರಕೆಯನ್ನು ಅದು ಸಹಿಸುವುದಿಲ್ಲ. ಅಲ್ಲಿ ಸಂಸ್ಕೃತವೇ ಪಿಂಡಪ್ರಧಾನ! ಅದೇ ದೇವಭಾಷೆಯಾದ್ದರಿಂದ, ದೇವರು ಇಂಗ್ಲಿಷ್ ಬಳಸುತ್ತಿದ್ದಾನಾ ಎಂದು ಸಂಸ್ಕೃತದಲ್ಲಿ ಇಂಗ್ಲಿಷ್ ಭಾಷೆಯ ಪ್ರಯೋಗವನ್ನು ವಿರೋಧಿಸುತ್ತಾರೆ. ಸಂಸ್ಕೃತದಲ್ಲಿ ಎಲ್ಲಾ ಪದಗಳೂ ಇರುವುದರಿಂದ, ಬೇರೆ ಭಾಷೆಗಳ ಭುಜದ ಮೇಲೆ ತಲೆಯೂರಬೇಕಿಲ್ಲ ಎಂದು ವಾದಿಸುತ್ತಾರೆ. ಹೀಗಾಗಿ ಸಂಸ್ಕೃತ ಇಷ್ಟು ಶ್ರೀಮಂತ, ವೈಶಿಷ್ಟ್ಯಪೂರ್ಣ, ಸತ್ವಭರಿತ ಭಾಷೆಯಾಗಿದ್ದರೂ, ಇಂದಿಗೂ ಒಳಮನೆ ದಾಟಿ ಅಂಗಳಕ್ಕೆ ಬಂದಿಲ್ಲ, ಆದರೆ ಇಂಗ್ಲಿಷ್ ಆಗಲೇ ವಿಶ್ವದಾದ್ಯಂತ ಸುತ್ತು ಹೊಡೆಯುತ್ತಲೇ ಇದೆ. ಸಂಸ್ಕೃತದ ಮನಸ್ಸು ಪರಕೀಯವಾದುದನ್ನು ಸ್ವೀಕರಿಸುವುದಿಲ್ಲ. ಇದು ಕೆಟ್ಟದ್ದು ಎಂಬುದು ವಾದವಲ್ಲ. ಬೇರೆ ಭಾಷೆಯ ಪ್ರವೇಶಕ್ಕೆ ಅನುವು ಮಾಡಿಕೊಟ್ಟರೆ, ಮೂಲಭಾಷೆ ವಿರೂಪವಾಗುತ್ತದೆ, ಮೂಲ ಸಂಕರ ಕೆಟ್ಟುಹೋಗುತ್ತದೆ ಎಂಬ ಒಂದು ವಾದವಿದೆ. ಅದನ್ನು ಸುಲಭಕ್ಕೆ ತಳ್ಳಿ ಹಾಕಲು ಆಗುವುದಿಲ್ಲ.

ಆದರೆ ವಸ್ತುಸ್ಥಿತಿ ಏನೆಂದರೆ, ಈ ಕಣ್ಣುಕಾಪು ಕಟ್ಟಿಕೊಂಡು ನಡೆಯುವುದರಿಂದ, ನಮ್ಮ ಭಾಷೆ ನಮ್ಮ ಪ್ರದೇಶವನ್ನು ಮೀರಿ ವಿಸ್ತರಿಸುವುದಿಲ್ಲ ಎಂಬುದೂ ಅಷ್ಟೇ ಸತ್ಯ. ಒಂದು ತಮಿಳು ಪದವನ್ನು ಸಹಿಸಿಕೊಳ್ಳುವಷ್ಟು ನಾವು ಭಾಷಾ ಉದಾರಿಗಳಲ್ಲ. ಈ ಹಿನ್ನೆಲೆಯಲ್ಲಿ ಇಂಗ್ಲೀಷನ್ನು ನೋಡಬೇಕು. ಫ್ರೆಂಚ್, ಡಚ್, , ಸ್ಕಾಟಿಷ್, ಐರಿಷ್ ಮಂದಿ ತಮ್ಮನ್ನು ದ್ವೇಷ ಮಾಡಿದರೂ, ಅವರ ಭಾಷೆಗಳಲ್ಲಿರುವ ಮಕರಂದವನ್ನು ಹೀರಲು ಅವರಿಗೆ ಯಾವ ಸಂಕೋಚವೂ ಇಲ್ಲ. ಇಂಗ್ಲಿಷಿನ ಈ ಒಳಗೊಳ್ಳುವ, ತನ್ನೊಟ್ಟಿಗೆ ಕರೆದುಕೊಂಡು ಹೋಗುವ, ಜತೆಜತೆಯಾಗಿ ಹೆಜ್ಜೆ ಹಾಕುವ ಮನಸ್ಸು ಅದಕ್ಕೆ ವಿಶ್ವವ್ಯಾಪಿ ಸ್ವರೂಪವನ್ನು ಕೊಟ್ಟಿದೆ. ಇಂಗ್ಲಿಷಿನ ಗಾಳಿಯೇ ಬೀಸದ ಚೀನಾ ಕೂಡ, ಎರಡೂ ಕೈಗಳಿಂದ ಆ ಭಾಷೆಯನ್ನೂ ಆಲಂಗಿಸಿಕೊಳ್ಳುತ್ತಿದೆ. ವಿಮಾನ ಹಾರಿ ಹೋಗಲು ಸಾಧ್ಯವಿರುವಲ್ಲೆಲ್ಲಾ ಇಂಗ್ಲಿಷ್ ಸಹ ಹಾರಿ ಹೋಗಿ, ಕುಳಿತುಕೊಳ್ಳುತ್ತದೆ ಎಂಬ ಮಾತಿದೆ. (ಅದಕ್ಕೇ English is the language of the air ಎಂದು ಹೇಳುತ್ತಾರೆ. ಪೈಲಟ್ ಯಾವುದೇ ದೇಶದವನಾಗಿರಲಿ, ವಿಮಾನದಲ್ಲಿ ಕುಳಿತಾಗ ಇಂಗ್ಲಿಷಿನಲ್ಲಿಯೇ ಮಾತಾಡಬೇಕು, ಏರ್ ಟ್ರಾಫಿಕ್ ಕಂಟ್ರೋಲರ್ ಜತೆ ಇಂಗ್ಲಿಷಿನಲ್ಲಿಯೇ ವ್ಯವಹರಿಸಬೇಕು.)

ನಿಮಗೆ ಸುಮಾರು ಮುನ್ನೂರು ಇಂಗ್ಲಿಷ್ ಪದಗಳ ಅರ್ಥ ಮತ್ತು ತಕ್ಕಮಟ್ಟಿಗಿನ ವ್ಯಾಕರಣ ಮತ್ತು ಬಳಕೆ ಗೊತ್ತಿದ್ದರೆ, ಆ ಭಾಷೆಯಲ್ಲಿ ಪತ್ರಕರ್ತರಾಗಬಹುದು. ಬ್ರಿಟನ್ನಿನ ಜನಪ್ರಿಯ ಟ್ಯಾಬ್ಲಾಯ್ಡ್ 'ದಿ ಸನ್' ಪತ್ರಿಕೆ ಕರಾರುವಾಕ್ಕಾಗಿ 281 ಪದಗಳನ್ನು ಆಯ್ಕೆ ಮಾಡಿದೆ. ಅಷ್ಟು ಪದಗಳ ಅರ್ಥ ಮತ್ತು ಬಳಕೆ ಗೊತ್ತಿದ್ದವರು ಆ ಪತ್ರಿಕೆಯಲ್ಲಿ ಉತ್ತಮ ಪತ್ರಕರ್ತರಾಗಬಹುದು. ಇದು ಆ ಪತ್ರಿಕೆಯೇ ನಿರ್ಧರಿಸಿದ ಸಂಗತಿ. ಆದರೆ ಇಂಗ್ಲಿಷ್ ಭಾಷೆಯಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಪದಗಳಿವೆ. ಇವು ಪದಕೋಶಗಳಲ್ಲಿ ಇರುವ ಪದಗಳು. ಪದಕೋಶಗಳಲ್ಲಿ ಇರದ, ಆದರೆ ಬಳಕೆಯಲ್ಲಿರುವ ಅವೆಷ್ಟೋ ಪದಗಳಿವೆ. ಅವುಗಳನ್ನು ಲೆಕ್ಕ ಹಾಕುವುದು ಕಷ್ಟವೇ. ಆ ಪೈಕಿ ಮೂಲ ಇಂಗ್ಲಿಷ್ ಪದಗಳ ಸಂಖ್ಯೆ ಕೇವಲ ಎಂಬತ್ತು ಸಾವಿರ. ಉಳಿದವುಗಳೆಲ್ಲ ಕದ್ದ ಮಾಲುಗಳೇ! ಎರವಲು ಪದಗಳೇ! ಅಂದರೆ ಬೇರೆ ಭಾಷೆಗಳ ಪದಗಳ ಸಂಖ್ಯೆಯೇ ಜಾಸ್ತಿ ಎಂದಂತಾಯಿತು. ಸ್ವಾರಸ್ಯವೆಂದರೆ, ಇಂಗ್ಲೀಷಿನಲ್ಲಿ ಪರಭಾಷಾ ಪದಗಳ ಪಾರಮ್ಯ, ಹಾರಾಟ, ಮೋಜು-ಮಸ್ತಿಯೇ ಜಾಸ್ತಿ.

ಪ್ರತಿ ಎರಡು ಗಂಟೆಗೊಂದು ಪದ ಇಂಗ್ಲಿಷ್ ಭಾಷೆಯನ್ನು ಸೇರುತ್ತದೆ. ಅದು ಯಾವ ಭಾಷೆಯಿಂದ ಬೇಕಾದರೂ ಬಂದಿರಬಹುದು. ಯಾವುದೇ ಪದವನ್ನಾದರೂ ತನ್ನದನ್ನಾಗಿಸಿಕೊಳ್ಳುವ ಕಲೆಗಾರಿಕೆಯೇ ಇಂಗ್ಲಿಷಿನ ವೈಶಿಷ್ಟ್ಯ. ಬೆಂಗಳೂರಿನಲ್ಲಿರುವ ಐಟಿ ಕ್ಷೇತ್ರದಲ್ಲಿರುವ ಸಿಬ್ಬಂದಿ ಏಕಾಏಕಿ ತಮ್ಮ ಉದ್ಯೋಗವನ್ನು ಕಳೆದುಕೊಳ್ಳಲಾರಂಭಿಸಿದಾಗ, Bangalored ಎಂಬ ಪದ ಇಂಗ್ಲಿಷ್ ಭಾಷೆಯನ್ನು ಸೇರಿಕೊಂಡಿತು. ಈ ಪದವನ್ನು ಹುಟ್ಟುಹಾಕಿದವರು ಅಮೆರಿಕದವರು. When an American says that he has been Bangalored, what he means is that he has lost his job. ಒಂದು ನಗರದ ಹೆಸರೇ ಕ್ರಿಯಾಪದವಾಗಿ ರೂಪು ಪಡೆಯಿತು. ಈಗಲೂ ಈ ಪದ ಪತ್ರಿಕೆಯ ಹೆಡ್‌ಲೈನ್‌ಗಳಲ್ಲಿ ಬರೆಯುವಷ್ಟು ಜನಪ್ರಿಯವಾಗಿದೆ.

ಇಂಗ್ಲಿಷಿಗೆ ಯಾವುದೂ ವರ್ಜ್ಯವಲ್ಲ ಎಂಬುದಕ್ಕೆ ಇದೇ ಸಾಕ್ಷಿ. ಭಾಷಾ ಪಂಡಿತರೇ ಹೊಸ ಪದವನ್ನು ಟಂಕಿಸಬೇಕೆಂದಿಲ್ಲ ಅಥವಾ ಅವರೇ ಠಸ್ಸೆ ಹೊಡೆಯಬೇಕು ಎಂದಿಲ್ಲ. ಹೊಸ ಪದ ಯಾವುದೇ ಮೂಲದಿಂದ ಬಂದರೂ ಇಂಗ್ಲಿಷ್ ಅದನ್ನು ತನ್ನತ್ತ ಸೆಳೆದುಕೊಂಡು ತನ್ನದನ್ನಾಗಿಸಿಕೊಳ್ಳುತ್ತದೆ. ಅಷ್ಟಕ್ಕೂ ಇಂಗ್ಲಿಷ್ ಭಾಷೆಯ ಅಕ್ಷರಗಳು ಮೂಲದಲ್ಲಿ ಲ್ಯಾಟಿನ್ (ಇದನ್ನು ರೋಮನ್ ಸ್ಕ್ರಿಪ್ಟ್ ಅಂತಲೂ ಕರೆಯುತ್ತಾರೆ) ಭಾಷೆಯದ್ದು. ಯಾವುದು ಚೆಂದ ಕಾಣುತ್ತೋ, ಅದನ್ನು ಹಿಡಿದು ತಂದು, ತನ್ನದು ಮಾಡಿಕೊಳ್ಳುವ ಕಸುಬುದಾರಿಕೆಯನ್ನೇ ಇಂಗ್ಲಿಷ್ ಕರಗತ ಮಾಡಿಕೊಂಡಿದೆ.

ಇಂಗ್ಲಿಷ್ ಭಾಷೆಯೆಂದರೆ ಒಂದು ರೀತಿಯಲ್ಲಿ ಗಂಗಾ ನದಿಯಿದ್ದಂತೆ. ಅದು ಹರಿಯುತ್ತಲೇ ಹೋಗುತ್ತದೆ. ಅದರಲ್ಲೂ ಈ ನದಿಗೆ ಡೊಣ್ಣೆ ನಾಯಕನ ಅಪ್ಪಣೆಯಿಲ್ಲ. ಅದಕ್ಕೆ ಹರಿಯುವುದೊಂದೇ ಗೊತ್ತು. ತನ್ನ ಜತೆ ಸಿಗುವ ಎಲ್ಲಾ ಕಸ,ಕಡ್ಡಿ,ಹುಲ್ಲು, ದಿಮ್ಮಿ,ಜಲಚರ ... ಹೀಗೆ ಎಲ್ಲವನ್ನೂ ಒಟ್ಟಿಗೆ ಕರೆದುಕೊಂಡು ಹರಿಯುತ್ತದೆ. ಯಾರು ಬೇಕಾದರೂ ಸೇರಿಕೊಳ್ಳಬಹುದು. ಉಪನದಿಗಳೆಲ್ಲಾ ಜತೆಯಾಗಬಹುದು, ಪಾತಳಿ ಮಾಡಿಕೊಳ್ಳಬಹುದು. ಬದುವಿನೊಂದಿಗೆ ಬದಲಾವಣೆಯ ಮುಖಜಭೂಮಿಯಲ್ಲಿ ಮುಖ ಮಾಡಬಹುದು. ಒರತೆಯಾಗಿ, ಕಿರು ತೊರೆಯಾಗಿ, ಝರಿಯಾಗಿ, ಜಲಪಾತವಾಗಿ, ನದಿಯಾಗಿ, ಮಹಾನದಿಯಾಗಿ... ಹೀಗೆ ಎಲ್ಲರನ್ನೂ ಸೇರಿಸಿಕೊಂಡು ಹರಿಯುವುದೆಂದೇ ಗೊತ್ತು. ಅದು ಬಂದವರನ್ನೆಲ್ಲ ಬರಸೆಳೆದು ಹಿಡಿದೆಳೆದು ಜತೆಗಾರನಾಗುವ ಲೋಕಲ್ ಟ್ರೇನೂ ಹೌದು. ಪದಕೋಶವೆಂಬ ಮಹಾಸಾಗರ ಸೇರುವ ತನಕ, ಇಂಗ್ಲಿಷ್‌ಗೆ ಅಡೆತಡೆ ಇಲ್ಲ, ಅಣೆಕಟ್ಟೂ ಇಲ್ಲ. ಅದೇ ಅದರ ವೈಶಿಷ್ಟ್ಯ.

ಮುಂದೊಮ್ಮೆ ನಮ್ಮ ಕನ್ನಡ, ಹಿಂದಿ, ಭೋಜಪುರಿ, ಮರಾಠಿ, ಬಂಗಾಳಿ, ಅಸ್ಸಾಮಿ, ಕೊಂಕಣಿ, ತುಳು ಪದಗಳ ಅರ್ಥಕ್ಕಾಗಿ ಇಂಗ್ಲಿಷ್ ಪದಕೋಶವನ್ನು ನೋಡುವ ದಿನಗಳು ಬಂದರೆ ಅಚ್ಚರಿಪಡಬೇಕಿಲ್ಲ.

ಶಾಲಾ ಬ್ಯಾಗ್ ತೂಕದ ಸಮಸ್ಯೆಗೆ ಮುಕ್ತಿ ಎಂದು?

ಅಭಿಮತ
ಸುರೇಂದ್ರ ಪೈ
vveditoped@gmail.com

ಶೈಕ್ಷಣಿಕ ವರ್ಷ 2024-25 ಈಗಾಗಲೇ ಪ್ರಾರಂಭವಾಗಿದ್ದು, ನಿರೀಕ್ಷೆಯಂತೆ ಸರಕಾರಿ ಶಾಲೆಯ ದಾಖಲಾತಿ ಕುಂಠಿತವಾದರೆ, ಖಾಸಗಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿಯು ಹೆಚ್ಚಾಗುತ್ತಿದೆ. ಇದೇ ಸಮಯದಲ್ಲಿ ಮತ್ತೆ ಮಕ್ಕಳ ಶಾಲಾ ಬ್ಯಾಗ್ ತೂಕದಲ್ಲಿ ಹೆಚ್ಚಳವಾಗುತ್ತಿರುವ ಬಗ್ಗೆ ಪಾಲಕರು ಕಳವಳವನ್ನು ವ್ಯಕ್ತಪಡಿಸಿತ್ತಿರುವ ಘಟನೆಗಳು ಎಲ್ಲೆಡೆ ಕಂಡುಬರುತ್ತಿದೆ. ಇದು ಇಂದು-ನಿನ್ನೆಯ ಸಮಸ್ಯೆಯಲ್ಲ ಕಳೆದ ಹಲವು ವರ್ಷಗಳಿಂದಲೂ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ವಿವಿಧ ಸಮಿತಿಯ ರಚನೆಯಾಗಿ, ವಿವಿಧ ಶಿಕ್ಷಣ ಇಲಾಖೆಯ ಹತ್ತಾರು ಸುತ್ತೋಲೆಗಳು ಜಾರಿಯಾಗಿವೆ. ಆದರೂ ಸಹ ವರ್ಷದಿಂದ ವರ್ಷಕ್ಕೆ ಅದರಲ್ಲೂ 1 ರಿಂದ 4 ನೇ ತರಗತಿಯ ಮಕ್ಕಳ ಬ್ಯಾಗ್‌ನ ತೂಕದ ಹೊರೆ ಹೆಚ್ಚಾಗುತ್ತಲೇ ಇದೆ. ಇಷ್ಟಾದರೂ ಇದಕ್ಕೊಂದು ಲಂಗು ಲಗಾಮು ಹಾಕಲು ಸಾಧ್ಯವಾಗುತ್ತಿಲ್ಲ ಏಕೆ? ಪುಟಾಣಿಗಳ ಬೆನ್ನ ಹೊರೆಯ ತೂಕವನ್ನು ಇಳಿಸುವ ಜವಬ್ದಾರಿ ಯಾರದ್ದು? ಈ ಸಮಸ್ಯೆಗೆ ಮುಕ್ತಿ ಹೇಗೆ? ಎಂಬ ಪ್ರಶ್ನೆ ಎಲ್ಲರನ್ನೂ ಕಾಡುತ್ತಿದೆ.

ವರ್ಷ ವರ್ಷವೂ ಮುನ್ನಲೆಗೆ ಬರುವ ವಿಷಯವಾದ ಶಾಲಾ ಬ್ಯಾಗ್ ತೂಕದ ಸಮಸ್ಯೆಯ ಗಂಭೀರತೆಯನ್ನು ಅವಲೋಕಿಸುವುದಾದರೆ 2016 ರಲ್ಲಿ, ಅಸೋಸಿಯೇಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಆ್ಯಂಡ್ ಇಂಡಸ್ಟ್ರಿ ಆಫ್ ಇಂಡಿಯಾ ತನ್ನ ಹೆಲ್ತ್ ಕೇರ್ ಕಮಿಟಿಯ ಅಡಿಯಲ್ಲಿ, ಹತ್ತು ಭಾರತೀಯ ನಗರಗಳಲ್ಲಿ ನಡೆಸಿದ ಸಮೀಕ್ಷೆಯಲ್ಲಿ, 13 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ತಮ್ಮ ದೇಹದ ತೂಕದ 45 ಪ್ರತಿಶತಕ್ಕಿಂತ ಹೆಚ್ಚು ತೂಕ ಹೊರುತ್ತಾರೆ, ಇದರಿಂದಾಗಿ 68 ಪ್ರತಿಶತ ಶಾಲಾ ಮಕ್ಕಳು ಅಪಾಯಕಾರಿ ಬೆನ್ನು ಮೂಳೆಯ ನೋವಿನ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ ಎಂದು ವರದಿ ಮಾಡಿದೆ. ಇಷ್ಟೇ ಅಲ್ಲ, ಒಂದು ಭುಜದ ಮೇಲೆ ಬ್ಯಾಕ್‌ಬ್ಯಾಕ್‌ಗಳನ್ನು ಸಾಗಿಸುವುದು ತಪ್ಪು ಅಭ್ಯಾಸವಾಗಿದೆ ಏಕೆಂದರೆ ಇದು ಸ್ನಾಯುಗಳನ್ನು ಆಯಾಸಗೊಳಿಸುತ್ತದೆ. ಬೆನ್ನುಮೂಳೆಯು ಎದುರು ಭಾಗಕ್ಕೆ ವಾಲುತ್ತದೆ, ಮಧ್ಯದ ಬೆನ್ನು, ಪಕ್ಕೆಲುಬುಗಳ ಮೇಲೆ ಹೆಚ್ಚು ಒತ್ತಡ ಬೀಳುತ್ತದೆ. ಮತ್ತು ಈ ಸ್ನಾಯುವಿನ ಅಸಮತೋಲನವು ಸ್ನಾಯುವಿನ ಒತ್ತಡ, ಸ್ನಾಯು ಸೆಳೆತ ಮತ್ತು ಬೆನ್ನುನೋವಿಗೆ ಕಾರಣವಾಗಬಹುದು. ಇದು ದೀರ್ಘಾವಧಿಯಲ್ಲಿ ದೇಹದಲ್ಲಿ ಅಸಮತೋಲನವನ್ನು ಉಂಟುಮಾಡುತ್ತದೆ ಮತ್ತು ನರಮಂಡಲದ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ ಎಂದು ಹೇಳಲಾಗಿದೆ. ಇಂಟರ್ನ್ಯಾಷನಲ್ ಜರ್ನಲ್ ಆಫ್ ಮೆಡಿಕಲ್ ಸೈನ್ಸ್ ಅಂಡ್ ಇನ್ನೋವೇಟಿವ್ ರಿಸರ್ಚ್ (IJMSIR) ನಲ್ಲಿ ಪ್ರಕಟವಾದ ಸಂಶೋಧನಾ ಪ್ರಬಂಧವು ಈ ಮಾತನ್ನು ಪುಷ್ಟಿಕರಿಸುತ್ತದೆ.

ಮಕ್ಕಳು ನಮ್ಮ 'ದೇಶದ ಸಂಪತ್ತು' ಎಂದು 1976ರ ಮಕ್ಕಳ ರಾಷ್ಟ್ರೀಯ ನೀತಿಯಲ್ಲಿ ಉಲ್ಲೇಖಿಸಿದೆ. 1992 ರಲ್ಲಿ ಕೇಂದ್ರ ಸರಕಾರವು ವಿದ್ಯಾರ್ಥಿಗಳ ಮೇಲಿನ ಶೈಕ್ಷಣಿಕ ಹೊರೆಯನ್ನು ಕಡಿಮೆ ಮಾಡುವ ಮಾರ್ಗಗಳನ್ನು ಸೂಚಿಸಲು ಸಮಿತಿಯನ್ನು ಸ್ಥಾಪಿಸಿತು. ಅದರಂತೆ 1993 ರಲ್ಲಿ, ಯಶಪಾಲ್ ಸಮಿತಿಯ ವರದಿ 'ಹೊರೆಯಿಲ್ಲದ ಕಲಿಕೆ', ಭಾರವಾದ ಶಾಲಾ ಬ್ಯಾಗ್‌ಗಳ ಸಮಸ್ಯೆಯನ್ನು ಎತ್ತಿ ತೋರಿಸಿದೆ. 2005 ರಲ್ಲಿ, ರಾಷ್ಟ್ರೀಯ ಪಠ್ಯಕ್ರಮದ ಚೌಕಟ್ಟು ಪಠ್ಯಕ್ರಮದ ವಹಿವಾಟು ಮತ್ತು ಮಾನಸಿಕ ಹೊರೆ ಕುರಿತು ಅಧ್ಯಯನ ಮಾಡಿ ಕೆಲವು ಶಿಫಾರಸುಗಳನ್ನು ವರದಿ ಮಾಡಿತ್ತು.

ಭಾರತದಲ್ಲಿ ಮೊದಲ ಬಾರಿಗೆ ಚಿಕ್ಕ ವಯಸ್ಸಿನ ಮಕ್ಕಳ ದೈಹಿಕ, ಮಾನಸಿಕ ಆರೋಗ್ಯದ ಹಿತದೃಷ್ಟಿಯನ್ನು ಪರಿಗಣಿಸಿ 2006 ರಲ್ಲಿ ಮಕ್ಕಳ ಶಾಲಾ ಚೀಲ (ತೂಕದ ಮೇಲಿನ ಮಿತಿ) ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಲಾಯಿತು. ಆದರೆ ಅದು ಅನುಷ್ಠಾನಕ್ಕೆ ಬಾರದೆ ಕೇವಲ ಮಸೂದೆಯಾಗಿಯೇ ಉಳಿಯಿತು.

2016 ರ ಸೆಪ್ಟೆಂಬರ್ 12 ರಂದು ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಶನ್ (CBSE) ತನ್ನ ಸಂಯೋಜಿತ ಶಾಲೆಗಳಿಗೆ, ಮಕ್ಕಳಿಗೆ ಹಾಗೂ ಪಾಲಕರಿಗೆ ಕೆಲವು ಮಾರ್ಗಸೂಚಿಯನ್ನು ಬಿಡುಗಡೆ ಮಾಡಿತು. 2018 ರ ನವೆಂಬರ್‌ನಲ್ಲಿ ಮದ್ರಾಸ್ ಹೈ ಕೋರ್ಟ್ ಮಕ್ಕಳು ವೇಟ್ಲಿಫ್ಟರ್‌ಗಳಲ್ಲ ಅಥವಾ ಶಾಲಾ ಬ್ಯಾಗ್‌ಗಳು ತುಂಬಿದ ಕಂಟೈನರ್‌ಗಳಲ್ಲ. ಸಂತೋಷ, ಉತ್ಸಾಹದಿಂದ ಇತರ ಮಕ್ಕಳೊಂದಿಗೆ ಆಟವಾಡುವುದು, ಜಿಗಿಯುವುದು ಇತ್ಯಾದಿ ಮಕ್ಕಳ ಸಹಜ ಗುಣಗಳು ಅದಕ್ಕಾಗಿ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ (MHRD)ಕ್ಕೆ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಬೋಧನೆ ಮತ್ತು ಶಾಲಾ ಬ್ಯಾಗ್‌ಗಳ ತೂಕವನ್ನು ನಿಯಂತ್ರಿಸುವ ಮಾರ್ಗಸೂಚಿಗಳನ್ನು ರೂಪಿಸಲು ಸೂಚನೆ ನೀಡಿತು. ಇದಕ್ಕೆ ಅನುಗುಣವಾಗಿ 20 ನವೆಂಬರ್ 2018ರಂದು MHRD 1 ಮತ್ತು 2 ತರಗತಿಗೆ 1.5 ಕೆಜಿ, 3 ರಿಂದ 5 ತರಗತಿಗಳಿಗೆ 3 ಕೆಜಿ, 6ಮತ್ತು 7 ತರಗತಿಗಳಿಗೆ 4 ಕೆಜಿ, 8 ಮತ್ತು 9ತರಗತಿಗಳಿಗೆ 4.5 ಕೆಜಿ, ಮತ್ತು 10 ತರಗತಿಗೆ ಮಿತಿ 5 ಕೆಜಿ ಮಿತಿಯೊಂದಿಗೆNCERT ಪಠ್ಯಪುಸ್ತಕಗಳನ್ನು ಹೊರತುಪಡಿಸಿ ಬೇರೆ ಯಾವುದನ್ನೂ ಶಿಫಾರಸ್ಸು ಮಾಡಲು ಶಾಲೆಗಳಿಗೆ ಅನುಮತಿಸಬಾರದೆಂದು ಸುತ್ತೋಲೆ ಹೊರಡಿಸಿತು.

ಕರ್ನಾಟಕದಲ್ಲಿ ರಾಜ್ಯ ಸರಕಾರವು 2017 ರಲ್ಲಿ ಡಾ.ವಿ. ಪಿ.ನಿರಂಜನರಾಧ್ಯ ಸಮಿತಿಯನ್ನು ನೇಮಿಸಿತು. 2018-19 ರಲ್ಲಿ ಸಲ್ಲಿಸಿದ ವರದಿ ಆಧರಿಸಿ 'ಮಕ್ಕಳ ತೂಕದ 10 ಪ್ರತಿಶತಕ್ಕಿಂತ ಹೆಚ್ಚಿರಬಾರದೆಂದು' ಶಾಲೆಗಳಿಗೆ ನಿರ್ದೇಶಿಸಲು ಆದೇಶವನ್ನು ಹೊರಡಿಸಿತು. 2019 ರಲ್ಲಿ ಡಿಎಸ್ಇಆರ್‌ಟಿ ತಿಂಗಳ ಎರಡು ಶನಿವಾರ ನೋ ಬ್ಯಾಗ್ ಡೇ ಆಚರಿಸಲು ಸುತ್ತೋಲೆ ನೀಡಿತು. ಅದು 2023 ರಲ್ಲಿ ಕೇವಲ ಒಂದು ಶನಿವಾರಕ್ಕೆ ಮರು ಜಾರಿಗೊಳಿಸಲಾಯಿತು.

2020 ರ ರಾಷ್ಟ್ರೀಯ ಶಿಕ್ಷಣ ನೀತಿ ಅಡಿಯಲ್ಲಿ ಸ್ಕೂಲ್ ಬ್ಯಾಗ್ ನೀತಿಯನ್ನು ಜಾರಿಗೆ ತಂದು ಶಾಲಾ ಬ್ಯಾಗ್ ತೂಕವು ಮಗುವಿನ ವಯಸ್ಸಿನ ಶೇಕಡಾ 10ರಷ್ಟು ಮಾತ್ರ ಇರಬೇಕು ಮತ್ತು ಬಾಲ ವಿಹಾರಕ್ಕೆ ಬ್ಯಾಗ್ ರಹಿತ ಶಿಕ್ಷಣ ನೀಡಬೇಕು ಹಾಗೂ 1 ಮತ್ತು 2ನೇ ತರಗತಿಗೆ 1.6 – 2.2 ಕೆಜಿ, 3 ಮತ್ತು 5 ನೇ ತರಗತಿಗೆ 1.7-2.5 ಕೆ.ಜಿ, 6ಮತ್ತು 7ನೇ ತರಗತಿಗೆ 2-3ಕೆಜಿ, 8 ನೇ ತರಗತಿಗೆ 2.5-4ಕೆಜಿ, 9ಮತ್ತು 10ನೇ ತರಗತಿಗೆ 2.5-4.5 ಕೆ.ಜಿ ತೂಕ ಇರಬೇಕೆಂದು ಕಟ್ಟುನಿಟ್ಟಿನ ಆದೇಶ ನೀಡಿದೆ.

ಕಳೆದ ವರ್ಷ ಜೂನ್ 20, 2023 ರಲ್ಲಿ ಅಂತಿಮವಾಗಿ ರಾಜ್ಯ ಶಿಕ್ಷಣ ಇಲಾಖೆ 1 ಮತ್ತು 2ನೇ ತರಗತಿಗೆ 1.5 – 2 ಕೆಜಿ, 3 ಮತ್ತು 5 ನೇ ತರಗತಿಗೆ 2-3 ಕೆ.ಜಿ, 6ಮತ್ತು 8 ನೇ ತರಗತಿಗೆ 3-4 ಕೆಜಿ, 9ಮತ್ತು 10ನೇ ತರಗತಿಗೆ 4-5 ಕೆ.ಜಿ ತೂಕ ಇರಬೇಕೆಂದು ಸುತ್ತೋಲೆ ಹೊರಡಿಸಿದೆ.

ಈ ಎಲ್ಲಾ ಸಮಿತಿ ಪ್ರಮುಖ ಶಿಫಾರಸ್ಸುಗಳನ್ವಯ ಮಕ್ಕಳು ಹೊತ್ತು ತರುವ ಕುಡಿಯುವ ನೀರಿನ ಬಾಟಲ್ ತೂಕ ಇಳಿಸಲು, ಶಾಲೆಯಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಇದೆ .ಪ್ರತಿನಿತ್ಯದ ವೇಳಾಪಟ್ಟಿ ಮಾಹಿತಿ ನೀಡಲಾಗುತ್ತಿದೆ, ತರಗತಿಯಲ್ಲೇ ಲಾಕರ್ ವ್ಯವಸ್ಥೆ ಮಾಡಲಾಗಿದೆ. ಆದರೂ ಪ್ರಸ್ತುತ 1ನೇ ತರಗತಿ ಮಗು ಸರಾಸರಿ 3 ರಿಂದ 4 ಕೆ.ಜಿ ತೂಕವನ್ನು ಪ್ರತಿನಿತ್ಯ ಹೊರುತ್ತಿದೆ. ಇದಕ್ಕೆಲ್ಲಾ ಶಾಲೆ ಮಾತ್ರ ಹೊಣೆ ಎಂಬ ಹಣೆಪಟ್ಟಿ ಕಟ್ಟಲಾಗುತ್ತಿದೆ. ಆದರೆ ಈ ಸಮಸ್ಯೆ ಮುನ್ನಲೆಯಿಂದ ಹಿನ್ನೆಲೆಗೆ ಸರಿಯಲು ಸಾಕಷ್ಟು ಇತರ ಕಾರಣಗಳು ಇವೆ.

ಮೊದಲನೆಯದಾಗಿ 1 ರಿಂದ 4 ನೇ ತರಗತಿಗೆ ಸರಕಾರದ ಎನ್‌ಸಿಇಆರ್‌ಟಿ ಪಠ್ಯಪುಸ್ತಕವನ್ನೇ ಕಡ್ಡಾಯವಾಗಿ ಪಾಲಿಸಬೇಕೆಂಬ ನಿಯಮವಿಲ್ಲದ ಕಾರಣ, ಬಹುತೇಕ ಖಾಸಗಿ ಶಾಲೆಯವರು ಇದನ್ನೇ ಅಸ್ತ್ರವನ್ನಾಗಿಸಿ ಖಾಸಗಿ ಪ್ರಕಾಶನದ ಪುಸ್ತಕ ಅಳವಡಿಸಿಕೊಂಡಿದ್ದಾರೆ. ಖಾಸಗಿ ಪ್ರಕಾಶನದವರು ಸರಕಾರದ ನಿಯಮಗಳನ್ನು ಗಾಳಿಗೆ ತೂರಿ ನಿಗದಿತ ತೂಕಕ್ಕಿಂತ ಹೆಚ್ಚಿನ ತೂಕದ ಪುಸ್ತಕ ಮುದ್ರಿಸುತ್ತಿದ್ದರೂ ಸಹ ಅದರ ಬಗ್ಗೆ ಇಲಾಖೆ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ.

ಇನ್ನೂ ಕರ್ನಾಟಕ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆಯು ಮೇ 3 , 2017 ರಲ್ಲಿ ಹೊರಡಿಸಿರುವ ಸುತ್ತೋಲೆಯಂತೆ, ರಾಜ್ಯದ ಖಾಸಗಿ ಶಾಲೆಗಳು ಪಠ್ಯ ಪುಸ್ತಕಗಳು, ನೋಟ್ ಪುಸ್ತಕಗಳು, ಸಮವಸ್ತ್ರಗಳು ಅಥವಾ ಇತರ ಲೇಖನ ಸಾಮಗ್ರಿಗಳನ್ನು ಶಾಲೆಯಲ್ಲಿ ಮಾರಾಟ ಮಾಡದಂತೆ ನಿರ್ಬಂಧಿಸಲಾಗಿದ್ದರೂ ಸಹ ಖಾಸಗಿ ಶಾಲೆಗಳು ಖಾಸಗಿ ಪ್ರಕಾಶನದ ಪುಸ್ತಕವನ್ನು ದುಪ್ಪಟ್ಟು ಹಣಕ್ಕೆ ರಾಜಾರೋಷವಾಗಿ ಮಾರಾಟ ಮಾಡುತ್ತಿವೆ. ಇದರ ಬಗ್ಗೆಯೂ ಸಹ ಶಿಕ್ಷಣ ಇಲಾಖೆ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿದೆ.

ಅಭಿವೃದ್ಧಿ ಹೊಂದಿದ ದೇಶಗಳ ಶಿಕ್ಷಣ ವ್ಯವಸ್ಥೆಯ ಬಗ್ಗೆ ಗಂಟೆಗಟ್ಟಲೇ ಮಾತನಾಡುವ ನಾವು ಅಲ್ಲಿಯ ಶಿಕ್ಷಣ ಪದ್ಧತಿಯನ್ನು ನಾವು ಅಳವಡಿಸಿಕೊಳ್ಳಲು ಏಕೆ ಸಿದ್ಧವಿಲ್ಲ. ಜಪಾನ್‌ನಂತಹ ದೇಶದಲ್ಲಿ ಮಕ್ಕಳಿಗೆ 3 ನೇ ತರಗತಿಯ ವರೆಗೂ ಕೇವಲ ಮೌಲ್ಯಗಳನ್ನು ಬೆಳೆಸುವುದು ಹಾಗೂ ಕಲಿಕೆಯಲ್ಲಿ ಪ್ರಾಯೋಗಿಕ ಚಟುವಟಿಕೆ ಅಳವಡಿಸಿ ಬೋಧಿಸಲಾಗುತ್ತದೆ. ಅದಕ್ಕೆ ಅಲ್ಲಿನ ಪಾಲಕರ ಸಮ್ಮತಿಯೂ ಇದೆ. ಆದರೆ ನಮ್ಮ ಶಿಕ್ಷಣ ತಜ್ಞರು, ಆರೋಗ್ಯ ತಜ್ಞರು ಮಕ್ಕಳ ದೈಹಿಕ, ಮಾನಸಿಕ, ಬೌದ್ಧಿಕ ವಿಕಾಸದ ಬಗ್ಗೆ ನೀಡಿದ ಸಲಹೆ ಪಾಲಿಸುವ ಮನಸ್ಥಿತಿ ನಮ್ಮಲ್ಲಿಲ್ಲ.

ಕೊನೆಯದಾಗಿ ದುಬಾರಿ ಶಿಕ್ಷಣ ನೀಡಿದರೆ ಮಾತ್ರ ನಮ್ಮ ಮಕ್ಕಳು ಹೆಚ್ಚು ಕಲಿಯುತ್ತಾರೆ ಎಂಬ ತಪ್ಪು ಕಲ್ಪನೆಯನ್ನು ಪಾಲಕರು ಬಿಡಬೇಕು. ಕಲಿಕೆ ಮಗುವಿನ ವೈಯಕ್ತಿಕ ಭಿನ್ನತೆ ಮೇಲೆ ಅವಲಂಬಿಸಿದೆ ಹೊರತು ಲಕ್ಷ-ಲಕ್ಷ ಕೊಟ್ಟು ಶಿಕ್ಷಣ ನೀಡಿದರೆ ಎಲ್ಲವನ್ನು ಮಗು ಮಸ್ತಕದಲ್ಲಿ ತುಂಬಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಸತ್ಯವನ್ನು ಅರಿಯಬೇಕು. ಶಿಕ್ಷಣವನ್ನು ಖಾಸಗೀಕರಣ ಮಾಡುವ ಬದಲಾಗಿ ಸರಕಾರಿ ಶಾಲೆಗಳಲ್ಲಿ ಸ್ಪರ್ಧಾತ್ಮಕ, ಗುಣಮಟ್ಟದ ಶಿಕ್ಷಣ ದೊರಕುವಂತಾಗಬೇಕು. ಇಲಾಖೆ ಆದೇಶ ಪಾಲಿಸದ ಶಾಲೆಗಳ ಮಾನ್ಯತೆ ರದ್ದುಗೊಳಿಸಬೇಕು. ಇದನ್ನೇ 2006 ರ ಮಸೂದೆ ಹೇಳಿರುವುದು. ಬ್ಯಾಗ್ ಹೊರೆ ಇಳಿಸಲು ಈ ಬಾರಿ ರಾಜ್ಯ ಸರಕಾರ ಹಾಗೂ ಕೆಲವು ಖಾಸಗಿ ಪ್ರಕಾಶನದವರು ಪುಸ್ತಕಗಳನ್ನು ಭಾಗ-1 ಮತ್ತು ಭಾಗ-2 ಎಂದು ವಿಂಗಡಿಸಿದ್ದಾರೆ. ಇನ್ನಾದರೂ ಸಹ ಶಾಲಾ ಬ್ಯಾಗ್ ತೂಕದ ಸಮಸ್ಯೆ ಕೊನೆಯಾಗುತ್ತದೆಯೇ ಎಂಬುದನ್ನು ಕಾದು ನೋಡಬೇಕಿದೆ.

(ಲೇಖಕರು: ಹವ್ಯಾಸಿ ಬರಹಗಾರರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಸರಕಾರವನ್ನು ವಿಸರ್ಜಿಸಬೇಕು

ರಾಜ್ಯದ ಜನರಿಗೆ ಗ್ಯಾರಂಟಿ ಯೋಜನೆಗಳು ಇಷ್ಟವಾಗಿಲ್ಲ ಆದ್ದರಿಂದಲೇ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿಲ್ಲ ಹೀಗಾಗಿ ಗ್ಯಾರಂಟಿ ಯೋಜನೆಗಳು ನಿಲ್ಲುಸುವುದೇ ಒಳ್ಳೆಯದು ಎಂದಿರುವ ಮೈಸೂರು ಕೊಡಗು ಲೋಕಸಭಾ ಕ್ಷೇತ್ರದ ಪರಾಜಿತ ಕಾಂಗ್ರೆಸ್ ಅಭ್ಯರ್ಥಿ ಎಮ್ ಲಕ್ಷ್ಮಣ ಸಲಹೆ ಹಾಸ್ಯಾಸ್ಪದ.

ಸುಮಾರು ಎರಡು ದಶಕಗಳಿಂದಲೂ ಕರ್ನಾಟಕದಲ್ಲಿ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆ ಬೇರೆ ಬೇರೆ ಕ್ರಮದಲ್ಲಿ ನಡೆಯುತ್ತದೆ ಎನ್ನುವುದು ರಾಜಕಾರಣ ಗೊತ್ತಿರುವ ಪ್ರತಿಯೊಬ್ಬರು ತಿಳಿದಿರುವುದೇ ಹಾಗಿದ್ದಾಗ ಗ್ಯಾರಂಟಿ ಜನರಿಗೆ ಇಷ್ಟವಾಗಿಲ್ಲ ಎನ್ನುವ ಅಂಶವೇ ಅಪ್ರಸ್ತುತ. ಒಂದು ವೇಳೆ ರಾಜ್ಯ ಸರಕಾರದ ಅಭಿವೃದ್ಧಿ ಮೇಲೆ ಚುನಾವಣೆ ನಡೆಯುವುದಾದರೆ ಜನರಿಗೆ ಸರಕಾರವೇ ಬೇಸರವಾಗಿದೆ ಎನ್ನುವುದು ಸ್ಪಷ್ಟ. ಜನರಿಗೆ ಗ್ಯಾರಂಟಿಗಳು ಇಷ್ಟವಾಗಿಲ್ಲ ಎಂದು ಸ್ಥಗಿತಗೊಳಿಸುವುದಾದರೆ ಒಂದೇ ವರ್ಷದಲ್ಲಿ ಸರಕಾರ ಜನರ ವಿಶ್ವಾಸ ಕಳೆದುಕೊಂಡಿದೆ ಎಂದು ಸರಕಾರವನ್ನೆ ವಿಸರ್ಜಿಸಬೇಕಾಗುತ್ತದೆ.

ಒಂದು ವೇಳೆ ಗ್ಯಾರಂಟಿ ಯೋಜನೆಯ ಬಗ್ಗೆ ಮರುಪರಿಶೀಲನೆ ಮಾಡುವುದೇ ಆದರೆ ಜನರು ಮಾತನಾಡಿಕೊಳ್ಳುವಂತೆ ಈ ಯೋಜನೆಗಳು ಲೋಕಸಭಾ ಚುನಾವಣೆಗಾಗಿಯೇ ಜಾರಿಗೆ ತಂದಿದ್ದಾರೆನ್ನುವುದು ಸ್ಪಷ್ಟವಾಗುತ್ತದೆ.ಅಂತಹ ಯೋಚನೆಯನ್ನು ಮುಖ್ಯಮಂತ್ರಿಗಳು ಮಾಡಲಾರರು ಎಂಬ ವಿಶ್ವಾಸವಿದೆ.

-ಮಣಿಕಂಠ ಪಾ ಹಿರೇಮಠ ಬಾಗಲಕೋಟೆ

ಶಿಕ್ಷೆಗೆ ಅರ್ಹ

ನಟ ದರ್ಶನ್ ತೂಗುದೀಪ ಸೇರಿದಂತೆ ಹಲವರು ವ್ಯಕ್ತಿಯೊಬ್ಬನ ಕೊಲೆಯ ಆರೋಪದ ಮೇಲೆ ಪೊಲೀಸ್ ಕಸ್ಟಡಿಯಲ್ಲಿ ಇದ್ದಾರೆ. ಪೊಲೀಸರು ಅವರನ್ನು ವಿಚಾರಣೆಗೆ ಒಳಪಡಿಸುತ್ತಿದ್ದಾರೆ ಆತನನ್ನು ಅರೆಸ್ಟ್ ಮಾಡಿರುವ ವಿಷಯ ತಿಳಿದ ಅಭಿಮಾನಿಗಳು ವಿರೋಧಿಸುತ್ತಿದ್ದಾರೆ. ಇದು ನಟನೆ ಮೇಲಿನ ಅಭಿಮಾನ ಕಾರಣ.

ಇಂದಿನ ಅನೇಕರಿಗೆ ಯಾರ ಮೇಲೆ ಅಭಿಮಾನ ಇಟ್ಟುಕೊಳ್ಳಬೇಕು ಮತ್ತು ಯಾರನ್ನು ಮಾದರಿ ಆಗಿ ನೋಡಬೇಕು ಎಂಬುದರ ಚಿಂತನೆ ಇಲ್ಲ. ತೆರೆಯ ಮೇಲೆ ನಾಯಕನಾದ ಮಾತ್ರಕ್ಕೆ ಆತ ನಿಜಜೀವನದಲ್ಲಿ ಅಲ್ಲ. ಅಲ್ಲಿ ಹತ್ತಾರು ಜನರನ್ನು ಹೊಡೆದು ನೆಲಕ್ಕುರುಳಿಸುವವ ನಿಜ ಜೀವನದಲ್ಲಿ ಪುಕ್ಕಲ ಆಗಿರಬಹುದು. ನಟನೆ ಎಂಬುದು ಆತನಿಗೆ ಒಂದು ಹೊಟ್ಟೆಪಾಡು ಮತ್ತು ವೃತ್ತಿ. ಚಿತ್ರ ನೋಡುವವರಿಗೆ ಒಂದು ಮನರಂಜನೆ ಅಷ್ಟೆ. ಕತೆಯಲ್ಲಿ ನೀತಿಪಾಠಗಳಿದ್ದರೆ ನಿಜ ಜೀವನದಲ್ಲಿ ಅಳವಡಿಸಿಕೊಳ್ಳಬಹುದು. ಅಷ್ಟೇ ಹೊರತು ಅಂತಹವರ ಮೇಲಿನ ಅತಿರೇಕದ ಅಭಿಮಾನ ತರವಲ್ಲ. ಆತ ತನ್ನ ಪಾಲಿನ ಕರ್ತವ್ಯ ಸೊಗಸಾಗಿ ನಿರ್ವಹಿಸಿದ್ದರೆ ಬೆನ್ನು ತಟ್ಟಿ ಪ್ರೋತ್ಸಾಹಿಸಬಹುದು ಸಾಧ್ಯವಾದರೆ ಮತ್ತೆ ಆ ಚಿತ್ರ ನೋಡಬಹುದು. ಅತಿಯಾದ ಅಭಿಯಾನವು ನಟನಿಗೆ ತಾನೇನೋ ನೇರವಾಗಿ ಭೂಮಿಗೆ ಇಳಿದಂತಹಹ ಅಥವಾ ದೈವಾಂಶ ಸಂಭೂತ ಎಂಬ ಭಾವ ತರಬಹುದು. ಅದೇ ಆತನಿಗೆ ಬೇಡದ ಅಹಂ ಬರಲೂ ಕಾರಣವಾಗಬಹುದು. ಆತ ಕೂಡಾ ನಿಮ್ಮೆಲ್ಲರಂತೆ ಸಾಮಾನ್ಯ ಮಾನವನೇ ಹೌದು. ಆತನಿಗೂ ಸಾಮಾನ್ಯರಂತೆ ಗುಣ ಅವಗುಣಗಳು ಇರಲಿಕ್ಕೂ ಸಾಕು.

ಅಂತಿಮವಾಗಿ ಯಾರೇ ಆದರೂ ಸಹ ಅಪರಾಧ ಮಾಡಿದ್ದರೆ ಶಿಕ್ಷೆ ಅನುಭವಿಸಲೇಬೇಕು. ನಿರಪರಾಧಿ ಎಂದು ಸಾಬೀತಾದರೆ ಗೌರವಯುತ ಬಿಡುಗಡೆ ಕೂಡಾ ಇದ್ದೇ ಇದೆ. ಕಾನೂನಿಗೆ ಯಾರೂ ಹೊರತಲ್ಲ. ಉಪ್ಪು ತಿಂದ ಮೇಲೆ ನೀರು ಕುಡಿಯಲೇಬೇಕು.

-ಪತ್ತಂಗಿ ಎಸ್ ಮುರಳಿ ಬೆಂಗಳೂರು

ಭಟ್ಟರ್ ಸ್ಕಾಚ್

● **ಚಂದ್ರಶೇಖರ ನಾಗೂರ, (ಇಮೇಲ್ ಮೂಲಕ)**
ಭಟ್ರೇ, ಅತ್ತೆ ತನ್ನ ಮಗಳ ಸಂಸಾರದಲ್ಲಿ ಕಡ್ಡಿ ಆಡಿಸೋದು ಯಾಕೆ?
- ಕಡ್ಡಿ ಆಡಿಸುವುದೇ ವಾಸಿ.. ಇನ್ನೇನು ಕಬಡ್ಡಿ ಆಡೋಕೆ ಆಗುತ್ತಾ?!

● **ರಾಘು ರಾಯ, ಮೈಸೂರು**
ವಿ.ಭಟ್ಟರೇನೋ ಬುಕ್ ಫೇರ್ ಅಂತ ಜರ್ಮನಿಗೆ ಹೋದ್ರು. ಈ ಪೆನ್ ಡ್ರೈವ್ ಪ್ರಜ್ವಲ್‌ಗೆ ಅಲ್ಲಿ ಏನಿತ್ತು ಕೆಲಸ?
- ಪೊಲೀಸ್ರು ಏನಾದರೂ ಅಫೇರ್ ಇತ್ತಾ ಅಂತ ವಿಚಾರಣೆ ಮಾಡುತ್ತಿದ್ದರಂತೆ!

● **ಹರಿ ಓಂ ಶಾಸ್ತ್ರೀ, ಬ್ಯಾಟರಾಯನಪುರ**
ಕ್ರಿಕೆಟ್ ಅನ್ನು ಕರತಲಾಮಲಕ ಮಾಡಿಕೊಂಡಿರುವ ನಾನು ಶ್ರೇಯಸ್, ವೆಂಕಟೇಶ್ ಅಯ್ಯರ್‌ಗಳ ಜತೆ ಆಡುವ ಭಾಗ್ಯ ಸಿಗತ್ತಾ, ಭಟ್ರೇ?
- ನಾಮ ಬಲದಿಂದ ಅವಕಾಶ ಸಿಗಬಹುದೇನೋ?!

● **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಯಾರನ್ನು ಬೈದರೆ ಜಾತಿ ನಿಂದನೆ ಆಗುವುದಿಲ್ಲ?
- ಬ್ರಾಹ್ಮಣರನ್ನು !

● **ಅವಿಕ್ ಗೊಂದಿಮನೆ, ಕಡೂರು**
ಭಟ್ರೇ, ಪ್ರಾಥಮಿಕ ಸಚಿವರ ಕನ್ನಡವೇಕೆ ಪ್ರಾಥಮಿಕ ಹಂತದಲ್ಲಿದೆ?
- ಉನ್ನತ ಶಿಕ್ಷಣ ಸಚಿವರ ಕನ್ನಡ ಉನ್ನತವಾಗಿರಲು ಸಾಧ್ಯವಾ ಅಂತ ಮಧುಬಂಗಾರಪ್ಪ ಕೇಳಬಹುದು!

● **ಪಾಂಡವಪುರ ರಘು, ಪಾಂಡವಪುರ**
ಭಟ್ರೇ, ನಟ ದರ್ಶನನನ್ನು ರೋಲ್ ಮಾಡೆಲ್ ಆಗಿ ಇಟ್ಟುಕೊಳ್ಳುತ್ತಾರಲ್ಲ?
- ಪವಿತ್ರಾ ಗೌಡಳನ್ನು ಇಟ್ಟುಕೊಂಡವರಿಗೆ ಅವರೇ ರೋಲ್ ಮಾಡೆಲ್!

● **ನಿರಂಜನ ಕುಗ್ವೆ, ಶಿವಮೊಗ್ಗ**
ಭಟ್ರೇ, ದರ್ಶನ ಅಭಿಮಾನಿ ಪಟ್ಟಕ್ಕೆ ರಾಜೀನಾಮೆ ಕೊಡಲೇ?
- ಅದೊಂದು ಪಟ್ಟ ಎಂದು ಸ್ವೀಕರಿಸಿದ ನಿನ್ನ ಮಟ್ಟಕ್ಕೆ ನನ್ನ ಸಲಾಮು!

● **ಶ್ರೀಕರ ಪಂಡಿತ, (ಇಮೇಲ್ ಮೂಲಕ)**
ಭಟ್ರೇ, ಅಭಿಮಾನಿಯನ್ನೇ ಕೊಲ್ಲುವ ಮಟ್ಟಕ್ಕೆ ಹೋಗ್ತಾರಲ್ಲ?
- ಅಂಥವರು ನಿಜ ಜೀವನವನ್ನೇ ಸಿನಿಮಾ ಎಂದು ಭಾವಿಸಿದ್ದರಂತೆ?!

● **ಶ್ರೀನಿವಾಸ ಪಲ್ಲೇರ, ಜಾವಳಿ**
ಭಟ್ರೇ, ದರ್ಶನ ಒಳ್ಳೆಯ ನಟ ಆದರೆ ಕೆಟ್ಟ ಮನುಷ್ಯ ಅಂತಾರಲ್ಲ?
- ಇಲ್ಲಿ 'ಒಳ್ಳೆಯ' ಪದ ಬೇಕಿರಲಿಲ್ಲ!

● **ಚಂದ್ರು, ಕನಕಪುರ**
ಭಟ್ರೇ, ಇದೇ ಮೆಸೇಜನ್ನು ಆತ ಪತ್ನಿ ವಿಜಯಲಕ್ಷ್ಮಿಗೆ ಕಳಿಸಿದಿದ್ದರೆ ದರ್ಶನ ಹೀಗೆ ಮಾಡ್ತಾ ಇದ್ನಾ?
- ಪತ್ನಿಯೇ ಬೇರೆ, ಉಪಪತ್ನಿಯೇ ಬೇರೆ ಅಲ್ಲವೇ?!

ಸ್ಥಿರ ಸರಕಾರ, ಬಲಿಷ್ಠ ವಿರೋಧ ಪಕ್ಷದ ಸಮತೋಲನ!

ಮತದಾರರು ತಮ್ಮ ನಿಜವಾದ ಭಾವನೆಯನ್ನು ಖುಲ್ಲಂಖುಲ್ಲಾ ವ್ಯಕ್ತಪಡಿಸಿ ಸ್ಪಷ್ಟ ಜನಾದೇಶವನ್ನು ನೀಡಿದಾಗ ಇನ್ನುಳಿದ ಎಲ್ಲ ಸಂಗತಿಗಳೂ ಗೌಣವಾಗುತ್ತವೆ. ಇದೇ ನಮ್ಮ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಗಿರುವ ಅನುಪಮ ಗುಣ ಮತ್ತು ಶಕ್ತಿ.

ಸಂಗತ
ಡಾ.ವಿಜಯ್ ದರಡಾ
vveditoped@gmail.com

ಕಳೆದ ವಾರ ಇದೇ ಅಂಕಣದಲ್ಲಿ ಪ್ರಜಾಪ್ರಭುತ್ವ ಸತ್ತಿಲ್ಲ, ಅದು ಗೆದ್ದಿದೆ ಎಂದು ಬರೆದಿದ್ದೆ. ಏಕೆಂದರೆ ನನಗೆ ಭಾರತದ ಮತದಾರರ ನಿರ್ಣಾಯಕ ಶಕ್ತಿ ಹಾಗೂ ಅವರ ಪ್ರಬುದ್ಧತೆಯ ಬಗ್ಗೆ ಯಾವುದೇ ಅನುಮಾನವಿರಲಿಲ್ಲ. ಮತದಾರರು ಸಾಮಾನ್ಯವಾಗಿ ಯಾವುದೇ ರಾಜಕೀಯ ಪಕ್ಷದ ಸಾಮರ್ಥ್ಯವನ್ನು ಕೇವಲ ತಮ್ಮ ಬದುಕಿನ ಮೂಲಭೂತ ಅಗತ್ಯಗಳಿಗೆ ಅನುಗುಣವಾದ ಮಾನದಂಡಗಳನ್ನಿಟ್ಟುಕೊಂಡು ಅಳೆಯುವುದಿಲ್ಲ. ಭಾರತೀಯರಿಗೆ ಈ ದೇಶದ ಸಂವಿಧಾನದ ಬಗ್ಗೆ ಚೆನ್ನಾಗಿ ಅರಿವಿದೆ. ಹೀಗಾಗಿ ಸಾಂವಿಧಾನಿಕ ಮಾನದಂಡಗಳನ್ನೂ ಪರಿಗಣಿಸಿ ಅವರು ಯಾವುದೇ ರಾಜಕೀಯ ಪಕ್ಷವೊಂದರ ಬಗ್ಗೆ ತಮ್ಮದೇ ಆದ ನಿರ್ಣಯಕ್ಕೆ ಬರುತ್ತಾರೆ. ಮತದಾರರು ತಮ್ಮ ನಿಜವಾದ ಭಾವನೆಯನ್ನು ಚುನಾವಣೆಯಲ್ಲಿ ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ ಎಂದಾದರೆ ಬೇರೆಲ್ಲವೂ ಗೌಣವಾಗುತ್ತದೆ. ಆದರೆ, ಅವರೇ ಅನುಮಾನ ವ್ಯಕ್ತಪಡಿಸಿದ್ದರೆ ಅದರ ಅರ್ಥವೇನು ಎಂಬುದನ್ನು ಗಮನಿಸಬೇಕಾಗುತ್ತದೆ. ಇಂಗ್ಲಿಷ್‌ನಲ್ಲೊಂದು ಮಾತಿದೆ: 'ಗೆಲ್ಲುವುದು ಯಾವಾಗಲೂ ಜಯವಲ್ಲ ಮತ್ತು ಸೋಲುವುದು ಯಾವಾಗಲೂ ಪರಾಭವವಲ್ಲ.

ಈ ಬಾರಿ ನಮ್ಮ ದೇಶದ ಲೋಕಸಭೆ ಚುನಾವಣೆಯಲ್ಲಿ ಆಗಿರುವುದೂ ಇದೇ. ಮತದಾರರು ಎನ್‌ಡಿಎ ಮೈತ್ರಿಕೂಟದ 400 ಸೀಟುಗಳ ಅಬ್ಬರದ ಪ್ರಚಾರಕ್ಕೂ ಮರುಳಾಗಲಿಲ್ಲ, ಹಾಗೆಯೇ ಇಂಡಿಯಾ ಮೈತ್ರಿಕೂಟದವರ ಬಹುಮತದ ನಿರೀಕ್ಷೆಗಳಿಗೂ ಬೆಲೆ ಕೊಡಲಿಲ್ಲ. ಅವರು ಬಿಜೆಪಿಗೆ ಅಧಿಕ ಮತ ನೀಡಿ ಆ ಪಕ್ಷವನ್ನು ಅತಿದೊಡ್ಡ ಪಕ್ಷವನ್ನಾಗಿ ಮಾಡಿದ್ದೇನೋ ನಿಜ. ಆದರೆ, ಬಹುಮತವನ್ನು ಎನ್‌ಡಿಎ ಮೈತ್ರಿಕೂಟಕ್ಕೆ ನೀಡಿದ್ದಾರೆ. ಇದರ ಅರ್ಥ ಸ್ಪಷ್ಟವಾಗಿದೆ: 'ಕೇಂದ್ರದಲ್ಲಿ ಮತ್ತೊಮ್ಮೆ ಎನ್‌ಡಿಎ ಮೈತ್ರಿಕೂಟವೇ ಅಧಿಕಾರಕ್ಕೆ ಬರಬೇಕು, ಆದರೆ ಅದು ಬಲಿಷ್ಠವಾದ ವಿಪಕ್ಷವನ್ನು ಎದುರಿಸಿ ಅಧಿಕಾರ ನಡೆಸಬೇಕು'.

ಯಾವಾಗಲೂ ಒಂದೇ ಬದಿ ತುಂಬಾ ಬಲಿಷ್ಠವಾಗಿ, ಇನ್ನೊಂದು ಬದಿ ಸದಾ ದುರ್ಬಲವಾಗಿ ಇದ್ದುಬಿಟ್ಟರೆ ಸಮತೋಲನ ತಪ್ಪುತ್ತದೆ. ಇದು ತುಂಬಾ ಸರಳವಾದ ಸಂಗತಿ. ಮತದಾರರು ಈ ಬಾರಿ ಈ ಅಸಮತೋಲನವನ್ನು ಸರಿಪಡಿಸಿದ್ದಾರೆ. ಡಚ್ ಲೇಖಕ ಪೌಲ್ ಹೆನ್ನಿಂಗ್ ಹೇಳುವಂತೆ, 'ವಿರೋಧ ಪಕ್ಷವು ಪ್ರಸ್ತುತವಾಗಿದ್ದಾಗ ಮಾತ್ರ ಯಾವುದೇ ದೇಶದ ಪ್ರಜಾಪ್ರಭುತ್ವ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಅಳೆಯಬಹುದು. ವಿರೋಧ ಪಕ್ಷ ನಗಣ್ಯವಾಗಿದ್ದರೆ ಆ ದೇಶದಲ್ಲಿ ಪ್ರಜಾಪ್ರಭುತ್ವ ಹೇಗಿದೆ ಎಂಬುದನ್ನು ಹೇಳುವುದು ಕಷ್ಟ'. ಮ್ಯಾನ್ಮಾರ್‌ನ ಪ್ರಸಿದ್ಧ ಪ್ರಜಾಪ್ರಭುತ್ವ ಪರ ಹೋರಾಟಗಾರ್ತಿ ಆಂಗ್ ಸಾನ್ ಸೂ ಕಿ ಇದನ್ನು ಇನ್ನೂ ಕಠಿಣವಾಗಿ ಹೇಳಿದ್ದಾರೆ. ಅವರ ಪ್ರಕಾರ, 'ವಿರೋಧ ಪಕ್ಷಗಳನ್ನು ಟೀಕಿಸಿದರೆ ನಿಮಗೆ ಪ್ರಜಾಪ್ರಭುತ್ವದ ನಿಜವಾದ ಅರ್ಥವೇ ಗೊತ್ತಿಲ್ಲ ಎಂದರ್ಥ. ವಿರೋಧ ಪಕ್ಷಗಳನ್ನು ನಾಶಪಡಿಸಲು ಯತ್ನಿಸಿದರೆ ನೀವು ಪ್ರಜಾಪ್ರಭುತ್ವದ ಬೇರುಗಳನ್ನೇ ಕತ್ತರಿಸಿ ಹಾಕುತ್ತಿದ್ದೀರಿ ಎಂದರ್ಥ'. ಭಾರತದ ಮೊದಲ ಪ್ರಧಾನ ಮಂತ್ರಿ ಪಂ.ಜವಾಹರಲಾಲ್ ನೆಹರು ಕೂಡ ಇದೇ ರಾಜಕೀಯ ಸಿದ್ಧಾಂತದಲ್ಲಿ ನಂಬಿಕೆ ಇರಿಸಿದ್ದರು. ನಾನು ಕೂಡ ಈ ಬಗ್ಗೆ ಪದೇಪದೇ ಬರೆದಿದ್ದೇನೆ. ನನ್ನ ಪ್ರಕಾರ, ಪ್ರಜಾಪ್ರಭುತ್ವ ಗಟ್ಟಿಯಾಗಿರಬೇಕು ಎಂದಾದರೆ ದೇಶದಲ್ಲಿ ಬಲಿಷ್ಠವಾದ ವಿರೋಧ ಪಕ್ಷವಿರುವುದು ಅತ್ಯಗತ್ಯ.

ಪ್ರಧಾನಿ ನರೇಂದ್ರ ಮೋದಿಯವರ 10 ವರ್ಷಗಳ ಆಡಳಿತದ ಅವಧಿಯಲ್ಲಿ ದೇಶ ಸಾಕಷ್ಟು ದೊಡ್ಡ ದೊಡ್ಡ ಸಾಧನೆಗಳನ್ನು ಮಾಡಿದೆ. ಅನೇಕ ಕಠಿಣ ನಿರ್ಧಾರಗಳನ್ನು ಕೈಗೊಳ್ಳುವ ಮೂಲಕ ಅವರ ಸರಕಾರ ದೇಶವನ್ನು ಪ್ರಗತಿಯ ಪಥದಲ್ಲಿ ಕೊಂಡೊಯ್ದಿದೆ. ಸಂವಿಧಾನದ 370ನೇ ಪರಿಚ್ಛೇದವನ್ನು ರದ್ದುಪಡಿಸಿ ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ಹಿಂಪಡೆಯುವಂತಹ ಅಸಾಧ್ಯ ಕೆಲಸಗಳನ್ನೂ ಮೋದಿ ಸರಕಾರ ಮಾಡಿದೆ. ಅವರ ಕರ್ತೃತ್ವ ಶಕ್ತಿಯ ಬಗ್ಗೆ ಯಾವ ಅನುಮಾನಗಳೂ ಇಲ್ಲ. ಅವರ ಅವಧಿಯಲ್ಲಿ ಭಾರತದ ಧ್ವನಿ ಜಗತ್ತಿನ ಮೂಲೆಮೂಲೆಗೂ ತಲುಪುವಂತಾಯಿತು. ಭಾರತ ಏನಾದರೂ ಹೇಳಿದರೆ ಎಲ್ಲಾ ದೇಶಗಳೂ ಕಿವಿಗೊಟ್ಟು ಕೇಳಿಸಿಕೊಳ್ಳುವಂತಾಯಿತು. ಇದೇನೂ ಸಣ್ಣ ಬದಲಾವಣೆಯಲ್ಲ. ಆದರೆ, ಮತದಾರರಿಗೆ ನಮ್ಮ ದೇಶದಲ್ಲಿ ವಿರೋಧ ಪಕ್ಷ ದಿನೇದಿನೇ ದುರ್ಬಲವಾಗುತ್ತಿದೆ ಮತ್ತು ಆಡಳಿತಾರೂಢ ಪಕ್ಷ ಈ ಅಸಮತೋಲನವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿದೆ ಎಂದು ಅನ್ನಿಸತೊಡಗಿತ್ತು. ಯಾವಾಗ ಆಡಳಿತ ಪಕ್ಷದ ನಾಯಕರು ತೀರಾ ಅತಿ ಎನ್ನಿಸುವಂತೆ 'ಕಾಂಗ್ರೆಸ್ ಮುಕ್ತ ಭಾರತ ಎನ್ನುವಂತಹ ತಲೆಬುಡವಿಲ್ಲದ ಕನಸುಗಳನ್ನು ಕಾಣತೊಡಗಿದರೋ ಆಗಲೇ ಮತದಾರರು ಎಚ್ಚೆತ್ತುಕೊಂಡರು'. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದಾದರೊಂದು ರಾಜಕೀಯ ಪಕ್ಷವು ಇನ್ನೊಂದು ರಾಜಕೀಯ ಪಕ್ಷವನ್ನು ಸಂಪೂರ್ಣ ಅಳಿಸಿಹಾಕುವಂತಹ ಯೋಚನೆಯನ್ನಾದರೂ ಹೇಗೆ ಮಾಡಲು ಸಾಧ್ಯ? ಇದು ಅತಿರೇಕವಲ್ಲದೇ ಇನ್ನೇನು? ಕಾಂಗ್ರೆಸ್ ಪಕ್ಷವನ್ನು ಯಾರೂ ನಿರ್ನಾಮ ಮಾಡಲು ಸಾಧ್ಯವಿಲ್ಲ ಎಂದು ನಾನು ಯಾವಾಗಲೂ ಹೇಳುತ್ತಾ ಬಂದಿದ್ದೇನೆ. ಕಾಂಗ್ರೆಸ್ ಎಂಬ ಹೆಮ್ಮರ ಈಗ ದುರ್ಬಲವಾಗಿರುವಂತೆ ಕಾಣಿಸಬಹುದು, ಆದರೆ ಅದರ ಬೇರುಗಳು ತುಂಬಾ ಗಟ್ಟಿಯಾಗಿವೆ ಮತ್ತು ಬಹಳ ಆಳಕ್ಕೆ ಇಳಿದಿವೆ. ಆಲದ ಮರದ ಒಂದು ಬಿಳಲು ಹೇಗೆ ನೆಲಕ್ಕೆ ತಲುಪಿ, ಅಲ್ಲೇ ಬೇರು ಬಿಟ್ಟು, ಮತ್ತೊಂದು ಮರವಾಗಿ ಬೆಳೆಯುತ್ತದೆಯೋ ಹಾಗೆಯೇ ಕಾಂಗ್ರೆಸ್ ಪಕ್ಷ ಕೂಡ ತನ್ನನ್ನು ತಾನು ವಿಸ್ತರಿಸಿಕೊಳ್ಳುವ ಮತ್ತು ಬುಡವನ್ನು ಗಟ್ಟಿಗೊಳಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಒಂದಷ್ಟು ಆಂತರಿಕ ಬಿಕ್ಕಟ್ಟುಗಳು ಹಾಗೂ ಪರಸ್ಪರರ ಕಾಲೆಳೆಯುವ ಅದರ ನಾಯಕರ ಕ್ಷುಲ್ಲಕ ಗುಣದಿಂದಾಗಿ ಆ ಪಕ್ಷ ಇತ್ತೀಚಿನ ವರ್ಷಗಳಲ್ಲಿ ಕೆಟ್ಟ ದಿನಗಳನ್ನು ನೋಡಬೇಕಾಗಿ ಬಂದಿತು ಅಷ್ಟೆ. ಆದರೆ ಈಗಲೂ ಕಾಂಗ್ರೆಸ್ ಪಕ್ಷ ಜೀವಂತವಾಗಿದೆ ಮತ್ತು ಗಟ್ಟಿಯಾಗಿ ಎದ್ದುನಿಲ್ಲುವ ಸಾಮರ್ಥ್ಯ ಅದಕ್ಕೆ ಇದ್ದೇ ಇದೆ. ಈ ಬಾರಿ ಚುನಾವಣೆಗೂ ಮುನ್ನವೇ ಎಚ್ಚೆತ್ತುಕೊಂಡು ಕಾಂಗ್ರೆಸ್ ನಾಯಕರು ಪ್ರಾದೇಶಿಕ ಪಕ್ಷಗಳ ಜೊತೆ ಸೇರಿ ಮೈತ್ರಿಕೂಟವನ್ನು ರಚಿಸಿಕೊಂಡರು. ತನ್ಮೂಲಕ ಮತದಾರರ ವಿಶ್ವಾಸವನ್ನು ಮರಳಿ ಗಳಿಸಿಕೊಂಡರು. ಹೀಗಾಗಿ, ಇಂಡಿಯಾ ಮೈತ್ರಿಕೂಟದ ಶಕ್ತಿಯೇನು ಎಂಬುದು ಚುನಾವಣೆಯಲ್ಲಿ ಸಾಬೀತಾಗಿದೆ. ಈಗ ಆ ಪಕ್ಷಗಳ ನಾಯಕರು ಮತದಾರರ ನಿರೀಕ್ಷೆಗಳನ್ನು ಹೇಗೆ ತಮ್ಮಿಂದ ತಲುಪಲು ಸಾಧ್ಯ ಎಂಬುದನ್ನು ಸಾಧಿಸಿ ತೋರಿಸಬೇಕಿದೆ.

ಇಂಡಿಯಾ ಮೈತ್ರಿಕೂಟದ ಮುಂದಿರುವ ಸವಾಲುಗಳ ಬಗ್ಗೆ ಚರ್ಚಿಸುವುದಕ್ಕಿಂತ ಮೊದಲು, ಈಗಾಗಲೇ ಮೂರನೇ ಬಾರಿ ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನರೇಂದ್ರ ಮೋದಿಯವರ ಎದುರು ಇರುವ ಪ್ರಮುಖ ಸವಾಲುಗಳನ್ನು ತಿಳಿದುಕೊಳ್ಳುವುದು ತುಂಬಾ ಮುಖ್ಯ. ಅವರ ಮೊದಲ ಎರಡು ಅವಧಿಯ ಸರ್ಕಾರಗಳಲ್ಲಿ ಭಾರತೀಯ ಜನತಾ ಪಕ್ಷಕ್ಕೆ ದೊಡ್ಡ ಸಂಖ್ಯಾಬಲವಿತ್ತು. ಹೀಗಾಗಿ, ಸರಕಾರ ಎನ್‌ಡಿಎಯದ್ದೇ ಇದ್ದರೂ ಅಲ್ಲಿ ಎನ್‌ಡಿಎ ಮೈತ್ರಿಕೂಟದ ಅಂಗಪಕ್ಷಗಳ ಮಾತನ್ನು ಕೇಳುವ ದರ್ದು ಬಿಜೆಪಿಗೆ ಇರಲಿಲ್ಲ. ಅದರ ಲಾಭ ಪಡೆದುಕೊಂಡು ಬಿಜೆಪಿಯವರು ಎನ್‌ಡಿಎ ಅಂಗಪಕ್ಷಗಳನ್ನು ಮೂಲೆಗೆ ತಳ್ಳಿದ್ದರು. ಆದರೆ ಈ ಬಾರಿ ಹಾಗಾಗಿಲ್ಲ. ಬಿಜೆಪಿಗೆ ಬಹುಮತ ಬಂದಿಲ್ಲ. ಅದು ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ, ಸರಕಾರ ನಡೆಸಲು ಹಾಗೂ ಲೋಕಸಭೆಯಲ್ಲಿ ಬಹುಮತಕ್ಕೆ ಬೇಕಾದ ಸಂಖ್ಯೆಯನ್ನು ತೋರಿಸಲು ಅದು ಮೈತ್ರಿಪಕ್ಷಗಳ ಮೇಲೆ ಅವಲಂಬಿತವಾಗಲೇಬೇಕಿದೆ. ಅಂಗಪಕ್ಷಗಳನ್ನು ಬಿಟ್ಟು ಅಥವಾ ಅವುಗಳನ್ನು ಕಡೆಗಣಿಸಿ ಬಿಜೆಪಿ ಏನೂ ಮಾಡುವಂತಿಲ್ಲ. ಟಿಡಿಪಿಯ ಚಂದ್ರಬಾಬು ನಾಯ್ಡು, ಜೆಡಿಯುನ ನಿತೀಶ್ ಕುಮಾರ್, ಶಿವಸೇನೆಯ ಏಕನಾಥ್ ಶಿಂಧೆ ಹಾಗೂ ಎಲ್‌ಜೆಪಿಯ ಚಿರಾಗ್ ಪಾಸ್ವಾನ್ ಅವರು ಪೂರ್ತಿ ಐದು ವರ್ಷ ತಾವು ಬಿಜೆಪಿಗೆ ಬೆಂಬಲ ನೀಡುವುದಾಗಿ ಘೋಷಿಸಿದ್ದಾರಾದರೂ ಅದನ್ನೇ ನಂಬಿಕೊಂಡು ಕುಳಿತುಕೊಳ್ಳುವ ಪರಿಸ್ಥಿತಿ ಇಲ್ಲ. ನಾಯ್ಡು ಮತ್ತು ನಿತೀಶ್ ಸಾಕಷ್ಟು ಪಳಗಿರುವ ರಾಜಕಾರಣಿಗಳು. ಅವರು ಯಾವುದನ್ನೂ ಉಚಿತವಾಗಿ ಮಾಡುವುದಿಲ್ಲ, ಕಾಲ ಕೂಡಿಬಂದಾಗ ತಮ್ಮ ಪಾಲಿನ ರೊಟ್ಟಿಯನ್ನು ಕಿತ್ತುಕೊಂಡೇ ಕಿತ್ತುಕೊಳ್ಳುತ್ತಾರೆ. ಇಷ್ಟಕ್ಕೂ ಅವರು ಬಿಜೆಪಿಯಿಂದ ಬಂದವರಲ್ಲ!

ಇಂತಹ ಪರಿಸ್ಥಿತಿ ಇರುವಾಗ ನರೇಂದ್ರ ಮೋದಿ ಮುಂದೆ ಇರುವ ಸವಾಲು ಕಠಿಣವಾಗಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಮೂರನೇ ಅವಧಿಯಲ್ಲಿ ಭಾರತವನ್ನು ಇನ್ನಷ್ಟು ಸಶಕ್ತವಾಗಿ ಕಟ್ಟುವ ಹಾಗೂ ಭಾರತೀಯರನ್ನು ಇನ್ನಷ್ಟು ಸಬಲೀಕರಣಗೊಳಿಸುವ ಅವರ ಯೋಜನೆಗಳು ಸಾಕಾರಗೊಳ್ಳುತ್ತವೆಯೇ? ಈಗಲೂ ಭಾರತವು ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವ ತನ್ನ ಕನಸನ್ನು ನನಸಾಗಿಸಿಕೊಳ್ಳಲಿದೆಯೇ? ಸಾಮಾನ್ಯವಾಗಿ ಸಮ್ಮಿಶ್ರ ಸರಕಾರಗಳು ಜಾಗತಿಕ ವೇದಿಕೆಯಲ್ಲಿ ದೇಶದ ಇಮೇಜ್ ಹೇಗಿರಬೇಕು ಎಂಬುದರ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ ಎಂಬ ನಂಬಿಕೆಯಿದೆ. ಸರಕಾರ ಬದಲಾದಂತೆ ವಿದೇಶಾಂಗ ನೀತಿಗಳು ಹಾಗೂ ಬೇರೆ ಬೇರೆ ದೇಶಗಳನ್ನು ನೋಡುವ ದೃಷ್ಟಿಕೋನಗಳು ಬದಲಾಗುತ್ತವೆ. ಕಳೆದ 10 ವರ್ಷಗಳಿಂದ ಬಹಳ ಕಷ್ಟಪಟ್ಟು ಜಾಗತಿಕ ರಂಗದಲ್ಲಿ ಭಾರತಕ್ಕೊಂದು ಅದ್ಭುತ ಇಮೇಜ್ ತಂದುಕೊಟ್ಟ ಮೋದಿಗೆ ಇದು ಬಹುದೊಡ್ಡ ಸವಾಲೇ ಸರಿ. ಅದಕ್ಕಿಂತ ಹೆಚ್ಚಾಗಿ, 'ಮೋದಿ ಕಿ ಗ್ಯಾರಂಟಿ' ಎಂದು ಪ್ರಚಾರಕ್ಕೆ ಹೋದಲ್ಲೆಲ್ಲ ಕೂಗಿ ಕೂಗಿ ಹೇಳಿದ ಮನುಷ್ಯ ಆ ಗ್ಯಾರಂಟಿಯನ್ನು ಈಡೇರಿಸಲು ಸಾಧ್ಯವಾಗಲಿದೆಯೇ? ಅಥವಾ ಅವುಗಳೊಂದಿಗೆ ರಾಜಿ ಮಾಡಿಕೊಳ್ಳಬೇಕಾಗಿ ಬರುತ್ತದೆಯೇ?

ನಾಯ್ಡು, ನಿತೀಶ್, ಶಿಂಧೆ ಮತ್ತು ಚಿರಾಗ್ ಪಾಸ್ವಾನ್‌ರನ್ನು ಹದ್ದುಬಸ್ತಿನಲ್ಲಿ ಇರಿಸಲು ಬೇರೆ ಪಕ್ಷಗಳ ಸಂಸದರನ್ನು ತನ್ನತ್ತ ಸೆಳೆದು ಪಕ್ಷಾಂತರ ಮಾಡಿಸಿಕೊಳ್ಳುವ ಆಪರೇಷನ್‌ಗೆ ಬಿಜೆಪಿ ಕೈಹಾಕಲಿದೆ ಎಂದು ಕೆಲವರು ಹೇಳುತ್ತಿದ್ದಾರೆ. ನನ್ನ ಪ್ರಕಾರ ಈ ವಿಷಯದಲ್ಲಿ ಬಿಜೆಪಿ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು. ಇಂತಹ ಒಡೆದು ಆಳುವ ರಾಜಕೀಯವನ್ನು ಭಾರತದ ಮತದಾರರು ಇಷ್ಟಪಡುವುದಿಲ್ಲ. ರಾಜಕೀಯ ಪಂಡಿತರ ವಿಶ್ಲೇಷಣೆಗಳ ಪ್ರಕಾರ, ಬೇರೆ ಪಕ್ಷಗಳ ಜನಪ್ರತಿನಿಧಿಗಳನ್ನು ಸೆಳೆಯುವ ಬಿಜೆಪಿಯ ರಣತಂತ್ರವೇ ಮಹಾರಾಷ್ಟ್ರದಲ್ಲಿ ಆ ಪಕ್ಷ ಸೋತಿದ್ದಕ್ಕೆ ಕಾರಣ. ಆದ್ದರಿಂದ ಈ ಮಾದರಿಯ ಆಪರೇಷನ್‌ಗಳಿಗೆ ಕೈಹಾಕುವ ಮುನ್ನ ಹತ್ತು ಸಲ ಯೋಚಿಸುವುದು ಒಳಿತು.

ಅದೇ ರೀತಿ, ಕಾಂಗ್ರೆಸ್ ಮತ್ತು ಇಂಡಿಯಾ ಒಕ್ಕೂಟದ ಮುಂದಿರುವ ಸವಾಲು ಕೂಡ ದೊಡ್ಡದೇ. ಚುನಾವಣೆಯಲ್ಲಿ ಒಳ್ಳೆಯ ಪ್ರದರ್ಶನ ನೀಡಿದ ಬಳಿಕ ಅವು ಈಗ ತಮ್ಮನ್ನು ಬಲಿಷ್ಠ ಹಾಗೂ ರಚನಾತ್ಮಕ ವಿರೋಧ ಪಕ್ಷವಾಗಿ ಸಾಬೀತುಪಡಿಸುವ ಅಗತ್ಯವಿದೆ. ಇಂಡಿಯಾ ಒಕ್ಕೂಟದಲ್ಲಿ ಅಷ್ಟೊಂದು ರಾಜಕೀಯ ಪಕ್ಷಗಳು ಇರುವಾಗ ಎಲ್ಲರನ್ನೂ ಜೊತೆಗೆ ಕರೆದುಕೊಂಡು ಹೋಗುವುದು ಸುಲಭವಲ್ಲ. ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ತನ್ನದೇ ಆದ ಆಶೋತ್ತರಗಳು ಇರುತ್ತವೆ. ಆಮಿಷಗಳ ಪ್ರಚೋದನೆಗೆ ಜೊಲ್ಲು ಸುರಿಸುವ ಅಪಾಯವಂತೂ ಯಾವಾಗಲೂ ಇದ್ದಿದ್ದೇ. ಇಷ್ಟಕ್ಕೂ ಇದು 'ಒಂದು ವೇಳೆ' 'ಆದರೆ'ಗಳ ಜಮಾನ. ಇಲ್ಲಿ ಏನು ಬೇಕಾದರೂ ಆಗಬಹುದು!

(ಲೇಖಕರು: ಹಿರಿಯ ಪತ್ರಕರ್ತರು, ರಾಜ್ಯಸಭಾ ಮಾಜಿ ಸದಸ್ಯರು)

ಅನಿಸಿಕೆ
ಸಂದೀಪ್ ಶರ್ಮಾ ಮೂಟೇರಿ

ಚುನಾವಣೋತ್ತರ ಅವಲೋಕನ

ಈ ಬಾರಿಯ ಲೋಕಸಭಾ ಚುನಾವಣೆಯ ಫಲಿತಾಂಶವನ್ನು ಅವಲೋಕಿಸಿದಾಗ ಮತದಾರರು ಮತ್ತೊಮ್ಮೆ ಮೋದಿಯವರ ನೇತೃತ್ವದಲ್ಲಿ ಸರಕಾರವನ್ನು ನಡೆಸಲು ಆಶೀರ್ವದಿಸಿದ್ದಾರೆ. ಈ ಫಲಿತಾಂಶವು ನಿಸ್ಸಂಶಯವಾಗಿ ದೇಶದ ಪ್ರಜಾಪ್ರಭುತ್ವಕ್ಕೆ ಸಿಕ್ಕಂತಹ ಐತಿಹಾಸಿಕ ಗೆಲುವು. ಬಿಜೆಪಿಯು ಕೊಂಚ ಸರಳ ಬಹುಮತದಿಂದ ವಂಚಿತರಾಗಿದ್ದಕ್ಕೆ ವಿರೋಧ ಪಕ್ಷಗಳು ಇವಿಎಮ್ ನೀಡಿದ ಫಲಿತಾಂಶವನ್ನು ಅನಿವಾರ್ಯವಿಲ್ಲದೆ ಒಪ್ಪಿಕೊಳ್ಳಬೇಕಿದೆ ಇಲ್ಲದಿದ್ದರೆ ಈವಿಎಮ್ ಮೇಲೆಯೇ ಗೂಬೆ ಕೂರಿಸಿ ನಗೆಪಾಟಲಿಗೆ ಈಡಾಗುತ್ತಿದ್ದರು. ಈ ಫಲಿತಾಂಶವನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿದರೆ, ದೇಶದ ಪ್ರಜೆಗಳು ಮತ್ತು ಪಕ್ಷಗಳಿಗೆ ಇದು ಹಲವಾರು ಒಳನೋಟಗಳನ್ನು ನೀಡುತ್ತದೆ.

ಜಾಹೀರಾತುಗಳ ಮೂಲಕ ಪಕ್ಷಗಳು ಬಿಂಬಿಸುವ 'ಅಭಿವೃದ್ಧಿ' ಚಿತ್ರಣಕ್ಕೆ ಜನ ಬೆಂಬಲಿಸದೆ ವಿರೋಧ ಪಕ್ಷ ಕಾಂಗ್ರೆಸ್ ಹಸಿ ಹಸಿ ಸುಳ್ಳು ಹೇಳಿಕೊಂಡು ಬಂದ ಹಿನ್ನೆಲೆಯಲ್ಲಿ ಮತದಾನವಾಗಿರುವುದು ವಿಪರ್ಯಾಸ. ಇಲ್ಲಿನ ಮೊದಲ ಪಾಠ, 'ಇಲ್ಲಿ ಯಾರೂ ಮುಖ್ಯರಲ್ಲ, ಅಮುಖ್ಯರೂ ಅಲ್ಲ'. ಈ ಫಲಿತಾಂಶದ ಇನ್ನೊಂದು ವಿಶೇಷ ಅಂಶವೆಂದರೆ, ಕಣದಲ್ಲಿರುವ ಅಭ್ಯರ್ಥಿ ಎಂತಹವರು ಎನ್ನುವುದನ್ನು ಗುರುತಿಸಿ, ಅದಕ್ಕೆ ಅನುಗುಣವಾಗಿ ಜನ ಮತದಾನ ಮಾಡಿದಂತಿದೆ. ಅಂದರೆ, ಪಕ್ಷದ ಒಬ್ಬಿಬ್ಬರು ನಾಯಕರನ್ನೇ ಕೇಂದ್ರಬಿಂದುವಾಗಿಸಿ ಚುನಾವಣೆ ಎದುರಿಸಿದರೂ ಸ್ಥಳೀಯ ಅಭ್ಯರ್ಥಿ ಅರ್ಹನಾಗಿಲ್ಲದಿದ್ದರೆ ಮತದಾರರು ಅಂತಹವರನ್ನು ನಿರ್ದಾಕ್ಷಿಣ್ಯವಾಗಿ ಮನೆಗೆ ಕಳುಹಿಸುತ್ತಾರೆ ಎಂಬ ಸಂದೇಶ ಕೆಲವಾದರೂ ಕ್ಷೇತ್ರಗಳಲ್ಲಿ ದಾಖಲಾಗಿದೆ. ಹಾಗಾಗಿ, ಪಕ್ಷಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ, ಅವರ ಜಾತಿ, ಹಣಬಲ, ತೋಳ್ಬಲಕ್ಕಿಂತ ಹೆಚ್ಚಾಗಿ ಶಾಸನಸಭೆಗೆ ಹೋಗಲು ಇರಬೇಕಾದ ಅರ್ಹತೆಯತ್ತಲೂ ಗಮನಹರಿಸಬೇಕಾಗುತ್ತದೆ. ನಾಯಕರ ನಾಮಬಲ ಮಾತ್ರದಿಂದ ಒಂದು ಚುನಾವಣೆಯನ್ನೇನೋ ಗೆಲ್ಲಬಹುದು, ಆದರೆ, ಮತ್ತೆ ಮತ್ತೆ ಅದೇ ಅಭ್ಯರ್ಥಿಯನ್ನು ಆ ಒಂದೇ ಕಾರಣಕ್ಕಾಗಿ ಜನ ಗೆಲ್ಲಿಸಲಾರರು. ಈ ಚುನಾವಣೆಯಲ್ಲಿ ಅಭ್ಯರ್ಥಿಗಳ ಭವಿಷ್ಯವನ್ನು ನಿರ್ಧರಿಸಿದವರಲ್ಲಿ ಕೆಳವರ್ಗದವರು, ಆರ್ಥಿಕವಾಗಿ ಹಿಂದುಳಿದವರು, ಯುವಜನ, ಗೃಹಿಣಿಯರು ಮತ್ತು ಅಲ್ಪಸಂಖ್ಯಾತರ ಪಾತ್ರ ಹೆಚ್ಚಿನದು. ಯಾಕೆಂದರೆ, ಸಾಮಾನ್ಯವಾಗಿ ಈ ಸಮೂಹದ ಜನರ ದೈನಂದಿನ ಬದುಕಿನ ಮೇಲೆ ಸರಕಾರದ ಕಾರ್ಯಕ್ರಮಗಳು ಅತಿ ಹೆಚ್ಚು ಪ್ರಭಾವ ಬೀರುತ್ತವೆ. ವಸ್ತುಸ್ಥಿತಿ ಅವರ ಗ್ರಹಿಕೆಗೆ ತ್ವರಿತವಾಗಿ ನಿಲುಕುತ್ತದೆ. ಅದಕ್ಕೆ ಅನುಗುಣವಾಗಿ ಮತ ನೀಡುವುದು ಸಹಜ ವಿದ್ಯಮಾನ. ಈ ದಿಸೆಯಲ್ಲಿ, ಪ್ರಸಕ್ತ ಚುನಾವಣಾ ಫಲಿತಾಂಶವು ಕಾಂಗ್ರೆಸ್ ತಮ್ಮ ಭಾಷಣಗಳಲ್ಲಿ ಖಟಾಖಟ್ ಹಣವನ್ನು ನೀಡುತ್ತೇವೆ ಎಂದು ಪೊಳ್ಳು ಆಶ್ವಾಸನೆಯನ್ನು ಬಿಂಬಿಸಿ ಮತವನ್ನು ಸೆಳೆವುದರಲ್ಲಿ ಕೆಲವು ಸ್ಥಾನಗಳನ್ನು ಗೆಲ್ಲಲು ಸಶಕ್ತವಾಯಿತಷ್ಟೆ.

ವಿದೇಶಿ ನೆಲದಲ್ಲಿ ಭಾರತದ ಕುರಿತು ಒಳ್ಳೆಯ ಚಿತ್ರಣ ಮೂಡುತ್ತಿದೆ, ದೇಶದ ಅಭಿವೃದ್ಧಿ ಕಂಡುಬಂದರೂ ತೆರೆಮರೆಯಲ್ಲಿ ವಿರುದ್ಧವಾಗಿ ಕೆಲಸ ಮಾಡುವ ವಿರೋಧ ಪಕ್ಷಗಳ ಅಸಲಿ ಆಟಗಳು ಮುಂದಿನ ಚುನಾವಣೆಗೆ ಪರಿಣಾಮ ಬೀರದೇ ಇರುವುದಿಲ್ಲ. ಪ್ರಾಪಂಚಿಕವಾಗಿ ಮೋದಿ ವರ್ಚಸ್ಸು ಗೆದ್ದಿದ್ದರು ಕಾಂಗ್ರೆಸ್ಸಿನ ಅಸಲೀ ಬಣ್ಣ ಮತದಾರರಿಗೆ ಗೊತ್ತಿದ್ದರೂ ಜಟ್ಟಿ ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂಬಂತೆ ವರ್ತಿಸುತ್ತಿರುವುದು ವಿಪರ್ಯಾಸದ ಸಂಗತಿ.

ಈಗ ಭಾರತದ ದಕ್ಷಿಣ ಭಾಗದಲ್ಲಿ ಬಿಜೆಪಿ ಪ್ರಬಲ ಅಸ್ತಿತ್ವವನ್ನು ಹೊಂದುತ್ತಿರುವುದು ನಿಸ್ಸಂಶಯ. ಕರ್ನಾಟಕದಲ್ಲಿ ಬಿಜೆಪಿ ಸ್ವಂತ ಬಲದಿಂದ ಸರಕಾರ ರಚಿಸಿದ್ದರೂ ಅದನ್ನು ಪ್ಯಾನ್ ಇಂಡಿಯಾ ಪಕ್ಷವನ್ನಾಗಿ ಪರಿವರ್ತಿಸಿದ ಕೀರ್ತಿ ಮೋದಿಯವರಿಗೆ ಸಲ್ಲಬೇಕು. ಆದಾಗ್ಯೂ, ಈ ಚುನಾವಣೆಯು ಪ್ರಾದೇಶಿಕ ಸಂಘಟನೆಗಳ ಪುನರುಜ್ಜೀವನದ ಬಗ್ಗೆ ಬಲವಾದ ಸಂಕೇತಗಳನ್ನು ನೀಡಿದೆ. ಉದಾಹರಣೆಗೆ, ಮತದಾರರು ಪ್ರಧಾನಿ ಮೋದಿಯನ್ನು ನಂಬಿದ್ದರೂ ಬಿಜೆಪಿಗೆ ಪ್ರಬಲ ಸ್ಥಳೀಯ ಮುಖ ಬೇಕು ಎಂಬ ಸಂದೇಶವನ್ನು ಬಿಹಾರ ರಾಜ್ಯ ನೀಡಿದೆ. ಸ್ಥಳೀಯ ಮಟ್ಟದಲ್ಲಿ ಪ್ರಬಲ ನಾಯಕತ್ವದ ರೇಖೆಯನ್ನು ರಚಿಸುವುದು ಇತರ ರಾಜ್ಯಗಳಲ್ಲಿ ಲಾಭಾಂಶವನ್ನು ನೀಡಿದೆ ಮತ್ತು ಬಿಹಾರದಂತಹ ರಾಜ್ಯಗಳಲ್ಲಿ ಇದನ್ನು ಪುನರಾವರ್ತಿಸಲು ಇದು ಸಕಾಲವಾಗಿದೆ. ಬಿಜೆಪಿ ಕೇಂದ್ರ ನಾಯಕತ್ವವು ಸಿದ್ಧಾಂತದೊಂದಿಗೆ ಹೊಂದಿಕೊಂಡಿರುವ ಮತ್ತು ಸಾಮರ್ಥ್ಯವಿರುವ ಯುವಕರನ್ನು ಬೆಳೆಸಬೇಕು. ಅನೇಕ ಜನರು ಸಮರ್ಥರಾಗಿದ್ದಾರೆ ಮತ್ತು ರಾಜಕೀಯಕ್ಕೆ ಪ್ರವೇಶಿಸಲು ಬಯಸುತ್ತಾರೆ ಆದರೆ ಅಗತ್ಯವಿರುವ ವಿಧಾನಗಳು ಮತ್ತು ಸಂಪರ್ಕಗಳಿಲ್ಲದ ಕಾರಣ ಜನರಿಗೆ ಸಾಧ್ಯವಾಗುತ್ತಿಲ್ಲ.

2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಪ್ರಭಾವ ಬೀರಿವೆ ಎಂದು ಭಾವಿಸಲಾಗುವ ಗ್ಯಾರಂಟಿ ಯೋಜನೆಗಳು ಈಗಿನ ಲೋಕಸಭಾ ಚುನಾವಣೆ ಫಲಿತಾಂಶದ ನಂತರ ಮತ್ತೆ ಚರ್ಚಾವೇದಿಕೆ ಏರಿವೆ. ರಾಜ್ಯ ಸರಕಾರ ಕೊಡಮಾಡಿದ ಐದೂ ಜನಪ್ರಿಯ ಯೋಜನೆಗಳ ಫಲಾನುಭವಿಗಳು ಈ ಬಾರಿಯ ಚುನಾವಣೆಯಲ್ಲಿ 'ಕೈ' ಹಿಡಿಯುವ ಬದಲು 'ಕೈ'ಯಲ್ಲಿ ಸೋಲನ್ನು ಇಟ್ಟರು ಎಂಬುದು ಮತದಾರರ ಮೇಲೆ ಹೊರಿಸಲಾಗುತ್ತಿರುವ ಗಂಭೀರ ಆರೋಪ. ಪ್ರತಿಫಲಾಕಾಂಕ್ಷೆಯಿಂದ ಒಡ್ಡುವ ಆಮಿಷಗಳಿಗೂ ಜನಕಲ್ಯಾಣ ಕಾರ್ಯಕ್ರಮಗಳಿಗೂ ಇರುವ ವ್ಯತ್ಯಾಸವೇ ಮಸುಕಾದಂತಾಗಿದೆ.

ಈ ನಿಟ್ಟಿನಲ್ಲಿ ಇನ್ನಾದರೂ ಕಾಂಗ್ರೆಸ್ ಮತ್ತು ಇನ್ನಿತರ ವಿರೋಧ ಪಕ್ಷಗಳು ವೃತ್ತಿಪರ ರೂಪದಲ್ಲಿ ಬಿಜೆಪಿಯನ್ನು ಎದುರಿಸಲು ಸನ್ನದ್ಧರಾಗುತ್ತಾರೆಯೇ ಎಂಬುದು ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕಾಣಬೇಕಿದೆ.

(ಲೇಖಕರು: ಸಿವಿಲ್ ಎಂಜಿನಿಯರ್ ಹಾಗೂ ಹವ್ಯಾಸಿ ಬರಹಗಾರ)

ಸರಕಾರಿ ವಸತಿ ಶಾಲೆಗಳಲ್ಲಿ ತಾಂಡವವಾಡುತ್ತಿರುವ ಅವ್ಯವಸ್ಥೆಗೆ ಕೊನೆಯೆಂದು?

ಗಂಟಾಘೋಷ
ಗುರುರಾಜ್ ಗಂಟಿಹೊಳೆ
vveditoped@gmail.com

ಬೇಸಗೆಯ ತಾಪ ಕಳೆದು ರಾಜ್ಯದಲ್ಲಿ ಮಳೆಯ ಸಿಂಚನ ಸ್ವಲ್ಪ ಜೋರಾಗಿಯೇ ಇದೆ ಎನ್ನಬಹುದು. ರಾಜಧಾನಿ ಸೇರಿದಂತೆ ಇನ್ನು ಕೆಲವೆಡೆ ಮಳೆ ವಿಕೋಪ ಸೃಷ್ಟಿಯಾಗಿರುವುದನ್ನು ನೋಡಿದರೆ, ನಮ್ಮ ಆಡಳಿತ ವ್ಯವಸ್ಥೆ ಎಷ್ಟು ಮುಂಜಾಗ್ರತೆ ವಹಿಸಿದೆ ಎನ್ನುವುದರ ಪ್ರಾತ್ಯಕ್ಷಿಕೆಯೂ ಹೌದು, ಇರಲಿ. ಬೇಸಿಗೆಯ ರಜೆಯಲ್ಲಿದ್ದ ಮತ್ತು ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿದ್ದ ನಮ್ಮ ಮುದ್ದುಮಕ್ಕಳು ಮುಂದಿನ ಶಿಕ್ಷಣಕ್ಕೆ ಸೇರುವ ಹುಮ್ಮಸ್ಸಿನಲ್ಲಿದ್ದಾರೆ. ಇದರಲ್ಲಿ ಕೆಲವರು ಪ್ರೌಢ ಶಾಲೆಗೆ ಇನ್ನು ಕೆಲವರು ಕಾಲೇಜು, ಉನ್ನತ ಶಿಕ್ಷಣಕ್ಕೆ ಸೇರುವ ತಯಾರಿಯಲ್ಲಿದ್ದಾರೆ. ಇದರಲ್ಲಿ, ಹಿಂದುಳಿದ ಮತ್ತು ಆಧುನಿಕ ಸೌಲಭ್ಯಗಳಿಲ್ಲದ ಗ್ರಾಮೀಣ ಭಾಗದ ಮುಗ್ಧ ಬಡ ತಂದೆ-ತಾಯಿಗಳ ಶ್ರಮವೂ ಸಾಕ್ಷಿಯಾಗಿದೆ.

ಎಷ್ಟೋ ಪೋಷಕರು ಆರ್ಥಿಕ ಅಶಕ್ತರಾದ ಕಾರಣ ಪ್ರತಿಭಾವಂತ ವಿದ್ಯಾರ್ಥಿಗಳ ಮುಂದಿನ ಶಿಕ್ಷಣ ನಿಂತೇ ಹೋಗಿರುವ ನೂರಾರು ಉದಾಹರಣೆಗಳಿವೆ. ಇದು ಕೇವಲ ವೈಯಕ್ತಿಕ ವಿಚಾರವಾಗಿರದೇ, ಒಬ್ಬ ಪ್ರತಿಭಾವಂತ ವಿಫಲನಾದರೆ, ಆ ಪ್ರತಿಭೆಯುಳ್ಳ ಕ್ಷೇತ್ರದಲ್ಲಿ ದೇಶಕ್ಕೆ, ನಮ್ಮ ಸಮಾಜಕ್ಕೆ ನಷ್ಟ ಎಂಬುದನ್ನು ನಮ್ಮ ಇಂದಿನ ಸಮಾಜ ಮತ್ತು ಸಮುದಾಯ ಅರಿತಿರಬೇಕು. ಇಂತಹ ಒಂದು ವಿಷಮ ಪರಿಸ್ಥಿತಿಯಲ್ಲೂ ಮೊನ್ನೆ ನಮ್ಮ ಮೆಟ್ರಿಕ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಅದ್ಭುತ ಸಾಧನೆ ಮಾಡಿದರು. ಇಡೀ ರಾಜ್ಯ 'ಈ ಮಕ್ಕಳಿಗೆ ಒಳ್ಳೆಯದಾಗಲಿ, ಮುಂದಿನ ಶಿಕ್ಷಣವನ್ನು ಸರಿಯಾಗಿ ಆರಿಸಿಕೊಳ್ಳಿ ಮತ್ತು ಉತ್ತಮ ಸಾಧನೆ ಮಾಡಿರಿ' ಎಂದು ಹರಸಿದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಕುಳಿತಿದ್ದ ಎಂಟು ಲಕ್ಷಕ್ಕೂ ಅಧಿಕ ಮಕ್ಕಳಲ್ಲಿ 6 ಲಕ್ಷ ಮಕ್ಕಳು ಮೇ 2024ರ ಸಾಲಿನಲ್ಲಿ ತೇರ್ಗಡೆಯಾಗಿದ್ದಾರೆ. ಶಿಕ್ಷಣದ ಕಲಿಕೆಯ ಗುಣಮಟ್ಟ ಮತ್ತು ತೇರ್ಗಡೆಯ ವಿಚಾರದಲ್ಲಿ ದೊಡ್ಡಮಟ್ಟದಲ್ಲಿ ಕುಸಿತವುಂಟಾಗುತ್ತಿದೆ ಎಂಬುದನ್ನು ಇಲಾಖೆ ಮತ್ತು ಸಂಬಂಧಿತ ಸಚಿವರು ಬಹಳ ಗಂಭೀರವಾಗಿ ಪರಿಗಣಿಸಬೇಕಿದೆ. 2022ಕ್ಕೆ ಹೋಲಿಸಿದಲ್ಲಿ ಪಾಸಾಗುವಿಕೆಯಲ್ಲಿ ಶೇ.15ಕ್ಕಿಂತ ಹೆಚ್ಚು ಕುಸಿತ ಕಂಡುಬಂದಿದೆ. ಹಾಗೆಯೇ, ಸುಮಾರು 4 ಲಕ್ಷದಷ್ಟು ವಿದ್ಯಾರ್ಥಿಗಳು 660 ಸರಕಾರಿ ಕಾಲೇಜುಗಳಲ್ಲಿ, 2880 ಖಾಸಗಿ ಕಾಲೇಜುಗಳಲ್ಲಿ 10 ಲಕ್ಷದಷ್ಟು ವಿದ್ಯಾರ್ಥಿಗಳು ಅಧ್ಯಯನಕ್ಕೆ ಸೇರುತ್ತಿದ್ದಾರೆ. ಸುಮಾರು 2 ಲಕ್ಷದಷ್ಟು ವಿದ್ಯಾರ್ಥಿನಿಯರು ಮತ್ತು 1 ಲಕ್ಷದಷ್ಟು ವಿದ್ಯಾರ್ಥಿಗಳು ಪ್ರತಿವರ್ಷ ತೇರ್ಗಡೆಯಾಗುತ್ತಿರುವುದು ಕಂಡುಬರುತ್ತಿದೆ.

ಕಳೆದ ವಿಧಾನಸಭಾ ಅಧಿವೇಶನದಲ್ಲಿ, ವಿದ್ಯಾರ್ಥಿಗಳು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾದ ಅಸಮರ್ಪಕ ಪಠ್ಯ ಪುಸ್ತಕ ವಿತರಣೆ, ಸಾರಿಗೆ ವ್ಯವಸ್ಥೆ ಮತ್ತು ಯೋಗ್ಯ ವಸತಿ ನಿಲಯಗಳ ಕುರಿತು ಮೂರು ಪ್ರಮುಖ ವಿಷಯಗಳನ್ನು ಚರ್ಚಿಸಲಾಯಿತು. ಇದಕ್ಕೆ ಪರಿಹಾರಗಳನ್ನೂ ಕಲಾಪದಲ್ಲಿ ಸೂಚಿಸಲಾಯಿತು. ಹಿಂದಿನ ಮಳೆಗಾಲದ ಅಧಿವೇಶನ ಕಳೆದು, ಮತ್ತೆ ಅಧಿವೇಶನ ಬಂದಿದೆ. ನಾಡಿನ ಮಕ್ಕಳ ಭವಿಷ್ಯತ್ತನ್ನು ರೂಪಿಸಬೇಕಿದ್ದ ಈ ವಿಚಾರಗಳು ಮಾತ್ರ ಸಮಸ್ಯೆಗಳಾಗಿ ಇನ್ನೂ ಜೀವಂತವಾಗಿವೆ.

ಅಸಮರ್ಪಕ ಪಠ್ಯ ಪುಸ್ತಕ ವಿತರಣೆ

ಮುಂದಿನ ಹಂತದ ಶಿಕ್ಷಣಕ್ಕೆ ವಿದ್ಯಾರ್ಥಿಗಳಿಗೆ ಪ್ರಮುಖವಾಗಿ ಬೇಕಿರುವುದು ಪಠ್ಯಪುಸ್ತಕಗಳು. ಜೊತೆಗೆ, ಶಿಕ್ಷಕರ ಅಗತ್ಯ ನೇಮಕಾತಿ, ಶಿಕ್ಷಣದ ಗುಣಮಟ್ಟದಲ್ಲಿ, ವಿದ್ಯಾರ್ಥಿಗಳ ಕಲಿಕೆಯ ಆಸಕ್ತಿ ವಿಚಾರಗಳನ್ನು ಹೆಚ್ಚಿಸುವಲ್ಲಿ ನಾವು ಇತರರಿಗೆ ಮಾದರಿಯಾಗಬೇಕಿದ್ದ ಸಂದರ್ಭದಲ್ಲಿ ಬೇಡದ ವಿಚಾರದಲ್ಲಿ ತುಸು ಹೆಚ್ಚೇ ಸದ್ದು ಮಾಡಿತೆನ್ನಬಹುದು. ಸಮಿತಿಯ ಪಾಠಗಳನ್ನು ಸಕಾಲದಲ್ಲಿ ಅಂತಿಮಗೊಳಿಸಿ ನಮ್ಮ ವಿದ್ಯಾರ್ಥಿಗಳಿಗೆ ತಲುಪಿಸುವುದು ಪಠ್ಯ ರಚನಾ ಸಮಿತಿ ಮತ್ತು ಶಿಕ್ಷಣ ಇಲಾಖೆಯ ಕರ್ತವ್ಯ. ಕೋಟ್ಯಂತರ ಸಾರ್ವಜನಿಕ ಹಣ ಖರ್ಚುಮಾಡಿ ಹಿಂದಿನ ಸಮಿತಿಯ ಕಾರ್ಯವನ್ನು ಕಿತ್ತೆಸೆದು, ಹೊಸದಾಗಿ ಸೇರಿಸಲು ಮತ್ತೊಂದು ಸಮಿತಿ. ಅದಕ್ಕೂ ಕೋಟ್ಯಂತರ ಹಣ ವ್ಯಯ.

ಕೇವಲ 1 ರಿಂದ 10ನೇ ತರಗತಿವರೆಗಿನ ಪುಸ್ತಕಗಳ ಮುದ್ರಣಕ್ಕೆ ಕನಿಷ್ಠವೆಂದರೂ 150 ರಿಂದ 200 ಕೋಟಿ ರು.ಗಳು ಬೇಕು. ಇನ್ನು, ಹೊಸ ಸಮಿತಿಯ ಹೊಸ ಪುಸ್ತಕಗಳಿಗೆ ಮತ್ತದೇ 'ಕಾಂಟ್ರಾಕ್ಟು'. ಹೀಗೆ ದುಂದುವೆಚ್ಚ ಮಾಡಿ ಮುದ್ರಣಕ್ಕೆ ಕೊಟ್ಟ ಪುಸ್ತಕಗಳು ಸಕಾಲಕ್ಕೆ ಮಕ್ಕಳ ಕೈಗೆ ಸೇರದೇ ಇರುವುದು ಒಂದು ಬಗೆಯ 'ಸರಕಾರಿ ಪದ್ಧತಿ'ಯಾಗಿದೆ. ಈ ವಿಳಂಬ ನೀತಿಯು ಇಂದು ಮೊನ್ನೆಯದಲ್ಲ. ಇದಕ್ಕೆ ಇಲಾಖೆಯು ಮತ್ತು ಪುಸ್ತಕ ಸರಬರಾಜು ದೊರೆಗಳು ಒಗ್ಗಿಕೊಂಡುಬಿಟ್ಟಿದ್ದಾರೆನ್ನಬಹುದು. ಈ ಕುರಿತಂತೆ ಪ್ರತೀ ವರ್ಷವೂ ಸುದ್ದಿಮಾಧ್ಯಮಗಳಲ್ಲಿ 'ಪುಸ್ತಕಗಳ ಲಭ್ಯತೆಯಲ್ಲಿ ವಿಳಂಬ' ಎಂದು ಬಂದೇ ಬರುತ್ತದೆ.

ಹೀಗಾಗಿ, ಖಾಸಗಿ ಪ್ರಕಾಶಕರ ಪುಸ್ತಕಗಳಿಗೆ, ಪೂರ್ವ ತಯಾರಿಗೊಂಡ 'ಅಧ್ಯಯನ ಸಾಮಗ್ರಿ'ಗಳ ಮೊರೆಹೋಗುವ ವಿದ್ಯಾರ್ಥಿಗಳು ತಮ್ಮ ವಿದ್ಯೆ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಒಂದು ಸೀಮಿತ ಚೌಕಟ್ಟನ್ನು ಈ ಮೂಲಕ ತಾವೇ ಹಾಕಿಕೊಂಡಂತಾಗುತ್ತದೆ. ಇನ್ನು ಕೆಲವು ಸ್ಟಾರ್ಟ್- ಅಪ್ ಕಂಪನಿಗಳು Study materiel ಗಳನ್ನು ಹಾಗೂ Online ಮೂಲಕ ಶಿಕ್ಷಣ ಕೊಡುವ ಹಂತಕ್ಕೆ ಬಂದಿವೆ.

ಇನ್ನಾದರೂ, ನಮ್ಮ ಶಿಕ್ಷಣ ಇಲಾಖೆಯು ಪಠ್ಯಪುಸ್ತಕದ ವಿಚಾರದಲ್ಲಿ ಆಧುನಿಕ ತಾಂತ್ರಿಕತೆಯನ್ನು ಬಳಸಿ, ಸಕಾಲದಲ್ಲಿ ಮತ್ತು ಭ್ರಷ್ಟಾಚಾರರಹಿತ ಶಿಕ್ಷಣ ವ್ಯವಸ್ಥೆ ರೂಪಿಸಲು ತ್ವರಿತ ಕ್ರಮ ಕೈಗೊಳ್ಳಬೇಕಾದ ಅನಿವಾರ್ಯತೆಯಿದೆ.

ಸಾರಿಗೆ ವ್ಯವಸ್ಥೆ

ಈ ಪುಸ್ತಕಗಳದ್ದು ಒಂದು ಕತೆಯಾದರೆ, ರಾಜ್ಯ ಸಾರಿಗೆಯದ್ದೇ ಒಂದು ಕತೆ. ಹಾಗೆ ನೋಡಿದರೆ, ಪಕ್ಕದ ಆಂಧ್ರ, ಕೇರಳ ರಾಜ್ಯಗಳ ಸಾರಿಗೆ ಬಸ್‌ಗಳನ್ನು ನೋಡಿದಾಗ, ಅವರಿಗಿಂತ ನಮ್ಮ ಬೆಂಗಳೂರು ನಗರ ಸಾರಿಗೆ ಸಂಸ್ಥೆಯ ಬಸ್‌ಗಳು ಅಂತರಾಷ್ಟ್ರೀಯ ಮಟ್ಟದಲ್ಲಿವೆ. ಇದೊಂದು ಖುಷಿಯ ವಿಚಾರವೇ!

ಆದರೆ, ಕೇವಲ ಬೆಂಗಳೂರು ಮಾತ್ರವೇ ಕರ್ನಾಟಕ ಅಲ್ಲವೆಂಬುದನ್ನು ಇಲಾಖೆ ಮತ್ತು ಅಧಿಕಾರಿಗಳು ಮೊದಲು ಮನಗಾಣಬೇಕಿದೆ. ಎಲ್ಲಿ ತೆರಿಗೆ ಜಾಸ್ತಿ ಸಂಗ್ರಹವಾಗುತ್ತದೆಯೋ ಅಲ್ಲಿ ಮಾತ್ರವೇ ಅಭಿವೃದ್ಧಿ ಎಂಬಂತೆ ರಾಜ್ಯದ ಇತರೆ ಜಿಲ್ಲೆ-ತಾಲ್ಲೂಕುಗಳಿಗೆ ಸೂಕ್ತ ಬಸ್ ವ್ಯವಸ್ಥೆ ಮಾಡದೇ ಅಸಮರ್ಪಕ ಭಿಬಸ್‌ಭಿಗಳನ್ನು ಬಳಕೆಗೆ ಬಿಟ್ಟಿರುವುದು ನ್ಯಾಯವೇ!? ಇದೇ ಕಾರಣಕ್ಕೆ ಸರಕಾರಿ ಬಸ್ಸುಗಳಲ್ಲಿ ಛತ್ರಿ ಹಿಡಿದುಕೊಂಡು ಪ್ರಯಾಣ ಮಾಡಿದ ಸುದ್ದಿ ಕೂಡ ವಾಸ್ತವಿಕತೆಯನ್ನು ತೆರೆದಿಟ್ಟಿತು.

ಯಾವ ಉದ್ದೇಶದಿಂದ 'ಉಚಿತ ಸಾರಿಗೆ ಭಾಗ್ಯ' ಕೊಡಲು ಇಂದಿನ ಸರಕಾರ ನಿರ್ಧರಿಸಿತೋ, ಆ ಉದ್ದೇಶವೇ ಸಫಲವಾಗಲಿಲ್ಲ. ಉಚಿತ ವ್ಯವಸ್ಥೆ ಇರುವುದರಿಂದ ಮಹಿಳೆಯರು ಬಳಸುತ್ತಿದ್ದಾರೆಂಬ ಒಂದು ಅಂಶವನ್ನು ಬಿಟ್ಟರೆ, ಮಾಧ್ಯಮಗಳ ಮುಂದೆ ಹಲವು ಬಾರಿ ಯುವತಿಯರು, ದುಡಿಯುವ ಗೃಹಿಣಿಯರೆಲ್ಲ 'ಇದರಿಂದ ನಮಗೆ ಅಂಥಾದ್ದೇನೂ ಉಪಯೋಗವಿಲ್ಲ, ಬಸ್ಸುಗಳನ್ನು ಹೆಚ್ಚು ಮಾಡಿ ಜನರು ಕಾಯದಂತೆ ಮಾಡಿದ್ದರೆ, ಸಮಯಕ್ಕೆ ಸರಿಯಾಗಿ ಬಸ್ಸುಗಳು ಬರುವಂತೆ ಮಾಡಿದ್ದರೆ ಅದೇ ದೊಡ್ಡ ಭಾಗ್ಯವಾಗುತ್ತಿತ್ತು. ಕೆಲವೊಮ್ಮೆ ಅರ್ಧ ದಿನ ಕಾದರೂ ಬಸ್ಸು ಬರುವುದಿಲ್ಲ. ಪ್ರಯಾಣಿಸುವ ಮಾರ್ಗಕ್ಕೆ ಇರುವ ಒಂದೆರಡು ಬಸ್ಸುಗಳಲ್ಲಿ, ಒಂದೋ ಕ್ಯಾನ್ಸಲ್ ಮಾಡಿರುತ್ತಾರೆ. ಇಲ್ಲವೆ, ಬೆಳಿಗ್ಗೆ 8 ಕ್ಕೆ ಬರಬೇಕಾದ ಬಸ್ಸು ಮಧ್ಯಾಹ್ನ 2ಕ್ಕೆ ಬರುತ್ತದೆ' ಎಂದು ಅಲವತ್ತುಕೊಂಡಿದ್ದೂ ಇದೆ.

ದುಡಿಯಲು ಹೋಗುವ ಮಹಿಳೆಯರ, ಶಾಲೆಗೆ ಹೋಗುವ ವಿದ್ಯಾರ್ಥಿಗಳ ಕತೆಯೇನು, ಇದರಿಂದ ಅವರ ಕಲಿಕೆಯ ಮೇಲೆ ನಾವು ಯಾವ ಪರಿಣಾಮ ಬೀರುತ್ತಿದ್ದೇವೆ ಎಂಬುದನ್ನು ಆಳುವವರು ಕೇವಲ ಅಧಿಕಾರಕ್ಕಾಗಿಯಲ್ಲದೇ, ಜನಹಿತಕ್ಕಾಗಿಯೂ ಯೋಚಿಸುವ ಆತ್ಮಸೂಕ್ಷ್ಮತೆ ಹೊಂದಿರಬೇಕು.

ಹತ್ತಾರು ಪ್ರಯಾಣಿಕರಿದ್ದರೂ, ಸಾಕಷ್ಟು ಸೀಟುಗಳಿಲ್ಲ. ಈ ಬಸ್ಸು ಮುಂದಕ್ಕೆ ಹೋಗುವುದಿಲ್ಲ. ಡಿಪೋಗೆ ಲೆಕ್ಕ ಕೊಡಬೇಕಾಗ್ತದೆ. ನೀವು ಹಿಂದಿನ ಬಸ್‌ಗೆ ಹತ್ತಿಕೊಳ್ಳಿ, ನಾವು ಟಿಕೇಟ್ ಮೇಲೆ ಬರೆದು ಕೊಡ್ತೇವೆ ಎಂಬ ಉತ್ತರವು, ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕದ ಎಲ್ಲ ಸಾರಿಗೆ ವಾಹನಗಳಿಂದ ಬರುತ್ತದೆ. ಹಾಗಿದ್ದರೆ, ಕೇವಲ ಲಾಭಕ್ಕಾಗಿ ಮಾತ್ರವೇ ಸರಕಾರಿ ಸಾರಿಗೆ ಸಂಸ್ಥೆ ಇರುವುದೇ ಎಂಬ ಪ್ರಶ್ನೆ ಕಾಡುತ್ತಿದೆ. ಹಾಗಿದ್ದರೆ, ಸಾರಿಗೆ ಸೇವೆ ಎಂಬುದು ಯಾವ ಕರ್ಮಕ್ಕೆ ಮಾರ್‍ರೆ ಎಂದು ನೊಂದ ಜನ ಕೇಳುತ್ತಿದ್ದಾರೆ.

ಯೋಗ್ಯ ವಸತಿ ನಿಲಯಗಳು:

ರಾಜ್ಯದ ವಸತಿನಿಲಯಗಳ ಬಗ್ಗೆ ಬೇರೆಯದೆ ಒಂದು ಇತಿಹಾಸ ಬರೆಯಬಹುದು. ನಮ್ಮ ರಾಜ್ಯದಲ್ಲಿರುವ ಮೂಲಭೂತ ಸೌಕರ್ಯಗಳು, ಸಾಮಾನ್ಯ ಜನರು ಅಧ್ಯಯನಶೀಲರಿಗೆ ಕೊಡುವ ಸಹಕಾರ ಉಳಿದ ರಾಜ್ಯಗಳಿಗೆ ಹೋಲಿಸಿದಲ್ಲಿ ಬಹು ಮುಂದಿದೆ.

6 ಸಾವಿರದಷ್ಟು ವಸತಿನಿಲಯಗಳಿವೆ. ಇವುಗಳಲ್ಲಿ ಅಲ್ಪಸಂಖ್ಯಾತ ಹುಡುಗರಿಗೆ 15 ಮೆಟ್ರಿಕ್ ಪೂರ್ವ, ವಿದ್ಯಾರ್ಥಿನಿಯರಿಗೆ 23 ವಸತಿನಿಲಯಗಳಿವೆ. ಮೆಟ್ರಿಕ್ ನಂತರದಲ್ಲಿ 160 ಹುಡುಗರ ಮತ್ತು 110 ಹುಡುಗಿಯರಿಗಾಗಿ ವಸತಿನಿಲಯಗಳಿವೆ. ಇನ್ನು ಹಿಂದುಳಿದವರಿಗೆ ಸಹ ಮೆಟ್ರಿಕ್ ನಂತರದ ವಸತಿನಿಲಯಗಳು 1070ರಷ್ಟಿವೆ. ಒಟ್ಟಾರೆ, 1 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವಸತಿನಿಲಯದಲ್ಲಿ ಉಳಿದುಕೊಂಡಿರುವ ಮಾಹಿತಿಯಿದೆ. ಇಷ್ಟೆಲ್ಲ ಯಾಕೆ ಹೇಳಬೇಕಾಯಿತೆಂದರೆ, ನಮ್ಮ ಸರಕಾರಿ ವಸತಿ ನಿಲುಗಳ ಕತೆ ವ್ಯಥೆ ಜನಸಾಮಾನ್ಯರಿಗೂ ಗೊತ್ತು. ಇದಕ್ಕಾಗಿ ಕೋಟ್ಯಂತರ ಹಣವನ್ನು ಆಯವ್ಯಯದಲ್ಲಿ ಮೀಸಲಿರಿಸಲಾಗಿದೆ. ಖರ್ಚೂ ಆಗುತ್ತಿದೆ.

ವಸತಿನಿಲಯದಲ್ಲಿ ನಿತ್ಯ ಎರಡು ಪೇಪರ್, ಕ್ಷೌರಕ್ಕೆ ಹಣ, ಉಚಿತ ಆರೋಗ್ಯ ಚಿಕಿತ್ಸೆ, ಪ್ರತಿ ವಿದ್ಯಾರ್ಥಿಗೆ ಹಾಸಿಗೆ ದಿಂಬು, ಪೆನ್ನು ಪುಸ್ತಕ, ಇತರೆ ಸ್ಟೇಷನರಿ ವೆಚ್ಚ, ವರ್ಷಪೂರ್ತಿ ಓದಲು ಮಾಸಪತ್ರಿಕೆ, ಕ್ರೀಡಾ ಸಾಮಗ್ರಿಗೆ ಹಣ, ಅಧ್ಯಯನ ಪುಸ್ತಕಗಳಿಗೆ ಹಣ ಸೇರಿದಂತೆ ಲಕ್ಷಕ್ಕೂ ಅಧಿಕ ಹಣವನ್ನು ಪ್ರತಿ ವಿದ್ಯಾರ್ಥಿಗೆ ನೀಡುವ ಬಗ್ಗೆ ತಿಳಿಸಲಾಗಿದೆ. ಈ ಎಲ್ಲ ಸೌಲಭ್ಯಗಳನ್ನು ಯಾವ ವಿಧ್ಯಾರ್ಥಿ ಯಾವಾಗ ಪಡೆದುಕೊಂಡಿದ್ದಾನೆಂದು 'ಸರ್ವೆ' ಮಾಡಿ ತಿಳಿದುಕೊಳ್ಳಬೇಕಷ್ಟೇ! ವಾಸ್ತವದಲ್ಲಿ ಎಷ್ಟೋ ವಸತಿನಿಲಯಗಳಲ್ಲಿ ಬಿಸಿನೀರಿಗೆ ಖಾರದಪುಡಿ ಬೆರೆಸಿ ಅನ್ನಕ್ಕೆ ಕಲಿಸಿ ತಿನ್ನಬೇಕಾದ ಪರಿಸ್ಥಿತಿಯಿದೆ.

ಇನ್ನು ಶಿಕ್ಷಣ ಕಾಶಿಯಂತಿರುವ ನಮ್ಮ ಕರಾವಳಿ (ದಕ್ಷಿಣ ಕನ್ನಡ, ಮಂಗಳೂರು, ಉಡುಪಿ ಸೇರಿದಂತೆ) ಭಾಗದಲ್ಲಿನ ಕತೆಯೇನೂ ಭಿನ್ನವಾಗಿಲ್ಲ. ಪದವಿ ಪೂರ್ವ ಮತ್ತು ಪದವಿಗಳ ಪ್ರವೇಶಾತಿ ಆರಂಭವಾದರೂ, ವಸತಿನಿಲಯಗಳ ಬಾಗಿಲು ತೆರೆಯುವುದಿಲ್ಲ. ತಿಂಗಳುಗಟ್ಟಲೆ ಚಾಪೆ ಹಾಸಿಕೊಂಡು ವಸತಿನಿಲಯದ ಬಾಗಿಲ ಮುಂದೆ ಮಲಗುತ್ತ ಕಾಲ ಕಳೆಯುವ ಸೌಭಾಗ್ಯಗಳನ್ನೂ ಈ ವ್ಯವಸ್ಥೆ ನಮ್ಮ ಮಕ್ಕಳಿಗೆ ಕಲ್ಪಿಸಿಕೊಟ್ಟಿದೆ. ಜೊತೆಗೆ, ಅರ್ಜಿ ಹಾಕಿದ ಎಲ್ಲ ಮಕ್ಕಳಿಗೂ ವಸತಿನಿಲಯದಲ್ಲಿ ಸೀಟು ಸಿಗುತ್ತದೆಂಬ ಖಾತ್ರಿಯಿಲ್ಲ. ಬಂದ ಅರ್ಜಿಗಳಲ್ಲಿ ಶೇ.50ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿಗೆ ಅವಕಾಶ. ಹಾಸ್ಟೆಲ್ ಸಿಗುತ್ತದೆಂಬ ಕನಸಿನೊಂದಿಗೆ ಅರ್ಜಿ ಹಾಕಿ ತಿರಸ್ಕಾರಗೊಂಡ ಮಕ್ಕಳ ಕತೆಯೇನು? ಎಂಬುದಕ್ಕೆ ಯಾರ ಬಳಿಯೂ ಉತ್ತರವಿಲ್ಲ.

ಇನ್ನಾದರೂ, ಇದಕ್ಕೆ ಸಂಬಂಧಪಟ್ಟ ಇಲಾಖೆ ಮತ್ತು ಅಧಿಕಾರಿಗಳು ಗಮನಹರಿಸಿ, ಈ ವ್ಯವಸ್ಥೆಯಿರುವುದು ನಮ್ಮದೇ ನಾಡಿನ ಮಕ್ಕಳಿಗೆ, ಅವರ ಭವ್ಯ ಭವಿಷ್ಯತ್ತಿಗೆ ಎಂಬುದನ್ನು ಅರಿತುಕೊಂಡು ಸುಧಾರಿಸಿದಲ್ಲಿ ಸಮಸ್ತ ವಿದ್ಯಾರ್ಥಿ ಬಳಗಕ್ಕೆ, ಕಲಿಕಾ ಬದುಕಿಗೆ ಮಹದುಪಕಾರವಾದೀತು. ಅಧಿವೇಶನದ ಮೇಲೆ ಅಧಿವೇಶನ ಬರುತ್ತಲೇ ಇದೆ. ಚರ್ಚಿಸಿ, ಪರಿಹಾರ ಸೂಚಿಸಿದ ಸಮಸ್ಯೆಗಳು ಮಾತ್ರ ಹೆಚ್ಚುತ್ತಲೇ ಇವೆ.

ಜನರ ತೆರಿಗೆಯನ್ನು ಜನತೆಯ ಮಕ್ಕಳಿಗೆ ವಿನಿಯೋಗಿಸಲು ಯಾವ ದೊಣ್ಣೆನಾಯಕನ ಅಪ್ಪಣೆ ಬೇಕು ಸ್ವಾಮೀ!?

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:171

ವಿಶ್ವ ಆರ್ಥಿಕ ವೇದಿಕೆಯಿಂದ ವರದಿ ಬಿಡುಗಡೆ

ಲಿಂಗತ್ವ ಸಮಾನತೆ ಸೂಚ್ಯಂಕ 129ನೇ ಸ್ಥಾನಕ್ಕೆ ಕುಸಿದ ಭಾರತ

ದೆಹಲಿ: ಜಾಗತಿಕ ಲಿಂಗತ್ವ ಸಮಾನತೆಗೆ ಸಂಬಂಧಿಸಿದ ಸೂಚ್ಯಂಕದಲ್ಲಿ ಭಾರತವು ಎರಡು ಸ್ಥಾನ ಕುಸಿತ ಕಂಡಿದ್ದು, 129ನೇ ಸ್ಥಾನ ಪಡೆದುಕೊಂಡಿದೆ. ಕಳೆದ ವರ್ಷ ಅದು 127ನೇ ಸ್ಥಾನದಲ್ಲಿತ್ತು. ಐಸ್‌ಲ್ಯಾಂಡ್ ತನ್ನ ಅಗ್ರ ಸ್ಥಾನವನ್ನು ಉಳಿಸಿಕೊಂಡಿದೆ.

ವಿಶ್ವ ಆರ್ಥಿಕ ವೇದಿಕೆಯು (ಡಬ್ಲ್ಯುಇಎಫ್) ಬುಧವಾರ ಬಿಡುಗಡೆ ಮಾಡಿರುವ ಲಿಂಗತ್ವ ಅಂತರ ಸೂಚ್ಯಂಕ ವರದಿಯಲ್ಲಿ, ಫಿನ್‌ಲ್ಯಾಂಡ್ ಎರಡನೇ ಸ್ಥಾನದಲ್ಲಿದ್ದರೆ, ನಾರ್ವೆ, ನ್ಯೂಜಿಲೆಂಡ್ ಮತ್ತು ಸ್ವೀಡನ್ ಕ್ರಮವಾಗಿ ಮೂರರಿಂದ ಐದನೇ ಸ್ಥಾನದಲ್ಲಿವೆ. ಬ್ರಿಟನ್ 14ನೇ ಸ್ಥಾನ ಮತ್ತು ಅಮೆರಿಕ 43ನೇ ಸ್ಥಾನ ಪಡೆದಿದೆ.

ದಕ್ಷಿಣ ಏಷ್ಯಾದಲ್ಲಿ ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ, ಭೂತಾನ್ ಮತ್ತು ಭಾರತ ಕ್ರಮವಾಗಿ ಮೊದಲ ಐದು ಸ್ಥಾನಗಳನ್ನು ಪಡೆದಿದ್ದರೆ, ಪಾಕಿಸ್ತಾನ ಕೊನೆಯ ಸ್ಥಾನದಲ್ಲಿದೆ.

ಶಿಕ್ಷಣ, ರಾಜಕೀಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ಲಿಂಗತ್ವ ಸಮಾನತೆಯಲ್ಲಿ ಸಣ್ಣ ಪ್ರಮಾಣದಲ್ಲಿ ಇಳಿಕೆಯಾಗಿರುವುದರಿಂದ ಭಾರತವು ಕಳೆದ ಸಾಲಿಗಿಂತ ಎರಡು ಸ್ಥಾನಗಳಷ್ಟು ಕುಸಿತ ಕಂಡಿದೆ. ಆದರೆ ಆರ್ಥಿಕ ಭಾಗವಹಿಸುವಿಕೆ ಮತ್ತು ಅವಕಾಶಗಳಿಗೆ ಸಂಬಂಧಿಸಿದ ಅಂಕಗಳಲ್ಲಿ ಸುಧಾರಣೆ ಕಂಡು ಬಂದಿದೆ ಎಂದು ವರದಿ ಉಲ್ಲೇಖಿಸಿದೆ.

ಲಿಂಗತ್ವ ಸಮಾನತೆಗಾಗಿ ನಾವು 2158ನೇ ಇಸವಿವರೆಗೆ ಕಾಯಲು ಸಾಧ್ಯವಿಲ್ಲ. ಅಗತ್ಯವಿರುವ ನಿರ್ಣಾಯಕ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕಿದೆ.
–ಸಾದಿಯಾ ಜಾಹಿತಿ
ಡಬ್ಲ್ಯುಇಎಫ್ ವ್ಯವಸ್ಥಾಪಕ ನಿರ್ದೇಶಕಿ

- ಕಳೆದ ಸಾಲಿಗಿಂತ ಎರಡು ಸ್ಥಾನ ಕುಸಿದ ಭಾರತ
- ಅಗ್ರ ಸ್ಥಾನವನ್ನು ಉಳಿಸಿಕೊಂಡ ಐಸ್‌ಲ್ಯಾಂಡ್
- ಕೊನೆಯ ಸ್ಥಾನದಲ್ಲಿ ಉಳಿದ ನೆರೆ ರಾಷ್ಟ್ರ ಪಾಕಿಸ್ತಾನ

ವರದಿಯ ಪ್ರಮುಖಾಂಶಗಳು

- ಮಾಧ್ಯಮಿಕ ಶಿಕ್ಷಣ ದಾಖಲಾತಿಗೆ ಸಂಬಂಧಿಸಿದಂತೆ ಭಾರತವು ಅತ್ಯುತ್ತಮ ಲಿಂಗ ಸಮಾನತೆ ಹೊಂದಿದೆ. ಮಹಿಳಾ ರಾಜಕೀಯ ಸಬಲೀಕರಣದಲ್ಲೂ ಭಾರತ ಉತ್ತಮ ಅಂಕಗಳನ್ನು ಗಳಿಸಿದ್ದು, ಜಾಗತಿಕವಾಗಿ 65ನೇ ಸ್ಥಾನ ಪಡೆದಿದೆ
- 140 ಕೋಟಿಗೂ ಹೆಚ್ಚು ಜನಸಂಖ್ಯೆ ಹೊಂದಿರುವ ಭಾರತ ಲಿಂಗತ್ವ ಅಸಮಾನತೆಯನ್ನು ಅಳಿಸಿ ಹಾಕುವಲ್ಲಿ ಒಟ್ಟಾರೆ ಶೇ.64.1ರಷ್ಟು ಪ್ರಗತಿ ಸಾಧಿಸಿದೆ
- ಜಾಗತಿಕವಾಗಿ ಲಿಂಗತ್ವ ಅಂತರವು ಶೇ.68.5ರಷ್ಟು ಇದ್ದು, ಇದೇ ವೇಗದಲ್ಲಿ ಸಾಗಿದರೆ ಪೂರ್ಣ ಪ್ರಮಾಣದಲ್ಲಿ ಲಿಂಗತ್ವ ಸಮಾನತೆ ಸಾಧಿಸಲು ಇನ್ನೂ 134 ವರ್ಷಗಳು ಬೇಕಾಗುತ್ತವೆ
- ಸೂಚ್ಯಂಕದಲ್ಲಿ ಸುಡಾನ್ ಕೊನೆಯ ಅಂದರೆ 146ನೇ ಸ್ಥಾನದಲ್ಲಿದ್ದರೆ, ಪಾಕಿಸ್ತಾನ 145ನೇ ಸ್ಥಾನದಲ್ಲಿದೆ. ಪಾಕಿಸ್ತಾನವು ಕಳೆದ ಸಾಲಿಗಿಂತ ಮೂರು ಸ್ಥಾನ ಕುಸಿತ ಕಂಡಿದೆ.

2023ರಲ್ಲಿ ಮಕ್ಕಳ ಮೇಲಿನ ಹಿಂಸಾಚಾರ ಅಧಿಕ

ಮಕ್ಕಳ ಮೇಲಿನ ಹಿಂಸಾಚಾರ ಪ್ರಕರಣಗಳು 2023ರಲ್ಲಿ ಹಲವು ಪಟ್ಟು ಹೆಚ್ಚಾಗಿವೆ ಎಂದು ವಿಶ್ವಸಂಸ್ಥೆಯ ವರದಿಯೊಂದು ಹೇಳಿದೆ. ಇಸ್ರೇಲ್ ಮತ್ತು ಪ್ಯಾಲೆಸ್ಟಿನ್ ನಡುವಿನ ಸಂಘರ್ಷ, ರಷ್ಯಾ ಮತ್ತು ಉಕ್ರೇನ್ ನಡುವಿನ ಯುದ್ಧ ಸೇರಿ ಹಲವು ಸಂಘರ್ಷಗಳಲ್ಲಿ ಮಕ್ಕಳ ಹತ್ಯೆಗಳು ನಡೆದಿವೆ. ಅಲ್ಲದೆ ಅಧಿಕ ಸಂಖ್ಯೆಯಲ್ಲಿ ಮಕ್ಕಳು ಗಾಯಗೊಂಡಿದ್ದಾರೆ ಎಂದು ಹೇಳಿದೆ. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ವಿರುದ್ಧದ ಘರ್ಷಣೆಗಳ ಸರಣಿಯಲ್ಲಿ ಕಾಂಗೊ, ಬುರ್ಕಿನಾ ಫಾಸೊ, ಸೊಮಾಲಿಯಾ ಮತ್ತು ಸಿರಿಯಾ ಉಲ್ಲೇಖಿಸಿ ಹಿಂಸಾಚಾರ ಪ್ರಕರಣಗಳು ಶೇ.21ರಷ್ಟು ಹೆಚ್ಚಳವಾಗಿವೆ ಎಂದು ತಿಳಿಸಿದೆ. ಇಸ್ರೇಲ್ ಪಡೆಗಳು ಶಾಲೆಗಳು ಮತ್ತು ಆಸ್ಪತ್ರೆಗಳ ಮೇಲೆ ದಾಳಿ ಮಾಡಿ, ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸಿವೆ. ಮಕ್ಕಳನ್ನು ಕೊಲ್ಲುವುದು, ಗಾಯಗೊಳಿಸುವುದು ಮತ್ತು ಅಪಹರಣ ಮಾಡುವುದು ವ್ಯಾಪಕವಾಗಿ ನಡೆದಿದೆ ಎಂದು ಉಲ್ಲೇಖಿಸಲಾಗಿದೆ.

ವಿಮೆ ನಿಯಂತ್ರಣ, ಅಭಿವೃದ್ಧಿ ಪ್ರಾಧಿಕಾರ ಸೂಚನೆ

ವಿಮಾದಾರರಿಗೆ ಸಾಲ ನೀಡುವುದು ಕಡ್ಡಾಯ

ದೆಹಲಿ: ಜೀವ ವಿಮಾ ಪಾಲಿಸಿಯಡಿ ಉಳಿತಾಯ ಮಾಡಿರುವ ಮೊತ್ತಕ್ಕೆ ಅನುಗುಣವಾಗಿ ವಿಮಾ ಕಂಪನಿಗಳು ವಿಮಾದಾರರಿಗೆ ಸಾಲ ಸೌಲಭ್ಯ ಕಲ್ಪಿಸುವುದು ಕಡ್ಡಾಯವಾಗಿದೆ. ಸಾಲ ಸೌಲಭ್ಯ ಕಲ್ಪಿಸುವುದರಿಂದ ವಿಮಾದಾರರು ಹಣದ ಅಗತ್ಯತೆ ಪೂರೈಸಿಕೊಳ್ಳಲು ನೆರವಾಗಲಿದೆ ಎಂದು ಭಾರತೀಯ ವಿಮೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ಬುಧವಾರ ತಿಳಿಸಿದೆ.

ಪಾಲಿಸಿ ಕುರಿತ ನಿಯಮಗಳು ಮತ್ತು ಷರತ್ತುಗಳ ಬಗ್ಗೆ ಪರಿಶೀಲನೆಗೆ ಈ ಮೊದಲು ನಿಗದಿಪಡಿಸಿದ್ದ ಅವಧಿಯನ್ನು 15 ದಿನಗಳಿಂದ 30 ದಿನಗಳಿಗೆ ಹೆಚ್ಚಿಸಿದೆ. ಸಾಮಾನ್ಯ ವಿಮಾ ಪಾಲಿಸಿಗಳಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಹೊರಡಿಸಿರುವ ಸುತ್ತೋಲೆಗಳಲ್ಲಿಯೂ ಇದೇ ಮಾದರಿಯ ಕ್ರಮ ಕೈಗೊಂಡಿದೆ.

ಪಾಲಿಸಿದಾರರ ಹಿತದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದ್ದು, ಹೊಸತನಕ್ಕೆ ಉತ್ತೇಜನ ಸಿಗಲಿದೆ. ಅಲ್ಲದೆ, ಗ್ರಾಹಕರ ಅನುಭವ ಮತ್ತು ಅವರ ಸಂತುಷ್ಟಿಗೆ ಅನುಕೂಲಕರವಾದ ವಾತಾವರಣ ಕಲ್ಪಿಸಲಾಗಿದೆ ಎಂದು ಪ್ರಾಧಿಕಾರ ತಿಳಿಸಿದೆ.

ಪಿಂಚಣಿ ಪಾಲಿಸಿಗಳಲ್ಲಿ ಪಾಲಿಸಿದಾರರು ಭಾಗಶಃ ಮೊತ್ತ ಹಿಂತೆಗೆದುಕೊಳ್ಳುವ ಸೌಲಭ್ಯ ಕಲ್ಪಿಸಲು ಅನುಮತಿ ನೀಡಲಾಗಿದೆ. ಇದರಿಂದ ಪಾಲಿಸಿದಾರರು ಮಕ್ಕಳ ಉನ್ನತ ಶಿಕ್ಷಣ ಅಥವಾ ವಿವಾಹ, ಮನೆ ಅಥವಾ ನಿವೇಶನ ಖರೀದಿ ನಿರ್ಮಾಣಕ್ಕೆ ನೆರವಾಗಲಿದೆ. ಅಲ್ಲದೆ, ಮಾರಣಾಂತಿಕ ಕಾಯಿಲೆಗಳ ಚಿಕಿತ್ಸಾ ವೆಚ್ಚ ಭರಿಸಲು ಸಹಕಾರಿಯಾಗಲಿದೆ ಎಂದು ತಿಳಿಸಿದೆ. ಪಾಲಿಸಿಯನ್ನು ಸರೆಂಡರ್ ಮಾಡುವ ಪಾಲಿಸಿದಾರರು ಮತ್ತು ಪಾಲಿಸಿ ಮುಂದುವರಿಸುವವರಿಗೆ ನ್ಯಾಯಸಮ್ಮತವಾಗಿ ದೊರೆಯುವ ಮೊತ್ತದ ಬಗ್ಗೆ ತಿಳಿಸಬೇಕಿದೆ. ಪಾಲಿಸಿದಾರರ ಕುಂದುಕೊರತೆ ಪರಿಹರಿಸಲು ಕ್ರಮವಹಿಸಬೇಕಿದೆ ಎಂದು ಸೂಚಿಸಿದೆ.

ಉಕ್ರೇನ್–ರಷ್ಯಾ ಯುದ್ಧದಲ್ಲಿ ಮತ್ತೊಬ್ಬ ಭಾರತೀಯ ಸಾವು

ಅಮೃತ್‌ಸರ: ಉಕ್ರೇನ್ ಜತೆಗಿನ ಯುದ್ಧದಲ್ಲಿ ರಷ್ಯಾ ಸೇನೆಯಲ್ಲಿದ್ದ ಭಾರತದ ಮತ್ತೊಬ್ಬ ಯೋಧ ಮೃತಪಟ್ಟಿದ್ದಾರೆ. ಇವರ ಮೃತದೇಹವನ್ನು ಭಾರತಕ್ಕೆ ತರಲು ಸಹಕರಿಸುವಂತೆ ಆತನ ಕುಟುಂಬಸ್ಥರು ಸರಕಾರಕ್ಕೆ ಮನವಿ ಮಾಡಿದ್ದಾರೆ.

ಅಮೃತ್‌ಸರ ಮೂಲದ ತೇಜ್‌ಪಾಲ್ ಸಿಂಗ್ (30) ಮೃತಪಟ್ಟಿರುವ ಯೋಧ. ತೇಜ್‌ಪಾಲ್ ಉದ್ಯೋಗಕ್ಕಾಗಿ 2023 ಡಿಸೆಂಬರ್‌ನಲ್ಲಿ ಥಾಯ್ಲೆಂಡ್‌ಗೆ ಪ್ರಯಾಣ ಬೆಳೆಸಿದ್ದರು. ಬಳಿಕ ಸ್ನೇಹಿತರೊಂದಿಗೆ ರಷ್ಯಾಕ್ಕೆ ತೆರಳಿದ್ದ ತೇಜ್‌ಪಾಲ್ ಜನವರಿ 12ರಂದು ರಷ್ಯಾ ಸೇನೆಗೆ ಸೇರಿದ್ದ ಎಂದು ತೇಜ್‌ಪಾಲ್ ಪತ್ನಿ ಪರ್ಮಿಂದರ್ ಕೌರ್ ತಿಳಿಸಿದ್ದಾರೆ.

ಎರಡು ದಿನಗಳ ಹಿಂದೆ ನನ್ನ ಪತಿಯ ಗೆಳೆಯರೊಬ್ಬರು ಕರೆ ಮಾಡಿ ಉಕ್ರೇನ್ ಜತೆಗಿನ ಯುದ್ಧದ ವೇಳೆ ತೇಜ್‌ಪಾಲ್ ಮೃತಪಟ್ಟಿದ್ದಾರೆ ಎಂದು ತಿಳಿಸಿದರು. ಕಳೆದ ಮಾರ್ಚ್‌ನಲ್ಲಿಯೇ ಅವರು ನಿಧನರಾಗಿದ್ದಾರೆ. ಆದರೆ, ಯುದ್ಧದಿಂದಾಗಿ ನಮಗೆ ತಡವಾಗಿ ಮಾಹಿತಿ ಸಿಕ್ಕಿದೆ ಎಂದು ತಿಳಿಸಿದರು. ತೇಜ್‌ಪಾಲ್ ಮೃತದೇಹ ರಷ್ಯಾದಲ್ಲಿ ಇದೆಯೇ ಅಥವಾ ಉಕ್ರೇನ್ ವಶದಲ್ಲಿದೆಯೇ ಎಂಬ ಬಗ್ಗೆ ಯಾರಿಗೂ ಮಾಹಿತಿ ಇಲ್ಲ. ಅಂತಿಮ ವಿಧಿ–ವಿಧಾನಗಳಿಗಾಗಿ ಶವವನ್ನು ಭಾರತಕ್ಕೆ ಕಳುಹಿಸುವಂತೆ ರಷ್ಯಾ ಸೇನೆ ಮತ್ತು ವಿದೇಶಾಂಗ ಇಲಾಖೆಗೆ ಇ–ಮೇಲ್ ಸಂದೇಶವನ್ನು ಕಳುಹಿಸಲಾಗಿದೆ ಎಂದರು.

ಪೋರ್ಶೆ ಕಾರು ಅಪಘಾತ 25ರವರೆಗೆ ಗೃಹಬಂಧನ

ಪುಣೆ: ಪೋರ್ಶೆ ಕಾರು ಅಪಘಾತ ಪ್ರಕರಣದಲ್ಲಿ ಭಾಗಿಯಾಗಿದ್ದ ಎನ್ನಲಾದ 17 ವರ್ಷದ ಬಾಲಕನ ಗೃಹಬಂಧನವನ್ನು ಇಲ್ಲಿನ ಬಾಲ ನ್ಯಾಯ ಮಂಡಳಿಯು ಜೂನ್ 25ರವರೆಗೆ ವಿಸ್ತರಿಸಿದೆ. ಪುಣೆಯ ಕಲ್ಯಾಣಿ ನಗರದಲ್ಲಿ ಮೇ 19ರಂದು ಬೆಳಗ್ಗೆ ಪೋರ್ಶೆ ಕಾರು ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಟೆಕಿಗಳು ಸ್ಥಳದಲ್ಲೇ ಮೃತಪಟ್ಟಿದ್ದರು. ಈ ವೇಳೆ ಕಾರನ್ನು ಬಾಲಕ ಕುಡಿದ ಮತ್ತಿನಲ್ಲಿ ಚಲಾಯಿಸಿದ್ದ ಎಂದು ಆರೋಪಿಸಲಾಗಿದೆ. ಈ ಸಂಬಂಧ ಬಾಲಕನನ್ನು ಜೂನ್ 12ರವರೆಗೆ ಗೃಹಬಂಧನದಲ್ಲಿರಿಸಲಾಗಿತ್ತು. ಈ ಅವಧಿಯನ್ನು 25ರವರೆಗೆ ವಿಸ್ತರಿಸಲಾಗಿದೆ. ಈ ಪ್ರಕರಣದಲ್ಲಿ ರಕ್ತದ ಮಾದರಿಗಳನ್ನು ಬದಲಾಯಿಸಿದ ಆರೋಪದಲ್ಲಿ ಬಾಲಕನ ಪೋಷಕರನ್ನು ಪೊಲೀಸರು ವಶದಲ್ಲಿದ್ದಾರೆ.

ಪೆಮಾ ಖಂಡು ಮತ್ತೊಮ್ಮೆ ಅರುಣಾಚಲ ಸಿಎಂ

ದೆಹಲಿ: ಅರುಣಾಚಲಪ್ರದೇಶದ ಮುಖ್ಯಮಂತ್ರಿಯಾಗಿ ಪೆಮಾ ಖಂಡು ಅವರನ್ನು ಬಿಜೆಪಿ ಮತ್ತೊಮ್ಮೆ ಆಯ್ಕೆ ಮಾಡಿದೆ. ಈ ಮೂಲಕ ಐದನೇ ಬಾರಿ ಸಿಎಂ ಆಗಿ ಮೂರನೇ ಅವಧಿಗೆ ಪೆಮಾ ಖಂಡು ಪ್ರಮಾಣವಚನ ಸ್ವೀಕಾರ ಮಾಡಲಿದ್ದಾರೆ.

ಬುಧವಾರ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಪೆಮಾ ಖಂಡು ಅವರನ್ನು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಲಾಗಿದೆ. ಸಭೆಯಲ್ಲಿ ರವಿ ಶಂಕರ ಪ್ರಸಾದ್, ತರುಣ್ ಚೌಗ್, ಬಿಜೆಪಿ ಕೇಂದ್ರ ವೀಕ್ಷಕರು ಭಾಗಿಯಾಗಿದ್ದರು. 2024ರ ವಿಧಾನಸಭಾ ಚುನಾವಣೆಯಲ್ಲಿ ಖಂಡು ನೇತೃತ್ವದ ಬಿಜೆಪಿ 60 ರಲ್ಲಿ 46 ಕ್ಷೇತ್ರ ಗೆಲ್ಲುವಲ್ಲಿ ಯಶಸ್ವಿಯಾಗಿದೆ.

ಅರುಣಾಚಲ ಪ್ರದೇಶದ ರಾಜಕೀಯದಲ್ಲಿ ಪೆಮಾ ಖಂಡು ಪಕ್ಷಾಂತರ ನಡೆಗೆ ಗಮನ ಸೆಳೆದಿದ್ದು 6 ತಿಂಗಳಲ್ಲಿ ಮೂರು ಬಾರಿ ಪಕ್ಷ ಬದಲಿಸಿ ಮೂರು ಬಾರಿಯೂ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

2016ರ ಜುಲೈನಲ್ಲಿ ಕಾಂಗ್ರೆಸ್ ಪಕ್ಷದಿಂದ ಸಿಎಂ ಆಗಿ ಆಯ್ಕೆಯಾದ ಪೆಮಾ ಖಂಡು ಬಳಿಕ ಸೆಪ್ಟೆಂಬರ್‌ನಲ್ಲಿ ಪೀಪಲ್ಸ್ ಪಾರ್ಟಿ ಆಫ್ ಅರುಣಾಚಲ ಸೇರ್ಪಡೆಗೊಂಡು ಸಿಎಂ ಆಗಿ ಅಧಿಕಾರವಹಿಸಿಕೊಂಡರು. ಆದರೆ ಡಿಸೆಂಬರ್‌ನಲ್ಲಿ ಬಿಜೆಪಿಗೆ ಹಾರಿದ ಖಂಡು 31ರಂದು ಬಿಜೆಪಿ ಸಿಎಂ ಆಗಿ ಪ್ರಮಾಣ ವಚನ ಸ್ವೀಕರಿಸಿದ್ದರು. 2019ರ ಚುನಾವಣೆಯಲ್ಲೂ ಬಿಜೆಪಿ ಅರುಣಾಚಲ ದಲ್ಲಿ 41 ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದು ಪೆಮಾ ಖಂಡು ಮುಖ್ಯಮಂತ್ರಿ ಸ್ಥಾನ ನಿಭಾಯಿಸಿದ್ದರು. ಗುರುವಾರ ಪೆಮಾ ಮೂರನೇ ಅವಧಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ಸಂಖ್ಯೆ: ಸಿಐ 69 ಎಸ್.ಪಿ.ಕ್ಯೂ. 2019 ಬೆಂಗಳೂರು, ದಿನಾಂಕ: 14.03.2024

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆಯ ವಿಧಿ 28(4)ರ ಅಧಿಸೂಚನೆ

1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ (1966ರ ಕರ್ನಾಟಕ ಕಾಯ್ದೆ ಸಂಖ್ಯೆ: 18) ವಿಧಿ 28(1)ರ ಪ್ರಕಾರ ದತ್ತವಾದ ಅಧಿಕಾರದ ಮೇರೆಗೆ, ಅಧಿಸೂಚನೆ ಸಂಖ್ಯೆ: ಸಿಐ 69 ಎಸ್ಪಿಕ್ಯೂ (ಇ) 2019 ದಿನಾಂಕ: 30–09–2022 ರಂದು ಕರ್ನಾಟಕ ಸರ್ಕಾರದಿಂದ ಅನುಮೋದನೆಗೊಂಡು ದಿನಾಂಕ: 07–10–2022 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಗೊಂಡಿರುತ್ತದೆ. ಭೂಸ್ವಾಧೀನಕ್ಕೆ ಒಳಪಟ್ಟ ಪ್ರದೇಶದ ಪ್ರಕಾರ ಸರ್ಕಾರ ಸದರಿ ಅಧಿಸೂಚನೆಯಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಇದೇ ಅಧಿಸೂಚನೆಯಲ್ಲಿ ಹೇಳಿರುವ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಇಚ್ಚಿಸಲ್ಪಟ್ಟಿದೆ.

ಮೇಲ್ಕಂಡ ಅಧಿಸೂಚನೆಯ ಷೆಡ್ಯೂಲ್ನಲ್ಲಿ ನಮೂದಿಸಲ್ಪಟ್ಟಿರುವ ಜಮೀನುಗಳನ್ನು ಮೇಲ್ಕಂಡ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿ ಕೊಳ್ಳಬೇಕಾಗಿರುವುದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿದೆ. ಈ ಬಗ್ಗೆ ಮೇಲ್ಕಂಡ ಕಾಯ್ದೆ ವಿಧಿ 28(3)ರ ಪ್ರಕಾರ ಆದೇಶ ಹೊರಡಿಸಲಾಗಿದೆ.

ಆದುದರಿಂದ, 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 28(4)ರ (1966ರ ಕರ್ನಾಟಕ ಕಾಯ್ದೆ ಸಂಖ್ಯೆ 18) ದತ್ತವಾದ ಅಧಿಕಾರದ ಮೇರೆಗೆ ಕರ್ನಾಟಕ ಸರ್ಕಾರ ಕೆಳಗೆ ನಮೂದಿಸಿರುವ ಜಮೀನುಗಳನ್ನು ಮೇಲ್ಕಂಡ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ಘೋಷಿಸಲಾಗಿದೆ.

ಗ್ರಾಮ: ಮರಸೆ ಹೋಬಳಿ: ವರುಣ ತಾಲ್ಲೂಕು: ಮೈಸೂರು ಜಿಲ್ಲೆ: ಮೈಸೂರು

ಕ್ರ. ಸಂ.	ಸರ್ವೆ ನಂ.	ಖಾತೆದಾರರು ಹೆಸರು	ಐನ್ ಎ–ಗು	ವಿಸ್ತೀರ್ಣ ಖರಾಬು ಎ–ಗು	ಬಾಕಿ ಎ–ಗು	ತರಹೆ	ಆಕಾರ	ಚಕ್ಕುಬಂದಿ ಪೂರ್ವ ಸರ್ವೆ ನಂ.	ಪಶ್ಚಿಮ ಸರ್ವೆ ನಂ.	ಉತ್ತರ ಸರ್ವೆ ನಂ.	ದಕ್ಷಿಣ ಸರ್ವೆ ನಂ.
1	2	3	4	5	6	7	8	9	10	11	12
1	33 ಪೈಕಿ	ಸಿದ್ದೇಗೌಡ ಉ ಸೋತಪ್ಪ ಬಿನ್ ಲೇ. ಕೆಂಪೇಗೌಡ, ಮರಮ್ಮ ಬಿನ್ ಲೇ. ಮಾದೇಗೌಡ, ಸಿದ್ದೇಗೌಡ ಬಿನ್ ಲೇಟ್ ಮಾದೇಗೌಡ, ದೇವಮ್ಮ ಬಿನ್ ಲೇಟ್ ಮಾದೇಗೌಡ, ಚಿಕ್ಕತಾಯಮ್ಮ ಬಿನ್ ಲೇಟ್ ಮಾದೇಗೌಡ (ಮೇಲಿನಂತೆ ಜಂಟಿ)	4–07 ¼	–	4–07 ¼	ಖುಷ್ಕಿ	3.48	33ರ ಉಳಿಕೆ	34	32	33ರ ಉಳಿಕೆ
2	34/2 ಪೈಕಿ	ಮರಿನಂಜೇಗೌಡ ಬಿನ್ ಬೋಗೇಗೌಡ	0–01	–	0–01	ಖುಷ್ಕಿ	0.02	33	34/2 ಉಳಿಕೆ	34/3	34/5
3	34/3	ವಿಷಕಂಠ ಬಿನ್ ಲೇ. ನಂಜೇಗೌಡ	0–38	0–01	0–37	ಖುಷ್ಕಿ	0.64	33	30	31	34/2
4	34/4	ರವಿಚಂದ್ರ ಎಂ. ಬಿನ್ ಲೇ. ಮಹಂತೇಗೌಡ	0–11 ½	–	0–11 ½	ಖುಷ್ಕಿ	0.20	34/1	36	34/1	34/1
5	34/5	ರವಿಚಂದ್ರ ಎಂ. ಬಿನ್ ಲೇ. ಮಹಂತೇಗೌಡ	2–34	0–04	2–30	ಖುಷ್ಕಿ	1.90	33	30	34/2	34/1
6	40 ಪೈಕಿ	ಚಿಕ್ಕನಿಂಗಮ್ಮ ಕೋಂ ಚಿಕ್ಕನಾಗೇಗೌಡ, ನಿಂಗೇಗೌಡ ಬಿನ್ ಚಿಕ್ಕನಾಗೇಗೌಡ, ರತ್ನಮ್ಮ ಕೋಂ ಚಿಕ್ಕಣ್ಣೇಗೌಡ, ಚಾಮುಂಡೇಶ್ವರಿ ಅಮ್ಮನವರು	3–33	0–07	3–15 0–11	ಖುಷ್ಕಿ ನಾಲಾ	3.03	43	40 ರ ಉಳಿಕೆ	33	42
7	44/2 ಪೈಕಿ	ನಿಂಗಪ್ಪ ಬಿನ್ ನಿಂಗೇಗೌಡ	0–25	–	0–25	ಖುಷ್ಕಿ	0.52	42/2 ಉಳಿಕೆ	43	44/1ಬಿ	45
8	86/1 ಪೈಕಿ	ಸೆಲ್ವಿ ಕೋಂ ಲೇಟ್ ಪ್ರಭಾಕರ್, ಪ್ರಿಯಾಂಕ ಬಿನ್ ಲೇಟ್ ಪ್ರಭಾಕರ್, ಐಶ್ವರ್ಯ ಬಿನ್ ಲೇಟ್ ಪ್ರಭಾಕರ್ (ಮೇಲಿನ ಜಂಟಿ)	0–05 ¼	–	0–05 ¼	ಖುಷ್ಕಿ	0.13	86/3	86/2	87	86/1 ಉಳಿಕೆ
9	86/2	ಕಾವೇರಿ ನೀರಾವರಿ ನಿಗಮ ನಿಯಮಿತ	0–03 1/2	–	0–03 1/2	ನಾಲಾ	–	–	–	–	–
10	86/3ಪೈಕಿ	ಸಿ.ಅನಿಲ್‌ಕುಮಾರ್ ಬಿನ್ ಲೇ. ಚೋಕೀಲಾಲ್	0–24	–	0–24	ಖುಷ್ಕಿ	0.59	86/3 ಉಳಿಕೆ	86/1	87	86/3 ಉಳಿಕೆ
11	86/4ಪೈಕಿ	ಸಿ.ಅನಿಲ್‌ಕುಮಾರ್ ಬಿನ್ ಲೇ. ಚೋಕೀಲಾಲ್	0–10	–	0–10	ಖುಷ್ಕಿ	1.50	86/3 ಉಳಿಕೆ	86/1	87	86/3 ಉಳಿಕೆ
	86/5 ಪೈಕಿ	ಸಿ.ಅನಿಲ್‌ಕುಮಾರ್ ಬಿನ್ ಲೇ. ಚೋಕೀಲಾಲ್	1–12	–	1–12	ಖುಷ್ಕಿ	1.50	86/3 ಉಳಿಕೆ	86/1	87	86/3 ಉಳಿಕೆ
12	87/1	ಕೆ.ರಾಮಸ್ವಾಮಿ ಬಿನ್ ಕೃಷ್ಣಪ್ಪ. (1–27 ಎಕರೆ) (ಭೂಪರಿವರ್ತನೆ)	2–07	–	1–27 0–20	ಖುಷ್ಕಿ ನಾಲಾ	1.62	87/2	91	88	86

ಕ್ರ. ಸಂ	ನಿವೇಶನ / ಕಟ್ಟಡದಾರರ ಹೆಸರು ಮತ್ತು ವಿಳಾಸ	ಖಾತಾ ಜಂಜರ್ ನಂಬರ್	ವಿಸ್ತೀರ್ಣ (ಚ.ಅ.ಗಳಲ್ಲಿ)	ಸ್ವತ್ತಿನ ವರ್ಗೀಕರಣ	ಚಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ಮಾಲ್ಕಿ ಕಟ್ಟಡ ವಿನ್ಯಾಸಗಳ ವಿವರ
1	1) ಉಮೇಶ್ ಎಂ.ಆರ್ ಬಿನ್ ಲೇಟ್ ಎಂ. ರಾಮರಾವ್ 2) ಟಿ.ಎಸ್ ಶಶಿಕಲಾ ಕೋಂ ಉಮೇಶ್ ಎಂ.ಆರ್ #43/14, 13ಕ್ರಾಸ್ ರಾಮಾನುಜ ರಸ್ತೆ, ಮೈಸೂರು.	96B/361	9.14 X 13.7	11B	ನಿವೇಶನ ಸಂಖ್ಯೆ 117	ನಿವೇಶನ ಸಂಖ್ಯೆ 115	30 ಅಡಿ ರಸ್ತೆ	30 ಅಡಿ ರಸ್ತೆ	–
2	ಕುಸುಮ ಕೆ.ಆರ್ ಕೋಂ ಎಸ್ .ಆರ್. ವೆಂಕಟೇಶ್ ಪ್ರಸಾದ್ #03, ಬ್ಲಾಕ್ 35 ಮದುವನ ಲೇಔಟ್ ಶ್ರೀರಾಂಪುರ, 2ನೇ ಹಂತ, ಮೈಸೂರು	96/356	9.144 X 13.716	11B	ನಿವೇಶನ ಸಂಖ್ಯೆ 112	ನಿವೇಶನ ಸಂಖ್ಯೆ 110	30 ಅಡಿ ರಸ್ತೆ	30 ಅಡಿ ರಸ್ತೆ	–
3	ಎನ್.ಶಾಂತ ಬಿನ್ ಎನ್ ಶಂಕರ್, #50, 12ನೇ ಮುಖ್ಯ ರಸ್ತೆ, ಮುತ್ಯಾಲನಗರ, ಬೆಂಗಳೂರು ಉತ್ತರ.	96B/382	9.146X16.46 3+16.310	11B	ನಿವೇಶನ ಸಂಖ್ಯೆ 136	ನಿವೇಶನ ಸಂಖ್ಯೆ 138	30 ಅಡಿ ರಸ್ತೆ	ಸ.ನಂ. 86	–
4	ಎಂ.ಎಸ್. ವಿಶ್ವನಾಥಯ್ಯ ಬಿನ್ ಲೇಟ್ ಎಂ.ಎಸ್ ನಂಜುಂಡಯ್ಯ , #131, ಮೈಕೋ ಲೇಔಟ್, ಬೆಂಗಳೂರು,	96/283	9.14X15.24	11B	ನಿವೇಶನ ಸಂಖ್ಯೆ 39	ನಿವೇಶನ ಸಂಖ್ಯೆ 37	30 ಅಡಿ ರಸ್ತೆ	ನಿವೇಶನ ಸಂಖ್ಯೆ 29	–
5	ಬಿ.ವಿ ಶ್ರೀಹರಿ ಬಿನ್ ಲೇಟ್ ಬಿ.ಕೆ ವೆಂಕಟನಾರಾಯಣಪ್ಪ, #1/1, 2ನೇ ಮಹಡಿ, 4ನೇ ಅಡ್ಡ ರಸ್ತೆ, ದಾಮೋದರ ಮುದಲಿಯರ್ ರಸ್ತೆ, ಹಲಸೂರು ಬೆಂಗಳೂರು	96B/334	6.096X10.58 +9.906/2	11B	ನಿವೇಶನ ಸಂಖ್ಯೆ 90	ನಿವೇಶನ ಸಂಖ್ಯೆ 88	ನಿವೇಶನ ಸಂಖ್ಯೆ 88	30 ಅಡಿ ರಸ್ತೆ	–
6	ವಿ.ನಾರಾಯಣಸ್ವಾಮಿ ಬಿನ್ ಟಿ ವೆಂಕಟರಮಣಪ್ಪ, #141, 2ನೇ ಮೇನ್ ರೋಡ್, ಬಾಹುಬಲಿನಗರ, ಜಾಲಹಳ್ಳಿ, ಬೆಂಗಳೂರು ಉತ್ತರ.	96/293	9.144X 13.716	11B	ನಿವೇಶನ ಸಂಖ್ಯೆ 47	ನಿವೇಶನ ಸಂಖ್ಯೆ 49	30 ಅಡಿ ರಸ್ತೆ	30 ಅಡಿ ರಸ್ತೆ	–
7	ಎಸ್ ವಿಜಯ ಕೋಂ ಆರ್. ಶ್ರೀನಿವಾಸಮೂರ್ತಿ, #8/1, 4ನೇ ಮೇನ್, 15ನೇ ಕ್ರಾಸ್, ವಿದ್ಯಾರಣ್ಯಪುರಂ, ಮೈಸೂರು.	96B/341	6.096X30 +34/2	11B	ನಿವೇಶನ ಸಂಖ್ಯೆ 97	ನಿವೇಶನ ಸಂಖ್ಯೆ95	ನಿವೇಶನ ಸಂಖ್ಯೆ 88	30 ಅಡಿ ರಸ್ತೆ	–
8	ಪೂಜಾ ಆರ್ ಕೋಂ ನಂದಕಿಶೋರ್, #159, ಈ.ಎಫ್ ಬ್ಲಾಕ್, 2ನೇ ಮೇನ್ ಕೆ.ಆರ್.ನಗರ, ಮೈಸೂರು.	96/383	9.14X16.31	11B	ನಿವೇಶನ ಸಂಖ್ಯೆ137	ನಿವೇಶನ ಸಂಖ್ಯೆ139	30 ಅಡಿ ರಸ್ತೆ	ಸ.ನಂ. 86	–

ಕ್ರ. ಸಂ.	ಸರ್ವೆ ನಂ.	ಖಾತೆದಾರರು ಹೆಸರು	ಐನ್ ಎ–ಗು	ವಿಸ್ತೀರ್ಣ ಖರಾಬು ಎ–ಗು	ಬಾಕಿ ಎ–ಗು	ತರಹೆ	ಆಕಾರ	ಚಕ್ಕುಬಂದಿ ಪೂರ್ವ ಸರ್ವೆ ನಂ.	ಪಶ್ಚಿಮ ಸರ್ವೆ ನಂ.	ಉತ್ತರ ಸರ್ವೆ ನಂ.	ದಕ್ಷಿಣ ಸರ್ವೆ ನಂ.
13	87/2	ಸಿದ್ದನಾಯ್ಕ –ಪ ಸಿದ್ದನಾಯ್ಕ	1–34	–	1–34	ಖುಷ್ಕಿ	1.80	ವೂರು	87/1	88	86
14	88	ಸಿದ್ದೇಗೌಡ ಬಿನ್ ಸಿದ್ದೇಗೌಡ	4–01	–	4–01	ಖುಷ್ಕಿ	4.20	ವೂರು	90, 91	89	87
15	89/1	ಸಿದ್ದೇಗೌಡ ಬಿನ್ ಸಿದ್ದೇಗೌಡ	2–12	–	2–12	ಖುಷ್ಕಿ	1.91	89/2	91	ದಾರಿ	88
16	89/2	ಯಶೋದ ಕೋಂ ಮಹಾದೇವಸ್ವಾಮಿ	1–20	–	1–20	ಖುಷ್ಕಿ	1.25	ವೂರು	89/1	ದಾರಿ	88
17	90	ಸೌಭಾಗ್ಯಮ್ಮ ಬಿನ್ ಶಿವನಂಜಪ್ಪ,	3–05	–	3–02 0–03	ಖುಷ್ಕಿ ನಾಲಾ	2.77	89, 88	92	ದಾರಿ	91
18	91	ಕೆ. ನಾರಾಯಣ ಬಿನ್ ಕೃಷ್ಣಪ್ಪ,(2–00 ಎಕರೆ) (ಭೂಪರಿವರ್ತನೆ) ಆರ್. ಅರ್ಚನ D/o ಕೆ.ರಾಮಸ್ವಾಮಿ(2–02) (ಭೂಪರಿವರ್ತನೆ)	4–02	–	4–02	ಖುಷ್ಕಿ	–	86, 87, 88	92	90	93

ಕ್ರ. ಸಂ	ನಿವೇಶನ / ಕಟ್ಟಡದಾರರ ಹೆಸರು ಮತ್ತು ವಿಳಾಸ	ಖಾತಾ ಜಂಜರ್ ನಂಬರ್	ವಿಸ್ತೀರ್ಣ (ಚ.ಅ.ಗಳಲ್ಲಿ)	ಸ್ವತ್ತಿನ ವರ್ಗೀಕರಣ	ಚಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ಮಾಲ್ಕಿ ಕಟ್ಟಡ ವಿನ್ಯಾಸಗಳ ವಿವರ
1.	ಬಿ.ಎಸ್ ಪ್ರಕಾಶ್ ಕುಮಾರ್ ಬಿನ್ ಎಸ್ ಸುಬ್ರಮಣ್ಯ, ಮರಸೆ ಗ್ರಾಮ, ವರುಣ ಹೋಬಳಿ, ಮೈಸೂರು.	96/A/267	98.38X 136.16	ನಮೂನೆ 9	ನಿವೇಶನ ಸಂಖ್ಯೆ 23	ನಿವೇಶನ ಸಂಖ್ಯೆ 21	30 ಅಡಿ ರಸ್ತೆ	93 ರ ಸ್ವತ್ತು	–
2.	ಚಂದ್ರ ಪಿ ಬಿನ್ ಪುಟ್ಟಸ್ವಾಮಿ ಎನ್, #15/4 3ನೇ ಕ್ರಾಸ್, ಸುಯೇಜ್ ಫಾರಂ ರಸ್ತೆ, ವಿ.ಆರ್.ಪುರಂ, ಮೈಸೂರು	96A/267 ಸಂಖ್ಯೆ:22	30X41.5 (1245)	ನಮೂನೆ 3 ಪ.ಪಂಚಾಯ್ತಿ (ಕಡಕೊಳ)	ನಿವೇಶನ ಸಂಖ್ಯೆ 23	ನಿವೇಶನ ಸಂಖ್ಯೆ 21	30 ಅಡಿ ರಸ್ತೆ	93 ರ ಸ್ವತ್ತು	–
3.	ವಿ.ಪೂರ್ಣಿಮ ಕೋಂ ವಿ.ಶ್ರೀನಿವಾಸಯ್ಯ, #3149ಎ, 11ನೇ ಕ್ರಾಸ್, ನಂಜನಗೂಡು ಟೌನ್.	5	(45+46)/2 X 30 (1365)	ಡಿಮ್ಯಾಂಡ್ ರಿಜಿಸ್ಟರ್	30 ಅಡಿ ರಸ್ತೆ	ಖಾಸಗಿ ಸ್ವತ್ತು	ನಿವೇಶನ ಸಂಖ್ಯೆ 04	ನಿವೇಶನ ಸಂಖ್ಯೆ 06	–
4.	ಸಿ.ಆರ್ ರಘು ಬಿನ್ ಲೇಟ್ ಸಿ.ಎಸ್ ರಂಗನಾಥಾಚಾರ್ #5039, 5ನೇ ಮುಖ್ಯ ರಸ್ತೆ ವಿಜಯನಗರ 2ನೇ ಹಂತ ಮೈಸೂರು	96/263	9.144X 13.86	ನಮೂನೆ 11ಬಿ	ನಿವೇಶನ ಸಂಖ್ಯೆ 19	ನಿವೇಶನ ಸಂಖ್ಯೆ 17	30 ಅಡಿ ರಸ್ತೆ	ಸರ್ವೆ ನಂ.93ರ ಜಮೀನು	–
5	ಪ್ರದೀಪ್ ಬಿನ್ ಕೃಷ್ಣಮೂರ್ತಿ #302, ಸಿದ್ದಾರ್ಥನಗರ ಮೈಸೂರು.	96A/269	30X50 ಚ.ಅ	ಡಿಮ್ಯಾಂಡ್ ರಿಜಿಸ್ಟರ್ ನಮೂನೆ 12	ನಿವೇಶನ ಸಂಖ್ಯೆ 24	ನಿವೇಶನ ಸಂಖ್ಯೆ 26	ನಿವೇಶನ ಸಂಖ್ಯೆ 42	30 ಅಡಿ ರಸ್ತೆ	–
6	ಪ್ರಶಾಂತ ಬಿನ್ ಕೃಷ್ಣಮೂರ್ತಿ #302 ಸಿದ್ದಾರ್ಥನಗರ ಮೈಸೂರು.	96A/288	50X36+33/2	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ನಿವೇಶನ ಸಂಖ್ಯೆ 142	ನಿವೇಶನ ಸಂಖ್ಯೆ 42	30 ಅಡಿ ರಸ್ತೆ	ನಿವೇಶನ ಸಂಖ್ಯೆ 24	–

ಮುಂದುವರೆದಿದೆ....

ಅಕ್ರಮ ಗನ್ ಖರೀದಿ-ಬಿಡನ್ ಪುತ್ರ ಅಪರಾಧಿ

ವಾಷಿಂಗ್ಟನ್: ಅಕ್ರಮ ಗನ್ ಖರೀದಿ ಪ್ರಕರಣ ಸಂಬಂಧ ಅಮೇರಿಕಾ ಅಧ್ಯಕ್ಷ ಜೋ ಬೈಡನ್ ಪುತ್ರ ಹಂಟರ್ ಬೈಡನ್ ತಪ್ಪಿತಸ್ಥ ಎಂದು ಡೆಲ ವೇರ್‌ನ ವಿಲ್ಮಿಂಗ್ಟನ್ ನ್ಯಾಯಾಲಯ ಘೋಷಿಸಿದೆ. ಹಂಟರ್ ಬೈಡನ್(54) ಮೇಲೆ 2018ರಲ್ಲಿ ಅಕ್ರಮವಾಗಿ ಗನ್ ಖರೀದಿ ಹಾಗೂ ಮಾದಕ ವಸ್ತು ಸೇವಿಸಿದ ವೇಳೆಯಲ್ಲಿ ಗನ್ ಇಟ್ಟುಕೊಂಡಿದ್ದ ಆರೋಪವಿತ್ತು. ಈ ಆರೋಪಗಳು ನ್ಯಾಯಾಲಯದಲ್ಲಿ ಸಾಬೀತಾಗಿದ್ದು ಅಪರಾಧಿ ಎಂದು ಕೋರ್ಟ್ ಘೋಷಿಸಿದೆ. ಸತತ ಏಳು ದಿನಗಳ ವಿಚಾರಣೆ ನಡೆಸಿದೆ ನ್ಯಾಯಾಲಯ ಗನ್ ಖರೀದಿ ಸಮಯದಲ್ಲಿ ಮಾದಕ ವಸ್ತು ಸೇವೆನೆ ಬಗ್ಗೆ ಸುಳ್ಳು ಹೇಳಿದ ಪ್ರಕರಣದಲ್ಲಿ ಹಂಟರ್ ಬೈಡನ್ ತಪ್ಪಿತಸ್ಥ ಎಂದು ಹೇಳಿದೆ. ಕೋರ್ಟ್ ಪ್ರಕರಣದಲ್ಲಿ ಹಂಟರ್‌ಗೆ 25 ವರ್ಷಗಳ ಶಿಕ್ಷೆ ವಿಧಿಸುವ ಸಾಧ್ಯತೆ ಇದೆ. ಅಮೆರಿಕಾ ಇತಿಹಾಸ ದಲ್ಲಿ ಅಧ್ಯಕ್ಷರೊಬ್ಬರ ಪುತ್ರ ಕ್ರಿಮಿನಲ್ ಕೇಸ್ ನಲ್ಲಿ ಅಪರಾಧಿ ಎಂದು ಸಾಬೀತಾಗಿ ರುವುದು ಇದೇ ಮೊದಲ ಪ್ರಕರಣವಾಗಿದೆ ಎಂದು ತಿಳಿಸಿದ್ದಾರೆ.

ವೀರಶೈವ ಮಹಾಸಭಾ ಚುನಾವಣೆ

ಬೆಂಗಳೂರು: ಅಖಿಲ ಭಾರತ ವೀರಶೈವ ಮಹಾಸ ಭಾದ ಅಧ್ಯಕ್ಷ ಸ್ಥಾನಕ್ಕೆ ಆಗಸ್ಟ್ 29ಕ್ಕೆ ಚುನಾವಣೆ ನಡೆಯಲಿದೆ. ಈ ಸಂಬಂಧ ವೇಳಾಪಟ್ಟಿ ಪ್ರಕಟಿಸ ಲಾಗಿದ್ದು, ಜು.21ರಂದು ತಾಲೂಕು, ಮಹಾನ ಗರ, ಜಿಲ್ಲಾ ಘಟಕಗಳ ಅಧ್ಯಕ್ಷರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆ ನಡೆಯಲಿದೆ. ಮತದಾರರ ಪಟ್ಟಿಯನ್ನು ಜೂನ್ 20ರಂದು ಪ್ರಕಟಿಸಲಾಗುತ್ತದೆ. ಮೂರು ಹಂತಗಳಲ್ಲಿ ನಡೆಯುವ ಚುನಾವಣೆಗೆ ಮೊದಲ ಹಂತದ ನಾಮಪತ್ರ ಸಲ್ಲಿಸುವ ಪ್ರಕ್ರಿಯೆ ಜೂನ್ 27 ರಿಂದ ಪ್ರಾರಂಭವಾಗಲಿದ್ದು, ಸೆ.29ರಂದು ಎಲ್ಲ ಪ್ರಕ್ರಿಯೆಗಳು ಪೂರ್ಣಗೊಳ್ಳಲಿವೆ ಎಂದು ಚುಣಾವಣಾಧಿಕಾರಿಯಾಗಿ ನೇಮಕಗೊಂಡಿರುವ ನಿವೃತ್ತ ಅಧಿಕಾರಿ ಎಂ.ಬಿ.ದ್ಯಾಬೇರಿ ತಿಳಿಸಿದ್ದಾರೆ.

7	ವಿ.ರಾಜೇಶ್ ಬಿನ್ ಎಸ್ ವೆಂಕಟೇಶ್ , #43, ಕಿರ್ಲೋಸ್ಕರ್ ಕಾಲೋನಿ, ಮಠದ ಹತ್ತಿರ, 2ನೇ ಕ್ರಾಸ್, ಬೆಂಗಳೂರು	96A/292	9.144X 13.716	ನಮೂನೆ 11ಬಿ	ನಿವೇಶನ ಸಂಖ್ಯೆ 46	ನಿವೇಶನ ಸಂಖ್ಯೆ 48	30 ಅಡಿ ರಸ್ತೆ	30 ಅಡಿ ರಸ್ತೆ	–
8	ಡಿ.ಸುರೇಶ್ ಬಿನ್ ಲೇಟ್ ಕೆ.ದೊರೆಸ್ವಾಮಿ, #1855, 13 ಕ್ರಾಸ್ ರಾಮಾನುಜ ರಸ್ತೆ, ಮೈಸೂರು.	96A/292	9.144X13.716	ನಮೂನೆ 11ಬಿ	ನಿವೇಶನ ಸಂಖ್ಯೆ 46	ನಿವೇಶನ ಸಂಖ್ಯೆ 48	30 ಅಡಿ ರಸ್ತೆ	30 ಅಡಿ ರಸ್ತೆ	–
9	ವಿ.ನಾರಾಯಣಸ್ವಾಮಿ ಬಿನ್ ಟಿ.ವೆಂಕಟರಮಣಪ್ಪ, #141 2ನೇ ಮೇನ್ ರೋಡ್, ಬಾಹುಬಲಿನಗರ, ಜಾಲಹಳ್ಳಿ , ಬೆಂಗಳೂರು ಉತ್ತರ,	96/293	9.144X13.716	ನಮೂನೆ 11ಬಿ	ನಿವೇಶನ ಸಂಖ್ಯೆ 47	ನಿವೇಶನ ಸಂಖ್ಯೆ 49	30 ಅಡಿ ರಸ್ತೆ	30 ಅಡಿ ರಸ್ತೆ	–
10	ಉದಯ ರತ್ನ ಕೆ ಬಿನ್ ಕೇಶವಚಾರ್, ವೇದಪುರಿ, 3ನೇ ಕ್ರಾಸ್, ನಿಸರ್ಗ ಲೇಔಟ್, ಸಿದ್ದಹಳ್ಳಿ, ಮೇನ್ ರೋಡ್, ನಾಗಸಂದ್ರ ಪೋಸ್ಟ್, ಬೆಂಗಳೂರು	96/294	9.144X13.716	ನಮೂನೆ 11ಬಿ	ನಿವೇಶನ ಸಂಖ್ಯೆ 48	ನಿವೇಶನ ಸಂಖ್ಯೆ 50	ರಸ್ತೆ	ರಸ್ತೆ	–
11	ಷೇಖ್ ಅಮೀರ್ ಹಮೀದ್ ಬಿನ್ ಷೇಖ್ ಬುಡನ್ ಸಾಬ್, ಎನ್.ಆರ್.ಮೊಹಲ್ಲಾ, ರಾಜೀವ್ ನಗರ, ಮೈಸೂರು	96A/291	9.144X13.710	ನಮೂನೆ 11ಬಿ	ನಿವೇಶನ ಸಂಖ್ಯೆ 45	ನಿವೇಶನ ಸಂಖ್ಯೆ 47	30 ಅಡಿ ರಸ್ತೆ	30 ಅಡಿ ರಸ್ತೆ	–
12	1) ಎನ್ ಉಮಾದೇವಿ ಕೋಂ ಎನ್ .ಕೃಷ್ಣಮೂರ್ತಿ, 32423, ಪ್ಲಾಟ್ ನಂ.01, 2ನೇ ಅಡ್ಡ ರಸ್ತೆ ಹೊಸ ಬಂಡಿಕೇರಿ, ನಂಜುಮಳಿಗೆ ಸರ್ಕಲ್ ಹತ್ತಿರ ಮೈಸೂರು. 2) ಎನ್ ಸುಧಾಮಣಿ ಕೋಂ ಎನ್ ದಿನೇಶ್, #8.1ಕ್ರಾಸ್ ಅನ್ನ ಪೂರ್ಣ ಬಡಾವಣೆ ಶ್ರೀರಾಂಪುರ, 9ನೇ ಹಂತ, ಮೈಸೂರು	96/259	9.144X 14.63 +14.93/2	ನಮೂನೆ 11ಬಿ	15ನೇ ನಂಬರ್ ಸ್ವತ್ತು	30 ಅಡಿ ರಸ್ತೆ	30 ಅಡಿ ರಸ್ತೆ	ಸ.ನಂ.93	–

19	92/1	ಸಿದ್ದೇಗೌಡ ಬಿನ್ ಸಿದ್ದೇಗೌಡ,	2–30	0–01	2–25 0–04	ಖುಷ್ಕಿ N.H	2.40	90	ರಸ್ತೆ	ದಾರಿ	92/2
20	92/2	ಎನ್. ಸುನೀಲ್ ಕುಮಾರ್ ಬಿನ್ ನಾಗರಾಜು	2–28	–	2–15 0–13	ಖುಷ್ಕಿ ನಾಲಾ	2.25	90, 91	ರಸ್ತೆ	92/1	92/4
21	92/3	ಕೆ.ರಾಮಸ್ವಾಮಿ ಬಿನ್ ಕೃಷ್ಣಪ್ಪ, (0–12 ¾) ಕೆ. ಆದಿರಾಜಯ್ಯ ಬಿನ್ ಕಪ್ಪಣ್ಣ, (0–35 ¾) ಲಕ್ಷ್ಮಿದೇವಮ್ಮ ಕೋಂ ಕೃಷ್ಣಮೂರ್ತಿ,(0–11) ಕೆ. ಉಮಾಶಂಕರ್ ಬಿನ್ ಕೃಷ್ಣಮೂರ್ತಿ,(0–12) ಕೆ. ನರೇಂದ್ರ ಬಿನ್ ಎಚ್.ಕೃಷ್ಣಮೂರ್ತಿ(0–12)	2–03 ½	–	2–03 ½	ಖುಷ್ಕಿ	1.18	91	ರಸ್ತೆ	92/4	92/5
22	92/4	ಕೆ.ಪಿ. ಧರ್ಮೇಶ್ ಬಿನ್ ಕೆ.ಎಸ್. ಪಾಪಣ್ಣ(0–06) ಕೆ.ಎಸ್. ಪಾಪಣ್ಣ ಬಿನ್ ಸಿ ಸಣ್ಣಪ್ಪ, (0–13 ½)	0–20	–	0–19 ½ 0–00 ½	ಖುಷ್ಕಿ N.H	0.43	91	ರಸ್ತೆ	92/2	92/3
23	124ರ ಪೈಕಿ	ಜಯಮ್ಮ ಕೋಂ ಲೇ. ಎಸ್.ಸಿದ್ದೇಗೌಡ ನಿವೇಶನದ ಉದ್ದೇಶದಲ್ಲಿ ಭೂಪರಿವರ್ತಿಸಿ ಮಾರಾಟ ಮಾಡಲಾದ ಜಮೀನು(1–20)	2–04 1–20	–	2–04 1–20	ಖುಷ್ಕಿ ನಿವೇಶನ	2.50	ನಿವೇಶನಗಳು	122 123,	125	ರಸ್ತೆ

ಕ್ರ. ಸಂ	ನಿವೇಶನ / ಕಟ್ಟಡದಾರರ ಹೆಸರು ಮತ್ತು ವಿಳಾಸ ಖಾತಾ	ವಿಸ್ತೀರ್ಣ ಜಂಜರ್ ನಂಬರ್	ಸ್ವತ್ತಿನ (ಚ.ಅ.ಗಳಲ್ಲಿ)	ವರ್ಗೀಕರಣ	ಚಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ಮಾಲ್ಕಿ ಕಟ್ಟಡ ವಿನ್ಯಾಸಗಳ ವಿವರ
1.	ರವೀಂದ್ರ ಕೆ.ಎಸ್.ಬಿನ್ ಸುಬ್ರಮಣ್ಯ, ನಂ.116/1, 3ನೇ ಕ್ರಾಸ್, ಲೋಕನಾಯಕನಗರ, ಡಿ.ಆರ್ ಮೊಹಲ್ಲಾ, ಮೈಸೂರು	120/42	40X30	ನಮೂನೆ 11ಬಿ	ರಸ್ತೆ	ಜಯಮ್ಮ ರವರ ಸ್ವತ್ತು	ನಿವೇಶನ ಸಂಖ್ಯೆ 41	ರಸ್ತೆ	ಖಾಲಿ ನಿವೇಶನ 1–ತೆಂಗು
2.	ಶ್ರೀಮತಿ ಲಕ್ಷ್ಮಿ ಕೋಂ ಕೃಷ್ಣ, #2555, 3ನೇ ಕ್ರಾಸ್, ಕೆ.ಜಿ.ಕೊಪ್ಪಲು, ಮೈಸೂರು.	120/24	40X30	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ರಸ್ತೆ	ನಿವೇಶನ ನಂ.33	ನಿವೇಶನ ನಂ.23	ನಿವೇಶನ ನಂ.25	ಖಾಲಿ ನಿವೇಶನ 1–ತೆಂಗು
3.	ವಸಂತ ಕೋಂ ನಾಗರಾಜು, ಮರಸೆ ಗ್ರಾಮ, ವರುಣ ಹೋಬಳಿ, ಮೈಸೂರು ತಾಲ್ಲೂಕು	120/9ಎ	12.19X4.572	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ರಸ್ತೆ	ನಿವೇಶನ ನಂ.20	ನಿವೇಶನ ನಂ.08	ಸಿದ್ದಮ್ಮ ರವರ ಸ್ವತ್ತು	ಆರ್.ಸಿ.ಸಿ. ಮನೆ
4.	1)ವಸಂತ ಕೋಂ ನಾಗರಾಜು 2) ನಾಗೇಂದ್ರ ಬಿನ್ ನಾಗರಾಜು, ಮರಸೆ ಗ್ರಾಮ, ವರುಣ ಹೋಬಳಿ, ಮೈಸೂರು ತಾಲ್ಲೂಕು.	120/09	12.19X4.572	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ರಸ್ತೆ	ನಿವೇಶನ ನಂ.20	ಮಹಾ ಲಕ್ಷ್ಮಿ ರವರ ನಿವೇಶನ	ನಿವೇಶನ ನಂ.10 1–ತೆಂಗು	ಖಾಲಿ ನಿವೇಶನ
5.	ಮಹದೇವಸ್ವಾಮಿ ಬಿನ್ ಚಾಮಶೆಟ್ಟಿ, ಅಗತ್ತೂರು ಗ್ರಾಮ, ಕಂದಳಿಕೆ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು.	ಎ)120/36	40X5	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ರಸ್ತೆ	ಜಯಮ್ಮ ರವರ ಸ್ವತ್ತು	ಇದೇ ನಂ. ಪೈಕಿ ಎಸ್ ನಾಗೇಂದ್ರ ರವರಿಗೆ ಈ ದಿನ ಕ್ರಯಕ್ಕೆ ಕೊಡುತ್ತಿರುವ ಸ್ವತ್ತು	ನಿವೇಶನ ನಂ.37ರ ಪೈಕಿ ನಿಮ್ಮದೇ ಬಾಬ್ತು ಸ್ವತ್ತು	ಖಾಲಿ ನಿವೇಶನ 1–ತೆಂಗು
		ಬಿ)120/37	40X12.5		ರಸ್ತೆ	ಜಯಮ್ಮ ರವರ ಸ್ವತ್ತು	ನಿವೇಶನ ನಂ.36 ರವರಿಗೆ ಈ ದಿನ ಕ್ರಯಕ್ಕೆ ಕೊಡುತ್ತಿರುವ ಸ್ವತ್ತು	ಇದೇ ನಂ. ಪೈಕಿ ಎಸ್ ನಾಗೇಂದ್ರ	ಖಾಲಿ ನಿವೇಶನ 1–ತೆಂಗು
6.	ಕೆ.ನಾರಾಯಣ ಬಿನ್ ಕೆಂಚಶೆಟ್ಟಿ #39, ಚಿಕ್ಕಬರಗಿ ಗ್ರಾಮ, ಎಂ.ಸಿ.ತಳಲು ಅಂಚೆ, ಸರಗೂರು ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ.	120/7	12.192X9.144 111.48 ಚ.ಮೀ	ನಮೂನೆ 11ಬಿ	ಸಿದ್ದೇಗೌಡರ ಜಮೀನು	ರಸ್ತೆ	ಸಣ್ಣೇ ಗೌಡರ ಜಮೀನು	ಮಹದೇವಶೆಟ್ಟಿ ನಿವೇಶನ	2–ತೆಂಗು ಖಾಲಿ ನಿವೇಶನ
7.	ಗಣೇಶ ಬಿನ್ ರಾಮಶೆಟ್ಟಿ, ಚಿಕ್ಕಬರಗಿ ಗ್ರಾಮ, ಕಂದಕಳಿಕೆ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು	120/36	40X18	ಇ.ಸಿ. ನಮೂನೆ 15	ರಸ್ತೆ	ಜಯಮ್ಮರವರ ಸ್ವತ್ತು	ಸುನೀಲ್ ಕುಮಾರ್ ರವರ ಸ್ವತ್ತು	ಸಿ.ಮಹದೇವ ಸ್ವಾಮಿ ರವರಿಗೆ ಇದೇ ನಂಬರ್ ಪೈಕಿ ಕ್ರಯಕ್ಕೆ ಕೊಡುತ್ತಿರುವ ಸ್ವತ್ತು.	ಖಾಲಿ ನಿವೇಶನ
8.	ಜಯಮ್ಮ ಕೋಂ ಬಿ.ಕೆ. ನರಸಿಂಹೇಗೌಡ, #183/ಎ, ಗೌರಿಶಂಕರ ನಗರ, ದತ್ತನಗರ, ಊಟಿ ರಸ್ತೆ, ದಿ ವಿಲೇಜ್ ರೆಸಾರ್ಟ್ ಎದುರು ಮೈಸೂರು.	ಎ) 120/38	40X30	ಇ.ಸಿ. ನಮೂನೆ 15	ರಸ್ತೆ	ಜಯಮ್ಮರವರ ಸ್ವತ್ತು	ನಿವೇಶನ ನಂ.37	ನಿವೇಶನ ನಂ.39	ಖಾಲಿ ನಿವೇಶನ
		ಬಿ)120/39	40X30		ರಸ್ತೆ	ಜಯಮ್ಮರವರ ಸ್ವತ್ತು	ನಿವೇಶನ ನಂ.38	ನಿವೇಶನ ನಂ.40	ಖಾಲಿ ನಿವೇಶನ
9.	ಪ್ರಸನ್ನ ಎಸ್. ಬಿನ್ ಶ್ರೀನಿವಾಸರಾಜು ಎಸ್, ಚೌಡೇಗೌಡನಹಳ್ಳಿ ಗ್ರಾಮ, ಕಂದೇಗಾಲ ಪೋಸ್ಟ್, ಪಿರಿಯಾಪಟ್ಟಣ.	120/1	40X22	ಇ.ಸಿ. ನಮೂನೆ 15	ಸಿದ್ದೇಗೌಡರ ಸ್ವತ್ತು	ರಸ್ತೆ	ನಾಗರಾಜ ನಾಯಕ ರವರ ನಿವೇಶನ	ಬಾಲಕೃಷ್ಣ ರವರ ಸ್ವತ್ತು	ಖಾಲಿ ನಿವೇಶನ' 2–ತೆಂಗು
10.	ಬಾಲಕೃಷ್ಣರಾಜು ಆರ್ ಬಿನ್ ಲೇಟ್ ರಂಗಸ್ವಾಮಿರಾಜು, ಮರಸೆ ಗ್ರಾಮ, ಮಂಡಕಳ್ಳಿ ಅಂಚೆ, ವರುಣ ಹೋಬಳಿ, ಮೈಸೂರು ತಾಲ್ಲೂಕು.	120/1	40X22	ನಮೂನೆ 11 ಬಿ	ಸಿದ್ದೇಗೌಡರ ಸ್ವತ್ತು	ರಸ್ತೆ	ಎಸ್.ಪ್ರಸನ್ನ ರವರ ಸ್ವತ್ತು	ಮುಖ್ಯ ರಸ್ತೆ	2–ತೆಂಗು ಖಾಲಿ ನಿವೇಶನ
11.	ಮಹದೇವ ಬಿನ್ ರಾಮಶೆಟ್ಟಿ, ಮರಸೆ ಗ್ರಾಮ, ಮೈಸೂರು	120/21	40X15	ಡಿಮ್ಯಾಂಡ್ ರಿಜಿಸ್ಟರ್ ನಮೂನೆ 12	ನಿವೇಶನ ನಂ.08	ರಸ್ತೆ	ಜಯಮ್ಮ ರವರ ಸ್ವತ್ತು	ರತ್ನಮ್ಮ ರವರ ಸ್ವತ್ತು	ಮನೆ
12.	ರತ್ನಮ್ಮ ಕೋಂ ಮಾಯಪ್ಪ, ಮರಸೆ ಗ್ರಾಮ, ಮೈಸೂರು	120/21	40X15	ಡಿಮ್ಯಾಂಡ್ ರಿಜಿಸ್ಟರ್ ನಮೂನೆ 12	ನಿವೇಶನ ನಂ.08	ರಸ್ತೆ	ಮಹದೇವ ರವರ ಸ್ವತ್ತು	ನಿವೇಶನ ನಂ.20	ಖಾಲಿ ನಿವೇಶನ
13.	ಜಯಮ್ಮ ಕೋಂ ಮಹದೇವಶೆಟ್ಟಿ, ಮರಸೆ ಗ್ರಾಮ, ಮೈಸೂರು	120/06	40X30	–	ಸಿದ್ದೇಗೌಡರ ಜಮೀನುನು	ರಸ್ತೆ	ನಿವೇಶನ ನಂ.07	ನಿವೇಶನ ನಂ.05	ಖಾಲಿ ನಿವೇಶನ
14.	ಪೂರ್ಣಿಮ ನಾಗೇಂದ್ರ ಕೋಂ ಎಸ್ ನಾಗೇಂದ್ರ, ಮರಸೆ ಗ್ರಾಮ, ಮೈಸೂರು.	120/8	12.02X9.09	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ರಸ್ತೆ	ನಿವೇಶನ ನಂ.21	ಸಣ್ಣೇ ಗೌಡರ ಜಮೀನು	ನಿವೇಶನ ನಂ.09	ಆರ್.ಸಿ.ಸಿ ಮನೆ
15.	ರಾಧ ಬಿ ಕೋಂ ಎಂ.ಮಹದೇವು, ಮರಸೆ ಗ್ರಾಮ, ಮೈಸೂರು	ಎ)120/22	40X30	ನಮೂನೆ 11 ಬಿ	ರಸ್ತೆ	ನಿವೇಶನ ನಂ.35	ಸಣ್ಣೇ ಗೌಡರ ಸ್ವತ್ತು	ನಿವೇಶನ ನಂ.23	ಮನೆ
		ಬಿ)120/23	40X30		ರಸ್ತೆ	ನಿವೇಶನ ನಂ.34	ನಿವೇಶನ ನಂ.22	ನಿವೇಶನ ನಂ.24	ಖಾಲಿ ನಿವೇಶನ 1–ತೆಂಗು

ಮುಂದುವರೆದಿದೆ....

ಕಾನೂನು ಚೌಕಟ್ಟಿನಲ್ಲಿಯೇ ವರ್ಗಾವಣೆ: ಪರಮೇಶ್ವರ್

ಬೆಂಗಳೂರು: ಪೊಲೀಸರ ಅಂತರ ಜಿಲ್ಲಾ ವರ್ಗಾವಣೆ ಬಗ್ಗೆ ಹಲವು ಆರೋಪ ಕೇಳಿಬಂದಿರುವ ಬಗ್ಗೆ ಪ್ರತಿಕ್ರಿಯಿಸಿರುವ ಗೃಹ ಸಚಿವ ಡಾ.ಜಿ. ಪರಮೇಶ್ವರ್, ಪೊಲೀಸ್ ಇಲಾಖೆ ಶಿಸ್ತಿನ ಇಲಾಖೆಯಾಗಿದ್ದು, ಎಲ್ಲವೂ ಕಾನೂನಿನ ಚೌಕಟ್ಟಿನಲ್ಲಿಯೇ ನಡೆಯಲಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೊಲೀಸ್ ಇಲಾಖೆ ಶಿಸ್ತಿನ ಇಲಾಖೆ. ಶಿಸ್ತು ಬದ್ಧವಾಗಿ ನಿಯಮದ ಚೌಕಟ್ಟಿನಲ್ಲಿ ನಡೆಯಬೇಕಾಗುತ್ತದೆ. ವರ್ಗಾವಣೆಗೆ ಸಂಬಂಧಿಸಿದಂತೆ ಕೆಲವು ನಿಯಮಗಳನ್ನು ಮಾಡಿದ್ದಾರೆ. ಅದನ್ನು ಮೀರಿ ವರ್ಗಾವಣೆ ಮಾಡಲು ಬರುವುದಿಲ್ಲ. ಅಕಸ್ಮಾತ್ ಮಾಡಬೇಕಾದರೆ ನಿಯಮ ಬದಲಾಯಿಸಬೇಕಾಗುತ್ತದೆ ಎಂದರು.

ಪೊಲೀಸ್ ಅಧಿಕಾರಿಗಳ ವರ್ಗಾವಣೆಗೆ ಒಂದು ವರ್ಷದ ನಿಯಮವಿತ್ತು. ಸದನದಲ್ಲಿ ಕಾನೂನು ಬದಲಾಯಿಸಿ ಎರಡು ವರ್ಷ ಮಾಡಲಾಗಿದೆ. ಈ ರೀತಿ ಕಾನೂನು ಬದಲಾವಣೆ ಮಾಡಬಹುದು. ಇರುವ ನಿಯಮ ಉಲ್ಲಂಘನೆ ಮಾಡಿ, ವರ್ಗಾವಣೆ ಮಾಡುವುದಕ್ಕೆ ಅವಕಾಶವಿಲ್ಲ. ಡಿಜಿ ಅವರಾಗಲಿ, ನಾನು ಅಥವಾ ಮತ್ತೊಬ್ಬರು ಇರಬಹುದು. ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾಗುತ್ತದೆ ಎಂದು ತಿಳಿಸಿದರು. ವರ್ಗವಾಣೆಗೆ ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿರುವುದಕ್ಕೆ ಏನಾದರು ಸಣ್ಣಪುಟ್ಟ ತೊಂದರೆಗಳು ಸಿಬ್ಬಂದಿಗಳಿಗೆ ಆಗಿದ್ದರೆ ಸರಿಪಡಿಸುವುದಕ್ಕೆ ಸೂಚನೆ ನೀಡುಡುತ್ತೇನೆ. ಅವರಿಗೆ ಕುಟುಂಬಗಳಿವೆ. ಇದನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕಾಗುತ್ತದೆ ಎಂದು ಹೇಳಿದರು.

ಕೋರ್ಟ್ ಪ್ರಕ್ರಿಯೆ ಬಳಿಕ ನೇಮಕ

ಎಲ್ಲರೂ ಕೋರ್ಟ್‌ಗಳಿಗೆ ಹೋಗಿ ಆದೇಶಗಳನ್ನು ತಂದಾಗ, ನಮ್ಮ ಕೈಕಟ್ಟಿ ಹಾಕಿದಂತಾಗುತ್ತದೆ. 545 ಪಿಎಸ್‌ಐ ಹುದ್ದೆಗಳ ನೇಮಕಾತಿ ಆದೇಶಗಳನ್ನು ಕೊಡಬೇಕು ಎಂಬ ಉದ್ದೇಶದಿಂದ ಪರೀಕ್ಷೆಯನ್ನು ಪೂರ್ಣಗೊಳಿಸಿದ್ದೇವೆ. ಈ ಹಂತದಲ್ಲಿಯೇ ಯಾರೋ ಕೋರ್ಟ್‌ಗೆ ಹೋಗುತ್ತಾರೆ. ಇದನ್ನು ಮುಗಿಸಿದರೆ ಮುಂದಿನ ನೇಮಕಾತಿಗಳಿಗೆ ಅನುಕೂಲವಾಗುತ್ತದೆ. 545 ಹುದ್ದೆಗಳ ನೇಮಕಾತಿ ಯನ್ನು ಆದಷ್ಟು ಬೇಗ ಬಗೆಹರಿಸಲು ಪ್ರಯತ್ನ ಮಾಡುತ್ತಿದ್ದೇವೆ ಎಂದು ತಿಳಿಸಿದರು. ಮಾದಕವಸ್ತು ಪ್ರಕರಣದಲ್ಲಿ ಆರೋಪಿಯಾಗಿರುವ ನಟಿ ರಾಗಿಣಿ ತ್ರಿವೇದಿ ಅವರನ್ನು ಬಾಲಕಾರ್ಮಿಕ ಜಾಗೃತಿ ಅಭಿಯಾನದ ರಾಯಭಾರಿಯಾಗಿ ಪರಿಗಣಿಸಿರುವ ಬಗ್ಗೆ ನಮಗೆ ಮಾಹಿತಿ ಇಲ್ಲ. ಅದು ಕಾರ್ಮಿಕ ಇಲಾಖೆಗೆ ಸೇರಿದ ವಿಚಾರ. ಅವರು ನಮ್ಮನ್ನಂತೂ ಕೇಳುವುದಿಲ್ಲ ಎಂದರು.

ಆರ್‌ಟಿಐ ವ್ಯಾಪ್ತಿಯಿಂದ ಹೊರಗಿಡಲು ಮನವಿ

ಬೆಂಗಳೂರು: ದೇವಾಲಯಗಳನ್ನು ಮಾಹಿತಿ ಹಕ್ಕು ಕಾಯಿದೆಯಿಂದ ಹೊರಗಿಡಲು ಕೋರಿ ಸಲ್ಲಿಸಲಾದ ಅರ್ಜಿಯನ್ನು ಇಂದು ಹೈಕೋರ್ಟ್ ವಜಾಗೊಳಿಸಿ ಆದೇಶಿಸಿದೆ.

ಅಖಿಲ ಕರ್ನಾಟಕ ಹಿಂದೂ ದೇವಸ್ಥಾನಗಳ ಪುರೋಹಿತರು, ಆಗಮಿಕರು ಹಾಗೂ ಅರ್ಚಕರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್.ದೀಕ್ಷಿತ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾ.ಕೆ.ವಿ.ಅರವಿಂದ್ ಅವರಿದ್ದ ವಿಭಾಗೀಯ ಪೀಠ ನಡೆಸಿತು.

ಅರ್ಜಿದಾರರು ಅರ್ಚಕರಾಗಿರುವ ದೇವಾಲಯಗಳು ರಾಜ್ಯ ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿದ್ದು, ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರಗಳಾಗಿವೆ. ಅಲ್ಲದೆ, ಸರಕಾರದ ಸುತ್ತೋಲೆ ಪ್ರಸ್ತಾಪಿಸಿರುವುದು ಸಾರ್ವಜನಿಕ ಹಿತಾಸಕ್ತಿ ಅಡಿಯಲ್ಲಿ ಬರುವುದಿಲ್ಲ. ಆದ್ದರಿಂದ ಮಾಹಿತಿ ಹಕ್ಕು ಕಾಯಿದೆಯಡಿ ಮಾಹಿತಿ ಕೇಳುವುದು ಅರ್ಚಕರಿಗೆ ತೊಂದರೆ ನೀಡಿದಂತಾಗುವುದಿಲ್ಲ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ರಾಜ್ಯ ಸರಕಾರ ಅರ್ಜಿದಾರರ ದೇವಾಲಯಗಳಲ್ಲಿ ಮಾಹಿತಿ ಹಕ್ಕು ಕಾಯಿದೆಯಡಿ ಮಾಹಿತಿ ಒದಗಿಸಲು ಸಿಬ್ಬಂದಿ ನೇಮಿಸಿರುವ ಆದೇಶ, ಧಾರ್ಮಿಕ ದತ್ತಿ ಇಲಾಖೆ ಅಧೀನದ ದೇವಾಲಯಗಳಿಗೆ ಆದೇಶಿಸಿರುವ ಸರ್ಕಾರ ಸುತ್ತೋಲೆ ರದ್ದುಪಡಿಸಲಾಗದು ಎಂದು ಪೀಠ ತಿಳಿಸಿದೆ. ಅರ್ಜಿದಾರರ ಪರ ವಕೀಲ ಎನ್. ಆರ್.ನಾಗರಾಜ್, ದೇವಾಲಯಗಳು ಸಾರ್ವಜನಿಕ ಸಂಸ್ಥೆಗಳು ಅಲ್ಲ ಎಂದು ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ ಹೈಕೋರ್ಟ್‌ಗಳಲ್ಲದೇ ಕರ್ನಾಟಕದ ಹೈಕೋರ್ಟ್ ಸಹ ಹೇಳಿದೆ. ಮುಖ್ಯವಾಗಿ, ದೇವಸ್ಥಾನಗಳು ಸರಕಾರದ ವ್ಯಾಪ್ತಿಗೆ ಬರುವುದಿಲ್ಲ. ದೇವಸ್ಥಾನಗಳ ಮೇಲೆ ಸರ್ಕಾರದ ಆರ್ಥಿಕ, ಭೌತಿಕ ಅಥವಾ ಆಡಳಿತಾತ್ಮಕ ನಿಯಂತ್ರಣ ಇರುವುದಿಲ್ಲ ಎಂದು ಮಾರ್ತಾಂಡವರ್ಮ ವರ್ಸಸ್ ಕೇರಳ ರಾಜ್ಯದ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ಹೇಳಿದೆ ಎಂದು ಆದೇಶದ ಪ್ರತಿಯನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

ಸ್ಮಾರ್ಟ್ ಕಾರ್ಡ್ ಬಗ್ಗೆ ಪರಿಶೀಲನೆ

ಬೆಂಗಳೂರು: ಕಳೆದ ವರ್ಷ ಜೂ.11ರಂದು ಶಕ್ತಿ ಯೋಜನೆ ಜಾರಿಗೆ ಬಂದಿದ್ದು, ದಿನನಿತ್ಯ ಸಾವಿರಾರು ಮಹಿಳೆಯರು ಈ ಯೋಜನೆಯಡಿ ಬಸ್‌ನಲ್ಲಿ ಸಂಚಾರ ನಡೆಸುತ್ತಿದ್ದಾರೆ.



ಆದರೆ ಶಕ್ತಿ ಯೋಜನೆ ಆರಂಭವಾಗಿ ವರ್ಷವಾದರೂ ಸ್ಮಾರ್ಟ್ ಕಾರ್ಡ್ ಮಹಿಳೆಯರ ಕೈ ಸೇರಿಲ್ಲ. ಈ ಕುರಿತು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ಸ್ಮಾರ್ಟ್ ಕಾರ್ಡ್ ಸಿದ್ಧಪಡಿಸಲಾಗಿದ್ದು, ಎಲದಲ ಬಸ್‌ಗಳಲ್ಲಿ ಎಲೆಕ್ಟ್ರಾನಿಕ್ ಟಿಕೆಟ್ ಯಂತ್ರಗಳಿಲ್ಲದಿರುವುದರಿಂದ ಅವುಗಳ ವಿತರಣೆಯನ್ನು ಸ್ಥಗಿತಗೊಳಿಸಲಾಗಿದೆ. ಸಾರಿಗೆ ಇಲಾಖೆ, ಇ-ಆಡಳಿತ ಕೇಂದ್ರದ ಜತೆಗೆ, ಯೋಜನೆಗಾಗಿ ಸ್ಮಾರ್ಟ್ ಕಾರ್ಡ್‌ಗಳ ಮೂಲ ಮಾದರಿಗಳನ್ನು ಯಶಸ್ವಿಯಾಗಿ ರಚಿಸಿದೆ. ಆದರೂ ಈ ಸ್ಮಾರ್ಟ್ ಕಾರ್ಡ್‌ಗಳ ರೋಲ್‌ಔಟ್ ವಿಳಂಬವಾಗಬಹುದು ಏಕೆಂದರೆ ನಗರ ಮಾರ್ಗಗಳಲ್ಲಿ ಬಿಎಂಟಿಸಿ ವ್ಯಾಪ್ತಿಯಲ್ಲಿ ಮತ್ತು ಇಟಿಎಂಗಳಲ್ಲಿ ಬಳಸಲು ಅವುಗಳ ಸೂಕ್ತತೆಯನ್ನು ಮೌಲ್ಯಮಾಪನ ಮಾಡಬೇಕಾಗಿದೆ ಎಂದರು.

ಶಕ್ತಿ ಯೋಜನೆಯನ್ನು ಯಾವದೇ ಕಾರಣಕ್ಕೂ ಸ್ಥಗಿತಗೊಳಿಸುವುದಿಲ್ಲ. ಈ ಯೋಜನೆ ಅಡಿಯಲ್ಲಿ ಈಗಾಗಲೇ 226 ಕೋಟಿ ಜನರು ಸಂಚರಿಸಿದ್ದು, ಉಚಿತ ಟಿಕೆಟ್‌ಗಳ ಒಟ್ಟು ಮೌಲ್ಯ 5,526 ಕೋಟಿ ರು. ಆಗಿದೆ. ದೂರದ ಮಾರ್ಗಗಳಿಗೆ ಪ್ರಯಾಣಿಸುವವರಿಗೆ ಸ್ಮಾರ್ಟ್ ಕಾರ್ಡ್ ಅನುಕೂಲವಾಗಲಿದೆ. ರಾಜ್ಯದೊಳಗಿನ ಬಿಎಂಟಿಸಿ ಮತ್ತು ಇತರ ಕಡಿಮೆ-ದೂರ ನಗರ ಬಸ್‌ಗಳಿಗೆ ಅವುಗಳ ಅನ್ವಯಿಕೆಯನ್ನು ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡುವ ಅಗತ್ಯವಿದೆ. ಸಿಟಿ ಬಸ್‌ಗಳಲ್ಲಿ ಹೆಚ್ಚಿನ ಅಲ್ಪಾವಧಿಯ ಪ್ರಯಾಣದ ಕಾರಣ, ಯೋಜನೆಗೆ ಸ್ಮಾರ್ಟ್ ಕಾರ್ಡ್‌ಗಳನ್ನು ಅಳವಡಿಸುವುದು ಸವಾಲಿನ ಸಂಗತಿಯಾಗಿದೆ ಎಂದರು.

ಈ ಯೋಜನೆಯ ಪ್ರಯೋಜನ ಪಡೆಯಲು ಮಹಿಳೆಯರು ಸ್ಮಾರ್ಟ್‌ಕಾಡ್ ‌ಗಳನ್ನು ಪಡೆಯಬೇಕು. ಈ ಸ್ಮಾರ್ಟ್‌ಕಾರ್ಡ್‌ಗಳನ್ನು ಪಡೆಯಲು ಮಹಿಳೆಯರು ಶಕ್ತಿ ಯೋಜನೆಯ ವೆಬ್ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕು. ನಂತರ ಸಾರಿಗೆ ಸಂಸ್ಥೆ ಶಕ್ತಿ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸುತ್ತದೆ. ಇದು ಟ್ಯಾಪ್-ಆ್ಯಂಡ್ -ಟ್ರಾವೆಲ್ ತಂತ್ರಜ್ಞಾನವನ್ನು ಒಳಗೊಂಡಿರುತ್ತದೆ. ಮಹಿಳಾ ಪ್ರಯಾಣಿಕರು ಬಸ್ ಪ್ರಯಾಣಕ್ಕಾಗಿ ಶೂನ್ಯ ಟಿಕೆಟ್ ಪಡೆಯಲು ಕೇಂದ್ರ ಅಥವಾ ರಾಜ್ಯ ಸರಕಾರವು ಮಾನ್ಯಮಾಡಿದ ಚೀಟಿಯನ್ನು ತೋರಿಸುತ್ತಾರೆ. ನಿರ್ವಾಹಕರು ಮಹಿಳಾ ಪ್ರಯಾಣಿಕರ ಗುರುತಿನ ಚೀಟಿಗಳನ್ನು ಪರಿಶೀಲಿಸಿದ ನಂತರ ಟಿಕೆಟ್‌ಗಳನ್ನು ನೀಡುತ್ತಿದ್ದಾರೆ. ಟಿಕೆಟ್ ನೀಡಿಕೆಯಲ್ಲಿ ಯಾವುದೇ ಮಹತ್ವದ ಸಮಸ್ಯೆಗಳಿಲ್ಲ. ಆದರೂ ಸ್ಮಾರ್ಟ್ ಕಾರ್ಡ್‌ಗಳು ಸಮಯವನ್ನು ಉಳಿಸುವ ಮೂಲಕ ಪ್ರಯಾಣಿಕರಿಗೆ ಮತ್ತು ಕಂಡಕ್ಟರ್ಗಳಿಗೆ ಪ್ರಯೋಜನಕಾರಿಯಾಗಿದೆ ಎಂದರು.

ಅರ್ಜಿ ವಿಲೇವಾರಿಗೆ ಸೂಚನೆ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಕೈಗಾರಿಕಾ ಘಟಕಗಳ ಸ್ಥಾಪನೆ ಮತ್ತು ಕಾರ್ಯಾಚರಣೆಗೆ ಅನುಮತಿ ಕೋರಿ ಸಲ್ಲಿಕೆಯಾಗುವ ಅರ್ಜಿಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವಂತೆ ಪರಿಸರ ಸಚಿವ ಈಶ್ವರ್ ಖಂಡ್ರೆ ಸೂಚಿಸಿದ್ದಾರೆ.

ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ಜೂನ್ 7ರ ಅಂತ್ಯದವರೆಗೆ ಮಂಡಳಿಗೆ ಒಟ್ಟು 769 ಅರ್ಜಿಗಳು ಬಾಕಿ ಇದ್ದು, ಅರ್ಜಿಗಳೆಲ್ಲವನ್ನೂ ಸಭೆಯಲ್ಲಿ ಮಂಡಿಸಿ. ಒಂದೊಮ್ಮೆ ಸಿಎಫ್‌ಇ ಮತ್ತು ಸಿಎಫ್‌ಒ ಅರ್ಜಿಗಳನ್ನು ದೀರ್ಘಕಾಲದವರೆಗೆ ವಿಲೇವಾರಿ ಮಾಡದೆ ಬಾಕಿ ಉಳಿಸಿಕೊಂಡಿದ್ದಲ್ಲಿ ಸಂಬಂಧಿತ ಅಧಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ಎಚ್ಚರಿಸಿದರು.

ಸಿಎಫ್‌ಇ ಮತ್ತು ಸಿಎಫ್‌ಒ ಅರ್ಜಿಗಳನ್ನು ಮೂರು ದಿನಗಳ ಒಳಗಾಗಿ ಪ್ರಮಾಣ ಪತ್ರವನ್ನು ಆನ್ ಲೈನ್‌ನಲ್ಲಿ ಅಪ್ ಲೋಡ್ ಮಾಡಬೇಕು.

ಇದರಲ್ಲಿ ಅನಗತ್ಯ ವಿಳಂಬ ಮಾಡದೆ ಪಾರದರ್ಶಕತೆ ಕಾಪಾಡುವಂತೆ ಸೂಚಿಸಿದರು. ಸಭೆಯಲ್ಲಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರೇತರ ಸದಸ್ಯರುಗಳಾದ ಶರಣಕುಮಾರ್ ಮೋದಿ, ಡಾ.ಪ್ರದೀಪ್ ಸಿ, ಮರಿಸ್ವಾಮಿ ಗೌಡ, ಪರಿಸರ ಇಲಾಖೆ ಪ್ರಧಾನ ಕಾರ್ಯದರ್ಶಿ ಬಿ.ಪಿ.ರವಿ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದಲ್ಲಿ ನೀಟ್ ಸ್ಥಗಿತವಾಗಲಿ

ಬೆಂಗಳೂರು: ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್) ವ್ಯವಸ್ಥೆಯನ್ನು ಕೊನೆಗೊಳಿಸಲು ತಮಿಳುನಾಡು ಮಾದರಿಯಲ್ಲಿ ರಾಜ್ಯ ಸರ್ಕಾರ ಕೂಡ ಕೇಂದ್ರದ ಮೇಲೆ ಒತ್ತಡ ಹಾಕಬೇಕು ಎಂದು ಎಎಪಿಯ ರಾಜ್ಯ ಪ್ರಧಾನಕಾರ್ಯದರ್ಶಿ ಮೋಹನ್ ದಾಸರಿ ನೇತೃತ್ವದಲ್ಲಿ ಸದಸ್ಯರು ಉನ್ನತ ಶಿಕ್ಷಣ ಡಾ. ಎಂ.ಸಿ. ಸುಧಾಕರ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಈ ಬಾರಿ ನೀಟ್ ಪರೀಕ್ಷೆಯಲ್ಲಿ 67 ವಿದ್ಯಾರ್ಥಿಗಳು 720ಕ್ಕೆ 720 ಅಂಕ ಪಡೆದಿದ್ದಾರೆ. ಒಂದೇ ಪರೀಕ್ಷಾ ಕೇಂದ್ರದಲ್ಲಿ ಒಂದೇ ಕೊಠಡಿಯಲ್ಲಿ ಪರೀಕ್ಷೆ ಬರೆದ 6 ರಿಂದ 7 ವಿದ್ಯಾರ್ಥಿಗಳು 720 ಅಂಕ ಪಡೆದಿರುವುದು ಅನುಮಾನಕ್ಕೆ ಕಾರಣವಾಗಿದೆ. ಇದರಲ್ಲಿ ದೊಡ್ಡ ಭ್ರಷ್ಟಾಚಾರ ನಡೆದಿದೆ ಎಂದು ಮೋಹನ್ ದಾಸರಿ ತಿಳಿಸಿದ್ದಾರೆ.

ನೀಟ್ ಪರೀಕ್ಷೆಯಿಂದ ಪ್ರಾಮಾಣಿಕವಾಗಿ ಓದುವ ರಾಜ್ಯದ ಮಕ್ಕಳಿಗೆ ಅನ್ಯಾಯವಾಗುತ್ತಿದೆ. ಪಿಯುಸಿಯಲ್ಲಿ ಜಸ್ಟ್ ಪಾಸಾದ ವಿದ್ಯಾರ್ಥಿಗಳು ನೀಟ್ ಪರೀಕ್ಷೆಯಲ್ಲಿ ರ್ಯಾಂಕ್ ಪಡೆದಿದ್ದಾರೆ. ಕರ್ನಾಟಕ ಸಿಇಟಿ ಪರೀಕ್ಷೆಗೆ ದೇಶಾದ್ಯಂತ ಪ್ರಶಂಸೆ ಇತ್ತು, ಈಗ ಮತ್ತೆ ಸಿಇಟಿ ಪರೀಕ್ಷೆಯನ್ನು ವಾಪಸ್ ತರಬೇಕು ಎಂದು ತಿಳಿಸಿದ್ದಾರೆ.

ನಾನೂ ಸಚಿವ ಸ್ಥಾನದ ಆಕಾಂಕ್ಷಿ

ಕಲಬುರಗಿ: 2018 ರಿಂದಲೂ ನಾನೂ ಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಶಾಸಕ ಡಾ.ಅಜಯಸಿಂಗ್ ಸಚಿವ ಸ್ಥಾನದ ಆಕಾಂಕ್ಷೆಯನ್ನು ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ವರಿಷ್ಠರು ಯಾವುದೇ ಜವಾಬ್ದಾರಿ ಕೊಟ್ಟರೂ ವಹಿಸಿಕೊಳ್ಳುತ್ತೇನೆ, ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ. ವರಿಷ್ಠರು ಕೆಲಸ ಮಾಡುವವರನ್ನು ಗುರುತಿಸುತ್ತಾರೆ ಎಂಬ ವಿಶ್ವಾಸವಿದೆ ಎಂದಿದ್ದಾರೆ. ಇದೇ ವೇಳೆ, ಜೂನ್ 14 ರಂದು ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ಕಲ್ಯಾಣ ಕೆಕೆಆರ್‌ಡಿಬಿ ಪ್ರಗತಿ ಪರಿಶೀಲನಾ ಸಭೆ ನಡೆಯಲಿದೆ ಎಂದು ಮಾಹಿತಿ ನೀಡಿದರು. ಮುಖ್ಯಮಂತ್ರಿಗಳ ಸಭೆಯ ನಂತರ ಇದೇ ಜೂ. 28ಕ್ಕೆ ಮಂಡಳಿ ಸಭೆ ನಡೆಸಲು ನಿರ್ಧರಿಸಿದ್ದು, 15 ದಿನದೊಳಗೆ ಪ್ರದೇಶದ ಶಾಸಕರಿಂದ ಕ್ರಿಯಾ ಯೋಜನೆ ಪಡೆದು ಪ್ರಸಕ್ತ ಸಾಲಿನ ಕೆಲಸ ಆರಂಭಿಸಲಾಗುವುದು ಎಂದರು.

ಕಳೆದ ವರ್ಷ ನಮ್ಮ ಸರಕಾರ ಈ ಭಾಗಕ್ಕೆ 5 ಸಾವಿರ ಕೋಟಿ ರು. ಅನುದಾನ ಘೋಷಿಸಿ 3 ಸಾವಿರ ಕೋಟಿ . ಅನುದಾನ ಹಂಚಿಕೆ ಮಾಡಿದೆ. ಅದರಂತೆ ಪ್ರದೇಶದಲ್ಲಿ ರಸ್ತೆ, ಚರಂಡಿ ನಿರ್ಮಾಣ, ಮೂಲಸೌಕರ್ಯ ಕೆಲಸ ಭರದಿಂದ ಸಾಗಿದೆ. ಇದರೊಂದಿಗೆ ಪ್ರದೇಶದಲ್ಲಿ ವಿಶೇಷವಾಗಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗೆ ಅಕ್ಷರ ಆವಿಷ್ಕಾರ, ಆರೋಗ್ಯ ಆವಿಷ್ಕಾರ ಯೋಜನೆ ಜಾರಿಗೆ ತರಲಾಗಿದೆ ಎಂದರು.

ವಿರಾಮ
ಪ್ರತಿ ಭಾನುವಾರ

		16.	1)ಕುಮಾರ ಬಿನ್ ರಾಮಶೆಟ್ಟಿ, 2)ಸೋಮಶೇಖರ ಬಿನ್ ರಾಮಶೆಟ್ಟಿ, ಮರಸೆ ಗ್ರಾಮ, ಮೈಸೂರು	120/29	40X30	ಇ.ಸಿ. ನಮೂನೆ 15	ನಿವೇಶನ ನಂ.28	ರಸ್ತೆ	ನಿವೇಶನ ನಂ.30	ರಸ್ತೆ	ಖಾಲಿ ನಿವೇಶನ
		17.	ಮಹದೇವಮ್ಮ ಕೋಂ ಮಹದೇವಶೆಟ್ಟಿ, ಮರಸೆ ಗ್ರಾಮ, ಮೈಸೂರು	120/20	40X30	ನಮೂನೆ 11ಬಿ	ನಿವೇಶನ ನಂ.09	ರಸ್ತೆ	ನಿವೇಶನ ನಂ.21	ನಿವೇಶನ ನಂ.19	1–ತೆಂಗು ಆರ್.ಸಿ.ಸಿ ಮನೆ
		18.	ಶಿಲ್ಪ ಎಂ. ಕೋಂ ನಾರಾಯಣಸ್ವಾಮಿ, ಮರಸೆ ಗ್ರಾಮ, ಮೈಸೂರು.	120/27	40X30	ನಮೂನೆ 11ಬಿ	ರಸ್ತೆ	ನಿವೇಶನ ನಂ.30	ನಿವೇಶನ ನಂ.26	ನಿವೇಶನ ನಂ.28	ಆರ್.ಸಿ.ಸಿ ಮನೆ
		19.	ಅನಿತ ಕೋಂ ಪುಟ್ಟಸ್ವಾಮಿ, ಮರಸೆ ಗ್ರಾಮ, ಮೈಸೂರು	120/11	40X30	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ರಸ್ತೆ	ನಿವೇಶನ ನಂ.18	ನಿವೇಶನ ನಂ.10	ನಿವೇಶನ ನಂ.12	ಆರ್.ಸಿ.ಸಿ ಮನೆ
		20.	ಶಿವಣ್ಣ ಶೆಟ್ಟಿ ಬಿನ್ ರಾಮಶೆಟ್ಟಿ ಮರಸೆ ಗ್ರಾಮ, ಮೈಸೂರು	120/25	12.192 X9.144	–	ರಸ್ತೆ	ನಿವೇಶನ ನಂ.32	ನಿವೇಶನ ನಂ.24	ನಿವೇಶನ ನಂ.26	1–ತೆಂಗು ಖಾಲಿ ನಿವೇಶನ
		21.	ಮಹದೇವಮ್ಮ ಕೋಂ ಸಿದ್ದನಾಯ್ಕ ಮರಸೆ ಗ್ರಾಮ, ಮೈಸೂರು	120/4	12.192X9.144	ನಮೂನೆ 11ಬಿ	ಸಿದ್ದೇಗೌಡರ ಸ್ವತ್ತು	ರಸ್ತೆ	ಗೌರಮ್ಮರವರ ಸ್ವತ್ತು	ನಿವೇಶನ ನಂ.03	ಆರ್.ಸಿ.ಸಿ. ಮನೆ
		22.	ಶಾಂತಮ್ಮ ಕೋಂ ವಿಜಯರಾಮರಾಜ್ ಮರಸೆ ಗ್ರಾಮ, ಮೈಸೂರು	120/13	40X30	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ರಸ್ತೆ	ನಿವೇಶನ ನಂ.16	ನಿವೇಶನ ನಂ.12	ನಿವೇಶನ ನಂ.14	ಖಾಲಿ ನಿವೇಶನ 2–ತೆಂಗು
		23.	ಕೆ.ರವಿ ಬಿನ್ ಕರೀಗೌಡ, ಮರಸೆ ಗ್ರಾಮ, ಮೈಸೂರು	120/12	40X15	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ರಸ್ತೆ	ನಿವೇಶನ ನಂ.17	ನಿವೇಶನ ನಂ.11	ಮಾದೇವ ರವರ ಸ್ವತ್ತು	ಖಾಲಿ ನಿವೇಶನ
		24.	ಮಾದೇವ ಬಿನ್ ಕರೀಗೌಡ ಮರಸೆ ಗ್ರಾಮ, ಮೈಸೂರು	120/12	40X15	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ರಸ್ತೆ	ನಿವೇಶನ ನಂ.17	ರವಿ ರವರ ಸ್ವತ್ತು	ನಿವೇಶನ ನಂ.13	ಖಾಲಿ ನಿವೇಶನ
		25.	ನಾಗರಾಜ ನಾಯ್ಕ ಬಿನ್ ಲೇಟ್ ಗೋವಿಂದ ನಾಯ್ಕ, ಮರಸೆ ಗ್ರಾಮ, ಮೈಸೂರು	120/2	40X30	ನಮೂನೆ 11ಬಿ	ಸಿದ್ದೇಗೌಡರ ಜಮೀನು	ರಸ್ತೆ	ನಿವೇಶನ ನಂ.03	ನಿವೇಶನ ನಂ.01	ಆರ್.ಸಿ.ಸಿ ಮನೆ 1–ತೆಂಗು
		26.	ಮಹದೇವ ಎಸ್ ಬಿನ್ ಲೇಟ್ ಸಿದ್ದಶೆಟ್ಟಿ, ಮರಸೆ ಗ್ರಾಮ, ಮೈಸೂರು	120/37 (1)	12.12X 5.30ಮೀ	ನಮೂನೆ 11 ಬಿ	ರಸ್ತೆ	ಜಯಮ್ಮ ರವರ ಸ್ವತ್ತು	ಸಿ.ಮಹದೇವ ಸ್ವಾಮಿರವರ ಸ್ವತ್ತು	ನಿವೇಶನ ನಂ.38	–
		27.	1) ಪುಟ್ಟಸ್ವಾಮಿ ಬಿನ್ ಲೇಟ್ ಚನ್ನೇಗೌಡ 2) ಭಾರತಿ ಕೋಂ ಪುಟ್ಟಸ್ವಾಮಿ, ಮರಸೆ ಗ್ರಾಮ, ಮೈಸೂರು.	120/17	40X30	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ನಿವೇಶನ ನಂ.12	ರಸ್ತೆ	ನಿವೇಶನ ನಂ.18	ನಿವೇಶನ ನಂ.16	ಸೀಟ್ ಮನೆ
		28.	ಮಧುಸೂದನ್ ವಿ ಬಿನ್ ಶ್ರೀ ರಾಮು, #886, ರಾಮಕೃಷ್ಣ ನಗರ, ಇ ಮತ್ತು ಎಫ್ ಬ್ಲಾಕ್, 7ನೇ ಕ್ರಾಸ್ ಮೈಸೂರು.	120/5	40X30	ನಮೂನೆ 11ಬಿ	ಸಿದ್ದೇಗೌಡರ ಸ್ವತ್ತು	ರಸ್ತೆ	ನಿವೇಶನ ನಂ.06	ನಿವೇಶನ ನಂ.04	ಖಾಲಿ ನಿವೇಶನ
		29.	ಎಸ್ ನಂಜುಂಡಸ್ವಾಮಿ ಬಿನ್ ಲೇಟ್ ಶಿವಪ್ಪ, # 707, ಪಾಪರಾಂ ರಸ್ತೆ, ಕೆ.ಮೊಹಲ್ಲಾ, ಮೈಸೂರು	120/33	12.192X9.144	ನಮೂನೆ 11ಬಿ	ನಿವೇಶನ ನಂ.24	ರಸ್ತೆ	ನಿವೇಶನ ನಂ.34	ನಿವೇಶನ ನಂ.32	ಖಾಲಿ ನಿವೇಶನ
		30.	ಸುಜಾತ ಕೋಂ ಬಾಲಸುಬ್ರಮಣ್ಯರಾಜು, ಮರಸೆ ಗ್ರಾಮ, ಮೈಸೂರು	120/28	40X32+33/2	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ರಸ್ತೆ	ನಿವೇಶನ ನಂ.29	ನಿವೇಶನ ನಂ.27	ರಸ್ತೆ	ಖಾಲಿ ನಿವೇಶನ
		31.	ಮಂಜುಳ ಕೋಂ ಸಿದ್ದನಾಯಕ, ಮರಸೆ ಗ್ರಾಮ, ಮೈಸೂರು	120/19	40X30	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ನಿವೇಶನ ನಂ.10	ರಸ್ತೆ	ನಿವೇಶನ ನಂ.20	ನಿವೇಶನ ನಂ.18	ಖಾಲಿ ನಿವೇಶನ 1–ತೆಂಗು
		32.	ಚಂದನ್ ಎಂ.ಎಸ್. ಬಿನ್ ಸಿದ್ದೇಗೌಡ, ಮರಸೆ ಗ್ರಾಮ, ಮೈಸೂರು	1)120/34	40X30	ನಮೂನೆ 11ಬಿ	ನಿವೇಶನ ನಂ.23	ರಸ್ತೆ	ನಿವೇಶನ ನಂ.35	ನಿವೇಶನ ನಂ.33	ಖಾಲಿ ನಿವೇಶನ
				2)120/35	12.19X9.14		ನಿವೇಶನ ನಂ.22	ರಸ್ತೆ	ಖಾಸಗಿ ಸ್ವತ್ತು	ನಿವೇಶನ ನಂ.34	ಖಾಲಿ ನಿವೇಶನ
		33.	ಎಂ.ಎಸ್.ಮಹಾಲಿಂಗ ಬಿನ್ ಶಿವಣ್ಣ ಶೆಟ್ಟಿ, ಮರಸೆ ಗ್ರಾಮ, ಮೈಸೂರು	120/40	12.19X9.14	ನಮೂನೆ 11ಬಿ	ರಸ್ತೆ	ಜಯಮ್ಮರವರ ಉಳಿಕೆ ಸ್ವತ್ತು	ನಿವೇಶನ ನಂ.39	ನಿವೇಶನ ನಂ.41	ಸೀಟ್ ಮನೆ
		34.	ಮಹಾಲಿಂಗ ಎಂ.ಎಸ್. ಬಿನ್ ಶಿವಣ್ಣಶೆಟ್ಟಿ ಮರಸೆ ಗ್ರಾಮ, ಮೈಸೂರು	120/16	40X30	ನಮೂನೆ 11ಬಿ ಬಿ	ನಿವೇಶನ ನಂ.13	ರಸ್ತೆ	ನಿವೇಶನ ನಂ.17	ನಿವೇಶನ ನಂ.15	ಖಾಲಿ ನಿವೇಶನ
		35.	ಲಕ್ಷ್ಮೀಶ ಶೆಟ್ಟಿ ಬಿನ್ ನಿಂಗಶೆಟ್ಟಿ, ಮರಸೆ ಗ್ರಾಮ, ಮೈಸೂರು	120/16	40X30	ನಮೂನೆ 11ಬಿ	ರಸ್ತೆ	ನಿವೇಶನ ನಂ.31	ಎನ್ ಕುಮಾರ ನಿವೇಶನ	ನಿವೇಶನ ನಂ.27	ಅಡಿಪಾಯ ಹಾಕಿರುವ ನಿವೇಶನ
		36.	ಭಾನುಮಣಿ ಬಿನ್ ಬಿ.ಕೆ.ನರಸಿಂಹೇಗೌಡ, #183/ಎ ಗೌರಿಶಂಕರ ನಗರ, ದತ್ತ ನಗರ, ಊಟಿ ರಸ್ತೆ, ಮೈಸೂರು.	ಎ)120/31		ನಮೂನೆ 11ಬಿ	ನಿವೇಶನ ನಂ.26	ರಸ್ತೆ	ನಿವೇಶನ ನಂ.32	ನಿವೇಶನ ನಂ.30	ಖಾಲಿ ನಿವೇಶನ
				ಬಿ)120/32	40X30						ಖಾಲಿ ನಿವೇಶನ
		37.	ಲೀಲಾವತಿ ಕೋಂ ಶ್ರೀ ಎಲ್ ಲಕ್ಷೀಶ, ಮರಸೆ ಗ್ರಾಮ, ಮೈಸೂರು.	120/18	40X30	ಡಿಮ್ಯಾಂಡ್ ರಿಜಿಸ್ಟರ್ ನಮೂನೆ12	ನಿವೇಶನ ನಂ.11	ರಸ್ತೆ	ನಿವೇಶನ ನಂ.19	ನಿವೇಶನ ನಂ.17	ಖಾಲಿ ನಿವೇಶನ 1–ತೆಂಗು
		38.	ಚಂದ್ರಮ್ಮ ಕೋಂ ಶ್ರೀ ಕುಳ್ಳನಾಯಕ ಮರಸೆ ಗ್ರಾಮ, ಮೈಸೂರು	120/03	40X30	–	ಸಿದ್ದೇ ಗೌಡರ ಜಮೀನು	ರಸ್ತೆ	ನಿವೇಶನ ನಂ.04	ನಿವೇಶನ ನಂ.02	ಖಾಲಿ ನಿವೇಶನ 1–ತೆಂಗು
		39.	ಸಿದ್ದಮ್ಮ ಕೋಂ ಜಗದೀಶ, ಮರಸೆ ಗ್ರಾಮ, ಮೈಸೂರು	120/10	12.19X9.144	ನಮೂನೆ 11ಬಿ	ರಸ್ತೆ	ನಿವೇಶನ ನಂ.19	ನಿವೇಶನ ನಂ.09	ನಿವೇಶನ ನಂ.11	ಆರ್.ಸಿ.ಸಿ ಮನೆ
		40.	ಎನ್.ಭಾಗ್ಯ ಕೋಂ ಸಿ.ಬಿ.ನಾಯಕ್, ರಾಘವೇಂದ್ರ ಬಡಾವಣೆ, ಮೈಸೂರು.	120/15	40X39.5	ಡಿಮ್ಯಾಂಡ್ ರಿಜಿಸ್ಟರ್	ನಿವೇಶನ 14	ರಸ್ತೆ	ನಿವೇಶನ 16	ರಸ್ತೆ	ಖಾಲಿ ನಿವೇಶನ
		41.	ಚಿಕ್ಕತಾಯಮ್ಮ ಕೋಂ ಎಂ. ಹನುಮಂತಯ್ಯ ನಂ.143,ವಿ.ವಿ. ಮೊಹಲ್ಲಾ, 16 ನೇಕ್ರಾಸ್, ಮಂಡ್ಯ ಟೌನ್.	120/14	40X41.5	ನಮೂನೆ 11ಬಿ	ರಸ್ತೆ	ನಿವೇಶನ ನಂ.15	ನಿವೇಶನ ನಂ.13	ರಸ್ತೆ	ಖಾಲಿ ನಿವೇಶನ
		42.	ಎಂ.ಹನುಮಂತಯ್ಯ ಬಿನ್ ಲೇಟ್ ಮರೀಗೌಡ, #133 ವಿ.ವಿ.ಮೊಹಲ್ಲಾ, 16 ನೇಕ್ರಾಸ್, ಮಂಡ್ಯ ಟೌನ್.	120/41	40X30	ಡಿಮ್ಯಾಂಡ್ ರಿಜಿಸ್ಟರ್	ರಸ್ತೆ	ಜಯಮ್ಮರ ಉಳಿಕೆ ಸ್ವತ್ತು	ನಿವೇಶನ ನಂ.40	ನಿವೇಶನ ನಂ.42	ಖಾಲಿ ನಿವೇಶನ
		43	ನಾಗೇಂದ್ರ ಬಿನ್ ಸಿದ್ದೇಶೆಟ್ಟಿ, #14, ಮರಸೆ ಗ್ರಾಮ, ಮೈಸೂರು	120/37/1	12.12X5.30	ನಮೂನೆ 11ಬಿ	ರಸ್ತೆ	ಜಯಮ್ಮರ ಸ್ವತ್ತು	ಶ್ರೀ ಮಹದೇವ ಸ್ವಾಮಿ ರವರ ಸ್ವತ್ತು	ನಿವೇಶನ ನಂ.38	–
		44	ಮಹಾಲಕ್ಷ್ಮಿ ಕೋಂ ಮಹೇಶ, ಮರಸೆ ಗ್ರಾಮ, ಮೈಸೂರು	120/9ಎ	12.192X4.572	ನಮೂನೆ 11ಬಿ	20 ಅಡಿ ರಸ್ತೆ	ನಿವೇಶನ ನಂ.20	ನಿವೇಶನ ನಂ.8	ಸಿದ್ದಮ್ಮ ನವರ ಸ್ವತ್ತು	
		45	ಪ್ರಕಾಶ ಎಂ.ಸಿ ಬಿನ್ ಲೇಟ್ ಚನ್ನವೀರೇಗೌಡ ಮುದ್ದನಹಳ್ಳಿ ಗ್ರಾಮ, ಹೊಣಕೆರೆ ಹೋಬಳಿ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ.	120/30	12.192X9.144	ನಮೂನೆ 11ಬಿ	ನಿವೇಶನ ನಂ.07	ರಸ್ತೆ	ನಿವೇಶನ ನಂ.29	ನಿವೇಶನ ನಂ.31	
24	133	ವಿಷಕಂಠ ಬಿನ್ ಲೇಟ್ ನಂಜೇಗೌಡ	0–31	–	0–31	ಖುಷ್ಕಿ	0.97	28	23	ಹಳ್ಳ	24
		ಒಟ್ಟು	46–22	0–13	44–34 1–10 ½ 0–04 ½	ಖುಷ್ಕಿ ನಾಲಾ N.H					

ಷರಾ: 1) ಕ್ರ.ಸಂ.12 ರಲ್ಲಿ ನಮೂದಿಸಲಾದ ಜಮೀನನ್ನು ವಸತಿ ಉದ್ದೇಶದಲ್ಲಿ ಭೂಪರಿವರ್ತಿಸಿ: ದಿನಾಂಕ:26–11–1999 ನೇ ದೇವಲಾಪುರ ಗ್ರಾಮ ಪಂಚಾಯ್ತಿ ಮಾಸಿಕ ಸಭೆಯ ತೀರ್ಮಾನದಂತೆ ಸರ್ವೆ ನಂ.87/1 ರಲ್ಲಿ ನಿವೇಶನ ಸಂಖ್ಯೆ 85 ರಿಂದ 142 ರವರೆಗೆ ನಿವೇಶನಗಳನ್ನು ರಚಿಸಿ ಖಾತೆ ಅಂಗೀಕರಿಸಿ ಅನುಮೋದಿತ ನಕ್ಷೆ ಮತ್ತು Consolidated Site plan of Ashwini Layout ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಈ ಸಂಬಂಧ ಕಡಕೊಳ ಪಟ್ಟಣ ಪಂಚಾಯ್ತಿವತಿಯಿಂದ ಹಾಜರುಪಡಿಸಲಾದ ಕ್ರಸಂ.1 ರಿಂದ 8 ರ ವರೆಗಿನ ನಿವೇಶನದಾರರು ಹೊಂದಿರುವ ದಾಖಲೆಗಳನ್ವಯ ಕರಡು ಅಂತಿಮ ಅಧಿಸೂಚನೆಯಲ್ಲಿ ದಾಖಲಿಸಲಾಗಿರುತ್ತದೆ. **2)** ಕ್ರ.ಸ.18 ರಲ್ಲಿ ನಮೂದಿಸಲಾದ ಜಮೀನನ್ನು ವಸತಿ ಉದ್ದೇಶದಲ್ಲಿ ಭೂಪರಿವರ್ತಿಸಿ: ದಿನಾಂಕ:26–11–1999 ನೇ ದೇವಲಾಪುರ ಗ್ರಾಮ ಪಂಚಾಯ್ತಿ ಮಾಸಿಕ ಸಭೆಯ ತೀರ್ಮಾನದಂತೆ ಸರ್ವೆ ನಂ.91 ರಲ್ಲಿ ನಿವೇಶನ ಸಂಖ್ಯೆ 1 ರಿಂದ 84 ರವರೆಗೆ ನಿವೇಶನಗಳನ್ನು ರಚಿಸಿ ಖಾತೆ ಅಂಗೀಕರಿಸಿ ಅನುಮೋದಿತ ನಕ್ಷೆ ಮತ್ತು Consolidated Site plan of Ashwini Layout ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಈ ಸಂಬಂಧ ಕ್ರ.ಸಂ.:1 ರಿಂದ 12 ರವರೆಗೆ ನಿವೇಶನದಾರರು ಹೊಂದಿರುವ ದಾಖಲೆಗಳನ್ವಯ ಅಂತಿಮ ಅಧಿಸೂಚನೆಯಲ್ಲಿ ದಾಖಲಿಸಲಾಗಿರುತ್ತದೆ. **3)** ಕ್ರ.ಸ.23 ರಲ್ಲಿ ನಮೂದಿಸಲಾದ : ಸರ್ವೆ ನಂ.124 ರಲ್ಲಿ 3–24 ಎಕರೆ ಜಮೀನಿನ ಪೈಕಿ 1–20 ಎಕರೆ ಜಮೀನನ್ನು ಜಯಮ್ಮ ಕೋಂ ಎಸ್ ಸಿದ್ದೇಗೌಡ ಇವರು ವಸತಿ ಉದ್ದೇಶದಲ್ಲಿ ಭೂಪರಿವರ್ತಿಸಿ ಮಾರಾಟ ಮಾಡಿದ್ದು, ಕ್ರ.ಸ . 1 ರಿಂದ 45 ರ ವರೆಗಿನ ನಿವೇಶನ/ಕಟ್ಟಡದಾರರು ಸ್ಥಳೀಯ ದೇವಲಾಪುರ ಗ್ರಾಮ ಪಂಚಾಯಿತಿಯಿಂದ ಹಾಜರುಪಡಿಸಲಾದ 11ಎ, 11ಬಿ, ಖಾತಾ ಪ್ರತಿ ಮತ್ತಿತರ ದಾಖಲೆಗಳನ್ವಯ ಅಂತಿಮ ಅಧಿಸೂಚನೆಯಲ್ಲಿ ದಾಖಲಿಸಲಾಗಿರುತ್ತದೆ. **4)** ಕ್ರ.ಸ.6 ರ ಸರ್ವೆ ನಂ.40 ರ ಪೈಕಿ 0–11 ಗುಂಟೆ, ಕ್ರ.ಸ. ಸಂಖ್ಯೆ: 9 ರಲ್ಲಿ ಸರ್ವೆ ನಂ.86/2 ರ ಪೈಕಿ 0–03 1/2 ಗುಂಟೆ, ಕ್ರ.ಸ.12 ರಲ್ಲಿ ಸರ್ವೆ ನಂ.87/1 ರಲ್ಲಿ 0–20 ಗುಂಟೆ, ಕ್ರ.ಸ. 17 ರ ಸರ್ವೆ ನಂ.90 ರಲ್ಲಿ 0–03 ಗುಂಟೆ, ಕ್ರ.ಸ. 20 ರ ಸರ್ವೆ ನಂ.92/2 ರ 0–13 ಗುಂಟೆ ಒಟ್ಟು 1–10 ½ ಎಕರೆ ವರುಣಾ ನಾಲೆಗೆ ಭೂಸ್ವಾಧೀನ ಹಾಗೂ ಕ್ರ.ಸ.19 ರ ಸರ್ವೆ ನಂ.92/1 ರಲ್ಲಿ 0–04 ಗುಂಟೆ , ಕ್ರ.ಸ.22 ರ ಸರ್ವೆ ನಂ.92/4 ರ ಪೈಕಿ 0–00 ½ ಗುಂಟೆ ಒಟ್ಟು 0–04 ½ ಜಮೀನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಭೂಸ್ವಾಧೀನವಾಗಿರುವ ಜಮೀನನ್ನು ದಾಖಲಿಸಲಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶದ ಅನುಸಾರ ಮತ್ತು ಅವರ ಹೆಸರಿನಲ್ಲಿ
(ಭೀಮಪ್ಪ ಪ. ಅಜೂರ್)
ಸರಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಕೈ ಅ)

DIPR/DDMYS-20/KSMCA-54/2024-25

ಕರ್ನಾಟಕ ಸರ್ಕಾರ
ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಹಾಸನ ಜಿಲ್ಲೆ
ಸಂಖ್ಯೆ: ಡಿಒಎಂ/ಹೊ.ಸಂ.ನೇ/ಸಿಆರ್–15/2024–25 ದಿನಾಂಕ: 10.06.2024

ಪ್ರಕಟಣೆ

ಹಾಸನ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ನಿರ್ವಹಿಸಲಾಗುತ್ತಿರುವ ವಿದ್ಯಾರ್ಥಿನಿಲಯಗಳು/ ವಸತಿ ಶಾಲೆಗಳು/ ಕಾಲೇಜು ಹಾಗೂ ಜಿಲ್ಲಾ ಕಛೇರಿ/ತಾಲ್ಲೂಕು ಮಾಹಿತಿ ಕೇಂದ್ರಗಳಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳಿಗೆ ಹೊರ ಸಂಪನ್ಮೂಲ ಏಜೆನ್ಸಿಯಿಂದ ಮಾನವ ಸೇವೆಯನ್ನು 2024–25 ನೇ ಸಾಲಿಗೆ ತಾತ್ಕಾಲಿಕವಾಗಿ ಪಡೆಯುವ ಸಲುವಾಗಿ ಟೆಂಡರ್‌ಅನ್ನು Online System (https://kppp.karnataka.gov.in) ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಮರು ಟೆಂಡರ್ ಆಹ್ವಾನಿಸಲಾಗಿದೆ. 1)ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ ರೂ.247.93 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ.3.71 ಲಕ್ಷಗಳು, 2)ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ:11–06–2024. 3)ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಹ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:10/07/2024. ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಆಕಾಶವಾಣಿ ಹಿಂಭಾಗ, ಹಾಸನ (ದೂರವಾಣಿ ಸಂಖ್ಯೆ:08712–267373) ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– (ಪ್ರದೀಪ್ ಸಿಂಹ.ಎಂ) ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಸನ ಜಿಲ್ಲೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/35/ಕೆಎಸ್‌ಎಂಸಿಎ/2024–25

ಕರ್ನಾಟಕ ಸರ್ಕಾರ
ತೋಟಗಾರಿಕೆ ಇಲಾಖೆ
ತೋಟಗಾರಿಕೆ ಉಪನಿರ್ದೇಶಕರ ಕಛೇರಿ,(ಜಿಪಂ) ಬೆಂಗಳೂರು ನಗರ ಜಿಲ್ಲೆ
ಸಂ:ತೋಉನಿ/ಜಿಪಂ/ಬೆಂನ/ವಿನಿ–1/02/2024–25/26 ದಿನಾಂಕ : 10.06.2024

ಟೆಂಡರ್ ಪ್ರಕಟಣೆ

ವಿಷಯ: ಈ ಕಛೇರಿಗೆ ಹಾಗೂ ಅಧೀನದಲ್ಲಿ ಬರುವ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಆನೇಕಲ್, ಕೆಂಗೇರಿ, ಯಲಹಂಕ ರವರು ಕಛೇರಿಗಳಿಗೆ 2024–25ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಬೆರಳಚ್ಚುಗಾರರು ಸೇವೆಯನ್ನು ಒದಗಿಸಲು ಇ–ಟೆಂಡರ್ ಪ್ರಕಟಣೆಯನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಬಗ್ಗೆ.

ಈ ಕಛೇರಿಗೆ ಹಾಗೂ ಅಧೀನದಲ್ಲಿ ಬರುವ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿ.ಪಂ) ಆನೇಕಲ್, ಕೆಂಗೇರಿ, ಯಲಹಂಕ ರವರು ಕಛೇರಿಗಳಿಗೆ 2024–25 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಬೆರಳಚ್ಚುಗಾರರು ಸೇವೆಯನ್ನು ಈ ಕಛೇರಿಗಳಿಗೆ ಅವಶ್ಯವಿರುವ ಸಿಬ್ಬಂಧಿಗಳನ್ನು ಪೂರೈಸಲು ಹೊರ ಸಂಪನ್ಮೂಲಗಳಿಂದ ಸೇವೆಯನ್ನು ಪಡೆಯಲು ಉದ್ದೇಶಿಸಲಾಗಿದೆ. ಅದರಂತೆ ಅರ್ಹ ಮತ್ತು ಅನುಭವ ಹೊಂದಿದ ಹಾಗೂ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಮಾನವ ಸಂಪನ್ಮೂಲ ಏಜೆನ್ಸಿ, ಹೊರಗುತ್ತಿಗೆದಾರ ವ್ಯಕ್ತಿ/ಸಂಸ್ಥೆಗಳಿಂದ **E-procurement portal**ನಲ್ಲಿ ಇ– ಟೆಂಡರ್ ಅನ್ನು **ಜುಲೈ–2024 ರಿಂದ ಜೂನ್–2025** ರವರೆಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಅರ್ಜಿ ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಅರ್ಹ ವ್ಯಕ್ತಿ/ಸಂಸ್ಥೆಗಳ ಟೆಂಡರ್ ಅರ್ಜಿಗಳನ್ನು ಕಛೇರಿ ಸಮಯದಲ್ಲಿ ಪಡೆಯಬಹುದಾಗಿದೆ. (ಹೆಚ್ಚಿನ ವಿವರಗಳನ್ನು **www.e-proc.kar.in** ವಿಳಾಸದಲ್ಲಿ ಪಡೆಯಬಹುದು). (1) ಅರ್ಜಿಗಳನ್ನು ಸಲ್ಲಿಸುವ ಪ್ರಾರಂಭಿಕ ದಿನಾಂಕ : **10–06–2024, (2)** ಅರ್ಜಿಗಳನ್ನು ಸಲ್ಲಿಸುವ ಅಂತಿಮ ದಿನಾಂಕ : **21–06–2024, (3)** ಟೆಂಡರ್ ತೆರೆಯುವ ದಿನಾಂಕ : **24–06–2024, ಸಂಜೆ : 3.00 ಗಂಟೆ, (4)** ಟೆಂಡರ್ ತೆರೆಯುವ ಸ್ಥಳ : **ತೋಟಗಾರಿಕೆ ಉಪನಿರ್ದೇಶಕರ ಕಛೇರಿ (ಜಿಪಂ) ಬೆಂಗಳೂರು ನಗರ ಜಿಲ್ಲೆ, ಕಬ್ಬನ್ ಪಾರ್ಕ್.**

ಸಹಿ/–
ತೋಟಗಾರಿಕೆ ನಿರ್ದೇಶಕರು,
(ಜಿಪಂ) ಬೆಂಗಳೂರು ನಗರ ಜಿಲ್ಲೆ

ವಾಸಾಸಂಇ/ವಾಪ್ರ./283/ಶಿರಡಿ ಸಾಯಿ/2024–25

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇಂಜಿನಿಯರಿಂಗ್ ವಿಭಾಗ
ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಆಕುಕ ಇಂಜಿನಿಯರಿಂಗ್ ವಿಭಾಗ,
ಎನ್.ಪಿ.ಸಿ.ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು – 10.
(E-mail:-khsdrp.divmys@gmail.com)
ಸಂಖ್ಯೆ: ಆಕುಕ/ಇಂ.ವಿ./ಕಾ.ಅ/ಮೈ/ಸಇ–3&4/ಟೆಂಡರ್–24(3ನೇ ಕರೆ), 27(2ನೇ ಕರೆ) &29(3ನೇ ಕರೆ)/2024–25 ದಿನಾಂಕ: 05.06.2024.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜಿನಿಯರಿಂಗ್ ವಿಭಾಗ, ಮೈಸೂರು ವ್ಯಾಪ್ತಿಗೆ ಒಳಪಡುವ ಮೈಸೂರು, ಚಾಮರಾಜನಗರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತಾಲ್ಲೂಕು ಮಟ್ಟದ ಆಸ್ಪತ್ರೆ/ಸಮುದಾಯ ಆರೋಗ್ಯ ಕೇಂದ್ರ/ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ದುರಸ್ಥಿ ಮತ್ತು ನವೀಕರಣ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲಾದ ನಾಲ್ಕನೇ ದರ್ಜೆ & ಮೂರನೇ ದರ್ಜೆ ಮತ್ತು ಮೇಲ್ಪಟ್ಟ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಟೆಂಡರ್‌ನ 2ನೇ ಹಾಗೂ 3ನೇ ಕರೆಯನ್ನು ಆಹ್ವಾನಿಸಲಾಗಿದೆ.

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ ಮತ್ತು ಇತರೆ ವಿವರಗಳು: 1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 19.06.2024 ಸಂಜೆ 16.00 ಘಂಟೆಯ ವರೆಗೆ. 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 20.06.2024 ಸಂಜೆ 16.10 ಘಂಟೆಯವರೆಗೆ.

ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ (Through KPPP) https://kppp. karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸೂಚನೆ: ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯನ್ನು ಮುಂದೂಡುವ/ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಆಕುಕ ಇಂಜಿನಿಯರಿಂಗ್ ವಿಭಾಗ, ಮೈಸೂರು.

DIPR/DDMYS-62/KSMCA-51/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರವರ ಕಛೇರಿ, ಬೊಮ್ಮನಹಳ್ಳಿ ವಿಭಾಗ,
ಬೇಗೂರು ಮುಖ್ಯರಸ್ತೆ, ಬೊಮ್ಮನಹಳ್ಳಿ, ಬೆಂಗಳೂರು–560068.
ಸಂಖ್ಯೆ:ಬೃಬೆಂಮಪಾ/ಕಾಪಾಅ/ಬೊವಿ/ಟೆಂಡರ್-01/2024-25 ದಿನಾಂಕ: 12-06-2024

ಅಲ್ಪಾವಧಿ ಟೆಂಡರ್‌ಗೆ ಆಹ್ವಾನ (ಐಎಫ್‌ಟಿ) 2ನೇ ಕರೆ
ಕೆಡಬ್ಲ್ಯೂ: 2 ಮತ್ತು 3 (ಏಕ ಮತ್ತು ದ್ವಿ ಲಕೋಟೆ ಪದ್ದತಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ವೆಬ್‌ಸೈಟ್ **https://kppp.karnataka.gov.in** ಮೂಲಕ ಮಾತ್ರ.
ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಬಿ.ಬಿ.ಎಂ.ಪಿ / ಕೆ.ಪಿ.ಡಬ್ಲ್ಯೂ.ಡಿ / ಸಿ.ಪಿ.ಡಬ್ಲ್ಯೂ.ಡಿ / ಬಿಡಬ್ಲ್ಯೂಎಸ್‌ಎಸ್‌ಬಿ / ರೈಲ್ವೆ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಇತರೆ ಯಾವುದೇ ರಾಜ್ಯ ಸಂಸ್ಥೆಗಳಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು / ವರ್ಗ	ಟೆಂಡರ್‌ನ ಅಂದಾಜು ಮೊತ್ತ (ಲಕ್ಷರೂ.ಗಳಲ್ಲಿ)	ಇಎಂಡಿ ಮೊತ್ತ (ರೂ.ಗಳಲ್ಲಿ)
1.	ವಾರ್ಡ್ ನಂ.213ರ ಜರಗನಹಳ್ಳಿಯಲ್ಲಿ ರಸ್ತೆ, ಒಳಚರಂಡಿ ಮತ್ತು ಫುಟ್‌ಪಾತ್‌ಗಳ ನಿರ್ವಹಣಾ ಕಾಮಗಾರಿ. (ಪರಿಶಿಷ್ಟ ಪಂಗಡ)	55.00	55,000/–
2.	ವಾರ್ಡ್ ನಂ.216ರ ಹುಳಿಮಾವಿನಲ್ಲಿ ರಸ್ತೆ, ಒಳಚರಂಡಿ ಮತ್ತು ಫುಟ್‌ಪಾತ್‌ಗಳ ನಿರ್ವಹಣಾ ಕಾಮಗಾರಿ. (ಇತರೆ)	55.00	1,10,000/–
3.	ವಾರ್ಡ್ ನಂ.218ರ ಬೊಮ್ಮನಹಳ್ಳಿ (ಬ್ಲಾಕ್ ನಂ.91), ಎನ್‌ಜಿಆರ್ ಲೇಔಟ್ ಹಾಗೂ ರೂಪೇನ ಅಗ್ರಹಾರಗಳಲ್ಲಿ ಸುಧಾರಣಾ ಕಾಮಗಾರಿಗಳು. (ಪರಿಶಿಷ್ಟ ಪಂಗಡ)	12.68	15,850/–

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್‌ನಿಂದ **ದಿನಾಂಕ: 15–06–2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2.** ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: **27–06–2024 ಸಂಜೆ 4:00 ಗಂಟೆಗೆ ಅಥವಾ ಅದಕ್ಕೂ ಮುಂಚಿತವಾಗಿ. 3.** ಪೂರ್ವ ಬಿಡ್ ಸಭೆಯ **ದಿನಾಂಕ: 18–06–2024ರ ಬೆಳಗ್ಗೆ 11:00 ಗಂಟೆಗೆ. 4.** ತಾಂತ್ರಿಕ / ಆರ್ಥಿಕ ಬಿಡ್‌ಗಳನ್ನು ತೆರೆಯುವ **ದಿನಾಂಕ: 28–06–2024ರ ಸಂಜೆ 4:30 ಗಂಟೆಯ ನಂತರ. 5.** ಈ ಟೆಂಡರ್ ಸೂಚನೆಯನ್ನು ಬಿ.ಬಿ.ಎಂ.ಪಿ ವೆಬ್‌ಸೈಟ್ **www.bbmp.gov.in** ನಲ್ಲಿಯೂ ನೋಡಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬೊಮ್ಮನಹಳ್ಳಿ ವಿಭಾಗ, ಬೃಬೆಂಮಪಾ.

ಸಮಾಚಾರ ಸಣ್ಣದಲ್ಲ

ಜಿ-7 ಶೃಂಗ: ಮೋದಿ ಇಟಲಿಗೆ ಪ್ರಯಾಣ

ದೆಹಲಿ: ಜಿ-7 ಶೃಂಗ ಸಭೆಯಲ್ಲಿ ಪಾಲ್ಗೊಳ್ಳಲು ಪ್ರಧಾನಿ ನರೇಂದ್ರ ಮೋದಿ ಗುರುವಾರ ಇಟಲಿಗೆ ತೆರಳಲಿದ್ದಾರೆ. 3ನೇ ಬಾರಿಗೆ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಇದು ಮೋದಿ ಅವರು ಮೊದಲ ಸಾಗರೋತ್ತರ ಪ್ರಯಾಣ. 50ನೇ ಜಿ-7 ಶೃಂಗಸಭೆ ಇದೇ 14ರಂದು ಇಟಲಿಯ ಅಪುಲಿಯಾದಲ್ಲಿ ನಡೆಯಲಿದೆ. ಇಟಲಿ ಪ್ರಧಾನಿ ಆಹ್ವಾನದ ಮೇರೆಗೆ ಪ್ರಧಾನಿ ಮೋದಿ ಭೇಟಿ ನೀಡುತ್ತಿದ್ದಾರೆ. ಇತರೆ ವಿಶ್ವ ನಾಯಕರ ಜತೆ ಶೃಂಗದಲ್ಲಿ ಭಾರತದ ಪ್ರಮುಖ ವಿಷಯಗಳನ್ನು ಹಂಚಿಕೊಳ್ಳಲು ಮೋದಿ ಅವರಿಗೆ ಅವಕಾಶವಾಗುತ್ತದೆ ಎಂದು ವಿದೇಶಾಂಗ ಕಾರ್ಯದರ್ಶಿ ವಿನಯ್ ಮೋಹನ್ ಕ್ವಾತ್ರಾ ಮಾಹಿತಿ ನೀಡಿದ್ದಾರೆ.

ರಾಯ್‌ಬರೇಲಿ ವಯನಾಡು: ರಾಹುಲ್‌ಗೆ ಸಂದಿಗ್ಧ

ಮಲಪ್ಪುರಂ: 2024ರ ಸಾರ್ವತ್ರಿಕ ಚುನಾವಣೆಯಲ್ಲಿ 2 ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಎರಡರಲ್ಲೂ ಜಯ ಕಂಡ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೀಗ ದೊಡ್ಡ ಸಂದಿಗ್ಧ ಎದುರಾಗಿದೆ. ಕೇರಳದ

ವಯನಾಡ್ ಮತ್ತು ಉತ್ತರ ಪ್ರದೇಶದ ರಾಯ್ ಬರೇಲಿ, ಯಾವು ಲೋಕಸಭಾ ಕ್ಷೇತ್ರ ಉಳಿಸಿಕೊಳ್ಳಬೇಕು, ಯಾವುದಕ್ಕೆ ರಾಜೀನಾಮೆ ಎಂಬ ಭಾರೀ ಸಂದಿಗ್ಧ ಎದುರಾಗಿದೆ ಎಂದು ರಾಹುಲ್ ಅಲವತ್ತುಕೊಂಡಿದ್ದಾರೆ. ನಾನು ಯಾವ ನಿರ್ಧಾರ ಕೈಗೊಂಡರೂ ಎರಡೂ ಕ್ಷೇತ್ರದ ಜನತೆ ಬೇಸರಗೊಳ್ಳುವುದಿಲ್ಲ ಎಂಬ ವಿಶ್ವಾಸವಿದೆ ಎಂದಿದ್ದಾರೆ. ಸತತ 2ನೇ ಬಾರಿಗೆ ವಯನಾಡ್ ಕ್ಷೇತ್ರದಲ್ಲಿ ಸ್ಪರ್ಧಿಸಿ ಭಾರೀ ಅಂತರದಿಂದ ಗೆದ್ದ ನಂತರ ಕೇರಳಕ್ಕೆ ಬುಧವಾರ ಮೊದಲ ಭೇಟಿ ನೀಡಿದ್ದಾರೆ. 2ನೇ ಬಾರಿಯೂ ಆಯ್ಕೆ ಮಾಡಿದ್ದಕ್ಕೆ ವಯನಾಡ್ ಜನತೆಗೆ ರಾಹುಲ್ ಧನ್ಯವಾದ ಅರ್ಪಿಸಿದರು.

ತಮಿಳ್‌ಸಾಯಿಗೆ ಗದರಿದ ಅಮಿತ್ ಶಾ!

ವಿಜಯವಾಡ: ಆಂಧ್ರಪ್ರದೇಶದ ನೂತನ ಮುಖ್ಯಮಂತ್ರಿಯಾಗಿ ನಾರಾ ಚಂದ್ರಬಾಬು ನಾಯ್ಡು ಪ್ರಮಾಣ ವಚನ ಸ್ವೀಕರಿಸುವ ಬುಧವಾರದ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್

ಶಾ ಅವರು ತೆಲಂಗಾಣದ ಮಾಜಿ ರಾಜ್ಯಪಾಲರಾದ ಬಿಜೆಪಿ ನಾಯಕಿ ತಮಿಳ್‌ಸಾಯಿ ಅವರಿಗೆ ವೇದಿಕೆ ಯಲ್ಲೇ ಗದರಿದ್ದಾರೆ. ಇದಕ್ಕೆ ಶಾ ಮಗ್ಗಲಲ್ಲೇ ಕುಳಿತಿದ್ದ ಮಾಜಿ ಉಪ ರಾಷ್ಟ್ರಪತಿ ವೆಂಕಯ್ಯನಾಯ್ಡು ಅವರೇ ಸಾಕ್ಷಿಯಾಗಿದ್ದಾರೆ. ಪ್ರಮಾಣ ವಚನ ಸ್ವೀಕಾರ ಸಮಾರಂಭದ ವೇದಿಕೆ ಯಲ್ಲಿದ್ದವರನ್ನು ತಮಿಳ್‌ಸಾಯಿ ಮಾತನಾಡಿಸುತ್ತಾ ಬಂದರು. ಆಗ ಅಮಿತ್ ಶಾ ಅವರು ತಮಿಳ್‌ಸಾಯಿ ಅವರನ್ನು ಹತ್ತಿರ ಕರೆದು ಕಟ್ಟುನಿಟ್ಟಿನ ಸೂಚನೆ ನೀಡುವಂತೆ ಮಾತನಾಡಿದ್ದಾರೆ. ಈ ದೃಶ್ಯದ ವಿಡಿಯೊ ವೈರಲ್ ಆಗಿದ್ದು, ತಮಿಳುನಾಡು ರಾಜಕೀಯದಲ್ಲಿ ಭಾರೀ ಚರ್ಚೆಗೆ ಕಾರಣವಾಗಿದೆ. ತಮಿಳುನಾಡು ಬಿಜೆಪಿ ರಾಜ್ಯಾಧ್ಯಕ್ಷ ಅಣ್ಣಾಮಲೈ ಅವರ ವಿರುದ್ಧ ತಮಿಳ್‌ಸಾಯಿ ಅವರು ನೀಡಿದ ಹೇಳಿಕೆಯೇ ಶಾ ಸಿಟ್ಟಾಗಲು ಕಾರಣ ಎನ್ನಲಾಗಿದೆ.

2025ಕ್ಕೆ ಬಯಲು ಶೌಚ ಮುಕ್ತ ಭಾರತ: ಸೋಮಣ್ಣ

ದೆಹಲಿ: ಕೇಂದ್ರದ ಜಲಶಕ್ತಿ ಸಚಿವಾಲಯದಲ್ಲಿ ಜಲಶಕ್ತಿ ಖಾತೆ ಸಹಾಯಕ ಸಚಿವರಾಗಿ ಕರ್ನಾಟಕದ ವಿ.ಸೋಮಣ್ಣ ಬುಧವಾರ ಅಧಿಕಾರ ಸ್ವೀಕರಿಸಿದರು.



ಜಲಶಕ್ತಿ ಸಂಪುಟ ದರ್ಜೆ ಸಚಿವ ಸಿ.ಆರ್. ಪಾಟೀಲ್ ಅವರು ಈ ಸಂದರ್ಭ ಹಾಜರಿದ್ದರು. ಬಳಿಕ ಸುದ್ದಿಗೋಷ್ಠಿ ನಡೆಸಿದ ಸೋಮಣ್ಣ, ಜಲಜೀವನ್ ಮಿಷನ್ ನಡಿ ಕೊಳವೆ ಮೂಲಕ ನೇರ ಮನೆಗೇ ಶುದ್ಧ ನೀರು ಪೂರೈಕೆ ಯೋಜನೆಯಡಿ ಕಳೆದ 5 ವರ್ಷಗಳಲ್ಲಿ 11 ಕೋಟಿಗೂ ಹೆಚ್ಚು ಗ್ರಾಮೀಣ ಕುಟುಂಬಗಳ ಪ್ರಯೋಜನ ಪಡೆದಿವೆ. ಪ್ರಸ್ತುತ ಶೇ.76ಕ್ಕಿಂತ ಹೆಚ್ಚಿನ ಗ್ರಾಮೀಣ ಕುಟುಂಬಗಳ ಪ್ರತಿ ವ್ಯಕ್ತಿಗೆ 55 ಲೀ. ಶುದ್ಧ ನೀರು ಒದಗಿಸಲಾಗುತ್ತಿದೆ. ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ್) ಅನ್ವಯ ಭಾರತದ ಶೇ.93ಕ್ಕಿಂತ ಹೆಚ್ಚಿನ ಹಳ್ಳಿಗಳನ್ನು ಬಯಲುಶೌಚ ಮುಕ್ತ ಮಾಡಲಾಗಿದೆ. 2025ರ ಮಾರ್ಚ್ ವೇಳೆಗೆ ದೇಶದ ಎಲ್ಲಾ ಹಳ್ಳಿಗಳನ್ನೂ ಬಯಲುಶೌಚ ಮುಕ್ತ ಮಾಡಲು ಶ್ರಮಿಸುತ್ತೇವೆ ಎಂದು ಹೇಳಿದರು.

300 ಕೋಟಿ ಆಸ್ತಿಗಾಗಿ ಮಾವ ಹತ್ಯೆ; ಸೊಸೆ ಸೆರೆ

ನಾಗಪುರ: ಮಹಾರಾಷ್ಟ್ರದ ನಾಗಪುರದಲ್ಲಿ ಸಂಭವಿಸಿದ್ದ ಹಿಟ್ ಅಂಡ್ ರನ್ ಅಪಘಾತ ಪ್ರಕರಣದಲ್ಲಿ ಕೊಲೆ ಸಂಚು ಇರುವುದನ್ನು ಪತ್ತೆ ಹಚ್ಚಿದ ಪೊಲೀಸರು, 300 ಕೋಟಿ ರು. ಆಸ್ತಿಗಾಗಿ 1 ಕೋಟಿ ರು. ಸುಪಾರಿ ನೀಡಿ ಮಾವನನ್ನೇ ಕೊಲ್ಲಿಸಿದ ಸೊಸೆಯನ್ನು ಬಂಧಿಸಿದ್ದಾರೆ. ಸೊಸೆ ಸಾಮಾನ್ಯಳೇನೂ ಅಲ್ಲ, ಮಹಾರಾಷ್ಟ್ರ ನಗರ ಯೋಜನಾ ಇಲಾಖೆ ಸಹಾಯಕ ನಿರ್ದೇಶಕಿ 53 ವರ್ಷದ ಅರ್ಚನಾ ಮನೀಷ್ ಪುಟ್ಟೇವಾರ್. ಈಕೆಯ ಮಾವ ಪುರುಷೋತ್ತಮ್ ಪುಟ್ಟೇವಾರ್ ಕಾರು ಡಿಕ್ಕಿ ಹೊಡೆದು ಸಾವಿಗೀಡಾಗಿದ್ದರು. ಆರಂಭದಲ್ಲಿ ಪೊಲೀಸರು ಹಿಟ್ ಅಂಡ್ ರನ್ ಪ್ರಕರಣ ದಾಖಲಿಸಿದ್ದರು. ತನಿಖೆ ಆಳಕ್ಕೆ ಇಳಿದಾಗ ಇದು ಸುಪಾರಿ ಕೊಟ್ಟು ಮಾಡಿಸಿದ ಕೊಲೆ ಎಂಬುದು ದೃಢಪಟ್ಟಿತು.

ಪೊಲೀಸ್ ಅಧಿಕಾರಿ, 4 ಯೋಧರಿಗೆ ಗಾಯ | ಮೊದಲು ರಿಯಾಸಿ, ಈಗ ಕತುವಾ, ದೋಡಾ | ಒಂದೆಡೆ 3 ಉಗ್ರರ ಕೊಂದ ಭದ್ರತಾಪಡೆ

3 ದಿನದಲ್ಲಿ 3 ಉಗ್ರ ದಾಳಿ; ಸಿಆರ್‌ಪಿಎಫ್ ಯೋಧ ಹುತಾತ್ಮ

ಶ್ರೀನಗರ: ಭಯೋತ್ಪಾದನೆ ಚಟುವಟಿಕೆ ಬಹುತೇಕ ಇಲ್ಲವಾಗಿದ್ದ ಜಮ್ಮು-ಕಾಶ್ಮೀರದಲ್ಲಿ ಬುಧವಾರ ಮುಂಜಾನೆಗೂ ಮೊದಲಿನ 72 ಗಂಟೆಗಳಲ್ಲಿ ಒಟ್ಟು 3 ಭಯೋತ್ಪಾದಕ ದಾಳಿ ನಡೆದಿವೆ. ಮೊದಲ ದಾಳಿ ಭಾನುವಾರ ರಿಯಾಸಿಯಲ್ಲಿ, ಉಳಿದೆರಡು ದಾಳಿ ಕತುವಾ ಮತ್ತು ದೋಡಾ ಜಿಲ್ಲೆಗಳಲ್ಲಿ ಮಂಗಳವಾರ ನಡೆದಿವೆ.

ಕತುವಾದಲ್ಲಿನ ಉಗ್ರ ದಾಳಿಯಲ್ಲಿ ಒಬ್ಬರು ಸಿಆರ್‌ಪಿಎಫ್ ಯೋಧ ಹುತಾತ್ಮರಾಗಿದ್ದರೆ, ದೋಡಾ ಜಿಲ್ಲೆಯಲ್ಲಿನ ಉಗ್ರ ದಾಳಿಯಲ್ಲಿ ವಿಶೇಷ ಪೊಲೀಸ್ ಅಧಿಕಾರಿ ಸೇರಿ ಐವರು ಸೇನಾ ಸಿಬ್ಬಂದಿ ಗಾಯಗೊಂಡಿದ್ದಾರೆ.

ರಿಯಾಸಿಯಲ್ಲಿ ಹಿಂದೂ ಯಾತ್ರಿಕರಿದ್ದ ಬಸ್ ಮೇಲೆ ಪಾಕ್ ಮೂಲದ ಭಯೋತ್ಪಾದಕರು ದಾಳಿ ನಡೆಸಿದ್ದು, 2 ವರ್ಷದ ಮಗು ಸೇರಿದಂತೆ 10 ಯಾತ್ರಿಕರು ಸಾವಿಗೀಡಾದರು. ಮಂಗಳವಾರ ರಾತ್ರಿ ಕತುವಾ ಪ್ರದೇಶದ ಸೈದಾ ಸುಖಾಲ್ ಗ್ರಾಮದಲ್ಲಿ ಉಗ್ರರು ಗುಂಡಿನ ದಾಳಿ ನಡೆಸಿದ್ದು, ತಕ್ಷಣವೇ ಪ್ರತಿ ದಾಳಿ ಸಂಘಟಿಸಿದ ಭದ್ರತಾ ಪಡೆಗಳು, 3 ಉಗ್ರರನ್ನು ಹೊಡೆದುರುಳಿಸಿವೆ.

ದೋಡಾ ಜಿಲ್ಲೆಯ ಭದರ್‌ವಾಹ್-ಪಠಾಣ್ ಕೋಟ್ ರಸ್ತೆಯಲ್ಲಿರುವ ಛತ್ತರ್‌ಗಲಾ ಪ್ರದೇಶದ ಸೇನಾ ನೆಲೆಯಲ್ಲಿರುವ ಪೊಲೀಸ್ ಮತ್ತು ರಾಷ್ಟ್ರೀಯ ರೈಫಲ್ಸ್‌ನ ಚೆಕ್‌ಪೋಸ್ಟ್ ಮೇಲೆಯೇ ಭಯೋತ್ಪಾದಕರು ಗುಂಡಿನ ದಾಳಿ ನಡೆಸಿದ್ದಾರೆ. ಈ ದಾಳಿಯಲ್ಲಿ ಉಪ ವಿಭಾಗೀಯ ವಿಶೇಷ ಪೊಲೀಸ್ ಅಧಿಕಾರಿ ಮತ್ತು ಐವರು ಪೊಲೀಸ್ ಸಿಬ್ಬಂದಿ ಗಾಯಗೊಂಡಿದ್ದಾರೆ. ಬಳಿಕ ಛತ್ತರ್‌ಗಲಾಕ್ಕೆ ಜಮ್ಮು-ಕಾಶ್ಮೀರ ಪೊಲೀಸ್ ಮತ್ತು ರಾಷ್ಟ್ರೀಯ ರೈಫಲ್ಸ್ ಪಡೆ ದಾವಿಸಿ ಜಂಟಿ ಕಾರ್ಯಾಚರಣೆ ಆರಂಭಿಸಿದ್ದು, ಅಡಗಿರುವ ಉಗ್ರರಿಗಾಗಿ ಶೋಧ ನಡೆಸುತ್ತಿವೆ.

ಕತುವಾ ಪ್ರದೇಶದಲ್ಲಿನ ಉಗ್ರರ ದಾಳಿಗೆ ಭದ್ರತಾ ಪಡೆ ಯೋಧರು ತಕ್ಕ ಪ್ರತ್ಯುತ್ತರ ನೀಡಿ ಇಬ್ಬರು ಉಗ್ರರನ್ನ ಹೊಡೆದುರುಳಿಸಿದ್ದಾರೆ. ಇದೇ ವೇಳೆ, ರಿಯಾಸಿ ದಾಳಿಗೆ ಕಾರಣವಾದ ಭಯೋತ್ಪಾದಕರಿಗಾಗಿ ಬಳಿಯ ಅರಣ್ಯಗಳಲ್ಲಿ ಭದ್ರತಾ ಪಡೆ ಸಿಬ್ಬಂದಿ ಶೋಧ ನಡೆಸಿದ್ದಾರೆ. ಡ್ರೋನ್ ಕ್ಯಾಮೆರಾ ಬಳಸಿ ಅರಣ್ಯದಲ್ಲಿ ಅಡಗಿರುವ ಉಗ್ರರ ಶೋಧ ಕಾರ್ಯ ನಡೆದಿದೆ.

ಮನೆಗೆ ಬಂದು ನೀರು ಕೇಳಿದರು: ಕತುವಾದಲ್ಲಿ ದಾಳಿಗೂ ಮುನ್ನ ಉಗ್ರರು ಹಲವು ಮನೆಗಳ ಬಾಗಿಲು ತಟ್ಟಿ ಕುಡಿಯಲು ನೀರು ಕೇಳಿದ್ದಾರೆ. ಅನುಮಾನಗೊಂಡ ಗ್ರಾಮಸ್ಥರು ಭದ್ರತಾ ಪಡೆಗೆ ಮಾಹಿತಿ ನೀಡಿದ್ದಾರೆ. ಸಿಟ್ಟಿಗೆದ್ದ ಉಗ್ರರು ನಾಗರಿಕರ ಮೇಲೆಯೇ ಗುಂಡಿನ ದಾಳಿ ನಡೆಸಿದ್ದಾರೆ. ಘಟನೆಯಲ್ಲಿ ಒಬ್ಬ ನಾಗರಿಕ ಗಾಯಗೊಂಡಿದ್ದಾನೆ. ಸುದ್ದಿ ತಿಳಿದು ತಕ್ಷಣವೇ ಪೊಲೀಸ್ ತಂಡ ಉಗ್ರರು ಅಡಗಿದ್ದ ಹೀರಾನಗರ್ ಸೆಕ್ಟಾರ್‌ನ ಕೂಟಾ ಮೋಡ್ ಪ್ರದೇಶದ ಬಳಿಯ ಗ್ರಾಮಕ್ಕೆ ಧಾವಿಸಿದೆ. ಈ ಸಂದರ್ಭ ಒಬ್ಬ ಉಗ್ರ ತಪ್ಪಿಸಿಕೊಳ್ಳುವ ಯತ್ನದಲ್ಲಿ ಪೊಲೀಸರತ್ತ ಗ್ರನೇಡ್ ದಾಳಿ ನಡೆಸಿದ್ದಾನೆ. ಪ್ರತಿಯಾಗಿ ಗುಂಡು ಹಾರಿಸಿದ ಪೊಲೀಸರು ಒಬ್ಬ ಉಗ್ರನನ್ನು ಸಾಯಿಸಿದ್ದಾರೆ.

ಮತ್ತೊಬ್ಬ ಉಗ್ರ ಅಡಗಿಕೊಂಡಿದ್ದು, ಆತನಿಗಾಗಿ ರಾತ್ರಿಯಿಡೀ ಶೋಧ ನಡೆಸಿ ಕೊಲ್ಲಲಾಗಿದೆ. ಮೃತ ಉಗ್ರರ ಬಳಿಯಿದ್ದ ಎಕೆ ರೈಫಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಉಗ್ರರ ಗುರುತು ಮತ್ತು ಯಾವ ಗುಂಪಿಗೆ ಸೇರಿದವನು ಎಂಬುದನ್ನು ಕಂಡುಕೊಳ್ಳಲು ಗುರುತು ಪತ್ತೆ ಯತ್ನ ನಡೆಸಲಾಗುತ್ತಿದೆ ಎಂದು ವರದಿಯಾಗಿದೆ.

ಪ್ರಜಾತಂತ್ರ ಹಳಿ ತಪ್ಪಿಸಲು ಉಗ್ರರ ಹುನ್ನಾರ

2014ರಲ್ಲಿ ನರೇಂದ್ರ ಮೋದಿ ಅವರ ಸರಕಾರ ರಚನೆಯಾದ ಬಳಿಕ ಕಾಶ್ಮೀರದಲ್ಲಿ ಅಭಿವೃದ್ಧಿ ಪರ್ವ ಶುರುವಾಗಿತ್ತು. ವಿಧಿ 370 ರದ್ದುಗೊಳಿಸಿ, ರಾಜ್ಯವನ್ನು 2 ಕೇಂದ್ರಾಡಳಿತ ಪ್ರದೇಶಗಳಾಗಿ ವಿಂಗಡಿಸಲಾಯಿತು. ಜಿ-20 ಸಮಾವೇಶ ಸೇರಿದಂತೆ ಅಂತಾರಾಷ್ಟ್ರೀಯ ಮಟ್ಟದ ಹಲವು ಕಾರ್ಯಕ್ರಮಗಳನ್ನೂ ಹಮ್ಮಿಕೊಂಡು ಪ್ರವಾಸೋದ್ಯಮ ಚೇತರಿಸಿಕೊಳ್ಳುವಂತೆ ಮಾಡಲಾಗಿತ್ತು. ಇದೆಲ್ಲಾ ಬೆಳವಣಿಗೆ ಕಾಶ್ಮೀರ ನಾಗರಿಕರಲ್ಲಿ ವಿಶ್ವಾಸ ಮೂಡಿಸಿತ್ತು. ಲೋಕಸಭೆ ಚುನಾವಣೆಯಲ್ಲಿ ದಾಖಲೆ ಪ್ರಮಾಣದಲ್ಲಿ ಮತದಾನದಲ್ಲಿ ಪಾಲ್ಗೊಳ್ಳುವ ಮೂಲಕ ಕಾಶ್ಮೀರ ಜನತೆ ಅಭಿವೃದ್ಧಿ ಶಕೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಬದಲಾವಣೆಯನ್ನು ಬರಮಾಡಿಕೊಂಡಿದ್ದರು. ಪರಿಣಾಮವಾಗಿ ಭಯೋತ್ಪಾದಕ ಚಟುವಟಿಕೆಗಳು ಬಹುತೇಕ ಇಲ್ಲವಾಗಿದ್ದವು. ಈಗ ಪ್ರಧಾನಿ ಮೋದಿ ಅವರು 3ನೇ ಅವಧಿಯ ಪ್ರಮಾಣ ವಚನ ಸ್ವೀಕರಿಸುವ ದಿನವೇ ರಿಯಾಸಿಯಲ್ಲಿ ಯಾತ್ರಿಕರ ಬಸ್ ಮೇಲೆ ದಾಳಿ ಮಾಡಿದ ಉಗ್ರರು, ಬೇರೆಯದೇ ಸಂದೇಶ ನೀಡಿದ್ದಾರೆ. ಸರಣಿ ಉಗ್ರ ದಾಳಿಗೆ ಭಾರತದಾದ್ಯಂತ ಆಕ್ರೋಶ ವ್ಯಕ್ತವಾಗುತ್ತಿದ್ದು, ಪಾಕ್ ಪ್ರಾಯೋಜಿತ ಭಯೋತ್ಪಾದನೆ ಮಟ್ಟ ಹಾಕಬೇಕೆಂಬ ಒತ್ತಾಯವೂ ಕೇಳಿಬರುತ್ತಿದೆ.

ರಿಯಾಸಿ ದಾಳಿ ಉಗ್ರನ ರೇಖಾಚಿತ್ರ ಬಿಡುಗಡೆ

ರಿಯಾಸಿಯ ಶಿವಖೋರಿ ದೇಗುಲದಿಂದ ವಾಪಸಾಗುತ್ತಿದ್ದ ಯಾತ್ರಾರ್ಥಿಗಳ ಬಸ್ ಮೇಲೆ ಗುಂಡಿನ ದಾಳಿ ನಡೆಸಿ 10 ಜನರನ್ನು ಉಗ್ರರು ಕೊಂದಿದ್ದರು. ಕೃತ್ಯದಲ್ಲಿ ಭಾಗಿಯಾಗಿದ್ದ ಒಬ್ಬ ಉಗ್ರನ ರೇಖಾಚಿತ್ರವನ್ನು ಕಲಾವಿದರಿಂದ ರಚಿಸಿದ ಬಿಡುಗಡೆ ಮಾಡಲಾಗಿದೆ. ಉಗ್ರನ ಸುಳಿವು ನೀಡಿದವರಿಗೆ 20 ಲಕ್ಷ ರು. ಬಹುಮಾನ ಘೋಷಿಸಲಾಗಿದೆ. ಲಷ್ಕರ್-ಎ-ತಯ್ಯಬಾ ಕಮಾಂಡರ್ ಅಬು ಹಮ್ಜಾ ನಿರ್ದೇಶನದಡಿ ರಿಯಾಸಿ ದಾಳಿ ನಡೆದಿದೆ ಎಂದು ಕಾಶ್ಮೀರದ ಭದ್ರತಾಪಡೆ ಅಧಿಕಾರಿಗಳು ತಿಳಿಸಿದ್ದಾರೆ.

ಸಮಯಪ್ರಜ್ಞೆ ಮೆರೆದ ಜಾಗೃತ ಗ್ರಾಮಸ್ಥ!

ಕತುವಾ: ಅಂತಾರಾಷ್ಟ್ರೀಯ ಗಡಿಯ ಬಳಿ ಇರುವ ಕತುವಾ ಜಿಲ್ಲೆಯ ಗ್ರಾಮದ ಮೇಲೆ ಮಂಗಳವಾರ ಸಂಜೆ ಉಗ್ರರು ದಾಳಿ ನಡೆಸಿದಾಗ ಸಿಆರ್ ಪಿಎಫ್ ಯೋಧ ಹುತಾತ್ಮರಾದರು. ಉಗ್ರರ ಗುಂಡಿಗೆ ಒಬ್ಬ ಗ್ರಾಮಸ್ಥ ಗಾಯಗೊಂಡ. ಪಾಕ್ ಉಗ್ರನನ್ನು ಭದ್ರತಾ ಪಡೆ ಹೊಡೆದುರುಳಿಸಿತು. ಇದೇ ವೇಳೆ, ಸಮಯಪ್ರಜ್ಞೆ ಮೆರೆಗೆ ನಾಗರಿಕನೊಬ್ಬ ಗ್ರಾಮದ ಎಲ್ಲಾ ಜನರನ್ನು ಜಾಗೃತಗೊಳಿಸಿ ತಕ್ಷಣ ಸುರಕ್ಷಿತ ತಾಣದಲ್ಲಿ ರಕ್ಷಣೆ ಪಡೆಯಲು ಕಾರಣನಾದ. ಪರಿಣಾಮ, ಉಗ್ರರು ಗ್ರಾಮದ ಮೇಲೆ ದಾಳಿ ಮಾಡಿದಾಗ ಜನರು ಉಗ್ರರ ಕಣ್ಣಿಗೆ ಬಿದ್ದಿದ್ದರೆ ದೊಡ್ಡ ನರಮೇಧವೇ ನಡೆಯುತ್ತಿತ್ತು. ಗ್ರಾಮಸ್ಥನ ಸಮಯಪ್ರಜ್ಞೆ ದೊಡ್ಡ ದುರಂತ ತಪ್ಪಿಸಿದೆ. ಹತ್ತಾರು ಮಕ್ಕಳು ಹೊರಗೆ ಆಟವಾಡುತ್ತಿದ್ದರು, ಬಹಳಷ್ಟು ಜನರು ಹೊರಗೆ ತಿರುಗಾಡುತ್ತಿದ್ದರು. ಆಗ ಗ್ರಾಮದ ಸುರಿಂದರ್ ಮೋಟಾರುಬೈಕ್‌ನಲ್ಲಿ ಗ್ರಾಮಕ್ಕೆ ವಾಪಸಾಗಿ ದ್ದಾರೆ. ಶಸ್ತ್ರಧಾರಿ ಉಗ್ರರು ಸುರಿಂದರ್‌ಗೆ ಎದುರಾಗಿದ್ದಾರೆ. ಹೊಸಬರ ನಡೆಯಿಂದ ಅನುಮಾನಗೊಂಡ ಸುರಿಂದರ್ ತಕ್ಷಣ ಗ್ರಾಮದ ಜನತೆಗೆ ಎಚ್ಚರಿಕೆ ನೀಡಿದ್ದಾರೆ. ಅಲ್ಲದೇ, ಜಿಲ್ಲಾ ಅಭಿವೃದ್ಧಿ ಸಮಿತಿ ಸದಸ್ಯರಿಗೂ ಮಾಹಿತಿ ನೀಡಿ ಪೊಲೀಸರಿಗೆ ಸುದ್ದಿ ತಲುಪುವಂತೆ ಮಾಡಿದ್ದಾರೆ.

ಪವನ್ ಕಲ್ಯಾಣ್, ನಾರಾ ಲೋಕೇಶ್ ಸೇರಿ 25 ಸಚಿವರು | ಪ್ರಧಾನಿ ಮೋದಿ, ಶಾ, ವೆಂಕಯ್ಯನಾಯ್ಡು, ಗಣ್ಯರು ಭಾಗಿ

ಆಂಧ್ರಕ್ಕೆ ಮತ್ತೊಮ್ಮೆ ನಾಯ್ಡು ಸಾರಥ್ಯ

ಅಮರಾವತಿ: ನಾರಾ ಚಂದ್ರಬಾಬು ನಾಯ್ಡು ವಿಭಜಿತ ಆಂಧ್ರಪ್ರದೇಶದಲ್ಲಿ 2ನೇ ಬಾರಿಗೆ (ಅವಿಭಜಿತ ಆಂಧ್ರದಲ್ಲಿ 2 ಬಾರಿ ಸಿಎಂ) ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ಇದೇ ಮೊದಲ ಬಾರಿಗೆ ತೆಲುಗರ ನಾಡು ಆಂಧ್ರಪ್ರದೇಶದಲ್ಲಿ ಅಸ್ತಿತ್ವಕ್ಕೆ ಬಂದಿದೆ. ಇದರೊಂದಿಗೆ ದಕ್ಷಿಣ ಭಾರತದಲ್ಲಿ ಎರಡನೇ ರಾಜ್ಯದಲ್ಲಿ ಬಿಜೆಪಿ ಅಧಿಕಾರ ಪಡೆದುಕೊಂ ಡಂತಾಗಿದೆ. ಇದಕ್ಕೆ ಮೊದಲು ದಕ್ಷಿಣ ಭಾರತದಲ್ಲಿ ಕರ್ನಾಟಕದಲ್ಲಿ ಮಾತ್ರವೇ ಬಿಜೆಪಿ ಆಡಳಿತ ನಡೆಸಿತ್ತು.

ವಿಜಯವಾಡದ ಗನ್ನಾವರಂ ವಿಮಾನ ನಿಲ್ದಾಣದ ಬಳಿಯ ಕೆಸರಪಲ್ಲಿ ಐಟಿ ಪಾರ್ಕ್ ಮೈದಾನದಲ್ಲಿ ಬುಧವಾರ ಆಯೋಜಿಸಲಾಗಿದ್ದ ಬೃಹತ್ ಕಾರ್ಯಕ್ರಮದಲ್ಲಿ 25 ಸಚಿವರೊಂದಿಗೆ ಚಂದ್ರಬಾಬು ನಾಯ್ಡು ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಅಬ್ದುಲ್ ನಜೀರ್ ಪ್ರತಿಜ್ಞಾವಿಧಿ ಬೋಧಿಸಿದರು. ಕೆನೆ ಬಣ್ಣದ ಉದ್ದ ತೋಳಿನ ರೇಷ್ಮೆ ಅಂಗಿ ಧರಿಸಿ, ಹಣೆಗೆ ಕುಂಕುಮ ಇಟ್ಟುಕೊಂಡಿದ್ದ ನಾಯ್ಡು ಮುಖದಲ್ಲಿ 5 ವರ್ಷಗಳ ನಂತರದ ಗೆಲುವಿನ ಖುಷಿ ಮಿನುಗುತ್ತಿತ್ತು. ಪ್ರಮಾಣ ವಚನ ಸ್ವೀಕರಿಸಿ ತಮ್ಮ ಆಸನದತ್ತ ಮರಳಿದ ಚಂದ್ರಬಾಬು ನಾಯ್ಡು ಅವರನ್ನು ಪ್ರಧಾನಿ ಮೋದಿ ಆತ್ಮೀಯತೆಯಿಂದ ಬಲುವಾಗಿ ಅಪ್ಪಿಕೊಂಡು ಶುಭಾಶಯ ಕೋರಿದರು. ಜನಸೇನಾ ಪಕ್ಷದ ನಾಯಕ ಪವನ್ ಕಲ್ಯಾಣ್ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಮೊದಲ ಎನ್‌ಡಿಎ ಸರಕಾರ

ಜೂ.4ರಂದು ಕೊನೆಗೊಂಡ ಆಂಧ್ರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ 'ಎನ್‌ಡಿಎ' ಮೈತ್ರಿಕೂಟ ದಾಖಲೆ ಪ್ರಮಾಣದ ಸ್ಥಾನಗಳನ್ನು ಗೆದ್ದು ಅಭೂತಪೂರ್ವ ಗೆಲುವು ಸಾಧಿಸಿದೆ. ತೆಲುಗು ದೇಶಂ ಪಕ್ಷ(ಟಿಡಿಪಿ), ಜನಸೇನಾ ಮತ್ತು ಬಿಜೆಪಿ ಒಳಗೊಂಡ ಎನ್‌ಡಿಎ ಮೈತ್ರಿಕೂಟ ಆಂಧ್ರ ವಿಧಾನಸಭೆಯ 175 ಸ್ಥಾನಗಳಲ್ಲಿ ಒಟ್ಟು 164 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ. ಹಾಗಾಗಿಯೇ, ಆಂಧ್ರದಲ್ಲಿ ಮೊದಲ ಎನ್‌ಡಿಎ ಮೈತ್ರಿಕೂಟ ಸರಕಾರ ರಚನೆಯಾಗಿದೆ.

ನಾಯ್ಡು ಸಂಪುಟದ 25 ಸಚಿವರು

ಚಂದ್ರಬಾಬು ನಾಯ್ಡು ಸಂಪುಟದಲ್ಲಿ 17 ಹೊಸ ಮುಖಗಳಿಗೆ ಅವಕಾಶ ನೀಡಲಾಗಿದ್ದು, ಜನಸೇನಾ ಪಕ್ಷದ ಮೂವರು ಹಾಗೂ ಬಿಜೆಪಿಯ ಒಬ್ಬರಿಗೆ ಸಂಪುಟದಲ್ಲಿ ಸ್ಥಾನ ಲಭಿಸಿದೆ. ಪವನ್ ಕಲ್ಯಾಣ್(ಜನಸೇನಾ), ನಾರಾ ಲೋಕೇಶ್(ಟಿಡಿಪಿ), ಸತ್ಯ ಕುಮಾರ ಯಾದವ್(ಬಿಜೆಪಿ), ನದೆಂಡ್ಲಾ ಮನೋಹರ್(ಜನಸೇನಾ), ಕಿಂಜರಪು ಅಚ್ಚನ್ನಾಯ್ಡು, ಅನಿತಾ ವಂಗಲ್ಪುಡಿ, ಅನಗಾನಿ ಸತ್ಯಪ್ರಸಾದ್, ಡಾ.ನಿಮ್ಮಲಾ ರಾಮನಾಯ್ಡು, ಆನಂ ರಾಮನಾರಾಯಣ ರೆಡ್ಡಿ, ಕೊಲ್ಲು ರವೀಂದ್ರ, ಕೊಳುಸು ಪಾರ್ಥಸಾರಥಿ, ಪೊಂಗುರು ನಾರಾಯಣ, ನಾಸ್ಯಂ ಮೊಹಮ್ಮದ್ ಫಾರೂಕ್, ಪಯ್ಯಾವುಲ ಕೇಶವ, ಕಂಡುಲ ದುರ್ಗೇಶ್(ಜನಸೇನಾ), ಡಾ.ಡೋಲ ಬಾಲಾ ವೀರಾಂಜನೇಯ ಸ್ವಾಮಿ, ಗೊಟ್ಟಿಪತಿ ರವಿಕುಮಾರ್, ಗುಮ್ಮಡಿ ಸಂಧ್ಯಾರಾಣಿ, ಬಿ ಸಿ ಜನಾರ್ದನ ರೆಡ್ಡಿ, ಟಿ ಜಿ ಭರತ, ಎಸ್ ಸವಿತಾ, ವಾಸಂಸೆಟ್ಟಿ ಸುಭಾಶ್, ಕೊಂಡಪಲ್ಲಿ ಶ್ರೀನಿವಾಸ, ಮಂಡಿಪಲ್ಲಿ ರಾಮ ಪ್ರಸಾದ ರೆಡ್ಡಿ.

ಗಣ್ಯರ ಉಪಸ್ಥಿತಿ

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ ಶಾ, ಕೇಂದ್ರ ಸಚಿವರಾದ ಜೆ.ಪಿ.ನಡ್ಡಾ, ನಿತಿನ್ ಗಡ್ಕರಿ, ರಾಮದಾಸ್ ಅಠಾವಳೆ, ಅನುಪ್ರಿಯಾ ಪಟೇಲ, ಚಿರಾಗ್ ಪಾಸ್ವಾನ್, ಮಹಾರಾಷ್ಟ್ರ ಸಿಎಂ ಏಕನಾಥ ಶಿಂದೆ, ಎನ್‌ಸಿಪಿ(ಅಜಿತ್ ಬಣ) ನಾಯಕ ಪ್ರಫುಲ್ ಪಟೇಲ್, ಮಾಜಿ ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು, ತೆಲಂಗಾಣ ಮಾಜಿ ರಾಜ್ಯಪಾಲೆ ತಮಿಳಿಸಾಯಿ ಸೌಂದರರಾಜನ್, ಸೂಪರ್ ಸ್ಟಾರ್ ರಜನಿಕಾಂತ್, ಮೆಘಾಸ್ಟಾರ್ ಚಿರಂಜೀವಿ, ನಟರಾದ ರಾಮ್ ಚರಣ್, ನಂದಮೂರಿ ಬಾಲಕೃಷ್ಣ ಹಾಜರಿದ್ದರು.

ಕಾಶ್ಮೀರ ಕಣಿವೆ ಸಹಜ ಸ್ಥಿತಿಗೆ ಎಂಬ ಬಿಜೆಪಿ ಹೇಳಿಕೆ ಸುಳ್ಳು: ಕಾಂಗ್ರೆಸ್ ವಾಗ್ದಾಳಿ

3 ಉಗ್ರ ದಾಳಿ-ಪ್ರಧಾನಿ ಮೌನ ಸರಿಯೇ?

ದೆಹಲಿ; ಕಾಶ್ಮೀರ ಕಣಿವೆಯಲ್ಲಿ 3 ದಿನಗಳಲ್ಲಿ 3 ಉಗ್ರ ದಾಳಿಗಳು ನಡೆದಿದ್ದರೂ ಪ್ರಧಾನಿ ನರೇಂದ್ರ ಮೋದಿ ಅದೇಕೆ ಮೌನ ತಾಳಿದ್ದಾರೆ ಎಂದು ಕಾಂಗ್ರೆಸ್ ಬುಧವಾರ ಪ್ರಶ್ನೆ ಮಾಡಿದೆ.

ಕಾಶ್ಮೀರದಲ್ಲಿ ಭಯೋತ್ಪಾದನೆ ಕೊನೆಗೊಂಡಿದೆ. ಕಣಿವೆ ರಾಜ್ಯ ಸಹಜ ಸ್ಥಿತಿಗೆ ಮರಳಿದೆ ಎಂದು ಬಿಜೆಪಿ ಹೇಳುತ್ತಿರುವುದೆಲ್ಲಾ ಸುಳ್ಳು ಎಂಬುದು ಈ 3 ಉಗ್ರ ದಾಳಿಗಳಿಂದಲೇ ದೃಢಪಟ್ಟಿದೆ ಎಂದು ಕಾಂಗ್ರೆಸ್ ಪಕ್ಷದ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಹೇಳಿದ್ದಾರೆ.

ಪಾಕ್ ಪ್ರಧಾನ ಶಹಬಾಜ್ ಷರೀಫ್ ಮತ್ತು ಮಾಜಿ ಪ್ರಧಾನಿ ನವಾಜ್ ಷರೀಫ್ ಅವರ ಶುಭಾಶಯ ಸಂದೇಶಗಳಿಗೆ ಉತ್ತರಿಸುವುದರಲ್ಲೇ ಪ್ರಧಾನಿ ಮೋದಿ ಮಗ್ನರಾಗಿದ್ದಾರೆ. ಉಗ್ರರ ದಾಳಿ ವಿಚಾರದತ್ತ ಅವರ ಗಮನವೇ ಹರಿದಿಲ್ಲ. ರಿಯಾಸಿ, ಕತುವಾ, ದೋಡಾ ಜಿಲ್ಲೆಗಳಲ್ಲಿ ಉಗ್ರರ ಸರಣಿ ದಾಳಿ ವಿಚಾರ ತಿಳಿದೇ ಇಲ್ಲ ಎಂಬಂತೆ ಪ್ರಧಾನಿ ಮೌನವಾಗಿದ್ದಾರೆ ಎಂದು ಖೇರಾ ಟೀಕಿಸಿದ್ದಾರೆ. ಪ್ರಧಾನಿ ಮೋದಿ ಅವರ ಸರಕಾರ 3ನೇ ಬಾರಿಗೆ ದೆಹಲಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೇ ಕಾಶ್ಮೀರದಲ್ಲಿ ಭಯೋತ್ಪಾದನೆ ಮರುಕಳಿಸಿದ್ದೇಕೆ? ಈವರೆಗೆ ಬಿಜೆಪಿಯವರು ಕಾಶ್ಮೀರ ವಿಚಾರದಲ್ಲಿ ಹೇಳಿದ್ದೆಲ್ಲವೂ ಸುಳ್ಳು ಎಂಬುದು ಖಚಿತವಾಗಿದೆ. ರಜೌರಿ ಮತ್ತು ಪೂಂಚ್ ಜಿಲ್ಲೆಗಳಲ್ಲಿ ಭಯೋತ್ಪಾದನೆ ಚಟುವಟಿಕೆ ಗರಿಷ್ಠ ಮಟ್ಟದಲ್ಲಿದೆ. ಈ ಭಾಗದಲ್ಲಿ 2 ವರ್ಷದಲ್ಲೇ ಹಲವು ಉಗ್ರ ದಾಳಿಗಳಿಗೆ 35 ಯೋಧರು ಹುತಾತ್ಮರಾಗಿದ್ದಾರೆ. ಈವರೆಗೆ ಶಾಂತಿಯುತ ಪ್ರದೇಶವಾಗಿದ್ದ ರಿಯಾಸಿಗೂ ಈಗ ಭಯೋತ್ಪಾದನೆ ಹರಡಿದೆ. ಮೋದಿ ಆಡಳಿತ ಕಾಲದಲ್ಲೇ 19 ಉಗ್ರ ದಾಳಿ ನಡೆದಿವೆ ಎಂದು ಖೇರಾ ಮಾಹಿತಿ ನೀಡಿದರು.

2016ರಲ್ಲಿ ಪಠಾಣ್‌ಕೋಟ್ ಸೇನಾ ನೆಲೆ ಮೇಲಿನ ಉಗ್ರರ ದಾಳಿ ಕುರಿತ ತನಿಖೆಗೆ ಪಾಕಿಸ್ತಾನದ ಐಎಸ್‌ಐ ಸಂಸ್ಥೆಯನ್ನೂ ಭಾರತ ಸರಕಾರ ಆಹ್ವಾನಿಸಿದ್ದು ನಿಜವಲ್ಲವೇ? ಎಂದೂ ಖೇರಾ ಪ್ರಶ್ನೆ ಮಾಡಿದ್ದಾರೆ.

ಉಗ್ರ ದಾಳಿ ಖಂಡಿಸಿ ವಿಹಿಂಪ ಪ್ರತಿಭಟನೆ

ದೆಹಲಿ: ಕಾಶ್ಮೀರದಲ್ಲಿ 10 ಹಿಂದೂ ಯಾತ್ರಾರ್ಥಿಗಳನ್ನು ಸಾವಿಗೆ ಕಾರಣವಾದ ಪಾಕಿಸ್ತಾನ ಮೂಲದ ಉಗ್ರರ ದಾಳಿಯನ್ನು ಖಂಡಿಸಿ ವಿಶ್ವಹಿಂದೂ ಪರಿಷತ್ (ವಿಹಿಂಪ) ದೆಹಲಿಯಲ್ಲಿ ಪ್ರತಿಭಟನೆ ನಡೆಸಿದೆ. ಉಗ್ರರನ್ನು ಪ್ರೋತ್ಸಾಹಿಸುತ್ತಿರುವ ಪಾಕ್ ವಿರುದ್ಧ ಕಠಿಣ ನಿರ್ಧಾರ ಕೈಗೊಳ್ಳಬೇಕೆಂದು ಆಗ್ರಹಿಸಿ ವಿಶ್ವಹಿಂದೂ ಪರಿಷತ್ ಹಾಗೂ ಬಜರಂಗದಳ ಪ್ರಮುಖರು ರಾಷ್ಟ್ರಪತಿಗಳಿಗೆ ಬರೆದಿರುವ ಪತ್ರವನ್ನು ಪ್ರತಿಭಟನಾಕಾರರು ಬಳಿಕ ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿದರು.

ಒಡಿಶಾ ಸಿಎಂ ಮಾಝಿ ಪ್ರಮಾಣ

ಕನಕ್ ವರ್ಧನ್ ಸಿಂಗ್ ಡಿಯೋ, ಪ್ರವತಿ ಫರಿದಾ ಡಿಸಿಎಂ

ಭುವನೇಶ್ವರ: ಒಡಿಶಾ ಮುಖ್ಯಮಂತ್ರಿಯಾಗಿ ಮೋಹನ್ ಚರಣ್ ಮಾಝಿ ಬುಧವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಕನಕ್

ವರ್ಧನ್ ಸಿಂಗ್ ಡಿಯೋ ಮತ್ತು ಪ್ರವತಿ ಫರಿದಾ ಉಪ ಮುಖ್ಯಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಭುವನೇಶ್ವರದ ಜನತಾ ಮೈದಾನದಲ್ಲಿ ಬುಧವಾರ ಸಂಜೆ 5ಕ್ಕೆ ಆಯೋಜನೆಗೊಂಡಿದ್ದ ಗಮನ ಸೆಳೆವ ಕಾರ್ಯಕ್ರಮದಲ್ಲಿ ಮೋಹನ್ ಮಾಝಿ ಸಂಪುಟದ 13 ಸಚಿವರು ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ರಘುಬ ರದಾಸ್ ಪ್ರಮಾಣ ವಚನ ಬೋಧಿಸಿದರು.

4 ಬಾರಿ ಶಾಸಕರಾಗಿರುವ ಆದಿವಾಸಿ ನಾಯಕ ಮೋಹನ್ ಚರಣ್ ಮಾಝಿ ಒಡಿಶಾದ ಮೊದಲ ಬಿಜೆಪಿ ಸಿಎಂ ಎನಿಸಿಕೊಂಡಿದ್ದಾರೆ. ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜ ನಾಥ್ ಸಿಂಗ್, ಜೆ.ಪಿ.ನಡ್ಡಾ, ಭುಪೇಂದರ್ ಯಾದವ್, ಧರ್ಮೇಂದರ್ ಪ್ರಧಾನ್, ಜುಯೆಲ್ ಒರಮ್, ಅಶ್ವಿನ್ ವೈಷ್ಣವ್ ಹಾಗು ಒಡಿಶಾ ಮಾಜಿ ಸಿಎಂ ನವೀನ್ ಪಟ್ನಾಯಕ್ ಸೇರಿ ಹಲವರು ಗಣ್ಯರು ಉಪಸ್ಥಿತರಿದ್ದರು. ನೂತನ ಸಿಎಂ ಗೆ ಪ್ರಧಾನಿ ಮೋದಿ ಬೆನ್ನುತಟ್ಟಿ ಅಭಿನಂದನೆ ಸಲ್ಲಿಸಿದರು.

ಸಂಪುಟ ದರ್ಜೆ: ರಬಿ ನಾರಾಯಣ ನಾಯ್ಕ್, ಸುರೇಶ್ ಪೂಜಾರಿ, ನಿತ್ಯಾನಂದ ಗೊಂಡ, ಕೃಷ್ಣ ಚಂದ್ರ ಪತ್ರಾ, ಪೃಥ್ವಿರಾಜ್ ಹರಿಚಂದನ್, ಮುಖೇಶ್ ಮಹಾಲಿಂಗ, ಬಿಭೂತಿ ಭೂಷಣ್ ಜೆನಾ, ಕೃಷ್ಣ ಚಂದ್ರ ಮಹಾಪಾತ್ರಾ.

ರಾಜ್ಯ ಸಚಿವರು(ಸ್ವತಂತ್ರ ಉಸ್ತುವಾರಿ): ಗಣೇಶ್ ರಾಮ್ ಸಿಂಗ್ ಕುಂಟಿಯ, ಸೂರ್ಯಬಂಶಿ ಸೂರಜ್, ಪ್ರದೀಪ್ ಬಾಳಸನಂತಾ, ಗೋಕುಲ ಮಲ್ಲಿಕ್, ಸಂಪದ್ ಕುಮಾರ್ ಸ್ವೈನ್.

ಪಟ್ನಾಯಕ್‌ಗೆ ಗೌರವ!

ಒಡಿಶಾ ಸಿಎಂ ಮಾಝಿ ಪ್ರಮಾಣ ವಚನ ಸ್ವೀಕಾರ ಸಮಾರಂಭಕ್ಕೆ ಆಗಮಿಸಿದ್ದ ಮಾಜಿ ಸಿಎಂ, ಬಿಜೆಡಿ ಪಕ್ಷದ ಮುಖಂಡ ನವೀನ್ ಪಟ್ನಾಯಕ್ ಅವರನ್ನು ವೇದಿಕೆಯಲ್ಲಿ ಪ್ರಧಾನಿ ಮೋದಿ ಹಸ್ತಲಾಘವ ನೀಡಿ ಆತ್ಮೀಯವಾಗಿ ಮಾತನಾಡಿಸಿದರು. ಅದಕ್ಕೂ ಮುನ್ನ ವೇದಿಕೆ ಸಮೀಪ ಬಂದ ನವೀನ್ ಪಟ್ನಾಯಕ್ ಅವರನ್ನು ಕಂಡ ಕೇಂದ್ರ ಗೃಹ ಸಚಿವ ಅಮಿತ್ ಶಾ, ತಕ್ಷಣವೇ ವೇದಿಕೆಯಿಂದ ಇಳಿದು ಹೋಗಿ ಹಸ್ತಲಾಘವ ನೀಡಿ ಗೌರವದಿಂದ ವೇದಿಕೆಗೆ ಕರೆದೊಯ್ದರು.

ನಮೋ 3.0 ಸರಕಾರದಲ್ಲಿ ಯಾವ ರಾಜ್ಯಕ್ಕೆ ಎಷ್ಟು ಸಚಿವ ಸ್ಥಾನ?



ಕೆಂಪುಕೋಟೆ ದಾಳಿ ಅಪರಾಧಿ

ಪಾಕ್ ಉಗ್ರ ಆರಿಫ್‌ಗಿಲ್ಲ ಕ್ಷಮಾದಾನ ; ಗಲ್ಲು ಖಚಿತ

ದೆಹಲಿ: ಕೆಂಪು ಕೋಟೆ ಮೇಲಿನ ದಾಳಿ ಪ್ರಕರಣದ ಅಪರಾಧಿ ಪಾಕಿಸ್ತಾನಿ ಭಯೋತ್ಪಾದಕ ಮೊಹಮ್ಮದ್ ಆರಿಫ್ ಅಲಿಯಾಸ್ ಅಶ್ಫಾಕ್ ಕ್ಷಮಾದಾನ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ತಿರಸ್ಕರಿಸಿದ್ದಾರೆ. ಪಾಕ್



ಉಗ್ರನಿಗೆ ಗಲ್ಲು ಶಿಕ್ಷೆ ಖಚಿತವಾಗಿದೆ.

24 ವರ್ಷಗಳ ಹಿಂದೆ ಅಂದರೆ, 2000ದ ಡಿ.22 ರಂದು ಕೆಂಪು ಕೋಟೆ ಮೇಲೆ ನಡೆದ ಭಯೋತ್ಪಾದಕ ದಾಳಿ ನಡೆಸಿದ್ದು, ಸಂಸತ್ ಭವನದ ಭದ್ರತೆಗೆ ನಿಯೋಜನೆಗೊಂಡಿದ್ದ 7 ರಜಪೂತ್ ರೈಫಲ್ಸ್ ತುಕಡಿಯ ಮೂವರು ಯೋಧರು ಹುತಾತ್ಮರಾಗಿದ್ದರು. ದಾಳಿಯಲ್ಲಿ ಲಷ್ಕರೆ ತಯ್ಯಬಾ ಉಗ್ರ ಸಂಘಟನೆಯ ಮೊಹಮ್ಮದ್ ಆರಿಫ್ ಸಿಕ್ಕಿಬಿದ್ದಿದ್ದ. ಕೋರ್ಟ್ ವಿಚಾರಣೆ ಬಳಿಕ ಅಪರಾಧಿ ಎಂದು ಘೋಷಿಸಿ ಗಲ್ಲು ಶಿಕ್ಷೆ ವಿಧಿಸಿತ್ತು. 2011ರಲ್ಲಿ ಸುಪ್ರೀಂ ಕೋರ್ಟ್ ಮೇಲ್ಮನವಿ ತಿರಸ್ಕರಿಸಿ ಮರಣದಂಡನೆ ಖಚಿತಪಡಿಸಿತ್ತು. ಬಳಿಕ ಆರಿಫ್ ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯನ್ನು ಕೂಡ 2022ರಲ್ಲಿ ಸುಪ್ರೀಂ ಕೋರ್ಟ್ ವಜಾಗೊಳಿಸಿತ್ತು. ಕಳೆದ ಮೇ 15ರಂದು ಆರಿಫ್ ಸಲ್ಲಿಸಿದ್ದ ಕ್ಷಮಾದಾನ ಅರ್ಜಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ತಿರಸ್ಕರಿಸಿದ್ದು ಮರಣದಂಡನೆ ಶಿಕ್ಷೆ ಖಾತ್ರಿಯಾಗಿದೆ.

ಗುಡಿಸಲ ಮೇಲುರುಳಿದ ಲಾರಿ; 8 ಬಲಿ

ಹರ್ದೋಯಿ 8 ಮಂದಿ ಸಾವು

ಹರ್ದೋಯಿ: ಉತ್ತರಪ್ರದೇಶದ ಹರ್ದೋಯಿ ಪ್ರದೇಶದಲ್ಲಿ ಗುಡಿಸಿಲಿನಲ್ಲಿ ಮಲಗಿದ್ದ ಬಡ ಕುಟುಂಬದವರ ಮೇಲೆ ಮರಳು ತುಂಬಿದ ಲಾರಿ ಏಕಾಏಕಿ ಉರುಳಿ ಬಿದ್ದಿದ್ದರಿಂದ 8 ಮಂದಿ ಮಲಗಿದ್ದಲ್ಲೇ ಸಾವನ್ನಪ್ಪಿದ್ದಾರೆ.

ಬುಧವಾರ ಬೆಳಗಿನ ಜಾವ ಘಟನೆ ನಡೆದಿದ್ದು, ದೊಡ್ಡ ಸದ್ದು ಕೇಳಿ ನಿದ್ರೆಯಿಂದ ಎಚ್ಚೆತ್ತ ನೆರೆಹೊರೆಯವರು ಜೆಸಿಬಿ ಕರೆಸಿ ಲಾರಿ ಸ್ಥಳಾಂತರಿಸಿ ಮರಳಿನಡಿ ಸಿಲುಕಿದ್ದವರನ್ನು ರಕ್ಷಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಅಷ್ಟರಲ್ಲಾಗಲೇ ನಾಲ್ಕು ಮಕ್ಕಳು ಸೇರಿ ಒಂದೇ ಕುಟುಂಬದ 8 ಮಂದಿ ಸಾವನ್ನಪ್ಪಿದ್ದಾರೆ. 5 ವರ್ಷದ ಮಗು ಗಂಭೀರವಾಗಿ ಗಾಯಗೊಂಡಿದ್ದು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮೃತರನ್ನು ಅವಧೇಶ್(40), ಸುಧಾ(35), ಕರಣ್(35), ಹೀರೋ(30) ಹಾಗೂ ಮಕ್ಕಳಾದ ಲಲ್ಲಾ(5), ಸುನ್ಯನಾ(11), ಬುಡ್ಡು(4), ಕೋಮಲ್(5) ಎಂದು ಗುರುತಿಸಲಾಗಿದೆ. ಮರಳಿನ ಲಾರಿ ಚಾಲಕನನ್ನು ಹರ್ದೋಯಿ ಪೊಲೀಸರು ಬಂಧಿಸಿದ್ದಾರೆ. ಘಟನೆಗೆ ಆಘಾತ ವ್ಯಕ್ತಪಡಿಸಿರುವ ಸಿಎಂ ಯೋಗಿ ಆದಿತ್ಯನಾಥ್, ಸಂತಾಪ ಸೂಚಿಸಿದ್ದಾರೆ.



ಬ್ರಿಜ್: ಯುನೀಕ್ ಮಾಸ್ಟರ್ಸ್ ಸಿಲ್ವರ್ ಚಾಂಪಿಯನ್

ಮಂಗಳೂರು: ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಶಿಪ್‌ನ 'ಸಿಲ್ವರ್' ವಿಭಾಗದಲ್ಲಿ ಯುನೀಕ್ ಮಾಸ್ಟರ್ಸ್ ತಂಡ ಪ್ರಶಸ್ತಿ ಗೆದ್ದುಕೊಂಡಿತು.

ಕರಾವಳಿ ಬ್ರಿಜ್ ಸಂಸ್ಥೆಯ ಸಹಯೋಗದಲ್ಲಿ ಭಾರತ ಬ್ರಿಜ್ ಫೆಡರೇಷನ್ ಮತ್ತು ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆಗಳು ಆಯೋಜಿಸಿರುವ ಚಾಂಪಿಯನ್‌ಶಿಪ್‌ನ ಫೈನಲ್‌ನಲ್ಲಿ ಜೂತಿಕಾ ತಂಡದ ವಿರುದ್ಧ ಯುನೀಕ್ ಗೆಲುವು ದಾಖಲಿಸಿದೆ. ಮೂರು ಮತ್ತು ನಾಲ್ಕನೇ ಸ್ಥಾನಕ್ಕಾಗಿ ನಡೆದ ಸ್ಪರ್ಧೆಯಲ್ಲಿ ಏಸ್ ಕಾನ್ಕರರ್ಸ್ ವಿರುದ್ಧ ಹೆಕ್ಸಗನ್ ಜಯ ಸಾಧಿಸಿದೆ. ಸ್ವಿಸ್ ಲೀಗ್ ಮಾದರಿಯ ಕ್ವಾಲಿಫೈಯರ್



ಹಂತದಲ್ಲಿ ನಾಲ್ಕನೇ ಸ್ಥಾನ ಗಳಿಸಿದ್ದ ಯುನೀಕ್ ಮಾಸ್ಟರ್ಸ್ ನಂತರದ ಹಂತಗಳಲ್ಲಿ ಅಮೋಘ ಪ್ರದರ್ಶನ ತೋರಿತ್ತು. ರಾಜೇಂದ್ರ ರೇ, ತಪಸ್ ದಾಸ್ ಗುಪ್ತಾ, ಸೌರವ್ ಸಿಲ್, ಅರ್ಣವ್ ಘೋಷ್, ಬೋಲಾ ನಾಥ್ ಘೋಷ್ ಮತ್ತು ಸಲಿಲ್ ಕುಮಾರ್ ಮಂಡಲ್ ಅವರನ್ನು ಒಳಗೊಂಡ ತಂಡ ಫೈನಲ್‌ನಲ್ಲಿ ಸುಲಭ ಜಯ ಸಾಧಿಸಿತು. 'ಗೋಲ್ಡ್' ವಿಭಾಗದಲ್ಲಿ ಮೇವರಿಕ್ಸ್, ಮೋನಿಕಾ ಜಾಜು, ಫೋರ್ಮಿಡೇಬಲ್ ಮತ್ತು ಹೆಕ್ಸಗನ್ ತಂಡಗಳು ಫೈನಲ್ ಮತ್ತು ಪ್ಲೇ ಆಫ್ ಹಂತ ಪ್ರವೇಶಿಸಿವೆ.

ಎಂಟರ ಘಟ್ಟ ತಲುಪಿದ ಭಾರತ | ಮಿಂಚಿದ ಅರ್ಶ್‌ದೀಪ್ ಸಿಂಗ್

ಸೂರ್ಯ ಆರ್ಭಟಕ್ಕೆ ಕಮರಿದ ಅಮೆರಿಕ

ನ್ಯೂಯಾರ್ಕ್: ಸೂರ್ಯಕುಮಾರ್ ಯಾದವ್ ಅವರ ಜವಾಬ್ದಾರಿಯುತ ಬ್ಯಾಟಿಂಗ್ ಹಾಗೂ ಭಾರತದ ವೇಗಿಗಳ ಮಾರಕ ಬೌಲಿಂಗ್ ದಾಳಿಗೆ ಅಮೆರಿಕ ತತ್ತರಿಸಿದ್ದು, ವಿಶ್ವಕಪ್ ಇತಿಹಾಸದಲ್ಲಿ ಮೊದಲನೇ ಸೋಲುಂಡಿದೆ. ಆ ಮೂಲಕ ಭಾರತ ಅಗ್ರ ಸ್ಥಾನ ಕಾಯ್ದುಕೊಂಡಿದ್ದು, ಎಂಟರ ಘಟ್ಟಕ್ಕೆ ತಲುಪಿದೆ. ಸತತ ಎರಡು ಗೆಲುವು ಸಾಧಿಸಿದ್ದ ಅಮೆರಿಕ ತಂಡವು ಸೂಪರ್ ಎಂಟಕ್ಕೆ ತಲುಪಲು ಇನ್ನೊಂದು ಪಂದ್ಯ ಗೆಲ್ಲಬೇಕಿದೆ. ಇಲ್ಲಿನ ನಸೌ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಅಮೆರಿಕ ತಂಡವು 8 ವಿಕೆಟ್ ಕಳೆದುಕೊಂಡು 110 ರನ್ ಗಳಿಸಿತು. ಇದರ ಬೆನ್ನುಹತ್ತಿದ ಭಾರತ 18.2 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 111 ಗಳಿಸಿ 7 ವಿಕೆಟ್ ಗೆಲುವು ಸಾಧಿಸಿತು.

ಅಮೆರಿಕಗೆ ಅರ್ಶ್‌ದೀಪ್ ಶಾಕ್: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಯುಎಸ್‌ಎ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ಆರಂಭಿಕ ಶಯಾನ್ ಜಹಾಂಗೀರ್ ಮೊದಲ ಎಸೆತದಲ್ಲಿಯೇ ಅರ್ಶ್‌ದೀಪ್ ಸಿಂಗ್ ಬೌಲಿಂಗ್‌ನಲ್ಲಿ ಔಟಾದರು. ಆಂಡ್ರೀಸ್ ಗೌಸ್ ಕೇವಲ 2 ರನ್ ಗಳಿಸಿ ಅದೇ ಓವರ್‌ನಲ್ಲಿ ವಿಕೆಟ್ ಒಪ್ಪಿಸಿದರು. ಹಂಗಾಮಿ ನಾಯಕ ಆರೋನ್ ಜೋನ್ಸ್ 22 ಎಸೆತಗಳಲ್ಲಿ 11 ರನ್ ಗಳಿಸಿ ಪೆವಿಲಿಯನ್ ಸೇರಿದರು. ಆ ಬಳಿಕ ಆರಂಭಿಕ ಬ್ಯಾಟರ್ ಸ್ಟೀವನ್ ಟೇಲರ್ 30 ಎಸೆತಗಳಲ್ಲಿ 24 ರನ್ ಗಳಿಸಿ ಔಟಾದರು. ಮಧ್ಯಮ ಕ್ರಮಾಂಕದಲ್ಲಿ ನಿತೀಶ್ ಕುಮಾರ್ 23 ಎಸೆತಗಳಲ್ಲಿ 27 ರನ್ ಬಾರಿಸಿದರೆ, ಕೋರಿ ಆ್ಯಂಡರ್ಸನ್ 12 ಎಸೆತಗಳಲ್ಲಿ 14 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಹರ್ಮೀತ್ ಸಿಂಗ್ 10 ಎಸೆತಗಳಲ್ಲಿ 10 ರನ್ ಗಳಿಸಿದರು. ಕೊನೆಯಲ್ಲಿ ಶಾಡ್ಲಿ ವ್ಯಾನ್ 10 ರನ್, ಜಸ್ದೀಪ್ ಸಿಂಗ್ 2 ರನ್ ಗಳಿಸಿ ಯುಎಸ್‌ಎ ತಂಡದ ಮೊತ್ತವನ್ನು 110ರ ಗಡಿ ಮುಟ್ಟಿಸಿದರು. ಭಾರತದ ಪರ ಅರ್ಶ್‌ದೀಪ್ ಸಿಂಗ್ 4 ಓವರ್‌ಗಳಲ್ಲಿ 9 ರನ್ ನೀಡಿ 4 ವಿಕೆಟ್ ಕಬಳಿಸಿದರೆ, ಹಾರ್ದಿಕ್ ಪಾಂಡ್ಯ 4 ಓವರ್‌ಗಳಲ್ಲಿ 14 ರನ್ ನೀಡಿ 2 ವಿಕೆಟ್ ಪಡೆದರು. ಉಳಿದಂತೆ ಅಕ್ಷರ್ ಪಟೇಲ್ 3 ಓವರ್‌ಗಳಲ್ಲಿ 24 ರನ್ ನೀಡಿ 1 ವಿಕೆಟ್ ಪಡೆದರು.

ಸ್ಕೋರ್
ಅಮೆರಿಕ: 110/8 ಟೇಲರ್ 24, ಕುಮಾರ್ 27, ಅರ್ಶ್‌ದೀಪ್ 9/4
ಭಾರತ: ಅ111/3
ಸೂರ್ಯಕುಮಾರ್ 50★, ದುಬೆ 31★, ನೇತ್ರವಲ್ಕರ್ 18/2

ಮಿಂಚಿದ ದುಬೆ ಸೂರ್ಯಕುಮಾರ್
ಸಾಧಾರಣ ಗುರಿ ಬೆನ್ನಟ್ಟಿದ ಭಾರತಕ್ಕೂ ಆರಂಭಿಕ ಆಘಾತ ಉಂಟಾಯಿತು. ಎರಡು ಪಂದ್ಯದಲ್ಲಿ ಫ್ಲಾಪ್ ಆಗಿದ್ದ ವಿರಾಟ್ ಕೊಹ್ಲಿ ಮೊದಲನೇ ಎಸೆತದಲ್ಲಿ ವಿಕೆಟ್ ಒಪ್ಪಿಸಿದರು. ಅವರ ಹಿಂದೆಯೇ ರೋಹಿತ್ ಸಹ 2 ರನ್ ಗಳಿಸಿ ವಿಕೆಟ್ ನೀಡಿದರು. ಆ ಬಳಿಕ ಜತೆಗೂಡಿದ ರಿಷಭ್ ಪಂತ್ ಹಾಗೂ ಸೂರ್ಯಕುಮಾರ್ ಯಾದವ್ ಅಲ್ಪ ರಿಲೀಫ್ ನೀಡಿದರು. ಆದರೆ ಈ ವೇಳೆ ಪಂತ್ 18 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ದುಬೆ ಹಾಗೂ ಸೂರ್ಯಕುಮಾರ್ ನಿಧಾನಗತಿ ಆಟಕ್ಕೆ ಮುಂದಾದರು. ಟಿ20ಯನ್ನು ಮೊದಲಿಗೆ ಏಕದಿನದಂತೆ ಆಡಿದ ಈ ಜೋಡಿ ಪಂದ್ಯವನ್ನು ಗೆಲ್ಲುವ ಹಂತಕ್ಕೆ ಮುಟ್ಟಿಸಿತು. ಪರಿಸ್ಥಿತಿ ಸುಧಾರಿಸಿದಂತೆ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದ ಈ ಜೋಡಿ, ಗುರಿ ಮುಟ್ಟುವವರೆಗೂ ಆಡಿದರು. ದುಬೆ 35 ಎಸೆತದಲ್ಲಿ 31 ರನ್ ಗಳಿಸಿದರೆ, ಸೂರ್ಯಕುಮಾರ್ ಯಾದವ್ 49 ಎಸೆತದಲ್ಲಿ 50 ರನ್ ಗಳಿಸಿ ಅಜೇಯರಾಗಿ ಉಳಿದರು.

ಸೋತು ಹೊರಬಿದ್ದ ಎರಾಸ್ಮಸ್ ಪಡೆ | ಎಂಟರ ಘಟ್ಟ ತಲುಪಿದ ಕಾಂಗರೂ

ನಮೀಬಿಯಾಗೆ ಜಂಪಾ ಹೆಡ್‌ಏಕ್

ಆಂಟಿಗುವಾ: ಆ್ಯಡಮ್ ಜಂಪಾ ಮಾರಕ ಬೌಲಿಂಗ್ ಹಾಗೂ ಟ್ರಾವಿಸ್ ಹೆಡ್ ಅವರ ಸ್ಫೋಟಕ ಬ್ಯಾಟಿಂಗ್‌ನಿಂದ ತತ್ತರಿಸಿದ ನಮೀಬಿಯಾ ತಂಡ ಆಸ್ಟ್ರೇಲಿಯಾ ವಿರುದ್ಧ ಸೋತು ಟಿ20 ವಿಶ್ವಕಪ್‌ನಿಂದ ಹೊರಬಿದ್ದಿದೆ. ಆ ಮೂಲಕ ಅಗ್ರಸ್ಥಾನದಲ್ಲಿ ಇರುವ ಆಸ್ಟ್ರೇಲಿಯಾ ಸೂಪರ್ –8 ಕ್ಕೆ ಲಗ್ಗೆ ಇಟ್ಟಿದೆ.

ಏಕದಿನ ವಿಶ್ವಕಪ್ ಮುಡಿಗೇರಿಸಿಕೊಂಡ ಆಸ್ಟ್ರೇಲಿಯಾ ಈ ಬಾರಿ ಟಿ20 ಯಲ್ಲೂ ಅದೇ ಲಯ ಮುಂದುವರಿಸಿದ್ದು, ಬಿ ಗುಂಪಿನಲ್ಲಿ ಮೊದಲ ತಂಡವಾಗಿ ಸೂಪರ್ 8ಕ್ಕೆ ತಲುಪಿದೆ. ಆಡಿರುವ ಎಲ್ಲ ಮೂರೂ ಪಂದ್ಯಗಳನ್ನು ಗೆದ್ದಿದ್ದು, 6 ಅಂಕ ಗಳಿಸಿದೆ. 3 ಪಂದ್ಯ ಆಡಿರುವ ನಮೀಬಿಯಾ ಒಂದರಲ್ಲಿ ಮಾತ್ರ ಗೆದ್ದಿದ್ದು, ಟೂರ್ನಿಯಿಂದ ಹೊರಬಿದ್ದಿದೆ. ಆಂಟಿಗುವಾದ ರಿಚರ್ಡ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನಮೀಬಿಯಾ 72 ರನ್ ಗಳಿಸಿ ಸರ್ವಪತನ ಕಂಡಿತು. ಸಾಧಾರಣ ಮೊತ್ತದ ಬೆನ್ನುಹತ್ತಿದ ಆಸ್ಟ್ರೇಲಿಯಾ ಕೇವಲ 5.4 ಓವರ್‌ನಲ್ಲಿ 1 ವಿಕೆಟ್ ನಷ್ಟಕ್ಕೆ 73 ರನ್ ಗಳಿಸಿ ಗೆಲುವಿನ ಗುರಿಮುಟ್ಟಿತು.

ಕುಸಿದ ನಮೀಬಿಯಾ: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನಮೀಬಿಯಾಗೆ ತಂಡಕ್ಕೆ ಉತ್ತಮ ಆರಂಭ ಸಿಗಲಿಲ್ಲ. ವ್ಯಾನ್ 10 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಆ ಬಳಿಕ ನಿಕೊ ಸಹ 2 ರನ್ ಗಳಿಸಿ ಔಟಾದರು. ಜ್ಯಾನ್ 1 ರನ್ ಗಳಿಸಿ ವಿಕೆಟ್ ನೀಡಿದರೆ, ಸ್ಮಿತ್ 3, ಗ್ರೀನ್ 1 ವೇಸ್ 1, ಟ್ರಂಪೆಲ್ಮನ್ 7 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಮೀಬಿಯಾದ ನಾಯಕ ಗೆರ್ಹಾರ್ಡ್ ಎರಾಸ್ಮಸ್ ಗಳಿಸಿದ 36 ರನ್ ತಂಡದ ಪರ ಗರಿಷ್ಠ ಸ್ಕೋರ್ ಆಯಿತು. ಇನ್ನುಳಿದಂತೆ ನಮೀಬಿಯಾದ ಇತರ ಬ್ಯಾಟರ್‌ಗಳು ಆಸ್ಟ್ರೇಲಿಯಾದ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ತಂಡವು 17 ಓವರ್‌ಗಳಲ್ಲಿ 72 ರನ್‌ಗೆ ಸರ್ವಪತನ ಕಂಡಿತು. ಕಾಂಗರೂ ಪರ ಆಡಮ್ ಜಂಪಾ 4 ವಿಕೆಟ್ ಉರುಳಿಸಿ ಮಿಂಚಿದರೆ, ಮಾರ್ಕಸ್ ಸ್ಟೊಯಿನಿಸ್, ಜೋಶ್ ಹ್ಯಾಜಲ್‌ವುಡ್ 2 ಹಾಗೂ ಪ್ಯಾಟ್ ಕಮಿನ್ಸ್, ನಾಥನ್ ಎಲ್ಲಿಸ್ ತಲಾ ಒಂದು ವಿಕೆಟ್ ಪಡೆದರು.

ಸ್ಕೋರ್
ನಮಿಬಿಯಾ: 72, ಎರಾಸ್ಮಸ್ 36, ಜಂಪಾ 12/4
ಆಸ್ಟ್ರೇಲಿಯಾ: 74/1, ಹೆಡ್ 34★, ವಾರ್ನರ್ 20

ಮಿಂಚಿದ ಜಂಪಾ
ನಮಿಬಿಯಾ ವಿರುದ್ಧದ ಪಂದ್ಯದಲ್ಲಿ ಲೆಗ್ ಸ್ಪಿನ್ನರ್ ಆ್ಯಡಮ್ ಜಂಪಾ 4 ವಿಕೆಟ್ ಪಡೆದು ಮಿಂಚಿದರು. ಎದುರಾಳಿಗಳನ್ನು ಆಡಲು ಬಿಡದ ಅವರು, ಮಾಡಿದ 4 ಓವರ್‌ಗಳಲ್ಲಿ 3 ಸರಾಸರಿಯೊಂದಿಗೆ ಕೇವಲ 12 ರನ್ ಬಿಟ್ಟುಕೊಟ್ಟು 4 ವಿಕೆಟ್ ಕಬಳಿಸಿದರು.

ಆಸ್ಟ್ರೇಲಿಯಾಗೆ ಸುಲಭದ ತುತ್ತು
ಸುಲಭ ಗುರಿ ಬೆನ್ನುಹತ್ತಿದ ಆಸ್ಟ್ರೇಲಿಯಾ ಪರ ಟ್ರಾವಿಸ್ ಹೆಡ್ ಮತ್ತು ಡೇವಿಡ್ ವಾರ್ನರ್ ಇಬ್ಬರು ಎಡಗೈ ಸ್ಫೋಟಕ ಬ್ಯಾಟಿಂಗ್ ಮಾಡಿದರು. ವಾರ್ನರ್ ಕೇವಲ 8 ಎಸೆತಗಳಲ್ಲಿ 20 ರನ್ ಗಳಿಸಿ ಔಟಾದರು. ಆ ಬಳಿಕ ಜತೆಗೂಡಿದ ನಾಯಕ ಮಿಚೆಲ್ ಮಾರ್ಷ್, ಟ್ರಾವಿಸ್ ಹೆಡ್ ಪಂದ್ಯವನ್ನು ವೇಗವಾಗಿ ಮುಗಿಸಿದರು. ಹೆಡ್ ಅಜೇಯ 34 ರನ್ ಗಳಿಸಿದರೆ, ಮಾರ್ಷ್ 14 ರನ್ ಬಾರಿಸಿದರು.



ನಾವು ಟಿ20 ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ ವಿರುದ್ಧ ಕೆಲವು ಪ್ರಬಲ ಹೋರಾಟಗಳನ್ನು ನಡೆಸಿದ್ದೇವೆ. ಆದ್ದರಿಂದ ನಾವು ಅವರನ್ನು ಟೂರ್ನಿಯಿಂದ ಹೊರಹಾಕಲು ಸಾಧ್ಯವಾದರೆ, ಅದು ನಮ್ಮ ಹಿತಾಸಕ್ತಿಗೆ ಮತ್ತು ಎಲ್ಲರಿಗೂ ಒಳ್ಳೆಯದು. ಇದು ನೋಡಲು ಆಸಕ್ತಿದಾಯಕವಾಗಿದೆ. ಅದಲ್ಲದೆ ಇಂಗ್ಲೆಂಡ್ ಹಾಗೂ ಆಸ್ಟ್ರೇಲಿಯಾ ಪಂದ್ಯವು ಯಾವಾಗಲೂ ರೋಚಕವಾಗಿರುತ್ತದೆ.

– **ಜೋಷ್ ಹ್ಯಾಜಲ್‌ವುಡ್**, ಕ್ರಿಕೆಟಿಗ

ಫುಟ್‌ಬಾಲ್ ದಿಗ್ಗಜ ಚಥುನ್ನಿ ವಿಧಿವಶ

ದೆಹಲಿ: ಭಾರತೀಯ ಮೂಲದ ಖ್ಯಾತ ಫುಟ್‌ಬಾಲ್ ತರಬೇತುದಾರ ಮತ್ತು ಭಾರತದ ಮಾಜಿ ಆಟಗಾರ ಟಿ.ಕೆ.ಚಥುನ್ನಿ ತಮ್ಮ 79 ನೇ ವಯಸ್ಸಿನಲ್ಲಿ ನಿಧನರಾದರು. ಈ ಮೊದಲು ಕ್ಯಾನ್ಸರ್ ಸಂಬಂಧಿತ ಕಾಯಿಲೆಗಳಿಂದ ಬಳಲುತ್ತಿದ್ದ ಅವರು, ಕೊಚ್ಚಿ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು. 1990ರಲ್ಲಿ ಕೇರಳ ಪೊಲೀಸ್ ತಂಡ ಮೊದಲ ಬಾರಿಗೆ ಫೆಡರೇಷನ್ ಕಪ್ ಜಯಿಸಿತ್ತು. ಅವರು ಭಾರತೀಯ ದಂತಕಥೆ ಐ.ಎಂ ವಿಜಯನ್ ಮತ್ತು ಮಾಜಿ ರಾಷ್ಟ್ರೀಯ ಆಟಗಾರ ಜೋ ಪಾಲ್ ಅಂಚೇರಿ ಸೇರಿದಂತೆ ಅನೇಕ ಕ್ರೀಡಾಪಟುಗಳನ್ನು ರೂಪಿಸಿದ ಹೆಗ್ಗಳಿಕೆ ಚಥುನ್ನಿಯವರದು.. ಮೋಹನ್ ಬಗಾನ್, ಸಾಲ್‌ಗಾಂವ್ಕರ್ ಎಫ್ ಸಿ, ಡೆಂಪೊ ಎಸ್ ಸಿ, ಚರ್ಚಿಲ್ ಬ್ರದರ್ಸ್ ಮತ್ತು ಎಫ್ ಸಿ ಕೊಚ್ಚಿನ್ ನಂತಹ ಅಗ್ರ ಭಾರತೀಯ ಕ್ಲಬ್‌ಗಳ ಕೋಚ್ ಆಗಿ ಚಥುನ್ನಿ ನಿರ್ವಹಿಸಿದ್ದರು. ನಾಲ್ಕು ದಶಕಗಳ ನಿರ್ವಹಣಾ ವೃತ್ತಿಜೀವನದಲ್ಲಿ ಚಿರಾಗ್ ಯುನೈಟೆಡ್ ಮತ್ತು ಜೋಸ್ಕೊ ಎಫ್ ಸಿಯ ಉಸ್ತುವಾರಿ ವಹಿಸಿದ್ದರು. ಅಲ್ಲದೆ ಹಿರಿಯರ ಮಟ್ಟದಲ್ಲಿ ಕೇರಳ, ಗೋವಾ, ಸರ್ವಿಸಸ್ ಮತ್ತು ಮಹಾರಾಷ್ಟ್ರ ಪರ ಚಥುನ್ನಿ ಆಡಿದ್ದಾರೆ.

ಅತ್ತೆಯ ಕೊಂದ ಸೊಸೆಗೆ ಗಲ್ಲು ಶಿಕ್ಷೆ

ರೇವಾ: ಅತ್ತೆಯನ್ನು 95 ಬಾರಿ ಕುಡುಗೋಲಿನಿಂದ ಇರಿದು ಕೊಂದ ಸೊಸೆಗೆ ಮಧ್ಯಪ್ರದೇಶದ ರೇವಾ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿದೆ. ಕಂಚನ್ ಕೋಲ್(24) ಮಹಿಳೆ ಕೌಟುಂಬಿಕ ಕಲಹ ಹಿನ್ನೆಲೆ ಅತ್ತೆಯನ್ನು ಕುಡುಗೋಲಿನಿಂದ ಚುಚ್ಚಿ ಹತ್ಯೆಗೈದಿದ್ದಳು.ಸರೋಜ್ ಕೋಲ್(50) ಮೃತ ದುರ್ದೈವಿ. ಘಟನೆ ಸಂಬಂಧ ಮಹಿಳೆಯನ್ನು ಅಪರಾಧಿ ಎಂದು ಘೋಷಿಸಿರುವ ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿದೆ. ಅತ್ಮೈಲಾ ಗ್ರಾಮದಲ್ಲಿ ವಾಸವಿದ್ದ ಕುಟುಂಬದಲ್ಲಿ ಅತ್ತೆ ಸೊಸೆ ನಡುವೆ ಅಗಾಗೆ ಜಗಳ ನಡೆಯುತ್ತಿತ್ತು. ಅತ್ತೆ ಮನೆಯಲ್ಲಿ ಒಬ್ಬರೇ ಇದ್ದ ಸಮಯ ನೋಡಿ ಸೊಸೆ ಕಂಚನ್ ಕುಡುಗೋಲಿನಿಂದ ಕೊಚ್ಚಿ ಕೊಲೆ ಮಾಡಿದ್ದಾರೆ. ತಾಯಿಯ ಸ್ಥಿತಿಯನ್ನು ಕಂಡ ಮಗ ತಕ್ಷಣ ಆಸ್ಪತ್ರೆಗೆ ಕರೆದುಕೊಂಡು ಹೋದರೂ ಅಷ್ಟರಲ್ಲೇ ಮೃತಪಟ್ಟಿದ್ದಾರೆ ಎಂದು ವೈದ್ಯರು ಘೋಷಿಸಿದ್ದರು. ವಿಚಾರಣೆ ಬಳಿಕ ನ್ಯಾಯಾಲಯ ಸೊಸೆ ಕಂಚನ್ ಅಪರಾಧಿ ಎಂದು ಶಿಕ್ಷೆ ಪ್ರಕಟಿಸಿದೆ. ಮೃತ ಸರೋಜ್ ಕೋಲ್ ಪತಿಯನ್ನೂ ಕೊಲೆಗೆ ಪ್ರಚೋದನೆ ನೀಡಿದ ಹಿನ್ನೆಲೆ ಸಹ ಆರೋಪಿಯೆಂದು ಪರಿಗಣಿಸಲಾಗಿತ್ತು ಸಾಕ್ಷ್ಯಾಧಾರಗಳ ಕೊರತೆ ಹಿನ್ನೆಲೆ ಅವರನ್ನು ಖುಲಾಸೆಗೊಳಿಸಲಾಗಿದೆ.

4 ವರ್ಷದ ಮಗುವಿನಲ್ಲಿ ಹಕ್ಕಿ ಜ್ವರ ಪತ್ತೆ!

ಪಶ್ಚಿಮ ಬಂಗಾಳ: ನಾಲ್ಕು ವರ್ಷದ ಮಗುವಿನಲ್ಲಿ ಮಾನವರಲ್ಲಿ ಕಾಣಿಸಿಕೊಳ್ಳುವ ಹೆಚ್9ಎನ್2 ಹಕ್ಕಿ ಜ್ವರ ಪತ್ತೆಯಾಗಿದೆ.

ವಿಶ್ವ ಆರೋಗ್ಯ ಸಂಸ್ಥೆ ಪ್ರಕರಣವನ್ನು ದೃಢಪಡಿಸಿದ್ದು ಇದು ಭಾರತದಲ್ಲಿ ಕಾಣಿಸಿಕೊಂಡ ಎರಡನೇ ಪ್ರಕರಣವಾಗಿದೆ. ತೀವ್ರ ಉಸಿರಾಟದ ತೊಂದರೆ, ಜ್ವರ, ಕಿಬ್ಬೊಟ್ಟೆ ನೋವಿ ನಿಂದ ಬಳಲುತ್ತಿರುವ ಮಗುವನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದ್ದು 3 ತಿಂಗಳ ಬಳಿಕ ಚೇತರಿಕೆ ಕಂಡ ಹಿನ್ನೆಲೆ ಡಿಸ್ಚಾರ್ಜ್ ಮಾಡಲಾಗಿತ್ತು. ಮೂಗಿನ ದ್ರವದ ಮಾದರಿ ಯನ್ನು ಕೋಲ್ಕತ್ತಾದ ಸೋಂಕು ಸಂಶೋಧನೆ ಮತ್ತು ರೋಗನಿರ್ಣಯ ಪ್ರಯೋಗಾಲಯಕ್ಕೆ ರವಾನಿಸಲಾಗಿತ್ತು. ಹೆಚ್9ಎನ್2 ಮತ್ತು ರೈನೋ ವೈರಸ್ ದೃಢಪಟ್ಟಿತ್ತು ಎಂದು ಡಬ್ಲ್ಯುಹೆಚ್‌ಒ ಮಾಹಿತಿ ನೀಡಿದೆ. ಸೋಂಕಿಗೆ ಗುರಿಯಾದ ಮಗುವಿನ ಮನೆಯ ಸುತ್ತಮುತ್ತ ಕೋಳಿಗಳ ಒಡನಾಟವಿದ್ದು, ಸದ್ಯ ಮಗುವಿನ ನೆರೆಮನೆಯಲ್ಲಿ ಯಾರಿಗೂ ಉಸಿರಾಟದ ಸಮಸ್ಯೆ ಕಂಡುಬಂದಿಲ್ಲ ಎಂದು ಹೇಳಲಾಗಿದೆ. 2019ರ ಬಳಿಕ ಪಶ್ಚಿಮ ಬಂಗಾಳದಲ್ಲಿ ಕಂಡುಬಂದಿದ್ದು ಇದು ಎರಡನೇ ಪ್ರಕರಣವಾಗಿದೆ.

ನೆದರ್ಲೆಂಡ್ಸ್ ವಿರುದ್ಧದ ಪಂದ್ಯ ಡ್ರಾ | 3 ಪಂದ್ಯಗಳಲ್ಲಿ ಒಂದೇ ಅಂಕ

ವಿಶ್ವಕಪ್‌ನಿಂದ ಹೊರಬಿದ್ದ ಲಂಕಾ

ಫ್ಲೋರಿಡಾ: ಇಲ್ಲಿ ನಡೆಯಬೇಕಿದ್ದ ಶ್ರೀಲಂಕಾ ಹಾಗೂ ನೇಪಾಳ ನಡುವಣ ಟಿ20 ಪಂದ್ಯ ಮಳೆಯಿಂದಾಗಿ ಒಂದೂ ಎಸೆತ ಇಲ್ಲದೆ ರದ್ದಾಗಿದ್ದು, ಆ ಮೂಲಕ ಶ್ರೀಲಂಕಾ ಟೂರ್ನಿಯಿಂದ ಹೊರಬಿದ್ದಿದೆ. ವಿಶ್ವಕಪ್ ಈಗಾಗಲೇ ರೋಚಕ ಹಂತಕ್ಕೆ ತಲುಪಿದ್ದು, ಎಲ್ಲ ತಂಡಗಳು ಸೂಪರ್ 8ನಲ್ಲಿ ಸ್ಥಾನ ಪಡೆಯಲು ಕಸರತ್ತು ನಡೆಸಿವೆ.

ಮೂರು ಪಂದ್ಯಗಳನ್ನು ಆಡಿರುವ ಶ್ರೀಲಂಕಾ ಮೊದಲಿನ ಎರಡು ಪಂದ್ಯಗಳಲ್ಲಿ ಸೋತಿದೆ. ಮೂರನೇ ಪಂದ್ಯ ಡ್ರಾನಲ್ಲಿ ಕೊನೆಗೊಂಡಿದೆ. ಹೀಗಾಗಿ ಕೇವಲ ಒಂದು ಅಂಕ ಗಳಿಸಿರುವ ಲಂಕಾ ಬಿ ಗುಂಪಿನಲ್ಲಿ ಕೊನೆಯ ಸ್ಥಾನದಲ್ಲಿದೆ.

ಲೆಕ್ಕಚಾರಗಳ ಪ್ರಕಾರ ಹಸರಂಗ ಪಡೆ ಸೂಪರ್–8 ತಲುಪಲು ಅಸಾಧ್ಯವಾಗಿದೆ. ಈ ಮೊದಲು ಲಂಕಾ ದಕ್ಷಿಣ ಆಫ್ರಿಕಾ ಮತ್ತು ಬಾಂಗ್ಲಾದೇಶ ವಿರುದ್ಧ ಕಂಡಿತ್ತು. ಇದಾದ ನಂತರ ನೇಪಾಳ ವಿರುದ್ಧದ ಪಂದ್ಯ ಗೆದ್ದು ಟೂರ್ನಿಯಲ್ಲಿ ಉಳಿಯುವ ನಿರೀಕ್ಷೆಯಲ್ಲಿದ್ದ ಲಂಕಾ ತಂಡಕ್ಕೆ ಮಳೆ ಅಡ್ಡಿಯಾಗಿದೆ. ಹೀಗಾಗಿ ಇನ್ನುಳಿದ ಪಂದ್ಯದಲ್ಲಿ ಗೆದ್ದರೂ ಶ್ರೀಲಂಕಾ ಕೇವಲ 3 ಅಂಕಗಳಿಗೆ ತಲುಪಲು ಸಾಧ್ಯವಾಗುತ್ತದೆ.

ಸೂಪರ್– 8ಕ್ಕೆ ಆಫ್ರಿಕಾ ಪ್ರವೇಶ
ಡಿ ಗುಂಪಿನಲ್ಲಿರುವ ದಕ್ಷಿಣ ಆಫ್ರಿಕಾ ತಂಡ ಸೂಪರ್–8ಕ್ಕೆ ಅರ್ಹತೆ ಪಡೆದಿದೆ. ಆಫ್ರಿಕಾ ಇದುವರೆಗೆ ಆಡಿದ ಮೂರೂ ಪಂದ್ಯಗಳನ್ನು ಗೆದ್ದು 6 ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದೆ. ಐಡೆನ್ ಮರ್ಕ್ರಾಮ್ ನಾಯಕತ್ವದಲ್ಲಿ ಟಿ20 ವಿಶ್ವಕಪ್ ಆಡುತ್ತಿರುವ ದಕ್ಷಿಣ ಆಫ್ರಿಕಾ ತಂಡ ತನ್ನ ಮೊದಲ ಪಂದ್ಯದಲ್ಲಿ ಶ್ರೀಲಂಕಾವನ್ನು 6 ವಿಕೆಟ್‌ಗಳಿಂದ ಸೋಲಿಸಿತ್ತು. ಬಳಿಕ ನೆದರ್ಲೆಂಡ್ಸ್ ವಿರುದ್ಧ 4 ವಿಕೆಟ್‌ಗಳಿಂದ ಗೆಲುವು ಕಂಡಿತು. ತಮ್ಮ ಮೂರನೇ ಪಂದ್ಯದಲ್ಲಿ ಹರಿಣಗಳ ಪಡೆ ಕೊನೆಯ ಎಸೆತದಲ್ಲಿ ಬಾಂಗ್ಲಾದೇಶವನ್ನು 4 ರನ್‌ಗಳಿಂದ ಸೋಲಿಸಿದರು. ಮುಂದಿನ ಪಂದ್ಯವನ್ನು ನೇಪಾಳ ವಿರುದ್ಧ ಆಡಲಿದೆ.

ಫಿಫಾ ವಿಶ್ವಕಪ್ ಅರ್ಹತಾ ಟೂರ್ನಿಯಿಂದ ಹೊರಬಿದ್ದ ಭಾರತ

ಕತಾರ್ ಮೋಸದಾಟ: ಭಾರತಕ್ಕೆ ಸೋಲು

ದೋಹಾ: ಇಲ್ಲಿ ನಡೆದ 2026ರ ಫಿಫಾ ವಿಶ್ವಕಪ್ ಅರ್ಹತಾ ಟೂರ್ನಿಯ ಏಷ್ಯನ್ ಚಾಂಪಿಯನ್ ಪಂದ್ಯದಲ್ಲಿ ಭಾರತ, ಕತಾರ್ ತಂಡದ ವಿರುದ್ಧ ಸೋತು, ಟೂರ್ನಿಯಿಂದ ಹೊರಬಿದ್ದಿದೆ. ಅರ್ಹತಾ ಟೂರ್ನಿಯ 2ನೇ ಹಂತದ ಕೊನೆಯ ಪಂದ್ಯದ 75 ನಿಮಿಷದಲ್ಲಿ ನಡೆದ ವಿವಾದಾತ್ಮಕ ಗೋಲಿನ ಪರಿಣಾಮವಾಗಿ ಕತಾರ್ ವಿರುದ್ಧ 2–1 ಗೋಲುಗಳಿಂದ ಸೋತ ಭಾರತದ ಆಟ ಕೊನೆಗೊಂಡಿದೆ.

ಏನಿದು ವಿವಾದ?: ರೋಚಕ ಪಂದ್ಯದಲ್ಲಿ 37ನೇ ನಿಮಿಷದಲ್ಲಿ ಚಾಂಗ್ಟೆ ಗೋಲು ಹೊಡೆಯುವ ಮೂಲಕ ಭಾರತಕ್ಕೆ 1–0 ಮುನ್ನಡೆ ತಂದುಕೊಟ್ಟರು. 75 ನಿಮಿಷದಲ್ಲಿ ಕತಾರ್ ಗೋಲ್ ಗಳಿಸಿತು. ಈ ವೇಳೆ ಚೆಂಡು ಗೆರೆಯನ್ನು ದಾಟಿ ಹೊರಗಡೆ ಹೋಗಿತ್ತು. ಬಾಲ್ ಹೊರಗಡೆ ಹೋಗಿದ್ದರೂ ಕತಾರ್ ಆಟಗಾರ ಅಲ್ ಹಸನ್ ಚೆಂಡನ್ನು ಎಳೆದು ಯೂಸುಫ್ ಅಯೇಮ್ ನೀಡಿದರು. ಯೂಸೂಫ್ ಅವರು ಚೆಂಡನ್ನು ಗೋಲ್ ಪೆಟ್ಟಿಗೆ ತಳ್ಳಿದರು. ಗೋಲ್ ಬಾರಿಸಿದ ಬಳಿಕ ಕತಾರ್ ಆಟಗಾರರು ಸಂಭ್ರಮಿಸತೊಡಗಿದರು. ಕೂಡಲೇ ಭಾರತದ ಗೋಲ್ ಕೀಪರ್ ಪ್ರೀತ್ ಸಂಧು ರೆಫರಿ ಬಳಿ ಹೋಗಿ ಬಾಲ್ ಚೆಂಡು ದಾಟಿ ಹೊರಗಡೆ ಬಂದಿದೆ. ಹೀಗಾಗಿ ಈ ಗೋಲನ್ನು ಪರಿಗಣಿಸಬಾರದು ಎಂದು ಪರಿಪರಿಯಾಗಿ ಮನವಿ ಮಾಡಿದರೂ. ಭಾರತದ ಮನವಿಯನ್ನು ರೆಫ್ರಿ ಪುರಸ್ಕರಿಸಲಿಲ್ಲ. 85ನೇ ನಿಮಿಷದಲ್ಲಿ ಕತಾರ ಮತ್ತೊಂದು ಗೋಲು ಹೊಡೆದು 2 ಗೋಲುಗಳ ಮುನ್ನಡೆ ಪಡೆದು ಕೊನೆಗೆ ಜಯ ಸಾಧಿಸಿತು.

ವಿಚಾರಣೆಗೆ ಎಐಎಫ್‌ಎಫ್ ಒತ್ತಾಯ: ಕತಾರ್ ತಂಡಕ್ಕೆ ನೀಡಿದ ವಿವಾದಾತ್ಮಕ ಗೋಲಿಗೆ ಸಂಬಂಧಿಸಿ ವಿಚಾರಣೆ ನಡೆಸಬೇಕು ಎಂದು ಅಖಿಲ ಭಾರತ ಫುಟ್ಬಾಲ್ ಫೆಡರೇಷನ್ ಒತ್ತಾಯಿಸಿದೆ. ಈ ಬಗ್ಗೆ ಅಧಿಕಾರಿಗಳು ಪ್ರತಿಕ್ರಿಯೆ ನೀಡಿದ್ದು, ತಂಡಕ್ಕೆ ಆಗಿರುವ ಅನ್ಯಾಯದ ಬಗ್ಗೆ ಗಮನಹರಿಸಬೇಕು' ಎಂದು ಎಐಎಫ್‌ಎಫ್ ಅಧ್ಯಕ್ಷ ಕಲ್ಯಾಣ್ ಚೌಬೆ ಬುಧವಾರ ಅಧಿಕಾರಿಗಳನ್ನು ಒತ್ತಾಯಿಸಿದ್ದಾರೆ. ಭಾರತಕ್ಕೆ ನಿರ್ಣಾಯಕವಾಗಿದ್ದ ಈ ಪಂದ್ಯದಲ್ಲಿ ಗೋಲು ಹೊಡೆಯುವ ಕೆಲವೇ ಕ್ಷಣಗಳ ಮೊದಲು ಚೆಂಡು ಅಂಕಣದ ಗೆರೆಯಾಚೆ ಹೋಗಿದ್ದು ಸ್ಪಷ್ಟವಾಗಿದ್ದರೂ ದಕ್ಷಿಣ ಕೊರಿಯಾದ ರೆಫ್ರಿ ಕಿಮ್ ವೂ ಸುಂಗ್ ಎದುರಾಳಿಗೆ ಗೋಲು ನೀಡಿದ್ದಾರೆ. ಈ ಬಗ್ಗೆ ಆಮೂಲಾಗ್ರ ತನಿಖೆ ನಡೆಸಬೇಕು ಎಂದು ಭಾರತ ಕೇಳಿದೆ' ಎಂದು ಚೌಬೆ ಹೇಳಿದ್ದಾರೆ.

ಎಲ್ಲೆಡೆ ವಿವಾದ
ಮತ್ತೊಂದು ಪಂದ್ಯದಲ್ಲಿ ಅಫ್ಘಾನಿಸ್ತಾನ ವಿರುದ್ಧ ಕುವೈತ್ ಗೆದ್ದಿದ್ದು 'ಎ' ಗುಂಪಿನಿಂದ 2ನೇ ತಂಡವಾಗಿ ಅರ್ಹತಾ ಟೂರ್ನಿಯ 3ನೇ ಸುತ್ತಿಗೇರಿದೆ. ಆ ಮೂಲಕ ಭಾರತ ಟೂರ್ನಿಯಿಂದ ಹೊರಬಿದ್ದಿದೆ. ಆದರೆ ಇದೀಗ ಆ ವಿವಾದಾತ್ಮಕ ಗೋಲು ಎಲ್ಲೆಡೆ ಭಾರೀ ಚರ್ಚೆಗೆ ಕಾರಣವಾಗಿದ್ದು, ಸಾಮಾಜಿಕ ಜಾಲತಾಣದಲ್ಲಿ ಭಾರತೀಯ ಫುಟ್ಬಾಲ್ ಅಭಿಮಾನಿಗಳು ಸಿಟ್ಟಾಗಿ ಕತಾರ್ ಮತ್ತು ರೆಫ್ರಿಯ ವಿರುದ್ಧ ಪೋಸ್ಟ್ ಮಾಡುತ್ತಿದ್ದಾರೆ

ದಕ್ಷಿಣ ಭಾರತದ ವುಶು ಸಬ್ ಕ್ರೀಡಾಕೂಟ | ಕರ್ನಾಟಕ ಕ್ರೀಡಾಪಟುಗಳ ಭರ್ಜರಿ ಪ್ರದರ್ಶನ

ಗೆಲುವಿನ ಓಟ ಮುಂದುವರಿಸಿದ ತ.ನಾಡು

ಬಾಗಲಕೋಟೆ: ಇಲ್ಲಿನ ಬಿವಿವಿ ಸಂಘದ ಗೌರಿಶಂಕರ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವ ದಕ್ಷಿಣ ಭಾರತದ ವುಶು ಸಬ್ ಜ್ಯೂನಿಯರ್, ಜ್ಯೂನಿಯರ್, ಸೀನಿಯರ್ ಮಹಿಳಾ ಕ್ರೀಡಾಕೂಟದಲ್ಲಿ ತಮಿಳುನಾಡು ತಂಡ ಗೆಲುವಿನ ಓಟ ಮುಂದುವರೆಸಿದೆ.

ಸೀನಿಯರ್ ಹಾಗೂ ಜ್ಯೂನಿಯರ್ ವಿಭಾಗದಲ್ಲಿ ತಮಿಳುನಾಡಿನ ಕ್ರೀಡಾಪಟುಗಳು 7 ಚಿನ್ನ, ಒಡಿಶಾ 3 ಚಿನ್ನ, ಕೇರಳ 3 ಚಿನ್ನ, ತೆಲಂಗಾಣ 1 ಚಿನ್ನ ಪಡೆದರೆ, ಕರ್ನಾಟಕ 6 ಬೆಳ್ಳಿ 13 ಕಂಚು ಪಡೆದು ಮುನ್ನಡೆ ಸಾಧಿಸಿದೆ.

ಚಾಂಗ್‌ಕೌನ್ ಸೀನಿಯರ್ ವಿಭಾಗದಲ್ಲಿ ಒಡಿಶಾದ ಕೌಶಿಕಾ ರೌಟ್ರೇ ಚಿನ್ನ, ಕರ್ನಾಟಕದ ಸಂಜನಾ ಹಂಚಿನಮನಿ ಬೆಳ್ಳಿ, ರೇಣುಶ್ರೀ ನಂದಿನಿ ಹಾಗೂ ಪ್ರತೀಕ್ಷಾ ಹಿರೇಮಠ ಕಂಚು ಪಡೆದರೆ, ನಾಂಕೌನ್ ವಿಭಾಗದಲ್ಲಿ ಕೇರಳದ ಗೋಪಿಕಾ ವಿ.ಪಿ ಚಿನ್ನ, ಆಂಧ್ರಪ್ರದೇಶದ ಕೆ. ಪೂಜಿತಾಶ್ರುತಿ ಬೆಳ್ಳಿ, ತೆಲಂಗಾಣದ ಒಡಲಕೊಂಡ ಭಾರತಿ ಹಾಗೂ ಕರ್ನಾಟಕದ ಗೌರಿ ಹಿರೇಮಠ ಕಂಚು ಪಡೆದುಕೊಂಡರು.

ಇನ್ನು ತೈಜಿಕೌನ್ ವಿಭಾಗದಲ್ಲಿ ಕೇರಳದ ನಿರಂಜನಾ.ಪಿ ಚಿನ್ನ ಪಡೆದರೆ, ಒಡಿಶಾದ ಪಂಚಮಿ ಸಿಂಗ್ ಬೆಳ್ಳಿ, ಕರ್ನಾಟಕದ ರಾಣಿ ಲಾಯದಗುಂದಿ ಹಾಗೂ ತೆಲಂಗಾಣದ ಒರಿಗೆಲಾ ಅನಿತಾ ಕಂಚು ಪಡೆದಿದ್ದಾರೆ. ಅದರಂತೆ ಬಾಗುವಾರ್ಝೂಂಗ್ ವಿಭಾಗದಲ್ಲಿ ಒಡಿಶಾದ ಜ್ಯೋತ್ಸ್ನಾರಾಣಿ ಜೆನಾ ಚಿನ್ನ ಪಡೆದರೆ, ತಮಿಳುನಾಡಿನ ಎಸ್.ಸುವಶ್ರೀ ಬೆಳ್ಳಿ, ಕರ್ನಾಟಕದ ಪವಿತ್ರಾ, ಭೂತಾಳಿ ಹಾಗೂ ಕೇರಳದ ಜಿತಿಕಾ ಪ್ರೇಮ ಕಂಚು ಪಡೆದರು.

ಇನ್ನುಳಿದಂತೆ ಜಿಯಾನ್ಸು ವಿಭಾಗದಲ್ಲಿ ಒಡಿಶಾದ ಜ್ಯೋತ್ಸ್ನಾ ರಾಣಿ ಮುದುಳಿ ಚಿನ್ನ, ಕರ್ನಾಟಕದ ಸೌಜನ್ಯ ಲಾಯದಗುಂದಿ ಬೆಳ್ಳಿ, ಕರ್ನಾಟಕದ ರುಕ್ಮಿಣಿ ಮುರಕಾಚೆಟ್ಟಿ ಹಾಗೂ ತೆಲಂಗಾಣದ ಲೋಲಮ್ ರಾಜಶ್ರೀ ಕಂಚು ಪಡೆದುಕೊಂಡರು. ನಂದಾವೋ ವಿಭಾಗದಲ್ಲಿ ತೆಲಂಗಾಣದ ಪೋಡುಕಂಟಿ ಪವಿತ್ರಾ ಚೆರ್ರಿ ಚಿನ್ನ, ಕರ್ನಾಟಕದ ತೇಜಸ್ವಿನಿ ಹೊಟ್ಟಿ ಬೆಳ್ಳಿ, ಕರ್ನಾಟಕದ ಅಂಕಿತಾ ಕುಲಕರ್ಣಿ ಹಾಗೂ ಒಡಿಶಾದ ಅನುಷಾ ಬಾರಿಕ್ ಕಂಚು ಪಡೆದುಕೊಂಡರು. ತೈಜಿಯನ್ ವಿಭಾಗದಲ್ಲಿ ತೆಲಂಗಾಣದ ನವೀನಾ ಚಿನ್ನ, ಕರ್ನಾಟಕದ ಅಕ್ಷತಾ ಪಾಟೀಲ ಬೆಳ್ಳಿ, ಒಡಿಶಾದ ತಾನ್ಯಾ ಶ್ರೀವಾಸ್ತವ ಹಾಗೂ ಕರ್ನಾಟಕದ ಅನುಪಮ ಮೇಲಿನಮನಿ ಕಂಚು ಪಡೆದರು. ಕಿಯಾಂಗ್ಸು ವಿಭಾಗದಲ್ಲಿ ತಮಿಳುನಾಡಿನ ಪಿ.ಎ. ಶ್ರೀಯಾ ಚಿನ್ನ, ಕರ್ನಾಟಕದ ಸಹನಾ ಕೊಣ್ಣೂರ ಬೆಳ್ಳಿ, ತೆಲಂಗಾಣದ ಮಲ್ಲರಮ್ ಕವಿತಾ ಹಾಗೂ ಒಡಿಶಾದ ರೀತಾ ಸೆಥಿ ಕಂಚು ಗಳಿಸಿದರು.

ಬಾಗಲಕೋಟೆಯಲ್ಲಿ ನಡೆಯುತ್ತಿರುವ ದಕ್ಷಿಣ ಭಾರತದ ವುಶು ಮಹಿಳೆಯರ ಕ್ರೀಡಾಕೂಟದಲ್ಲಿ ಕರ್ನಾಟಕದ ಕ್ರೀಡಾಪಟು ಕೇರಳದ ಸ್ಪರ್ಧಿಯೊಂದಿಗೆ ಸೆಣಸಾಡಿದರು.

ಜ್ಯೂನಿಯರ್ ವಿಭಾಗದಲ್ಲಿ ಪ್ರಶಸ್ತಿ ಪಡೆದವರ ಪಟ್ಟಿ

- **ಚಾಂಗ್‌ಕೌನ್ ವಿಭಾಗ:** ತಮಿಳುನಾಡಿನ ಡಿ.ಬಾಲಹರ್ಷಿಣಿ (ಚಿನ್ನ), ಕೇರಳದ ಗೌರಿನಂದನ ಎನ್.ಪಿ (ಬೆಳ್ಳಿ), ಕೇರಳದ ಶ್ರೀನಂದಾ.ಎಸ್ ಹಾಗೂ ತಮಿಳುನಾಡಿನ ದಿಬ್ಯಕಾಂತಿ ಓರಂ (ಕಂಚು).
- **ಜಿಯಾನ್ಸು ವಿಭಾಗ:** ತಮಿಳುನಾಡಿನ ಲಕ್ಷ್ಮೀಪ್ರಭಾ. ಎಸ್ (ಚಿನ್ನ), ತೆಲಂಗಾಣದ ಪಾರಿಯಾ ಖಾನಂ (ಬೆಳ್ಳಿ), ತಮಿಳುನಾಡಿನ ಎಸ್.ಇಸ್ಸಿತಾ ಹಾಗೂ ಒಡಿಶಾದ ಮಮಲಿ ಜೆನಾ (ಕಂಚು).
- **ಕಿಯಾಂಗ್ಸು ವಿಭಾಗ:** ತಮಿಳುನಾಡಿದ ಮಿಸ್ಸಬಾ ಪಾಥಿಮಾ ಎ.ಆರ್ (ಚಿನ್ನ), ಕರ್ನಾಟಕದ ಖುಷಿ ವರ್ಮಾ (ಬೆಳ್ಳಿ), ತೆಲಂಗಾಣದ ಜಿ.ಪೂಜಿತಾ ಹಾಗೂ ಕರ್ನಾಟಕದ ಈಶ್ವರಿ ಬೀಳಗಿ (ಕಂಚು).
- **ನಾಂಕೌನ್ ವಿಭಾಗ:** ತಮಿಳುನಾಡಿದ ಶ್ರೀಲಿನಾ.ಎಂ (ಚಿನ್ನ), ಒಡಿಶಾದ ನುಪುರ ಪಟ್ನಾಯಿಕ್ (ಬೆಳಿ), ಕೇರಳದ ಅಪರ್ಣಾ.ಎ ಹಾಗೂ ತಮಿಳುನಾಡಿದ ಧರಿನಿತಾ.ಡಿ (ಕಂಚು).
- **ನಂದಾವೋ ವಿಭಾಗ:** ತಮಿಳುನಾಡಿನ ವೇದಾಶ್ರುತಿ.ಎಸ್ (ಚಿನ್ನ), ಕೇರಳದ ಐಶಾ.ಎನ್ (ಬೆಳ್ಳಿ), ತಮಿಳುನಾಡಿನ ನಿಕ್ಷಿತಾ ವಿ.ಎಸ್ ಹಾಗೂ ಕರ್ನಾಟಕದ ಸುಹಾಸಿನಿ ರಜಪೂತ (ಕಂಚು).
- **ತೈಜಿಕೌನ್ ವಿಭಾಗ:** ಕೇಳರದ ನೇಹಾ ನೌಪಾಯಿ (ಚಿನ್ನ), ತಮಿಳುನಾಡಿನ ಹಶಿನಾ.ಬಿ (ಬೆಳ್ಳಿ), ಕರ್ನಾಟಕದ ನಂದಿತಾಗೌಡರ ಹಾಗೂ ಕೇಳರದ ಅಗ್ನಾ ಎಂ.ಪಿ (ಕಂಚು).
- **ತೈಜಿಯನ್ ವಿಭಾಗ:** ತಮಿಳುನಾಡಿನ ಆಧಿರಾಯಿ ಎಸ್.ಬಿ (ಚಿನ್ನ), ಕೇರಳದ ಲುಹಾ ಸುನೀರ್ ಹಂಸ (ಬೆಳ್ಳಿ), ಕರ್ನಾಟಕದ ಜ್ಯೋತಿ ಲಾಗಲೋಟಿ ಹಾಗೂ ತಮಿಳುನಾಡಿನ ರಬೀಯಾ ಜಖಿಯಾ ಎ.ಜೆ (ಕಂಚು).
- **ತೈಜಿಶಾನ್ ವಿಭಾಗ:** ತಮಿಳುನಾಡಿನ ಎಂ.ಭವತಾರಣಿ (ಚಿನ್ನ), ಒಡಿಶಾದ ಪಾಯಲ್ ಪಟ್ನಾಯಕ್ (ಬೆಳ್ಳಿ), ಕರ್ನಾಟಕದ ಮಹೇಕ್‌ಜಬೀನ್ ನದಾಫ್ ಹಾಗೂ ಕರ್ನಾಟಕದ ಸವಿತಾ ಹುಬ್ಬಳ್ಳಿ (ಕಂಚು).

ಜುಲೈಗೆ ಪೂರ್ಣ ಬಜೆಟ್: ನಿರ್ಮಲಾ ಸೀತಾರಾಮನ್

ಅಧಿಕಾರ ಸ್ವೀಕರಿಸಿದ ವಿತ್ತ ಸಚಿವೆ

ದೆಹಲಿ: ಕೇಂದ್ರ ವಿತ್ತ ಸಚಿವೆಯಾಗಿ ನಿರ್ಮಲಾ ಸೀತಾರಾಮನ್ ಬುಧವಾರ ಅಧಿಕಾರ ಸ್ವೀಕರಿಸಿದರು. ಜುಲೈನಲ್ಲಿ ಅವರು 2024– 25ನೇ ಹಣಕಾಸು ವರ್ಷಕ್ಕೆ ಪೂರ್ಣ ಪ್ರಮಾ ಣದ ಬಜೆಟ್ ಮಂಡಿಸುವರು. ಅದು ಅವರು ಮಂಡಿಸಲಿರುವ 6ನೇ ಬಜೆಟ್ ಆಗಿರಲಿದೆ.

ಕರ್ನಾಟಕದಿಂದ ರಾಜ್ಯಸಭೆಗೆ ಆಯ್ಕೆಯಾಗಿ ರುವ ನಿರ್ಮಲಾ ಸೀತಾರಾಮನ್ ಅವರು ಬುಧವಾರ ಸಂಸತ್ ಭವನದ ನಾರ್ಥ್ ಬ್ಲಾಕ್‌ನ ಕಚೇರಿ ತಲುಪಿ 2ನೇ ಅವಧಿಗೆ ಹಣಕಾಸು ಸಚಿವೆಯಾಗಿ ಅಧಿಕಾರ ವಹಿಸಿಕೊಂಡರು. ಅವರನ್ನು ಹಣಕಾಸು ಕಾರ್ಯದರ್ಶಿ ಟಿ.ವಿ. ಸೋಮನಾಥನ್ ಮತ್ತು ಇತರೆ ಉನ್ನತ ಅಧಿಕಾ ರಿಗಳು ಸ್ವಾಗತಿಸಿದರು. ಹಣಕಾಸು ಖಾತೆ ಸಹಾಯಕ ಸಚಿವ ಪಂಕಜ್ ಚೌಧರಿ ಉಪಸ್ಥಿತರಿದ್ದರು.

ಮುಂದಿನ ತಿಂಗಳು ವಿತ್ತ ಸಚಿವೆ ಮಂಡಿಸಲಿರುವ ಬಜೆಟ್, ಮೋದಿ 3.0 ಸರಕಾರದ ಆದ್ಯತೆಗಳು ಮತ್ತು ವಿಕಸಿತ ಭಾರತದ ಪರಿಕಲ್ಪನೆಗೆ ನಿರ್ದೇಶನವಾಗಲಿವೆ ಎಂದೇ ವಿಶ್ಲೇಷಿಸಲಾಗುತ್ತಿದೆ. ಸಾರ್ವತ್ರಿಕ ಚುನಾವಣೆ ಇದ್ದ ಕಾರಣ ಫೆಬ್ರವರಿಯಲ್ಲಿ 2 ತಿಂಗಳ ಅವಧಿಗಷ್ಟೇ ಬಜೆಟ್ ಮಂಡಿಸಿದ್ದರು.

66 ಕೋಟಿ ರು. ಮೌಲ್ಯದ ಯಾಬಾ ಮಾತ್ರೆ ವಶಕ್ಕೆ

ಸಿಲ್ಚಾರ್: ಅಸ್ಸಾಂ ಪೊಲೀಸರ ವಿಶೇಷ ತನಿಖಾ ದಳ 66 ಕೋಟಿ ರೂ ಮೌಲ್ಯದ ಯಾಬಾ ಮಾತ್ರೆಗಳನ್ನು ವಶಕ್ಕೆ ಪಡೆದಿದ್ದು ಮೂವರನ್ನು ಬಂಧಿಸಿದೆ.

ಅಸ್ಸಾಂನ ಕರಿಮ್‌ಗಂಜ್ ಪ್ರದೇಶದಲ್ಲಿ ವಾಹನದಲ್ಲಿ ಸಾಗಿಸಲಾಗುತ್ತಿದ್ದ 2,20,000 ಯಾಬಾ ಮಾತ್ರೆ ಗಳನ್ನು ಸೀಜ್ ಮಾಡಲಾಗಿದ್ದು ಮೂವರು ಡ್ರಗ್ಸ್ ವ ್ಯಾ ಪಾ ರ ಿ ಗ ಳ ನ ್ನ ು ಬಂಧಿಸಲಾಗಿದೆ. ಬಂಧಿತರನ್ನು ತ್ರಿಪುರ ಮೂಲದವರು ಎಂದು ಹೇಳಲಾಗಿದ್ದು ಮಾದಕ ವಸ್ತು ಮಿಜೋರಾಂನಿಂದ ಸಾಗಾಟ ಮಾಡಲಾಗುತ್ತಿತ್ತು.

ಅಸ್ಸಾಂ ಪೊಲೀಸ್ ಇನ್‌ಸ್ಪೆಕ್ಟರ್ ಜನರಲ್ ಪಾರ್ಥ ಸಾರಥಿ ಮಹಂತಾ ನೇತೃತ್ವದಲ್ಲಿ ಖಚಿತ ಮಾಹಿತಿ ಮೇರೆಗೆ ಈ ದಾಳಿ ನಡೆದಿದ್ದು ಬಾದರ್‌ಪುರ್‌ನಲ್ಲಿ ಡ್ರಗ್ಸ್ ಸಾಗಾಟ ಮಾಡಲಾಗುತ್ತಿದ್ದ ವಾಹನವನ್ನು ವಶಕ್ಕೆ ಪಡೆಯಲಾಗಿದೆ. ಬೊಲೆರೊ ವಾಹನದಲ್ಲಿ ಸೀಕ್ರೆಟ್ ಚೇಂಬರ್ ರಚಿಸಿ ಡ್ರಗ್ಸ್‌ಗಳನ್ನು ಅಡಗಿಸಿಡಲಾಗಿತ್ತು. ಬಂಧಿತರಿಂದ ಮಾದಕ ವಸ್ತು ಸಾಗಾಟದ ಬಗ್ಗೆ ಹೆಚ್ಚಿನ ಮಾಹಿತಿ ಕಲೆ ಹಾಕಲಾಗುತ್ತಿದೆ.

ಮೈತ್ರೇಯ ಋಷಿಗಳ ಶಾಪಕ್ಕೆ ಗುರಿಯಾದ

ಕೌರವ ವೆಂಕಟೇಶ್ ತಂದ ಕೊಕೇನ್

ಬಿ ಪಾಸಿಟಿವ್

ಕೈಲಾಗದು ಎಂದು!

ಬರೆದು ಕೊಡ್ತೀನಿ ನಿಮಗೆ, ಇದು ಆಗುವ ಮಾತಲ್ಲ ಸಹೋದ್ಯೋಗಿ ನುಡಿದಾಗ ಕೊಂಚ ವಿಚಲಿತಳಾದೆ. ಹೊಸ ನ್ಯೂಸ್‌ಲೆಟರ್ ಪ್ರಾರಂಭಿಸುವ ಪ್ರಸ್ತಾವನೆ ಇಟ್ಟಿದ್ದೆ. ಕೇವಲ 15 ದಿನಗಳು ಉಳಿದಿದ್ದವು. ಕಷ್ಟಪಟ್ಟು ಮಾಡಿಯೇ ಬಿಡೋಣ ಎಂದು ಸವಾಲನ್ನು ಸ್ವೀಕರಿಸಿಯೇ ಬಿಟ್ಟೆ. ಸುಸೂತ್ರವಾಗಿ ಸಾಗದಿದ್ದರೂ, ಮನಸ್ಸನ್ನು ಅದರ ಮೇಲೆಯೇ ಕೇಂದ್ರೀಕರಿಸಿ, ಸಭೆಯ ದಿನ ಮುಖ್ಯ ಅತಿಥಿಗಳು ಪತ್ರಿಕೆಯನ್ನು ಬಿಡುಗಡೆ ಮಾಡಿದಾಗ ಆದ ಖುಷಿ ಅಷ್ಟಿಷ್ಟಲ್ಲ. 'ಅಯ್ಯೋ, ಕಷ್ಟ ಆಗುತ್ತದೆ, ಹಿಡಿದ ಕೆಲಸ ಮುಗಿಸಲು ಆಗದಿದ್ದರೆ? ತುಂಬಾ ಸಮಯ ಹಿಡಿಸುತ್ತದೆ,' ಈ ರೀತಿಯ ಯೋಚನೆಗಳು ಹೊಸ ಕೆಲಸಕ್ಕೆ ಮುಂದಾಗುವುದನ್ನು ತಡೆಯುತ್ತದೆ. ಒಬ್ಬಾಕೆಗೆ ಇಂಜಿನಿಯರಿಂಗ್ ಮುಗಿಸಿದ ತಕ್ಷಣವೇ ಮದುವೆ ಆಯಿತು. ನಂತರ ತಾನು ಮನೆಗೆ ಸೀಮಿತಳಾಗಿಬಿಟ್ಟೆ ಎಂದು ಬೇಸರ ಕಾಡತೊಡಗಿತು. ವೃತ್ತಿ ಸಮಾಲೋಚನೆಗೆ ನನ್ನ ಬಳಿ ಕಳುಹಿಸಿದರು. ಈ ವಯಸ್ಸಿನಲ್ಲಿ ಓದುವುದು ಕಷ್ಟ, ಮನೆಯಲ್ಲಿ ತುಂಬಾ ಕೆಲಸ, ಗಂಡ ಏನನ್ನುತ್ತಾನೋ, ನೆಂಟರು ಲೇವಡಿಮಾಡಬಹುದು

ಹೀಗೆ ದೊಡ್ಡಪಟ್ಟಿಯೇ ಇತ್ತು ಅವಳ ಬಳಿ. ನೀನು ಹೇಳಿದ ಸಮಸ್ಯೆಗಳು ಅಸಲಿಗೆ ಅರ್ಥವಿಲ್ಲದ ವಿಲಾಪಗಳು ಖಡಾಖಂಡಿತವಾಗಿ ನುಡಿದೆ. 40ರ ಸಮೀಪ ಇದ್ದ ಅವಳಿಗೆ ಸಮಾಲೋಚನೆ ನಡೆಸಿ, ಓದುವುದಕ್ಕೆ ಪ್ರೇರೇಪಿಸುವುದಕ್ಕೆ ಸುಸ್ತಾಯಿತು. ಕೋರ್ಸ್ ಮುಗಿಸಿ ಸಂದರ್ಶನಗಳನ್ನು ಎದುರಿಸಿ, ಕೆಲಸ ಸಿಗಲು ಸುಮಾರು 8 ತಿಂಗಳಾಯಿತು. ಬಯಸಿದ ಕಾರ್ಪೊರೇಟ್ ಸಂಸ್ಕೃತಿ, ಹೊಸದನ್ನು ಕಲಿಯುವ ಅವಕಾಶ ಸಿಕ್ಕಿದ್ದು ಅವಳ ಗೆಲುವು. ಭಯ, ಅನಿಶ್ಚಿತತೆ ಕಾಡುವಾಗ ಮನಸ್ಸು ಕಂಗಾಲಾಗುತ್ತದೆ. ನಿಧಾನವಾಗಿ ಯೋಚಿಸಿ, ಬೇರೆಯವರೊಡನೆ ಸಮಾಲೋಚಿಸಿ ಅದಕ್ಕೆ ಪರಿಹಾರ ಕಂಡುಕೊಳ್ಳಬೇಕು. ನಾವು ತಲುಪಲು ಬಯಸುವ ಗುರಿಯ ಬಗ್ಗೆ ಮಾಹಿತಿ ಕಲೆ ಹಾಕಿ, ಅದಕ್ಕೆ ಪೂರ್ವಭಾವಿ ಸಿದ್ಧತೆ ಮಾಡಿಕೊಂಡು, ಅನಗತ್ಯವಾದುದನ್ನು ಬಿಟ್ಟು, ಕಷ್ಟಪಡಲು ಹಿಂಜರಿಯದಿರಿ. ಕೈಲಾಗದು ಎಂದು ಶುರುವಾಗುವ ಹಾಡು ಕೇಳಿ, ಮನಸ್ಸನ್ನು ದೃಢವಾಗಿರಿಸಿ.

• ಸಹನಾ ಪ್ರಸಾದ್

ಲವ್‌ಎವೆರಿ ಬಾಡಿ

ಈ ತಲೆಮಾರಿನ ಪ್ರಮುಖ ಆರೋಗ್ಯ ಸಮಸ್ಯೆಗಳಲ್ಲಿ ಬೊಜ್ಜು ಅಗ್ರಪಂಕ್ತಿಯಲ್ಲಿದೆ. ಬೆಳಗ್ಗಿನ ವಾಕಿಂಗ್, ಸಂಜೆಯ ಪ್ರಾಣಾಯಾಮ, ಊಟ ಮಾಡುವಾಗ ಮರೆಯದೇ ನೆನಪಾಗುವ ಡಯೆಟ್, ಹೊರಗಿನ ತಿಂಡಿ ತಿನ್ನುವಾಗ ಕಾಡುವ ಭಯ ಒಟ್ಟನಲ್ಲಿ ಸ್ವತಂತ್ರವಾಗಿ ಓಡಾಡಿಕೊಂಡು, ತೆಳ್ಳನೆಯ ದೇಹದವರಂತೆ ಕುಣಿದಾಡಿಕೊಂಡಿರುವ ಸ್ವಾತಂತ್ರ್ಯವಿಲ್ಲದೆ ಬೊಜ್ಜು ದೇಹದವರೆಲ್ಲ ಸಾಕಷ್ಟು ದುಃಖಪಡುತ್ತಲೇ ಇರುತ್ತಾರೆ. ದೇಹದಲ್ಲಿ ಅಗತ್ಯಕ್ಕಿಂತ ಹೆಚ್ಚು ಕೊಬ್ಬಿನಂಶ ಶೇಖರಣೆಗೊಂಡರೆ ಅದು ಬೊಜ್ಜು ಎನ್ನಿಸಿಕೊಳ್ಳುತ್ತದೆ. ದೇಹದ ತೂಕವನ್ನು ಅಸಹನೀಯ ಎಂಬಷ್ಟು ಹೆಚ್ಚಿಸುವ ಇದು ಮುಂದೊಮ್ಮೆ ಹೃದಯ ಸಮಸ್ಯೆಗೂ ಕಾರಣವಾಗಿ ಸಾವಿನ ಭಯವನ್ನೂ ಮೂಡಿಸುತ್ತದೆ. ಆನುವಂಶಿಕವಾಗಿ ಬರುವ ಬೊಜ್ಜನ್ನು ಪಥ್ಯ, ವ್ಯಾಯಾಮಗಳಿಂದ ನಿಯಂತ್ರಣದಲ್ಲಿಡಬಹುದು. ಅದು ಹೆಚ್ಚದಂತೆ ಎಚ್ಚರಿಕೆ ವಹಿಸಬಹುದು. ದೇಹಾಭಿ'ಮಾಣಿ'

• ಪೃಥೆ ಮುನ್ನಿ

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, ಮೊದಲ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್:
vishwavanimagazine@gmail.com



ನಮ್ಮ ಸಂಸ್ಕೃತಿಯಲ್ಲಿ ನೀರಿಗೆ ಹೆಚ್ಚು ಮಹತ್ವವಿದೆ, ಪಾವಿತ್ರ್ಯತೆಯಿದೆ, ದೈವತ್ವವೂ ಇದೆ. ಪ್ರಾಚೀನ ಮಾನವ ತನ್ನ ಬದುಕಿಗೆ ಆಧಾರವೆನಿಸಿದ ಪ್ರಕೃತಿಯನ್ನು ಪೂಜಿಸತೊಡಗಿದ. ನೀರಿಲ್ಲದೆ ಜೀವವಿಲ್ಲ. ಜೀವಿಯ ಅಸ್ತಿತ್ವಕ್ಕೆ ನೀರು ಮತ್ತು ಗಾಳಿ ಮೂಲಾಧಾರ. ಪ್ರಾಣಿ ಮತ್ತು ಸಸ್ಯಗಳ ದೇಹದಲ್ಲಿ ನಡೆಯುವ ಎಲ್ಲ ಪ್ರಕ್ರಿಯೆಗಳಿಗೂ ನೀರು ಅತಿಮುಖ್ಯ ಅಂಶ.

ಜಗದ್ಹೃದಯ
• ಡಾ.ಕರವೀರಪ್ರಭು ಕ್ಯಾಲಕೊಂಡ

ನೀರಿಲ್ಲದೆ ಪ್ರಕೃತಿಯಿಲ್ಲ .ಜಗತ್ತಿಲ್ಲ , ಜೀವವಿಲ್ಲ ಎಂಬ ಪುರಾತನ ನಾಣ್ನುಡಿ ಈಗಲೂ ಅರ್ಥಪೂರ್ಣ. ದಿನದ ಕಾರ್ಯ ಕೈಕಾಲು ಮುಖ ತೊಳೆದು ಇಲ್ಲವೆ ಸ್ನಾನ ಮಾಡಿ ಆರಂಭ . ಜಾಣ ವ್ಯಕ್ತಿಗೆ ಜಲವೇ ಏಕೈಕ ಪೇಯ ಎಂದು ಅಮೆರಿಕಾದ ತತ್ವಜ್ಞಾನಿ ಹೆನ್ರಿಡೇವಿಡ್ ಥೋರಿಯು ಹೇಳಿದ್ದಾರೆ. ನಿಜವಾಗಿಯೂ ಕುಡಿಯುವ ನೀರಿನ ಪರಿಶುದ್ಧತೆ ಶತಮಾನಗಳಿಂದಲೂ ಮಾನವ ಕುಲದ ಅತ್ಯುನ್ನತ ಆದ್ಯತಾ ವಿಷಯವಾಗಿದೆ .

ಮಾನವ ಸಹಸ್ರಾರು ವರ್ಷಗಳಿಂದ ನೀರಿನೊಂದಿಗೆ ಜೀವಿಸುತ್ತಿದ್ದಾನೆ.ಆದರೆ ಹಿಂದೆಂದಿಗಿಂತ ಈಗ ನೀರಿನ ಸ್ವಚ್ಛತೆ ಬಗ್ಗೆ ಜಿಜ್ಞಾಸೆ ಉಂಟಾಗಿದೆ . ನಮ್ಮ ಬಾಯಿಯ ಮೂಲಕ ಶರೀರದೊಳಗೆ ಬರುವ ನೀರಿನಲ್ಲಿ ಅನೇಕ ಹಾನಿಕಾರಕ ಅಂಶಗಳಿರಲು ಸಾಧ್ಯ. ಮಳೆ ನೀರು ಶುದ್ಧ. ಆದರೆ ಅದು ಕೂಡಾ ನೆಲಕ್ಕೆ ಬಿದ್ದಾಗ ಧೂಳು, ಕಸಕಡ್ಡಿ ಬೆರೆತು ಅಶುದ್ಧವಾಗುತ್ತದೆ.

ಇದು ನಿಮಗೆ ಗೊತ್ತೇ?

- ನಮ್ಮ ದೇಹದಲ್ಲಿ ನೀರಿನ ಪ್ರಮಾಣ ನಿಗದಿತ ಪ್ರಮಾಣಕ್ಕಿಂತ ಶೇ.20 ರಷ್ಟು ಕಡಿಮೆಯಾದರೂ ನಾವು ಸಾಯುತ್ತೇವೆ .
- ಪ್ರತಿವರ್ಷ ಸುಮಾರು ಸರಾಸರಿ 14 ಲಕ್ಷ ಜನ ಕುಡಿಯುವ ನೀರಿನ ಸಮಸ್ಯೆಯಿಂದ ಸಾಯುತ್ತಿದ್ದಾರೆ.
- ದೇಶದ 1.56 ಲಕ್ಷ ಹಳ್ಳಿಗಳಲ್ಲಿ ಕುಡಿಯುವ ನೀರಿನ ಮೂಲಗಳು ಸಂಪೂರ್ಣ ಬತ್ತಿಹೋಗಿವೆ .
- ವಿಶ್ವ ಆರೋಗ್ಯ ಸಂಸ್ಥೆಯ ಸಮೀಕ್ಷೆಯ ಪ್ರಕಾರ, ವಿಶ್ವದ ಅರ್ಧದಷ್ಟು ಜನ ಶುದ್ಧ ಕುಡಿಯುವ ನೀರಿಗೆ ಸಂಬಂಧಿಸಿದ ಹಲವು ಕಾಯಿಲೆಗಳಿಂದ ಬಳಲುತ್ತಿದ್ದಾರೆ .
- ಪ್ರತಿ ನಿಮಿಷಕ್ಕೆ ಒಂದು ಹನಿ ನೀರು ಪೋಲಾದರೂ, ವರ್ಷಕ್ಕೆ ಸುಮಾರು 45,000 ಲೀಟರ್ ನೀರು ಸೋರಿ ಹೋಗುತ್ತದೆ. ಈ ನೀರಿನಲ್ಲಿ ಒಬ್ಬ ಮನುಷ್ಯ ಸುಮಾರು 15 ತಿಂಗಳ ಕಾಲ ಬದುಕಬಹುದು .

ದಿನಕ್ಕೆ ನೀರು ಎಷ್ಟು ಬೇಕು?

ನೀವು ದಿನಕ್ಕೆ ಎಷ್ಟು ಸಾರಿ ನೀರು ಕುಡಿಯುತ್ತೀರಿ ? ನೀವು ಕುಡಿಯುತ್ತಿರುವ ನೀರು ನಿಮ್ಮ ದೇಹಕ್ಕೆ ಸಾಕಾಗುತ್ತಿದೆಯೋ ಇಲ್ಲವೋ? ಎಂದು ನೀವೇ ಪರೀಕ್ಷಿಸಿಕೊಳ್ಳಬಹುದು . ಹಳದಿ ಬಣ್ಣದ ಮೂತ್ರ ವಿಸರ್ಜಿಸುತ್ತಿದ್ದರೆ ನೀವು ಕುಡಿಯುತ್ತಿರುವ ನೀರು ನಿಮ್ಮ ದೇಹಕ್ಕೆ ಸಾಕಾಗುತ್ತಿಲ್ಲವೆಂದೇ ತಿಳಿಯಬೇಕು. ಬೆಳಿಗ್ಗೆ ಎದ್ದಾಗ ಮೊದಲ ಸಲ ಮೂತ್ರ ಮಾಡಿದಾಗ ಅದು ಶುದ್ಧ ಹಾಗೂ ತಿಳಿ ಹಳದಿ ಬಣ್ಣ ಅಥವಾ ಬಿಳಿಯ ಬಣ್ಣದ್ದಾಗಿರಬೇಕು .ಹಾಗಿದ್ದರೆ ಮಾತ್ರ ನೀವು ಸಾಕಷ್ಟು ನೀರು ಕೈಡಿಯುತ್ತಿದ್ದೀರಿ ಎಂದರ್ಥ . ಪ್ರತಿದಿನ ಕನಿಷ್ಠ 3 ಲೀ. ನಷ್ಟಾದರೂ ನೀರನ್ನು ಕಡ್ಡಾಯವಾಗಿ ಕುಡಿಯಲೇ ಬೇಕು ಎಂದು ವೈದ್ಯರು ಹೇಳುತ್ತಾರೆ. ಕೆಲವರು ನಾವು ನೀರು ಜಾಸ್ತಿ ಕುಡಿಯುವುದಿಲ್ಲ , ಆದರೆ ತಂಪು ಪಾನೀಯ, ಸೋಡಾ ಮುಂತಾದವುಗಳನ್ನು ಕುಡಿಯುತ್ತೇವೆ ಎನ್ನುವವರಿದ್ದಾರೆ .ಆದರೆ ಅದು ತಪ್ಪು. ತಂಪು ಪಾನೀಯವಾಗಲಿ , ಮದ್ಯವಾಗಲಿ ನಾವು ಕುಡಿಯುವ ನೀರಿಗೆ ಸಮವಲ್ಲ .ಇವು ದೇಹದಿಂದ ಹೆಚ್ಚು ನೀರು ಹೊರ ಹೋಗುವಂತೆ ಮಾಡುತ್ತವೆ.

ಅಂತರ್ಜಲ ಮಾಲಿನ್ಯ

ಅಂತರ್ಜಲ ಮಾಲಿನ್ಯ ಒಂದು ಗಂಭೀರ ಸಮಸ್ಯೆಯಾಗಿದ್ದು , ಇದು ಅತಿಸಾರ , ಭೇದಿ ,ಕಾಮಾಲೆ , ಟೈಫಾಯ್ಡ್ ನಂತಹ ಸಾಂಕ್ರಾಮಿಕ ರೋಗಗಳಿಗೆ ಕಾರಣವಾಗುತ್ತದೆ .ಸಂಗ್ರಹಿತ ನೀರು ಮನೆಯೊಳಗೇ ಇದ್ದರೂ ಸಂಗ್ರಹಿಸುವ ಪಾತ್ರೆಗಳನ್ನು ಸರಿಯಾಗಿ ಶುಚಿಗೊಳಿಸದೇ ಇದ್ದರೆ ಮಲಿನವಾಗುತ್ತದೆ .ವಾಟರ್ ಫಿಲಟ್ಟರಗಳನ್ನು ಶುಚಿಗೊಳಿಸದೇ ತಿಂಗಳುಗಟ್ಟಲೆ ಬಳಸುವುದೂ ರೋಗಗಳಿಗೆ ಆಮಂತ್ರಣವಿತ್ತಂತೆಯೇ ಸರಿ.

ನೀರನ್ನು ಕುದಿಸಿದರೆ ಅಥವಾ ಸೋಸಿದರೆ ಅದು ಕುಡಿಯಲು ಯೋಗ್ಯವಾಗುತ್ತದೆ ಎಂಬ ಕಲ್ಪನೆ ಸಾಮಾನ್ಯ. ಆದರೆ ಇದು ತಪ್ಪು ಕಲ್ಪನೆ. ನೀರನ್ನು ಕಲಿಸುವುದರಿಂದ ಕ್ರಿಮಿಗಳು ಸಾಯುತ್ತವೆ . ಸೋಸುವುದರಿಂದ ಕೊಳಕು ಕಣಗಳು ಬೇರ್ಪಡೆಯಾಗುತ್ತವೆ ಎಂಬುದು ನಿಜ .ಆದರೂ ಇವೆರಡೂ ವಿಧಾನಗಳಿಂದ ನೀರನ್ನು ಶುದ್ಧ ಮಾಡಿ ಕುಡಿಯುವ ಮುನ್ನ ಅದು ಕುಡಿಯಲು ಯೋಗ್ಯವಾಗಿದೆಯೇ ಎಂದು ವೈಜ್ಞಾನಿಕವಾಗಿ ಪರಿಶೀಲಿಸಬೇಕು.

ಇಂದಿನ ದಿನಗಳಲ್ಲಿ ಶುದ್ಧೀಕರಿಸಿದ ನೀರು ಬಾಟಲಿಗಳಲ್ಲಿ ದೊರೆಯುತ್ತದೆ. ಕೆಲವು ಕಂಪನಿಗಳು ತಜ್ಞರಿಂದ ನೀರನ್ನು ಶುಚಿಗೊಳಿಸಿ ಪರೀಕ್ಷೆಗೊಳಪಡಿಸಿ ಸರಕಾರದ ಪರಿಣಿತರು ಪರಿಶೀಲಿಸಿದ ಬಳಿಕವೇ ಶೀಶೆಯಲ್ಲಿ ತುಂಬಿ , ಪ್ಯಾಕ್ ಮಾಡಿ, ಶೀಲು ಹಾಕಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತವೆ . ಕಲವರು ಸರಕಾರದ ನಿಯಮಗಳನ್ನು ಗಾಳಿಗೆ ತೂರಿ ಎಗ್ಗಿಲ್ಲದೇ ನೀರನ್ನು ಬಾಟಲುಗಳಲ್ಲಿ ತುಂಬಿ ಮಾರಾಟ ಮಾಡುತ್ತಾರೆ. ಆದ್ದರಿಂದ ಉತ್ತಮ ಹೆಸರು ಗಳಿಸಿರುವ ಕಂಪನಿಗಳ ಉತ್ಪನ್ನ ಆಯ್ಕೆ ಮಾಡುವುದು ಅಪೇಕ್ಷಣೀಯ .

ಮುಗಿಸುವ ಮುನ್ನ

ವಿನಾ ಜಲೇನ ಜೀವನಮ್ ನ ಚಲತಿ ಎಂದರೆ ನೀರಿಲ್ಲದ ನಮ್ಮ ಜೀವನವನ್ನು ಊಹಿಸಿಕೊಳ್ಳುವುದು ಅಸಾಧ್ಯ.

ಮುಂದಿನ ಮಹಾಯುದ್ಧ ಪೆಟ್ರೋಲ್ ಗಾಗಿ ಅಥವಾ ಅಣುವಿದ್ಯುತ್ ಗಾಗಿ ನಡೆಯುವುದಿಲ್ಲ . ಆದರೆ , ನೀರಿನ ಮೇಲಿನ ನಿಯಂತ್ರಣಕ್ಕಾಗಿ ನಡೆಯುತ್ತದೆ ಎಂದು ಹಿರಿಯರು ಎಚ್ಚರಿಸಿದ್ದಾರೆ. ಸರ್ವೇಸಾಧಾರಣ ಎಂದು ಭಾವಿಸಲಾಗಿರುವ ದ್ರವವೊಂದರ ಪ್ರಾಮುಖ್ಯತೆಯನ್ನು ಇದು ಅರುಹುತ್ತದೆ .

ಬದುಕಿನ ಗಾಳಿಪಟಕೆ ತಾಳ್ಮೆಯ ಸೂತ್ರ

• ವಾಣಿ ಮೈಸೂರು

ತಾಳಿದವನು ಬಾಳಿಯಾನು ಗಾದೆಯ ಮಾತು ಬಹಳ ಅರ್ಥಪೂರ್ಣ ! ತಾಳ್ಮೆ ವಹಿಸಿ ಕಾಯುವುದರ ಪ್ರತಿಫಲ ಸಿಹಿಯ ಹೂರಣವೇ ಆಗಿರುತ್ತದೆ. ಆದರೆ ಕಾಯುವ ತಾಳ್ಮೆ ಇಲ್ಲದೆ ನಕರಾತ್ಮಕವಾಗಿ ಚಿಂತಿಸಿ ಇರುವುದನ್ನು ಕಳೆದುಕೊಳ್ಳುವ ಸ್ಥಿತಿ ತಂದು ಬಿಡುತ್ತದೆ ಪರಿಸ್ಥಿತಿ ಒತ್ತಡಗಳು. ತಾಳ್ಮೆ ಅಷ್ಟು ಸುಲಭವಾಗಿ ದಕ್ಕುವಂತದ್ದಲ್ಲ. ಸಹಿಸಿ ಸಹಿಸಿ ಸಹನೆಯ ಕಟ್ಟೆ ಹೊಡೆದು ತಾಳ್ಮೆಯು ನಶಿಸಿ ಹೋಗುತ್ತದೆ. ಕೆಲವು ಸ್ಥಿತಿ ಸಂದರ್ಭಗಳು ತಾಳ್ಮೆಯನ್ನು ಪರೀಕ್ಷೆ ಮಾಡಿ ತಾಳ್ಮೆಗೇಡುವಂತೆ ಮಾಡುತ್ತದೆ.

ತಾಳ್ಮೆ ಕಳೆದುಕೊಂಡು ತೆಗೆದುಕೊಂಡ ಆತುರದ ನಿರ್ಧಾರವು ದೊಡ್ಡ ನಷ್ಟಗಳೇ ತುಂಬಿ ಬಿಡುತ್ತದೆ. ಸಾಧ್ಯವಾದಷ್ಟು ತಾಳ್ಮೆ ಕಲಿಯುವುದನ್ನು ಕಲಿತು ಕೊಳ್ಳಬೇಕು ಇಲ್ಲದೇ ಹೋದರೆ, ಬದುಕಿನಲ್ಲಿ ಸೋಲಿನ ದಾರಿಯೇ. ಪ್ರತಿ ಹೆಜ್ಜೆಗೂ ಏನಾದರು ಆಗಲಿ ಹೋಗಲಿ ಸ್ಥಿತಿಯನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಆರಾಮವಾಗಿ ಇರುವುದನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು.

ಸಣ್ಣ ಸಣ್ಣ ಕಾರಣಗಳಿಗೆ ಉದ್ವೇಗಕ್ಕೆ ಒಳಗಾಗಿ ಸಂಯಮ ಕಳೆದುಕೊಂಡರೆ ನಷ್ಟವೇ ಹೊರತು ಲಾಭವಂತು ಕಿಂಚಿತ್ತೂ ಸಿಗುವುದಿಲ್ಲ. ಎಲ್ಲರ ಜತೆ ಕಿರಿ ಕಿರಿ ಮಾಡಿಕೊಳ್ಳುತ್ತ ಹೋದರೆ, ತಾಳ್ಮೆ , ನೆಮ್ಮದಿ ಮತ್ತು ಮನಸಿನ ಮಾನಸಿಕ ಸ್ಥಿತಿ ಎಲ್ಲವು ಏರುಪೇರಾಗಿ ಬದುಕಿನ ಅಸ್ತಿತ್ವವನ್ನು ಕೊಂದುಬಿಡುತ್ತದೆ. ಜತೆಗೆ ಅಪರಾಧ ಕೃತ್ಯಗಳನ್ನು ಎಸಗುವಂತೆ ಪ್ರೇರೇಪಿಸುತ್ತದೆ.

ಕಷ್ಟಪಟ್ಟು ಬದುಕುವವರಿಗೆ ನೂರಾರು ಪರೀಕ್ಷೆಗಳು ಸವಾಲುಗಳು ಎದುರಾಗುತ್ತದೆ. ಆಗೆಲ್ಲಾ ಬದುಕಿನ ಮೇಲೆ ವೈರಾಗ್ಯ ಉಂಟಾಗಿ ಕುಗ್ಗಿ ಹೋಗುತ್ತಾರೆ. ಭರವಸೆ ಕಳೆದು ಕೊಳ್ಳುತ್ತಾರೆ. ಕಾಯುವ ಸಂಯಮ ಇರಲಿ.

ಉದ್ವೇಗದಿಂದ ಕಿರಿಕಿರಿ

ಇಂದಿನ ದಿನಗಳಲ್ಲಿ ಒತ್ತಡಯುಕ್ತ ಜೀವನಶೈಲಿಯ ಪ್ರಭಾವದಿಂದಾಗಿ, ಉದ್ವೇಗದಿಂದ ಕಿರಿಕಿರಿ ಜಾಸ್ತಿ ಆಗಿ

ಸಂಯಮ ಕಳೆದು ಕೊಂಡು ಬದುಕು ಸಾಗಿಸುತ್ತಿದ್ದೇವೆ. ಯಾಂತ್ರಿಕತೆಯ ಬದುಕಿನಲ್ಲಿ ಎಲ್ಲವು ಯಂತ್ರದಂತೆ ಸಾಗುತ್ತಿದೆ. ಅದೆಷ್ಟೋ ಭಾವಬಂಧಗಳು ನಮ್ಮ ಅರಿವಿಗೂ ಬರದಂತೆ ಕೈಜಾರುತಿದೆ. ತಾಳ್ಮೆಯಿಂದ ಇರುವುದು ತಾಳ್ಮೆಯಿಂದ ಬದುಕುವುದು ಅಷ್ಟು ಸುಲಭ ಅಲ್ಲ. ಆದರೂ ಬದುಕಿನಲ್ಲಿ ಕೆಲವೊಂದನ್ನು ಪಡೆದುಕೊಳ್ಳಲು ಉಳಿಸಿಕೊಳ್ಳಲು ತಾಳ್ಮೆ ಅಗತ್ಯ.

ಒಂದಿಷ್ಟು ಸರಳ ಸೂತ್ರಗಳು

- ಅತೀವವಾದ ಒತ್ತಡ ತಾಳ್ಮೆ ಕಳೆದುಕೊಳ್ಳುವಂತೆ ಮಾಡುತ್ತದೆ. ಕಾಡುವ ವಿಷಯಗಳನ್ನು ಮನಸಿನಿಂದ ತೆಗೆದುಬಿಡಬೇಕು
- ಸಣ್ಣ ಪುಟ್ಟ ವಿಷಯಗಳಿಗೆ ಕೋಪ ಮಾಡಿಕೊಳ್ಳುವುದರ ಬದಲು ಪರಿಹಾರ ಕಂಡುಕೊಳ್ಳುವುದು ಒಳಿತು
- ತಾಳ್ಮೆ ಕಳೆದುಕೊಂಡು ಕೂಗಾಡುವ ಮೊದಲು ವಾಸ್ತವವನ್ನು ಅರ್ಥಮಾಡಿಕೊಳ್ಳಬೇಕು
- ಟೆನ್ಷನ್‌ಗೆ ಆದಷ್ಟು ರಿಲೀಫ್ ಕೊಟ್ಟು ಆರಾಮಾಗಿ ಇರಬೇಕು
- ಸಮಾಧಾನವಾಗಿ ಇದಷ್ಟು ತಾಳ್ಮೆಯು ಜತೆಯಲ್ಲಿ ಇರುತ್ತದೆ.

ಇವತ್ತು ಸಿಗದೇ ಹೋದರು, ನಾಳೆ ಒಳ್ಳೆಯ ಫಲ ಸಿಗುತ್ತದೆ ಎನ್ನುವ ನಂಬಿಕೆಯೇ ತಾಳ್ಮೆ. ನಮಗೆ ನೋವು ಕೊಟ್ಟು ಅವರು ಮಾತ್ರ ಖುಷಿ ಆಗಿರುತ್ತಾರೆ ಎಂದು ನೊಂದುಕೊಳ್ಳುವ ಅವಶ್ಯಕತೆ ಇಲ್ಲ. ಕಾಲ ಯಾರನ್ನು ಬಿಡದು. ಅವರಿಗೂ ಅವರ ತಪ್ಪಿನ ಅರಿವಾಗಿ, ನಮಗಿಂತಲೂ ಹೆಚ್ಚು ಕಷ್ಟ ನಷ್ಟಗಳನ್ನು ಅನುಭವಿಸುತ್ತಾರೆ. ಕಾಯುವ ತಾಳ್ಮೆ ಬೇಕು ಅಷ್ಟೇ . ಬದುಕಿನ ಗಾಳಿಪಟವನ್ನು ತಾಳ್ಮೆಯ ಸೂತ್ರದಿಂದ ಹಿಡಿದಿಟ್ಟು ಕೊಂಡರೆ ಬದುಕೇ ಸುಂದರ.

ವೃದ್ಧರ ಆರೋಗ್ಯ ನಿರ್ಲಕ್ಷ್ಯ ಬೇಡ

ಅರವತ್ತು ದಾಟಿದ ವೃದ್ಧರು ಎಲ್ಲಾ ಮನೆಯಲ್ಲು ಇದ್ದೇ ಇರುತ್ತಾರೆ. ವಯಸ್ಸಾದಂತೆ ಬಿ.ಪಿ, ಶುಗರ್, ಸಂಧಿವಾತ, ದಮ್ಮುಕಫ ಉಸಿರಾಟದ ತೊಂದರೆ ಏನಾದರೂ ಒಂದು ಇದ್ದದ್ದೆ. ಮತ್ತೆ ಕೆಲವರದ್ದೂ ಇದಕ್ಕೆಲ್ಲ ಮೀರಿದ್ದು. ಹೃದಯ, ಕಿಡ್ನಿ, ಕಣ್ಣು, ಶ್ವಾಸಕೋಶದ ಸಮಸ್ಯೆಗಳು, ಮೇಲಿಂದ ಮೇಲೆ ಆಸ್ಪತ್ರೆಯ ಮೆಟ್ಟಿಲುಗಳನ್ನು ಹತ್ತಿಳಿಯಲೇ ಬೇಕಾಗಿರುತ್ತದೆ. ಎಷ್ಟೇ ತೊಂದರೆಯಿದ್ದರೂ ನಮ್ಮ ಭಾರತದಲ್ಲಿ ತಂದೆತಾಯಿ ವಯಸ್ಸಾದೋರ ಮೇಲೆ ಅಕ್ಕರೆ ಪ್ರೀತಿ ಕಾಳಜಿ ಇದ್ದೇ ಇದೆ.

ಕುಶಲವೇ ಕ್ಷೇಮವೇ
• ಅನುಪಮಾ ರಂಗನಾಥ್

ಮೊನ್ನೆ ಹೀಗೆ ಆಸ್ಪತ್ರೆಯಲ್ಲಿ ನೂರ ಹದಿನೈದು ವರ್ಷ ವಯಸ್ಸಿನ ವೃದ್ಧರ ಸಾವಿಗೆ ಅವರ ಅಪಾರ ಬಂಧು ಬಳಗ ಕಣ್ಣೀರಾದದ್ದಲ್ಲದೆ ಅಷ್ಟು ಸೇವೆ ಮಾಡುವುದನ್ನು ನೋಡಿದ್ದೇವೆ. ಭಾರತೀಯರ ರಕ್ತದಲ್ಲೆ ಸೇವಾ ಮನೋಭಾವನೆ ಪರೋಪಕಾರ ಪ್ರೀತಿ ಅನುಕಂಪ ಕಾಳಜಿ ಇದೆಎಂದರೆ ತಪ್ಪಾಗಲಾರದು. ಆದರೂ ಅಲ್ಲೊಬ್ಬ ಇಲ್ಲೊಬ್ಬರು ಸಂದರ್ಭಕ್ಕೆ ತಕ್ಕ ಹಾಗೆ ಬೀದಿ ಪಾಲಾದವರನ್ನು ನೋಡಿದ್ದೇವೆ. ಅದಕ್ಕೆ ಅವರದೇ ವೈಯುಕ್ತಿಕ ಕಾರಣಗಳಿರಬಹುದು.

ಸಮಯಕ್ಕೆ ಸರಿಯಾಗಿ ಔಷಧೋಪಚಾರ ಅಗತ್ಯ

ಎಷ್ಟೋ ವಯಸ್ಸಾದವರಿಗೆ ನಿರ್ಲಕ್ಷ್ಯ ತೋರದೆ ಸರಿಯಾದ ಸಮಯಕ್ಕೆ ಊಟ ತಿಂಡಿ ಕೊಟ್ಟು ಆರೈಕೆ ಮಾಡಿಬಿಟ್ಟರೆ ಅವರು ಇನ್ನೊಂದಷ್ಟು ದಿನ ನಿಮಗೆ ಯಾವುದೇ ರೀತಿ ತೊಂದರೆ ಕೊಡದೆ ಅವರ ಪಾಡಿಗವರು ಆರೋಗ್ಯವಾಗಿ ಇದ್ದು ಬಿಡುತ್ತಾರೆ.ಪ್ರತಿನಿತ್ಯ ಅವರು ತೆಗೆದು ಕೊಳ್ಳುವ ಔಷಧಗಳನ್ನು ವೈದ್ಯರ ಸಲಹೆಯಂತೆ ತಪ್ಪದೆ ನೀಡಿ ಉಪಚರಿಸಿದರೆ ಅವರಿಗೆ ಮುಂದೆ ಒದಗಬಹುದಾದ ಅಪಾಯಗಳನ್ನು ತಪ್ಪಿಸಿ, ಅವರಿಗೋಸ್ಕರ ನಾವು ಆಸ್ಪತ್ರೆಗಳಿಗೆ ಅಲೆಯುವುದನ್ನು ತಪ್ಪಿಸಿಕೊಳ್ಳಬಹುದು.

ದೈಹಿಕ ಬದಲಾವಣೆ ಗಮನಿಸಿ

ಪ್ರತಿದಿನ ಅವರ ಮುಖದಲ್ಲಾಗುವ ಬದಲಾವಣೆ ಗಮನಿಸಿಕೊಳ್ಳಬೇಕು ಮುಖ ಕೈಕಾಲು ಊದಿದೆಯಾ ಪರೀಕ್ಷಿಸಿಕೊಳ್ಳಬೇಕು. ಅವರು ಆರಾಮಾಗಿದ್ದಾರಾ ಎಂದು ಪ್ರತಿದಿನ ಅವರನ್ನೇ ಕೇಳಿಕೊಳ್ಳಬೇಕು. ಇಂದು ಹೇಗಿದ್ದೀರ? ಮಾತ್ರೆ ತೆಗೆದುಕೊಂಡಿದ್ದೀರ ಏನೂ ತೊಂದರೆ ಇಲ್ಲವಾ? ನಿದ್ರೆ ಸರಿಯಾಗಿ ಆಯ್ತಾ ಮತ್ತು ಮೋಷನ್ ಸರಿಯಾಗಿ ಆಗ್ತಾ ಇದೆಯಾ? ನೀರು ಕುಡಿತಾ ಇದಿರಾ ಇವೆಲ್ಲಾ ಕೇಳಿ ತಿಳಿದುಕೊಳ್ಳಲೇ ಬೇಕಾದ ವಿಷಯಗಳು.

ಪ್ರತಿ ಆರು ತಿಂಗಳಿಗೊಮ್ಮೆ ಹಿರಿಯರಿಗೆ ಹೆಲ್ತ್‌ಚೆಕ್ ಅಪ್ ಮೆಡಿಸಿನ್ಸ್‌ಗಳ ಬದಲಾವಣೆ ಇದ್ದಲ್ಲಿ ವೈದ್ಯರ ಸಲಹೆಯಂತೆ ಬದಲಾಯಿಸಿಕೊಡುವುದು. ಬಿ.ಪಿ. ಶುಗರ್ ಇದ್ದರೆ ಮನೆಯಲ್ಲಿಯೇ ಪರೀಕ್ಷೆ ಮಾಡುವ ಪರಿಕರಗಳನ್ನು (ಸ್ಫಿಗ್ಮೋಮಾನೋಮೀಟರ್, ಗ್ಲೂಕೋಮೀಟರ್) ಇಟ್ಟುಕೊಂಡು ನಿಯಮಿತ ಕಾಲಾವಧಿಯಲ್ಲಿ ನೋಡಿಕೊಳ್ಳುವುದು.

ಸೂಕ್ತ ವ್ಯವಸ್ಥೆ ಕಲ್ಪಿಸಿ

ಮುಖ್ಯವಾಗಿ ವೃದ್ಧರಿಗೆ ಸಖ್ಯವಾಗುವ ಅಂದರೆ ಅವರ ಆರೋಗ್ಯಕ್ಕೆ ಸಂಬಂಧಪಟ್ಟ ಡಯಟ್ ಫುಡ್‌ಗಳನ್ನೇ ನೀಡತಕ್ಕದ್ದು. ಅವರು ಓಡಾಡುವ ಜಾಗ, ಸ್ನಾನ ಮಾಡುವ ಜಾಗ ಜಾರದಂತೆ ಕಾಳಜಿ ವಹಿಸಿ. ಸುರಕ್ಷಿತವಾದ ಅಂದರೆ ನೀರು ಬೀಳದಂತೆ ಬಿದ್ದರೂಜಾರದಂತೆ ಫರ್‌ನ ನೆಲ ಹಾಸುಗಳನ್ನು ಹಾಕಿಕೊಡೋದು, ಬಾತ್ ರೂಂಗಳಲ್ಲಿ ಅವರಿಗೆ ಅನುಕೂಲವಾಗುವಂತೆ ಕೈಡುಪುಗಳನ್ನು ಅಳವಡಿಸಿಕೊಡುವುದು, ಸಾಧ್ಯವಾದರೆ ವೆಸ್ಟರ್ನ್ ಟಾಯ್ಲೆಟ್‌ಗಳನ್ನು ಹಾಕಿಸಿಕೊಡುವುದು. ಮುಂದೆ ಎದುರಾಗುವ ಅನಾಹುತಗಳನ್ನು ತಪ್ಪಿಸಿದಂತಾಗುತ್ತದೆ.

ಎಲ್ಲದ್ದಕ್ಕಿಂತ ಹೆಚ್ಚಿಗೆ ಅವರ ಕೋಪ ತಾಪ ಹತಾಶೆಗಳನ್ನು ಸಹಿಸದೆ ಬೇರೆ ದಾರಿಯಿಲ್ಲ. ಅವರೂ ಒಂದು ಮಗುವಿನ ಹಾಗೆ ಎಂದು ಭಾವಿಸಿ ನಕ್ಕು ಸುಮ್ಮನಾಗುವುದು. ಅವರ ಜತೆ ಸಮಯ ಕಳೆಯುವುದು, ಹಾಗೂ ಅವರು ಹೇಗಿದ್ದರೂ ನಮಗೆ ಬೇಕು ಅನ್ನುವುದನ್ನು ಅವರಿಗೆ ನಮ್ಮ ಕಾಳಜಿಯ ಮುಖಾಂತರ ಮನದಟ್ಟು ಮಾಡಿಕೊಡಬೇಕು. ಅವರು ಒಂದಾನೊಂದು ಕಾಲದಲ್ಲಿ ಬೇಕಾದ ತ್ಯಾಗಗಳನ್ನೆಲ್ಲಾ ನಮಗಾಗಿ ಮಾಡೇ ಇರುತ್ತಾರೆ. ಈ ಹಂತ ದಾಟಲೇ ಬೇಕಲ್ಲವೆ ಎಲ್ಲರೂ ಒಮ್ಮೆ?

ಸಂಬಂಧಿಕರ ಬಳಗದವರ ಒಡಹುಟ್ಟಿದವರ ಸಹಕಾರ ಬಹು ಮುಖ್ಯ ಅನ್ನಬಹುದು. ಮಕ್ಕಳನ್ನು ಸಾಕಿದಷ್ಟು ಸುಲಭವಲ್ಲ ವೃದ್ಧರನ್ನು ಸಾಕುವುದು. ಕೇವಲ ಒಬ್ಬರಿಂದ ಅವರ ಮೇಲುಸ್ತುವಾರಿ ಸಾಲದು. ಮನೆಯ ಎಲ್ಲಾ ಸದಸ್ಯರು ಒಟ್ಟಿಗೆ ನಿಂತು ಕಾಳಜಿ ಮಾಡಿದರೆ ಮಾತ್ರ ಅವರು ನಮ್ಮೊಂದಿಗೆ ಇನ್ನೊಂದಷ್ಟು ದಿನ ಇದ್ದಾರು.

ಕೇವಲ ಸೊಸೆ ಮಗ ಮಾತ್ರ ಅತ್ತೆ ಮಾವನನ್ನು ನೋಡಿಕೊಳ್ಳಬೇಕೆಂಬ ಮೌಢ್ಯದಿಂದ ಹೊರಬಂದು ಕೊನೆಗಾಲದಲ್ಲಾದರೂ ಎಲ್ಲಾ ಹೆಣ್ಣು ಮಕ್ಕಳು ಸ್ವಲ್ಪದಿನಗಳ ಕಾಲ ಸಲಹಿದ ಅಪ್ಪಅಮ್ಮನ ಆರೈಕೆ ಮಾಡಲೇಬೇಕು. ಅವರಿರುವವರೆಗೂ ನೀವು ಅವರ ಮಕ್ಕಳೇ ಅಲ್ಲವೆ. ಕರ್ತವ್ಯದಿಂದ ವಿಮುಖರಾಗಿ ಮುಂದೆ ಪಶ್ಚಾತ್ತಾಪ ಪಡುವುದರಲ್ಲಿ ಅರ್ಥವಿಲ್ಲ. ಏನಂತೀರಾ?

ವಿಶ್ವವಾಣಿ
13.06.2024 ಗುರುವಾರ
vishwavani.news

ಸಾಮಾಜಿಕ ತಾಣ ಪಯಣ

ವಿಟಾಕೀಸ್

ದಿನ ಭವಿಷ್ಯ

ಮೇಷ ಆತ್ಮೀಯರ ಹಾಗೂ ಹಿತೈಷಿಗಳ ಸಹಕಾರದಿಂದ ಅದೆಷ್ಟೋ ಕಾರ್ಯಗಳಲ್ಲಿ ಸಫಲರಾಗುವಿರಿ. ಮನಸ್ಸಿಗೆ ಸಮಾಧಾನ, ಸಂತೃಪ್ತಿ ತುಂಬಿಕೊಂಡಿರುವ ದಿನ.

ವೃಷಭ ಪ್ರಯತ್ನ ಮಾಡುವ ಮೊದಲೇ ಫಲದ ಬಗ್ಗೆ ಚಿಂತಿಸದಿರಿ. ನಿಮ್ಮ ಕೆಲಸವನ್ನು ಶ್ರದ್ಧೆಯಿಂದ ಮಾಡಿರಿ. ಕೆಲಸ ಮಂದಗತಿಯಲ್ಲಿ ಸಾಗಲಿವೆ.

ಮಿಥುನ ಒಂದಲ್ಲ ಒಂದು ಸಮಸ್ಯೆಯಿಂದ ಹೈರಾಣರಾಗುವಿರಿ. ಮುಂಜಾಗ್ರತೆಯ ಅಗತ್ಯವಿದೆ. ಮೈಮರೆತಲ್ಲಿ ಬೆಲೆ ತೆರ ಬೇಕಾದೀತು.

ಕಟಕ ಆರೋಗ್ಯದ ಕುರಿತು ಜಾಗ್ರತೆ ಇರಲಿ. ಮಾನಸಿಕ ಒತ್ತಡವಿದ್ದರೂ ನೆಮ್ಮದಿಗೆ ಭಂಗವಿರು ವುದಿಲ್ಲ. ಧಾರ್ಮಿಕ ವಿಷಯಗಳತ್ತ ಮನಚಲಿಸಲಿದೆ.

ಸಿಂಹ ವಿನಾಕಾರಣ ಓಡಾಟ ದಿಂದ ಪ್ರಯಾಸ ಹೆಚ್ಚಾಗಲಿದೆ. ಅನಾರೋಗ್ಯ ದಿಂದ ಬಳಲುತ್ತಿರು ವವರು ಉದಾಸೀನ ಮಾಡದೆ ವೈದ್ಯರೊಂದಿಗೆ ಸಮಾಲೋಚಿಸಿರಿ.

ಕನ್ಯಾ ಎಲ್ಲಾ ಕೆಲಸ ಕಾರ್ಯಗಳಲ್ಲಿ ಸಫಲತೆಯನ್ನು ಕಾಣುವಿರಿ. ವ್ಯಾಪಾರ, ವ್ಯವಹಾರದಲ್ಲಿ ಲಾಭವಿರುವುದು. ವ್ಯವಹಾರಗಳಲ್ಲಿ ಚರ್ಚೆಗೆ ಅವಕಾಶ ನೀಡದಿರಿ.

ತುಲಾ ಅವಿವಾಹಿತರಿಗೆ ಕಂಕಣಬಲ ಇರುವುದು. ಸಮಯ ನಿಮಗೆ ಪೂರಕವಾಗಿರುವುದರಿಂದ ಕೆಲಸ ಕಾರ್ಯದಲ್ಲಿ ಪ್ರಗತಿ ಸಾಧಿಸುವಿರಿ. ಬದುಕು ಉಲ್ಲಾಸದಿಂದ ಕೂಡಿರುತ್ತದೆ.

ವೃಶ್ಚಿಕ ಪ್ರಗತಿಯ ಹಾದಿ ಸುಗಮವಾಗಿರುತ್ತದೆ. ನಿಮ್ಮ ಪ್ರಯತ್ನಕ್ಕೆ ಹಲವರ ಸಹಕಾರದಿಂದ ಫಲ ದೊರಕಲಿದೆ.

ಧನು ಒಂದಲ್ಲ ಒಂದು ಕಾರಣಕ್ಕೆ ಒತ್ತಡ ಆವರಿಸುವುದರಿಂದ ಮನಸ್ಸು ಅಶಾಂತಿಯೆಡೆಗೆ ಮುಖ ಮಾಡುವುದು. ನಿರ್ಲಕ್ಷ್ಯವೇ ಸಂಕಷ್ಟಕ್ಕೆ ಗುರಿ ಮಾಡುವುದು.

ಮಕರ ಸಂತಾನದ ಬಗ್ಗೆ ನಿಮಗೆ ಚಿಂತೆ ಕಾಡಲಿದೆ. ಕೆಲಸ ಕಾರ್ಯದಲ್ಲಿ ಪ್ರಗತಿ ಮುನ್ಸೂಚನೆ ಕಂಡಂತೆ ಭಾಸವಾಯಾಗಲಿದೆ.

ಕುಂಭ ವಿನಾಕಾರಣ ಓಡಾಟವು ತೋರಿಬಂದು ಅಸೌಖ್ಯ ಉಂಟಾಗಲಿದೆ. ವಾಗ್ವಾದಕ್ಕೆ ಇಳಿಯ ಬೇಡಿ. ಆರ್ಥಿಕ ಸ್ಥಿತಿ ಹಿನ್ನಡೆ ಹೊಂದುವಿರಿ.

ಮೀನ ಯಶಸ್ಸು ದೊರಕುವುದು. ಕುಟುಂಬದಲ್ಲಿ ಸಂತಸವಿರುವುದು. ಧಾರ್ಮಿಕ ಕಾರ್ಯದಲ್ಲಿ ಜವಾಬ್ದಾರಿ. ಆರೋಗ್ಯದ ಕಾಳಜಿ ವಹಿಸಿ.

● ಕೆ.ಬಿ.ಸಂತೋಷ್ ಗುರೂಜಿ



ಪ್ರಕೃತಿಯ ಪ್ರತಿಯೊಂದು ಚಿತ್ರಗಳು ಅದ್ಭುತ ದೃಶ್ಯಕಾವ್ಯಗಳೇ ಸರಿ. ಕ್ವೀನ್ಸ್‌ಲ್ಯಾಂಡಿನ ಡೈಂಟ್ರೀ ರಾಷ್ಟ್ರೀಯ ಉದ್ಯಾನವನದಲ್ಲಿ, ಒಂದು ಮಧ್ಯಾಹ್ನ ಸೂರ್ಯನ ಬೆಳಕಿನಲ್ಲಿ ಸ್ನಾನ ಮಾಡಿದ ಎರಡು ಪುಟ್ಟ ಅಣಬೆಗಳು ಛಾಯಾಗ್ರಾಹಕಿ ಆಂಡ್ರಿಯಾ ಅವರ ಕ್ಯಾಮರಾದಲ್ಲಿ ಸೆರೆಯಾಗಿದೆ.

ಪ ದ ಬಂ ಧ



ಎಡದಿಂದ ಬಲಕ್ಕೆ

1. ಬೆಡಗು, ಬಿನ್ನಾಣ (3)
4. ಅವನು ನೀಡಿದ ಆಜ್ಞೆ (3)
5. ತುಳಸಿ ಜಾತಿಗೆ ಸೇರಿದ ಸುವಾಸನೆಯ ಸಸ್ಯ (5)
6. ಶ್ವಾಸ ಅಥವಾ ಜೀವ (3)
7. ಬೆಟ್ಟದಲ್ಲಿ ಕೊರೆದು ಮಾಡಿದ ದಾರಿ (3)
9. ವ್ಯಸನ ಅಥವಾ ಚಿಂತೆ (3)
11. ಮೊಂಡುತನ ಮಾಡುವ ವ್ಯಕ್ತಿ (4)
12. ಗೆದ್ದವರಿಗೆ ಸಿಗುವ ಪಾರಿತೋಷಕ (4)
13. ಯಾರಿಗೆ ಗೊತ್ತಿದೆ ಸಿದ್ಧತೆ (3)
15. ತಿರುಗಿ ಬಂದಿರುವ ಬೆಲೆ (3)
17. ಮತ್ತೊಂದು ಹಾರದೊಂದಿಗೆ ಬಂದಿರುವ ಸಾಲು (3)
18. ರಾಜಾಜ್ಞೆಗೆ ಮತ್ತೊಂದು ಹೆಸರು (5)
19. ಸುಲಭವಾದ ಅಥವಾ ನೇರವಾದ ಎಂದರ್ಥ (3)
20. ಉರಿಯುವಿಕೆ ಎಂದರ್ಥ (3)

ಮೇಲಿನಿಂದ ಕೆಳಕ್ಕೆ

2. ಕಾರು ತರುವಾಗ ಎದ್ದಿರುವ ಗದ್ದಲ (3)
3. ತಲೆಕೆಳಗಾಗಿ ಬಂದಿರುವ ಗುಣಿಸುವ ಕಾರ್ಯ ಹ್ರಸ್ವವಾಗಿದೆ (4)
4. ನಂದಿಸು ಎನ್ನುವ ಪದ (3)
6. ಮತ್ತೊಬ್ಬ ಶಿವನೊಂದಿಗೆ ಬಂದಿರುವ ದೃಷ್ಟಾಂತ (5)
8. ಆಗಸದೊಂದಿಗೆ ಬಂದಿರುವ ಸೂರ್ಯ (5)
9. ಕೆಟ್ಟ ಕೆಲಸ ಅಥವಾ ಪಾಪ (3)
10. ಅಗಲ ಬಾಯಿಯ ಲೋಹದ ಪಾತ್ರೆ (3)
14. ಹೋಮ ಮಾಡುವ ಶಾಲೆ (4)
16. ಔದಾರ್ಯಕ್ಕೆ ಮತ್ತೊಂದು ಹೆಸರು (3)
17. ಅಸ್ತವ್ಯಸ್ತವಾಗಿ ಬಂದಿರುವ ಮನೆ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 2. ದಿವಸ 4. ಮಣಿಸು 6. ರಮಣಿ 7. ಯಾಚಕ 8. ರಸೀತಿ 10. ರಗಾಪ 14. ತಾಡನ 16. ಎರಕ 19. ರಜಾಯಿ 20. ರಾಜೀವ 21. ಕಣಜ 22. ಲುವಕ

ಮೇಲಿನಿಂದ ಕೆಳಕ್ಕೆ: 1. ಗಡಿಯಾರ 2. ದಿನಕರ 3. ಸರಸ್ವತಿ 4. ಮಣಿಹಾರ 5. ಸುರಚಾಪ 9. ಸೀಮೆ 11. ಗಾಣ 12. ಮೋಡ 13. ಸಾರ 14. ತಾತ್ಕಾಲಿಕ 15. ನಟರಾಜ 16. ಎರವಲು 17. ಕರಣಿಕ 18. ತಾಯಿಬೇರು.

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ಕೌರವ ವೆಂಕಟೇಶ್ ತಂದ ಕೊಕೇನ್

ದಕ್ಷಿಣ ಭಾರತದ ಚಿತ್ರರಂಗದಲ್ಲಿ ಸಾಹಸ ನಿರ್ದೇಶಕರಾಗಿ ಗುರುತಿಸಿಕೊಂಡಿರುವ ಕೌರವ ವೆಂಕಟೇಶ್, ಈಗ ನಿರ್ದೇಶಕರಾಗಿ ಹೆಜ್ಜೆ ಇಡುತ್ತಿದ್ದು ಕೊಕೇನ್ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಕಂಠೀರವ ಸ್ಟುಡಿಯೋದಲ್ಲಿ ಕೊಕೇನ್‌ಗೆ ಅದ್ದೂರಿಯಾಗಿ ಮುಹೂರ್ತ ನೆರವೇರಿತು. ನಟ ಬಿ.ಸಿ.ಪಾಟೀಲ್ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿದರೆ, ಹಿರಿಯ ನಿರ್ದೇಶಕ ಓಂ ಪ್ರಕಾಶ್ ರಾವ್ ಕ್ಯಾಮೆರಾ ಆನ್ ಮಾಡಿ ಶುಭಕೋರಿದರು. ಅಯೋಧ್ಯ ರಾಮ್ ಪ್ರೊಡಕ್ಷನ್ಸ್‌ನಲ್ಲಿ ಪುನೀತ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡುತ್ತಿದ್ದಾರೆ. ಪ್ರಥಮ್ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದಿದ್ದು ನಾಯನಾಗಿ ಅಭಿನಯಿಸುತ್ತಿದ್ದಾರೆ. ಬಿ.ಸಿ.ಪಾಟೀಲ್ ಕೇಂದ್ರ ಸಚಿವ ಪಾತ್ರದಲ್ಲಿ ನಟಿಸುತ್ತಿದ್ದು, ಓಂ ಪ್ರಕಾಶ್‌ರಾವ್ ಇನ್ಸ್‌ಪೆಕ್ಟರ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಆರನಾ, ಅನ್ವಿತಿಶೆಟ್ಟಿ ನಾಯಕಿಯರಾಗಿ ಬಣ್ಣಹಚ್ಚುತ್ತಿದ್ದಾರೆ. ಉಳಿದಂತೆ ಗೋಕುಲ್, ಮುನಿ, ಕಾಮಿಡಿ ಕಿಲಾಡಿಗಳು ಖ್ಯಾತಿಯ ಸಂತು, ರವೀಂದ್ರನಾಥ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಯೋಗರಾಜ ಭಟ್, ಭರ್ಜರಿ ಚೇತನ್ ಸಾಹಿತ್ಯ ರಚಿಸಿದ್ದಾರೆ. ಅಭಿಷೇಕ್ ಸಂಗೀತ ಸಂಯೋಜಿಸುತ್ತಿದ್ದಾರೆ. ಐದು ಭರ್ಜರಿ ಸಾಹಸ ದೃಶ್ಯಗಳಿರಲಿದ್ದು, ಕೌರವ ವೆಂಕಟೇಶ್ ಸಾಹಸ ನಿರ್ದೇಶದಲ್ಲಿ ಮೂಡಿಬರಲಿವೆ. ಬೆಂಗಳೂರು, ಮಂಗಳೂರು, ರಷ್ಯಾದಲ್ಲಿ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ವಿದೇಶದಿಂದ ಸಾವಿರ ಕೋಟಿ ಮೌಲ್ಯದ ಕಂಟೈನರ್ ಬರುತ್ತದೆ. ಅದನ್ನು ಬೆಂಗಳೂರಿನಿಂದ ಗೋವಾಗೆ ಸಾಗಿಸಲು ದುರುಳರು ಯೋಜನೆ ಹಾಕಿಕೊಂಡಿರುತ್ತಾರೆ. ಕೊನೆಗೆ ನಾಯಕ ಮತ್ತು ನಾಯಕಿ ಇಬ್ಬರು ಚಾಣಾಕ್ಷತನದಿಂದ ದುರುಳರ ಪ್ಲಾನ್ ಹೇಗೆ ದಿಕ್ಕು ತಪ್ಪುತ್ತದೆ ಎಂಬುದನ್ನು ಮಾಸ್, ಆ್ಯಕ್ಷನ್, ಕಾಮಿಡಿ ಬೆರೆಸಿ ಹೇಳುವ ಪ್ರಯತ್ನ ಮಾಡಲಾಗುತ್ತಿದೆ.

–ಕೌರವ ವೆಂಕಟೇಶ್ ನಿರ್ದೇಶಕ

ಕಲ್ಕಿಯ ಬೊಂಬಾಟ್ ಟ್ರೇಲರ್

ಪ್ರಭಾಸ್, ಅಮಿತಾಭ್ ಬಚ್ಚನ್, ಕಮಲ್ ಹಾಸನ್, ದೀಪಿಕಾ ಪಡುಕೋಣೆ, ದಿಶಾ ಪಟಾನಿ ಹೀಗೆ ದಿಗ್ಗಜರ ದಂಡೇ ನಟಿಸಿರುವ ಕಲ್ಕಿ 2898 ಎಡಿ ಆರಂಭದಿಂದಲೂ ಭರ್ಜರಿ ಸದ್ದು ಮಾಡುತ್ತಿದೆ. ಈಗ ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು ನಿರೀಕ್ಷೆ ದುಪ್ಪಟ್ಟುಗೊಳ್ಳಿಸಿದೆ. ವೈಜ್ಞಾನಿಕ ಕಾಲ್ಪನಿಕ ಮಹಾಕಾವ್ಯ ಕಲ್ಕಿ 2898 ಎಡಿ ಚಿತ್ರದ ಎರಡು ನಿಮಿಷ ಮತ್ತು ಐವತ್ತೊಂದು ಸೆಕೆಂಡ್‌ಗಳ ಟ್ರೇಲರ್ ರೋಮಾಂಚನಗೊಳಿಸಿದ್ದು, ವಿಎಫ್‌ಎಕ್ಸ್‌ನಿಂದಲೇ ನೋಡುಗರ ಗಮನ ಸೆಳೆಯುತ್ತಿದೆ. ಕಲ್ಕಿ ಪ್ಯಾನ್ ವರ್ಲ್ಡ್ ಸಿನಿಮಾವಾಗಿದ್ದು, ತೆಲುಗು ಮಾತ್ರವಲ್ಲದೆ ಹಿಂದಿ, ತಮಿಳು, ಮಲೆಯಾಳಂ, ಕನ್ನಡ ಮತ್ತು ಇಂಗ್ಲೀಷ್ ಸೇರಿದಂತೆ ಬಹು ಭಾಷೆಗಳಲ್ಲಿ ಬಿಡುಗಡೆಯಾಗಲಿದೆ. ಇಂದು ನನ್ನ ಹೃದಯವು ಹಲವು ಭಾವನೆಗಳಿಂದ ತುಂಬಿದೆ. ನಾನು ಭಾರತೀಯ ಪುರಾಣ ಮತ್ತು ವೈಜ್ಞಾನಿಕ ಕಾದಂಬರಿಗಳಿಂದ ಆಕರ್ಷಿತನಾಗಿದ್ದೇನೆ. ಕಲ್ಕಿ 2898 ಎಡಿ ಚಿತ್ರದಲ್ಲಿ ಈ ಎರಡು ಅಂಶಗಳನ್ನು ವಿಲೀನಗೊಳಿಸಿದ್ದೇವೆ. ನಮ್ಮ ಕಲಾವಿದರು ಮತ್ತು ತಾಂತ್ರಿಕ ತಂಡದ ಶ್ರಮ ಮತ್ತು ಸಮರ್ಪಣಾ ಮನೋಭಾವದಿಂದ ನಾನು ಕಂಡ ಕನಸು ನನಸಾಗಿದೆ ಎಂದು ನಾಗ್ ಅಶ್ವಿನ್ ಸಂತಸದಿಂದ ನುಡಿದಿದ್ದಾರೆ. ಕಲ್ಕಿ ಅದ್ದೂರಿ ಬಜೆಟ್‌ನ ಸಿನಿಮಾವಾಗಿದ್ದು, ವೈಜಯಂತಿ ಮೂವೀಸ್ ಬ್ಯಾನರ್‌ನಲ್ಲಿ ಅಶ್ವಿನಿ ದತ್ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ, ಜೂನ್ 27ರಂದು ಕಲ್ಕಿ ವಿಶ್ವಾದ್ಯಂತ ತೆರೆಗೆ ಬರಲಿದೆ.

ಮೈತ್ರೇಯ ಋಷಿಗಳ ಶಾಪಕ್ಕೆ ಗುರಿಯಾದ

ಪಾಂಡವರನ್ನು ಕಪಟ ದ್ಯೂತದಲ್ಲಿ ಸೋಲಿಸಿ ಕಾಡಿಗೆ ಕಳುಹಿಸಿದ ಕೌರವರು ಪಾಂಡವರ ನಿರ್ಮೂಲನಕ್ಕಾಗಿ ಸದಾ ಹೊಂಚು ಹಾಕುತ್ತಲೇ ಇದ್ದರು. ವನವಾಸದಲ್ಲಿದ್ದ ಪಾಂಡವರಿಗೆ ಅಲ್ಲಲ್ಲೇ ಸಿಕ್ಕ ಹಲವಾರು ಋಷಿಮುನಿಗಳು ಧೈರ್ಯ ತುಂಬುತ್ತಾರೆ. ಕೆಲವರು ಹಸ್ತಿನಾವತಿಗೆ ತೆರಳಿ ದುರ್ಯೋಧನನಿಗೂ ಬುದ್ಧಿ ಮಾತು ಹೇಳುತ್ತಾರೆ. ಹೀಗೆ ದುರ್ಯೋಧನನ್ನು ತಿದ್ದಿ, ಪಾಂಡವರಿಗೆ ನ್ಯಾಯ ಒದಗಿಸಿಕೊಡಬೇಕೆಂದೆಣಿಸಿ ಹಸ್ತಿನಾವತಿ ಕೌರವನಲ್ಲಿಗೆ ತೆರಳಿ ಹಿತವಚನ ಹೇಳಿದವರಲ್ಲಿ ಮೈತ್ರೇಯ ಋಷಿಗಳೂ ಒಬ್ಬರು.

ಮೈತ್ರೇಯ ಬ್ರಹ್ಮರ್ಷಿಗಳ ತಂದೆ ಕುಶಾರವ. ತಾಯಿಯ ಹೆಸರು ಮಿತ್ರ. ಪಾಂಡವರಿಗೆ ವನವಾಸವಾದ ವಿಚಾರ ತಿಳಿದ ಮೈತ್ರೇಯ ಮಹರ್ಷಿ ಬಹಳವಾಗಿ ನೊಂದು ದುರ್ಯೋಧನನಿಗೆ ಬುದ್ಧಿ ಹೇಳಿ ಸರಿಪಡಿಸಬಹುದೇನೋ ಎಂದೆಣಿಸಿ ನೇರ ಹಸ್ತಿನಾವತಿಗೆ ಬರುತ್ತಾರೆ. ಅಲ್ಲಿ ದುರ್ಯೋಧನನಿಗೆ 'ಪ್ರಿಯ ದುರ್ಯೋಧನ ನಿನ್ನ ಭ್ರಾತೃಗಳಾದ ಪಾಂಡವರನ್ನು ಕಾಡಿನಿಂದ ಕರಿಸಿಕೊಂಡು ಅವರಿಗೂ ಅರ್ಧ ರಾಜ್ಯವನ್ನು ಕೊಟ್ಟು ಹೊಂದಿಕೊಂಡು ಬಾಳಿರಿ' ಎಂದು ಉಪದೇಶ ಮಾಡುತ್ತಾರೆ. ಆದರೆ ದುರ್ಯೋಧನನು ಮೈತ್ರೇಯರ ಮಾತುಗಳು ತಳ್ಳಿಹಾಕಿ ಅವಮಾನಿಸುತ್ತಾನೆ. 'ಮಹರ್ಷಿಗಳೇ ಹೊಂದಿಕೊಂಡು ಬಾಳುವುದು ಆಗದ ಮಾತು' ಎಂದು ಋಷಿ ಶ್ರೇಷ್ಠರ ಮುಂದೆ ತನ್ನ ತೊಡೆಯನ್ನು ತಟ್ಟಿಕೊಂಡು ಅಹಂಕಾರದಿಂದ ಮಾತನಾಡುತ್ತಾನೆ. ಕೌರವನ ಉದ್ಧಟತನಕ್ಕೆ ಕೋಪಗೊಂಡ ಮೈತ್ರೇಯರು 'ಗರ್ವದಿಂದ ತೊಡೆತಟ್ಟಿಕೊಂಡು ನಿನ್ನ ಜಂಬ ಪ್ರದರ್ಶಿಸಿದೆ. ನನ್ನ ಮಾತನ್ನು ಒಂದಿನಿತೂ ಕೇಳುವ ಸೌಜನ್ಯ ನಿನಗಿಲ್ಲ. ಅತೀ ಶೀಘ್ರದಲ್ಲಿ ತೊಡೆ ಮುರಿದು ಸಾಯುವಂತಾಗು' ಎಂದು ಶಾಪ ನೀಡಿಬಿಡುತ್ತಾರೆ. ನಂತರ ತಮ್ಮ ಸಿಟ್ಟಿನ ಬಗ್ಗೆ ಅವರಿಗೇ ಪಶ್ಚಾತ್ತಾಪವಾಗಿ 'ಒಂದು ವೇಳೆ ಈ ನಿನ್ನ ದುಷ್ಟಗುಣ ದೂರವಾಗಿ ಮನಸ್ಸು ಪರಿವರ್ತನೆಯಾದಲ್ಲಿ ನನ್ನ ಶಾಪವು ತಟ್ಟದಿರಲಿ' ಎನ್ನುತ್ತಾ ಆ ಶಾಪಕ್ಕೆ ಪರಿಹಾರವನ್ನು ಸೂಚಿಸುತ್ತಾರೆ. ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಲೋಕಾನುಗ್ರಹಕ್ಕಾಗಿ ಜ್ಞಾನಿಗಳು ಕೋಪಿಸಿಕೊಂ ಡರೂ ನಂತರ ಒಳ್ಳೆಯ ಚಿಂತನೆಯನ್ನೇ ಮಾಡು ತ್ತಾರೆ. ಆದರೆ 'ವಿನಾಶಕಾಲೇ ವಿಪರೀತ ಬುದ್ಧಿ' ಎನ್ನುವಂತೆ ವಿನಾಶ ಕಾಲ ಸನ್ನಿಹಿತವಾದ ಕೌರವ, ಮೈತ್ರೇಯ ಋಷಿಯ ಮಾತಿಗೆ ಮನ್ನಣೆ ನೀಡುತ್ತಾ ನೆಯೇ? ಮೈತ್ರೇಯರ ಶಾಪವೂ ಭೀಮನ ಪ್ರತಿಜ್ಞೆಯೂ ಸೇರಿದುದರಿಂದ ಮುಂದೆ ದುರ್ಯೋ ಧನನು ಭೀಮನಿಂದ ತೊಡೆ ಮುರಿಸಿಕೊಂಡು ಕುರುಕ್ಷೇತ್ರದಲ್ಲಿ ಹತನಾಗುತ್ತಾನೆ.

ವಿದುರನು ಕೂಡಾ ಪಾಂಡವರಿಗಾದ ಅನ್ಯಾಯಕ್ಕೆ ನೊಂದು ಬೆಂದು ನ್ಯಾಯ ಒದಗಿಸುವುದಕ್ಕಾಗಿ ಕೌರವನಿಗೆ ಬಗೆ ಬಗೆಯಲ್ಲಿ ಹಿತೋಕ್ತಿ ಹೇಳುತ್ತಾನೆ. ಯಾರ ಮಾತನ್ನೂ ಕೌರವನು ಕೇಳುವ ಸ್ಥಿತಿಯಲ್ಲಿರುವುದಿಲ್ಲ. ಬದಲಾಗಿ ದುರ್ವಚನಗಳನ್ನೂ, ನೋವನ್ನುಂಟು ಮಾಡುವ ಮಾತನ್ನೂ ಆಡುವ ಕೌರವ ವಿದುರನನ್ನು ನಿನ್ನಿಂದ ಇವೆಲ್ಲವನ್ನೂ ನೋಡಲಾಗ ದಿದ್ದರೆ ಇಲ್ಲಿಂದ ಹೊರಟುಬಿಡು ಎನ್ನುತ್ತಾನೆ. ವಿದುರನು ಹಸ್ತಿನಾವತಿಯನ್ನು ಬಿಟ್ಟು ಸಂಚರಿಸುತ್ತಾ ಬಂದು ಹರಿದ್ವಾರ ಕ್ಷೇತ್ರದಲ್ಲಿರುವ ಅಗಾಧ ಜ್ಞಾನಿಗಳಾದ ಮೈತ್ರೇಯ ಮಹರ್ಷಿಗಳ ಬಳಿಗೆ ಬರುತ್ತಾನೆ. ಮೈತ್ರೇಯರು ವಿದುರನಿಗೆ ಸೃಷ್ಟಿ-ಸ್ಥಿತಿ- ಲಯದ ಬಗ್ಗೆ ಜ್ಞಾನೋಪದೇಶ ಮಾಡುತ್ತಾರೆ. ವಿದುರನ ಪ್ರಶ್ನೆಗಳಿಗೆ ಮೈತ್ರೇಯರಿಂದ ಸಮರ್ಪಕ ವಾದ ಉತ್ತರಗಳು ಶ್ರೀಮದ್ಭಾಗವತದಲ್ಲಿದೆ.

ಮೈತ್ರೇಯರು ಶ್ರೀಕೃಷ್ಣನ ಭಕ್ತರಾಗಿದ್ದರು. ವೇದವ್ಯಾಸ ಪ್ರಿಯ ಮಿತ್ರರೂ ಪರಮಭಾಗವತರೂ ಸಿದ್ದರೂ, ಆಗಿದ್ದ ಪುರಾಣ ಪುರುಷರಾದ ಮೈತ್ರೇ ಯರು ಪ್ರಾತಃಸ್ಮರಣೀಯರು. ದುರ್ಗುಣಗಳನ್ನು ತಿದ್ದಿ ನಮ್ಮನ್ನು ಸದ್ಗುಣಿಗಳನ್ನಾಗಿಸಲು ರಾಮಾಯಣ ಮಹಾಭಾರತ, ವೇದೋಪನಿಷತ್ತುಗಳು ಸದಾ ಮತ್ತೆ ಮತ್ತೆ ನಮ್ಮನ್ನು ಎಚ್ಚರಿಸುತ್ತಲೇ ಇರುತ್ತವೆ. ಪಾಂಡವರು ಕೌರವರು ದಾಯಾದಿ ಮತ್ಸರದಿಂದ ವೈರವನ್ನು ಕಟ್ಟಿಕೊಂಡು, ಹೆಣ್ಣು, ಹೊನ್ನು ಮಣ್ಣಿಗಾಗಿ ನಡೆಸಿದ ಕುರುಕ್ಷೇತ್ರ ಸಾವಿರಾರು ವರ್ಷಗಳು ಹಳೆಯದಾದರೂ ಅದು ಇಂದಿಗೂ ಪ್ರಸ್ತುತವೇ. ಅಧರ್ಮಕ್ಕೆ ಎಂದಿಗೂ ನೆಲೆ ಇಲ್ಲ.

ಧರ್ಮವೇ ನಮ್ಮನ್ನೆಲ್ಲ ಕಾಯುವ ಸೂತ್ರ ಎಂದು ತಿಳಿಸುವ ನಮ್ಮ ಭಾರತದ ಪುರಾಣಗಳು ಸದಾ ನಮ್ಮಲ್ಲಿ ಜೀವನ ಮೌಲ್ಯಗಳು ತುಂಬುತ್ತಾ ನಾವೆ ಲ್ಲರೂ ಜಾಗೃತರಾಗಿ ಬದುಕಲು ಪ್ರೇರೇಪಿಸುವಂಥ ವು. ಇಂತಹ ಕಥೆಗಳ ಪಾರಾಯಣ, ಚಿಂತನ , ಶ್ರವಣ ಮಾಡುವ ಮನೆಗಳಲ್ಲಿ ಮಕ್ಕಳು ಸಂಸ್ಕಾರವಂತರಾಗಿ ಬೆಳೆಯುತ್ತಾರೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ನೈಜ ಘಟನೆಯಾಧಾರಿತ ತಾಜ್

ಬಹುತೇಕ ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ತಾಜ್ ಚಿತ್ರ ತೆರೆಗೆ ಬರಲು ಸಿದ್ಧವಾಗಿದೆ. ತಾಜ್ ಟೀಸರ್‌ನಲ್ಲಿ ರಿಲೀಸ್ ಆಗಿದ್ದು ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ನೈಜ ಘಟನೆಯಾಧಾರಿತ ಚಿತ್ರ ಇದಾಗಿದ್ದು ಅಪರೂಪದ ಪ್ರೇಮ ಕಥೆಯ ಜತೆಗೆ ಆ್ಯಕ್ಷನ್ ಸ್ಟೋರಿಯೂ ಇದೆ. ರಾಜರತ್ನ ನಿರ್ದೇಶನದ ಈ ಚಿತ್ರದಲ್ಲಿ ಷಣ್ಮುಖ ನಾಯಕ ನಟನಾಗಿ ನಟಿಸಿದ್ದು, ಈ ಸಿನಿಮಾದ ಮೂಲಕ ಚಂದನವನಕ್ಕೆ ಪರಿಚಿತರಾಗುತ್ತಿದ್ದಾರೆ. ಅಪ್ಸರಾ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಬಲರಾಜವಾಡಿ, ಶೋಭರಾಜ್, ವರ್ಧನ್, ಪದ್ಮಾವಾಸಂತಿ, ಪಟ್ರೆ ನಾಗರಾಜ್, ಕಡ್ಡಿ ವಿಶ್ವ, ಸೂರಜ್ ಸೇರಿದಂತೆ ಹಲವು ಕಲಾವಿದರು ತಾಜ್ ಸಿನಿಮಾದ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಶ್ರೀಪಾವನಿ ಲಕ್ಷ್ಮೀ ಕಂಬೈನ್ಸ್ ಲಾಂಛನದಲ್ಲಿ ತಾಜ್ ನಿರ್ಮಾಣವಾಗಿದ್ದು, ಲಕ್ಷ್ಮೀ ಷಣ್ಮುಖ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಜೆಸ್ಸಿಗಿಫ್ಟ್ ಸಂಗೀತ ಸಂಯೋಜನೆಯಲ್ಲಿ ಹಾಡುಗಳು ಮಧುರವಾಗಿ ಮೂಡಿಬಂದಿವೆ. ಬೆಂಗಳೂರು ಸುತ್ತಮುತ್ತ ಬಹುತೇಕ ಚಿತ್ರೀಕರಣ ನಡೆಸಲಾಗಿದೆ. ಚಿತ್ರೀಕರಣ ಮುಗಿಸಿರುವ ತಾಜ್ ಸೆನ್ಸಾರ್ ಪಾಸ್ ಆಗಿದ್ದು ಶೀಘ್ರವೇ ತೆರೆಗೆ ಬರಲಿದೆ.

ಇದು ನನ್ನ ಮೊದಲ ಸಿನಿಮಾ ಒಳ್ಳೆಯ ಕಥೆಯ ಮೂಲಕ ಚಿತ್ರರಂಗಕ್ಕೆ ಪರಿಚಿತವಾಗಬೇಕು ಎಂಬ ಆಸೆಯಿತ್ತು, ಅದಕ್ಕಾಗಿ ಹಲವು ಕಥೆಗಳನ್ನು ಕೇಳಿದ್ದೆ. ತಾಜ್ ಚಿತ್ರದ ಕಥೆ ಮನಸಿಗೆ ಹಿಡಿಸಿತು. ಅಂದುಕೊಂಡಂತೆ ತಾಜ್ ಚಿತ್ರದ ಮೂಲಕ ಪ್ರೇಕ್ಷಕರಿಗೆ ಪರಿಚಯವಾಗುತ್ತಿದ್ದೇನೆ. ಚಿತ್ರದಲ್ಲಿ ನಾನು ಪ್ರಾಮಾಣಿಕ ಪ್ರೇಮಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ.

–ಷಣ್ಮುಖ ನಟ

ತಾಜ್ ನೈಜ ಘಟನೆಗಳನ್ನು ಆಧರಿಸಿದ ಸಿನಿಮಾ. ನಮ್ಮ ಸುತ್ತಮುತ್ತ ನಡೆದ ನೈಜ ಘಟನೆಗಳು ಆಧರಿಸಿ ಅದಕ್ಕೆ ಸಿನಿಮಾ ಸ್ಪರ್ಶ ನೀಡಿ ತೆರೆಯಲ್ಲಿ ಕಟ್ಟಿಕೊಡಲಾಗುತ್ತಿದೆ. ಹಿಂದೂ-ಮುಸ್ಲಿಂ ಜೋಡಿಯ ಪ್ರೇಮಕಥೆ ಸಿನಿಮಾದಲ್ಲಿದ್ದು, ಅದರ ಜತೆಗೆ ಮಾನವೀಯ ನೆಲೆಗಟ್ಟು, ಸಾಮಾಜಿಕ ಸಂದೇಶವೂ ಬೆರೆತಿದೆ.

–ರಾಜರತ್ನ ನಿರ್ದೇಶಕ

ಚಿತ್ರಸ್ಫೂರ್ತಿ



ಈ ದಿನ ಇತಿಹಾಸ

- 1879– ಸ್ವಾತಂತ್ರ್ಯ ಹೋರಾಟಗಾರ, ರಾಷ್ಟ್ರೀಯತಾ ವಾದಿ, ಅಭಿನವ್ ಭಾರತ್ ಸೊಸೈಟಿಯ ಸಂಸ್ಥಾಪಕ ಗಣೇಶ್ ದಾಮೋದರ್ ಸಾವರ್ಕರ್ ಜನನ
- 2012 – ವಿಶ್ವದ ಶ್ರೇಷ್ಠ ಗಜಲ್ ಗಾಯಕ ರಲ್ಲಿ ಒಬ್ಬರು ಮೆಹದಿ ಹಸನ್ ಜನನ
- 2005 – ಇರಾನ್ 25 ವರ್ಷಗಳವರೆಗೆ ಭಾರತಕ್ಕೆ ದ್ರವೀಕೃತ ನೈಸರ್ಗಿಕ ಅನಿಲವನ್ನು ರಫ್ತು ಮಾಡಲು ಒಪ್ಪಿಕೊಂಡಿತು.
- ವಿಶ್ವ ರಕ್ತದಾನಿಗಳ ದಿನ